ಹುಬ್ಬಳ್ಳಿ
ಶನಿವಾರ, 25 ಏಪ್ರಿಲ್ 2026
ಸಂಪುಟ 16, ಸಂಚಿಕೆ 31, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ



ಪೇಟಿಎಂ ಬ್ಯಾಂಕ್ ಪರವಾನಗಿ ರದ್ದು | ೦೭ ಪಾಕ್‌ಗೆ ಇರಾನ್ ವಿದೇಶಾಂಗ ಸಚಿವ | ೦೭ ಅಂಗ, ಬಂಗ, ಕಳಿಂಗದಲ್ಲಿ ಬಿಜೆಪಿ ಆಡಳಿತ | ೦೭

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ನವಮಿ, ನಕ್ಷತ್ರ: ಆಶ್ಲೇಷ

ದಿನದ ಮಾತು

ಅಸಮಾನತೆಯ ವಿರುದ್ಧ ಮಾಡುವ ಹೋರಾಟ ಶ್ರೇಷ್ಠವಾದುದು.
▲ ಸುಭಾಷ್‌ಚಂದ್ರ ಬೋಸ್

ಸಹಸ್ರಾರ ಮತ್ತು ಸೂರ್ಯ ರೇಖೆ

ಪೂರ್ಣ ಪರಿಪೂರ್ಣ
• ಪೂರ್ಣಪ್ರಜ್ಞ ಬೇಳೂರು
• ಪುಟ ೬

ಕಿರುಸುದ್ದಿ

ಬಂಗಾಳದಲ್ಲಿ ಜಂಗಲ್ ರಾಜ್ ಅಂತ್ಯದ ಆರಂಭ

• **ಕೋಲ್ಕತ್ತಾ:** ಮೊದಲ ಹಂತದ ಚುನಾವಣೆ ದಾಖಲಿಸಿದ ಮತದಾನ ಪ್ರಮಾಣ ಬದಲಾವಣೆಯ ಅಲೆಗಳಿಗೆ ಮೊಹರು ಹಾಕಿದೆ. ಟಿಎಂಸಿಯ ಮಹಾ ಜಂಗಲ್‌ರಾಜ್ ಅಂತ್ಯದ ಆರಂಭವನ್ನು ಸಾಂಕೇತಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಆತ್ಮವಿಶ್ವಾಸ ವ್ಯಕ್ತಪಡಿಸಿದ್ದಾರೆ.
• ಪುಟ ೭

ಕೃಷಿ ಬಲವರ್ಧನೆಗೆ ಆದ್ಯತೆ: ಸಿಎಂ ಸಿದ್ದರಾಮಯ್ಯ

• **ಬೆಂಗಳೂರು:** ಕೃಷಿ ಕ್ಷೇತ್ರದಲ್ಲಿನ ಹೊಸ ಬದಲಾವಣೆಗಳು ಪ್ರತಿ ರೈತರನ್ನೂ ತಲುಪಬೇಕು. ಕೃಷಿ ಲಾಭದಾಯಕಗೊಂಡರೆ ಯುವಜನತೆ ಕೃಷಿಯತ್ತ ಮುಖ ಮಾಡುತ್ತಾರೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.
• ಪುಟ ೫

ಭಾರತ-ನ್ಯೂಜಿಲೆಂಡ್ ಶೀಘ್ರ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ

• ಪುಟ ೭

ಹಾಲ್ ಆಫ್ ಫೇಮ್‌ಗೆ ಜ.ದ್ವಿವೇದಿ ಸೇರ್ಪಡೆ

• ಪುಟ ೭

ಮೇ 20ರೊಳಗೆ ಸಂಪುಟ ವಿಸ್ತರಣೆ ವಿಶ್ವಾಸ: ಸಲೀಂ

• ಪುಟ ೫

ಇಂಜಿನಿಯರಿಂಗ್ ಶುಲ್ಕ ನಿರ್ಧರಿಸಿಲ್ಲ: ಸುಧಾಕರ್

• ಪುಟ ೫



ಇ100 ಸ್ವಾವಲಂಬಿ ಭಾರತದ ಇಂಧನ
• ಪುಟ ೭
ಸುದ್ದಿ ಸಮಗ್ರ

ಎಸ್‌ಸಿ ಎಡಗೈ, ಬಲಗೈಗೆ ಸಮ ಹಂಚಿಕೆ | ರಾಜ್ಯ ಸರ್ಕಾರ ನಿರ್ಧಾರ

5.25: 5.25: 4.5

• **ಬೆಂಗಳೂರು:** ದಶಕಗಳಿಂದ ಬಗೆಹರಿಯದೇ ಕಗ್ಗಂಟಾಗಿ ಉಳಿದಿದ್ದ ಪರಿಶಿಷ್ಟ ಜಾತಿ(ಎಸ್‌ಸಿ)ಯಲ್ಲಿನ ಒಳಮೀಸಲಾತಿ ವಿಚಾರವಾಗಿ ಶುಕ್ರವಾರ ನಡೆದ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ರಾಜ್ಯ ಸರ್ಕಾರ ಮಹತ್ವದ ತೀರ್ಮಾನ ತೆಗೆದುಕೊಂಡಿದೆ.

ಪರಿಶಿಷ್ಟ ಜಾತಿಗಳಿಗೆ ಲಭ್ಯವಿರುವ ಶೇ.15 ಮೀಸಲಾತಿಯಲ್ಲಿ ದಲಿತ ಎಡಗೈ ಸಮುದಾಯ(ಗ್ರೂಪ್ ಎ)ಕ್ಕೆ ಶೇ.5.25, ದಲಿತ ಬಲಗೈ ಸಮುದಾಯ(ಗ್ರೂಪ್ ಬಿ)ಕ್ಕೆ ಶೇ.5.25 ಮತ್ತು ಇತರರಿಗೆ (ಗ್ರೂಪ್ ಸಿ) ಶೇ.4.5 ಒಳಮೀಸಲಾತಿ ನೀಡಲು ವಿಶೇಷ ಸಚಿವ ಸಂಪುಟದ ಸಭೆಯಲ್ಲಿ ಒಮ್ಮತದ ನಿರ್ಧಾರ ತೆಗೆದುಕೊಳ್ಳಲಾಗಿದೆ.



ಸಚಿವಸಂಪುಟ ಸಭೆಯ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದರು. ಈ ತೀರ್ಮಾನಕ್ಕೆ ಸಂಪುಟದ ಎಲ್ಲ ಸದಸ್ಯರೂ ಒಕ್ಕೊರಲಿಂದ ಒಪ್ಪಿಗೆ ನೀಡಿದ್ದಾರೆ. ನ್ಯಾಯಾಲಯದ ಆದೇಶದಂತೆ ಶೇ.50 ಮೀಸಲಾತಿಗೆ ಅನುಗುಣವಾಗಿ ಒಳಮೀಸಲಾತಿ ನಿಗದಿ ಮಾಡಲಾಗಿದೆ. ಶೇ.56 ಮೀಸಲಾತಿ ಮಾಡಬೇಕು ಎಂಬುದು ನಮ್ಮ ಸಂಕಲ್ಪವಾಗಿದೆ. ಆದರೆ, ಈ ವಿಚಾರ ನ್ಯಾಯಾಲಯದಲ್ಲಿ ಇರುವುದರಿಂದ, ಅದು ಇತ್ಯರ್ಥವಾಗುವವರೆಗೆ ಶೇ.6 ಅನ್ನು ಬ್ಯಾಕ್‌ಲಾಗ್ ಎಂದು ಪರಿಗಣಿಸಲಾಗುವುದು. ನ್ಯಾಯಾಲಯದ ತೀರ್ಪಿಗೆ ಅನುಗುಣವಾಗಿ ಮುಂದಿನ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.
➡ಪುಟ ೪

> **ಎಲ್ಲ ದಲಿತ ಸಂಘಟನೆಗಳ ಸಹಿತ ಎಲ್ಲರಲ್ಲೂ ಚರ್ಚಿಸಿದ್ದೇವೆ. ಎಲ್ಲರನ್ನು ವಿಶ್ವಾಸಕ್ಕೆ ಪಡೆದು ಒಮ್ಮತದಿಂದ ಈ ಐತಿಹಾಸಿಕ ತೀರ್ಮಾನ ತೆಗೆದುಕೊಳ್ಳಲಾಗಿದೆ. ಎಸ್‌ಸಿ ಮೀಸಲಾತಿ ರೋಸ್ಟರ್ ಬಿಂದುವಿಗಿಂತ ಕಡಿಮೆ ಇದ್ದರೆ ಅದನ್ನು ಎಸ್‌ಸಿ ಜನರಲ್ ಎಂದು ಪರಿಗಣಿಸಲಾಗುತ್ತದೆ. ಒಳಮೀಸಲಾತಿ ಅನ್ವಯವಾಗುವುದಿಲ್ಲ.**
> ■ ಡಾ. ಎಚ್.ಸಿ. ಮಹದೇವಪ್ಪ, ಸಮಾಜ ಕಲ್ಯಾಣ ಸಚಿವ



ಒಳಮೀಸಲಾತಿ ನಿರ್ಧಾರ ಹಿನ್ನೆಲೆಯಲ್ಲಿ ಸಿಎಂ ಸಿದ್ದರಾಮಯ್ಯ ಅವರಿಗೆ ಸಂಪುಟ ಸದಸ್ಯರು ಹಾಗೂ ಪರಿಶಿಷ್ಟ ಜಾತಿಗಳ ನಾಯಕರು ಸನ್ಮಾನಿಸಿದರು.

ಹೊಸ ಮೀಸಲಾತಿ ಸೂತ್ರ

ಎಡಗೈ ಜಾತಿಗಳು	5.25%
ಬಲಗೈ ಜಾತಿಗಳು	5.25%
ಇತರೆ (ಅಲೆಮಾರಿ ಸೇರಿ)	4.5%
ಒಟ್ಟು ಎಸ್‌ಸಿ ಮೀಸಲಾತಿ	15%

ರಾಜ್ಯದಲ್ಲಿ ಒಳಮೀಸಲು ಸಂಬಂಧಿಸಿ ಏನೇನಾಗಿತ್ತು?

ಒಳಮೀಸಲಾತಿಗೆ ಹೋರಾಟ ನಡೆಯುತ್ತಿತ್ತು. ಈ ನಡುವೆ ಚಿತ್ರದುರ್ಗದಲ್ಲಿ ಡಾ. ಜಿ. ಪರಮೇಶ್ವರ ನೇತೃತ್ವದಲ್ಲಿ ಸಮಾವೇಶ ಮಾಡಲಾಗಿತ್ತು. ಅಲ್ಲಿ, ಒಳಮೀಸಲಾತಿ ಮಾಡಲು ಎಸ್‌ಸಿ ಸಮುದಾಯದ 101 ಜಾತಿಗಳು ಭಾಗಿಯಾಗಿ ಸರ್ವಾನುಮತದಿಂದ ಒಪ್ಪಿಗೆ ನೀಡಿದ್ದವು. ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಒಳಮೀಸಲಾತಿ ಜಾರಿಯ ಭರವಸೆ ನೀಡಲಾಗಿತ್ತು. 2024ರಲ್ಲಿ ಸುಪ್ರೀಂ ಕೋರ್ಟ್ ವಿಭಾಗೀಯ ಪೀಠ ಒಳಮೀಸಲಾತಿ ಮಾಡಬಹುದೆಂದು ತೀರ್ಪು ನೀಡಿತ್ತು. ಇದಕ್ಕೆ ಸಂವಿಧಾನದ ವಿರೋಧವಿಲ್ಲ ಎಂದಿತ್ತು. ಬಳಿಕ ನ್ಯಾ. ನಾಗಮೋಹನ್ ದಾಸ್ ನೇತೃತ್ವದ ಏಕಸದಸ್ಯ ಆಯೋಗ ರಚನೆ ಮಾಡಿದ್ದೆವು. ಅವರು ನೀಡಿದ ವರದಿಯನ್ನು ಸಂಪುಟ ಅಂಗೀಕಾರ ಮಾಡಿತ್ತು.
➡ಪುಟ ೪

> **ನಮ್ಮದು ಸಾಮಾಜಿಕ ನ್ಯಾಯ ಪಾಲನೆ ಮಾಡುವ ಪಕ್ಷವಾಗಿದೆ. ಹಾಗಾಗಿ ಒಳ ಮೀಸಲಾತಿ ನಿರ್ಧಾರಕ್ಕೆ ಸಂಬಂಧಿಸಿದಂತೆ ಸ್ವಲ್ಪ ವಿಳಂಬ ಆಯಿತು. ಎಲ್ಲಾ ಸಚಿವರು ಒಮ್ಮತದಿಂದ ಒಪ್ಪಿಕೊಂಡಿದ್ದಾರೆ. ಆದ್ದರಿಂದ ದಲಿತ ಸಂಘಟನೆಗಳು ಕೂಡ ಒಪ್ಪಿಕೊಳ್ಳಲಿವೆ ಎಂಬ ವಿಶ್ವಾಸವಿದೆ.**
> ■ ಸಿದ್ದರಾಮಯ್ಯ, ಮುಖ್ಯಮಂತ್ರಿ

ರಾಜ್ಯಸಭೆಯಲ್ಲಿ ಎಎಪಿಗೆ ದೊಡ್ಡ ಆಘಾತ

ಏಳು ಆಪ್ ಸಂಸದರು ಬಿಜೆಪಿ ಸೇರ್ಪಡೆ ಶೀಘ್ರ

> **ನಾನು ನನ್ನ ಜೀವನದ 15 ವರ್ಷಗಳನ್ನು ಎಎಪಿಗೆ ಸಮರ್ಪಿಸಿದ್ದೇನೆ. ಆದರೆ, ಈಗ ಪಕ್ಷ ತನ್ನ ಮೂಲ ಮೌಲ್ಯಗಳು ಮತ್ತು ಪ್ರಾಮಾಣಿಕ ರಾಜಕೀಯದಿಂದ ದೂರ ಸರಿದಿದೆ.**
> ■ ರಾಘವ್ ಚಡ್ಡಾ



ಎಎಪಿ ಸಂಸದರಾದ ರಾಘವ್ ಚಡ್ಡಾ, ಸಂದೀಪ್ ಪಾಟೀಲ್, ಅಶೋಕ್ ಮಿತ್ತಲ್‌ರನ್ನು ಬಿಜೆಪಿಗೆ ಸ್ವಾಗತಿಸಿದ ಪಕ್ಷದ ರಾಷ್ಟ್ರಾಧ್ಯಕ್ಷ ನಿತಿನ್ ನವೀನ್.

• **ಹೊಸದಿಲ್ಲಿ:** ರಾಜ್ಯಸಭೆಯಲ್ಲಿ ಆಮ್ ಆದ್ಮಿ ಪಕ್ಷಕ್ಕೆ (ಎಎಪಿ) ದೊಡ್ಡ ಆಘಾತ ಉಂಟಾಗಿದ್ದು, ರಾಘವ್ ಚಡ್ಡಾ ಸೇರಿದಂತೆ ಏಳು ಮಂದಿ ರಾಜ್ಯಸಭಾ ಸದಸ್ಯರು ಪಕ್ಷ ತೊರೆದು ಬಿಜೆಪಿಗೆ ಸೇರುವುದಾಗಿ ಘೋಷಿಸಿದ್ದಾರೆ. ರಾಜ್ಯಸಭೆಯಲ್ಲಿನ ಎಎಪಿಯ ಮೂರನೇ ಎರಡರಷ್ಟು ಸದಸ್ಯರು ಭಾರತದ ಸಂವಿಧಾನದ ನಿಯಮಗಳನ್ನು ಬಳಸಿಕೊಂಡು ಬಿಜೆಪಿಯೊಂದಿಗೆ ವಿಲೀನಗೊಳ್ಳಲು ನಿರ್ಧರಿಸಿದ್ದೇವೆ ಎಂದು ರಾಘವ್ ಚಡ್ಡಾ ಹೇಳಿದರು.

ದಿಲ್ಲಿಯಲ್ಲಿ ಶುಕ್ರವಾರ ಏರ್ಪಡಿಸಲಾಗಿದ್ದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು ನನ್ನ ಜೀವನದ 15 ವರ್ಷಗಳನ್ನು ಎಎಪಿಗೆ ಸಮರ್ಪಿಸಿದ್ದೇನೆ. ಆದರೆ, ಈಗ ಪಕ್ಷ ತನ್ನ ಮೂಲ ಮೌಲ್ಯಗಳು ಮತ್ತು ಪ್ರಾಮಾಣಿಕ ರಾಜಕೀಯದಿಂದ ದೂರ ಸರಿದಿದೆ. ನಾನು ತಪ್ಪು ಪಕ್ಷದಲ್ಲಿರುವ ಸರಿಯಾದ ವ್ಯಕ್ತಿ ಎಂದು ನನಗೆ ಅನಿಸಿತು. ಆದ್ದರಿಂದ ಪಕ್ಷದಿಂದ ದೂರವಾಗಿ ಜನರಿಗೆ ಇನ್ನಷ್ಟು ಹತ್ತಿರವಾಗುವ ನಿರ್ಧಾರ ತೆಗೆದುಕೊಂಡಿದ್ದೇನೆ ಎಂದು ಹೇಳಿದರು.

ಭ್ರಷ್ಟಾಚಾರದ ವಿರುದ್ಧ ಹೋರಾಟದ ಭರವಸೆ ನೀಡಿ ಅಧಿಕಾರಕ್ಕೆ ಬಂದ ಎಎಪಿ, ಈಗ ಆ ದಾರಿಯಿಂದ ತಪ್ಪಿದೆ. ರಾಜ್ಯಸಭೆಯಲ್ಲಿ ಎಎಪಿಯ ಒಟ್ಟು 10 ಸಂಸದರಲ್ಲಿ ಮೂರನೇ ಎರಡರಷ್ಟು ಮಂದಿ ನಮ್ಮೊಂದಿಗಿದ್ದಾರೆ. ನಾವು ಈ ಬಗ್ಗೆ ರಾಜ್ಯಸಭಾ ಸಚಿವಾಲಯಕ್ಕೆ ಮಾಹಿತಿ ನೀಡಿದ್ದು, ಸಹಿ ಮಾಡಲಾದ ಪತ್ರಗಳು ಮತ್ತು ಅಗತ್ಯ ದಾಖಲೆಗಳನ್ನು ಸಭಾಪತಿಗೆ ಸಲ್ಲಿಸಿದ್ದೇವೆ ಎಂದರು.
➡ಪುಟ ೪

ಪಂಜಾಬ್‌ನಲ್ಲೂ ಆಪ್‌ಗೆ ಸಂಕಷ್ಟ!

ರಾಘವ್ ಚಡ್ಡಾ ಪಕ್ಷ ತೊರೆದಿರುವುದು ಆಮ್ ಆದ್ಮಿ ಪಕ್ಷಕ್ಕೆ ಪಂಜಾಬ್‌ನಲ್ಲಿ ದೊಡ್ಡ ಆಂತರಿಕ ಸಂಕಷ್ಟವನ್ನು ಉಂಟುಮಾಡಿದೆ. ರಾಜ್ಯಸಭಾ ಸಂಸದರ ಗುಂಪು ಕೂಡ ಹೊರನಡೆದಿರುವುದರಿಂದ, ಈ ಘಟನೆ ಪಕ್ಷ ಅಧಿಕಾರಕ್ಕೆ ಬಂದ ಬಳಿಕದ ಗಂಭೀರ ಸವಾಲಾಗಿ ಪರಿಣಮಿಸಿದೆ. ಈ ಬೆಳವಣಿಗೆಯು ಪಂಜಾಬ್ ವಿಧಾನಸಭೆಯಲ್ಲಿನ ಎಎಪಿಯ 92 ಶಾಸಕರ ಏಕತೆಯ ಮೇಲೆ ಪರಿಣಾಮ ಬೀರುತ್ತದೆಯೇ? ಎಂಬ ಪ್ರಶ್ನೆ ಹುಟ್ಟುಹಾಕಿದೆ. ಆದರೆ, ಸದ್ಯಕ್ಕೆ ಯಾವುದೇ ಶಾಸಕ ಎಎಪಿ ತೊರೆಯುತ್ತಿರುವುದಕ್ಕೆ ದೃಢವಾದ ಮಾಹಿತಿ ಲಭ್ಯವಾಗಿಲ್ಲ.
➡ಪುಟ ೪



ಪಶ್ಚಿಮ ಬಂಗಾಳದ ಹೂಗ್ಲಿ ನದಿಯಲ್ಲಿ ಶುಕ್ರವಾರ ದೋಣಿ ವಿಹಾರ ನಡೆಸಿದ ಪ್ರಧಾನಿ ನರೇಂದ್ರ ಮೋದಿ.

ಆರ್‌ಎಸ್‌ಎಸ್ ಕು ಕ್ಲುಕ್ಸ್ ಕ್ಲಾನ್ ಗುಂಪಲ್ಲ: ದತ್ತಾಜಿ ಹೇಳಿಕೆ

ಸಮಾಜದ ಶ್ರೇಯಸ್ಸಿಗೆ ಸಂಘದ ಸೇವೆ

• **ವಾಷಿಂಗ್ಟನ್:** ಆರ್‌ಎಸ್‌ಎಸ್ ಸಮಾಜದ ಶ್ರೇಯಸ್ಸಿಗಾಗಿ ಅಹರ್ನಿಶಿ ದುಡಿಯುವ ಅನುಶಾಸನಬದ್ಧ ಸಂಘ ವಿನಾ, ಅಮೆರಿಕದ ಬಿಳಿಯರ ಪ್ರಾಬಲ್ಯದ ದ್ವೇಷವಾದಿ ಕು ಕ್ಲುಕ್ಸ್ ಕ್ಲಾನ್ ಗುಂಪಲ್ಲ ಎಂದು ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಹೇಳಿದ್ದಾರೆ.

ಅಮೆರಿಕದಲ್ಲಿ ಭಾರತದ ಬಗ್ಗೆ ತಪ್ಪು ತಿಳಿವಳಿಕೆ ಇರುವ ರೀತಿ ಆರ್‌ಎಸ್‌ಎಸ್ ಬಗ್ಗೆಯೂ ತಪ್ಪುಕಲ್ಪನೆಗಳಿವೆ, ತಪ್ಪು ತಿಳಿವಳಿಕೆಗಳಿವೆ. ಅರಿತೋ ಅಥವಾ ಅರಿಯದೆಯೋ ನಿರ್ದಿಷ್ಟ ಕಾರ್ಯಸೂಚಿ ಭಾಗವಾಗಿ ಅಥವಾ ಇನ್ನಿತರ ರೀತಿಯಲ್ಲಿ ಆರೆಸ್ಸೆಸ್ ಬಗ್ಗೆ ದಶಕಗಳಿಂದ ಮಿಥ್ಯಾರೋಪಗಳನ್ನು, ತಪ್ಪು ವ್ಯಾಖ್ಯಾನಗಳನ್ನು ಸೃಜಿಸಲಾಗಿದೆ. ಆರೆಸ್ಸೆಸ್ ಹಿಂದು ಪರಮಾಧಿಕಾರವಾದಿ ಸಂಘ ಅಥವಾ ಇದೊಂದು ಕ್ರೈಸ್ತ ವಿರೋಧಿ, ಅಲ್ಪಸಂಖ್ಯಾತ ವಿರೋಧಿ ಮತ್ತು ಅಭಿವೃದ್ಧಿ ವಿರೋಧಿ ಹಾಗೂ ಆಧುನೀಕತೆ ವಿರೋಧಿ ಸಂಘವೆಂಬ ಮಿಥ್ಯೆಯನ್ನು ದಶಕಗಳಿಂದ ವ್ಯವಸ್ಥಿತವಾಗಿ ಪ್ರಸಾರಿಸಲಾಗಿದೆ ಎಂದು ಹೊಸಬಾಳೆ ಹೇಳಿದರು.
➡ಪುಟ ೪



ಯಾವುದೇ ರಾಷ್ಟ್ರದ ಮೇಲೆ ಹಿಂದುಗಳು ದಾಳಿ ಮಾಡಿಲ್ಲ

ಇನ್ನು ಹಿಂದುಗಳು ಯಾವುದೇ ದೇಶದ ಮೇಲೆ ದಂಡೆತ್ತಿಹೋದದ್ದಿಲ್ಲ ಅಥವಾ ದಾಳಿ ಮಾಡಿದ್ದೇ ಇಲ್ಲ, ಹಿಂದುಗಳು ಆಕ್ರಮಣಕೋರರಲ್ಲ ಎಂದು ಚರಿತ್ರೆಯಲ್ಲೇ ದಾಖಲಾಗಿದೆ.
➡ಪುಟ ೪

ಟ್ರಂಪ್ ಪೋಸ್ಟ್ ಅಜ್ಞಾನಪೂರಿತ

• **ಹೊಸದಿಲ್ಲಿ:** ಅಮೆರಿಕ ಅಧ್ಯಕ್ಷರ ಸಾಮಾಜಿಕ ಜಾಲತಾಣ ಪೋಸ್ಟ್ ಅಜ್ಞಾನಪೂರಿತ, ಕೀಳುಮಟ್ಟದ ಅಭಿರುಚಿ ಮತ್ತು ಅನುಚಿತ ವರ್ತನೆಯಾಗಿದ್ದು, ಇದು ಭಾರತ-ಅಮೆರಿಕ ಸಂಬಂಧವನ್ನು ಪ್ರತಿಬಿಂಬಿಸುವಂತದ್ದಲ್ಲ ಎಂದು ವಿದೇಶಾಂಗ (ಎಂಇಎ) ವಕ್ತಾರ ರಣಧೀರ್ ಜೈಸ್ವಾಲ್ ಖಂಡನೆ ವ್ಯಕ್ತಪಡಿಸಿದ್ದಾರೆ.

> **ಭಾರತ ಖಂಡನೆ, ಟ್ರಂಪ್ ಪೋಸ್ಟ್ ಸಂಬಂಧ ಪ್ರತಿಬಿಂಬಿಸುವದ್ದಲ್ಲ**

ಭಾರತವನ್ನು ನರಕದ ಕೂಪವೆಂದು ಅವಹೇಳನಗೈದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸಾಮಾಜಿಕ ಜಾಲತಾಣ ಪೋಸ್ಟ್ ಕೇಂದ್ರ ಸರ್ಕಾರದ ಗಮನಕ್ಕೆ ಬಂದಿದೆ. ಇದು ಟ್ರಂಪ್ ಅವರ ಅಜ್ಞಾನಪೂರಿತ ಮತ್ತು ಅನುಚಿತ ವರ್ತನೆಯಾಗಿದೆ. ಟ್ರಂಪ್ ಅವರ ಪೋಸ್ಟ್ ಸಹ ಭಾರತ-ಅಮೆರಿಕ ನಡುವಿನ ಪಾಲುದಾರಿಕೆ ಸಂಬಂಧವನ್ನು ಪ್ರತಿಬಿಂಬಿಸುವುದಿಲ್ಲ. ಯಾಕೆಂದರೆ ಭಾರತ-ಅಮೆರಿಕ ಪರಸ್ಪರ ಗೌರವಯುತ ಮತ್ತು ಪಾಲುದಾರಿಕೆ ಆಧಾರಿತ ಸಂಬಂಧವನ್ನು ಹೊಂದಿದೆ.
➡ಪುಟ ೪

ಸಿಇಟಿ ವೇಳೆ 5 ವಿದ್ಯಾರ್ಥಿಗಳ ಜನಿವಾರ ತೆಗೆಸಿದ ಪ್ರಕರಣ

3 ಮೇಲ್ವಿಚಾರಕರ ಅಮಾನತು

• **ಬೆಂಗಳೂರು:** ಇಲ್ಲಿನ ಮಡಿವಾಳದ ಕೃಪಾನಿಧಿ ಕಾಲೇಜಿನಲ್ಲಿ ಕೆಸಿಇಟಿ (ಕರ್ನಾಟಕ ಸಾಮಾನ್ಯ ಪ್ರವೇಶ ಪರೀಕ್ಷೆ) ವೇಳೆ ಐವರು ವಿದ್ಯಾರ್ಥಿಗಳಿಗೆ ಜನಿವಾರ ತೆಗೆಯುವಂತೆ ಒತ್ತಾಯಿಸಿದ ನಂತರ ವಿವಾದ ಭುಗಿಲೆದ್ದಿದ್ದು, ಈ ಸಂಬಂಧ ಮೂವರು ಪರೀಕ್ಷಾ ಮೇಲ್ವಿಚಾರಕರನ್ನು ಅಮಾನತು ಮಾಡಲಾಗಿದೆ ಎಂದು ಕಾಲೇಜಿನ ಆಡಳಿತ ಮಂಡಳಿ ತಿಳಿಸಿದೆ.



ಮಡಿವಾಳದ ಕೃಪಾನಿಧಿ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ಸಿಇಟಿ ಬರೆಯಲು ಬಂದಿದ್ದ ವಿದ್ಯಾರ್ಥಿಗಳಿಗೆ ಅಲ್ಲಿನ ಸಿಬ್ಬಂದಿ ಜನಿವಾರವನ್ನು ಬಲವಂತವಾಗಿ ತೆಗೆಸಿದ್ದರು ಎಂಬ ಗಂಭೀರ ಆರೋಪ ಕೇಳಿಬಂದಿದೆ. ವಿದ್ಯಾರ್ಥಿಗಳಿಗೆ ಜನಿವಾರ ತೆಗೆಯುವಂತೆ ಹೇಳಿದ್ದು ಮಾತ್ರವಲ್ಲದೇ ಜನಿವಾರ ತೆಗೆಯಲು ಒಪ್ಪದ ವಿದ್ಯಾರ್ಥಿಗೆ ಮನೆಗೆ ವಾಪಸ್ ಕಳುಹಿಸುತ್ತೇವೆ, ಪರೀಕ್ಷೆ ಬರೆಯಲು ಬಿಡಲ್ಲ ಎಂದು ಸಿಬ್ಬಂದಿ ಧಮ್ಕಿ ಹಾಕಿದ ಆರೋಪ ಕೂಡ ಕೇಳಿಬಂದಿದೆ. ಇದೀಗ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪರೀಕ್ಷಾ ಮೇಲ್ವಿಚಾರಕರಾದ ಸುಧಾಕರ್ ಡಿ., ಸರಿತಾ ಆರ್., ಗಿರಿಜಮ್ಮ ಎಂಬುವರನ್ನು ಅಮಾನತು ಮಾಡಲಾಗಿದೆ.

ಪ್ರಕರಣ ದಾಖಲು

ಕೆಸಿಇಟಿ ಬರೆಯಲು ಬಂದಿದ್ದ ವಿದ್ಯಾರ್ಥಿಯ ಜನಿವಾರವನ್ನು ಬಲವಂತವಾಗಿ ತೆಗೆಸಿದ ಆರೋಪದ ಮೇಲೆ ನಗರದ ಕೃಪಾನಿಧಿ ಕಾಲೇಜಿನ ಸಿಬ್ಬಂದಿ ವಿರುದ್ಧ ಮಡಿವಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.
➡ಪುಟ ೪

ತನಿಖಾ ಸಮಿತಿ ರಚನೆ

• **ಬೆಂಗಳೂರು:** ಕೃಪಾನಿಧಿ ಪಿಯು ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ನಡೆದ ಜನಿವಾರ ಬಿಚ್ಚಿಸಿದ ಘಟನೆಗೆ ಸಂಬಂಧಿಸಿದಂತೆ ಸಮಗ್ರ ವಿಚಾರಣೆ ನಡೆಸಲು ಬೆಂಗಳೂರು ನಗರ ಜಿಲ್ಲಾಧಿಕಾರಿಗಳು ತನಿಖಾ ಸಮಿತಿಯನ್ನು ರಚಿಸಿ ಆದೇಶ ಹೊರಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಘಟನೆಯ ಸತ್ಯಾಸತ್ಯತೆಯನ್ನು ಪರಿಶೀಲಿಸಲು ಬೆಂಗಳೂರು ನಗರ ಜಿಲ್ಲೆಯ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಾಲ್ವರು ಅಧಿಕಾರಿಗಳ ವಿಶೇಷ ತನಿಖಾ ತಂಡ ರಚಿಸಲಾಗಿದೆ.
➡ಪುಟ ೪

ಭಾರತ ವಿಶ್ವಗುರು ಆಗುವುದು ಖಚಿತ

• **ನಾಗ್ಪುರ:** ಭಾರತ ವಿಶ್ವಗುರುವಾಗುವುದು ಖಚಿತ, ದೇಶದ ಭವಿಷ್ಯದ ಬಗ್ಗೆ ಯಾರೂ ಸಂದೇಹ ಹೊಂದಬಾರದು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ(ಆರ್‌ಎಸ್‌ಎಸ್)



ಸರಸಂಘಚಾಲಕ ಡಾ.ಮೋಹನ್ ಭಾಗ್ವತ್ ಅವರು ಹೇಳಿದ್ದಾರೆ. ಭಾರತ ದುರ್ಗಾ ಮಂದಿರಕ್ಕೆ ಅಡಿಪಾಯ ಹಾಕಿದ ಬಳಿಕ ಮಾತನಾಡಿದ ಅವರು, ರಾಮ ಮಂದಿರ ನಿರ್ಮಾಣವಾಗುವುದೇ ಇಲ್ಲ ಎಂದು ಹಿಂದೆ ಅನೇಕರು ಸಂದೇಹ ವ್ಯಕ್ತಪಡಿಸಿದ್ದರು. ಆದರೆ ಅದು ಇಂದು ಎಲ್ಲರ ಕಣ್ಣ ಮುಂದೆ ನಿಂತಿದೆ. ಅದೇ ರೀತಿ ಭಾರತ ವಿಶ್ವಗುರುವಾಗುವುದೂ ಖಚಿತ ಎಂದು ಹೇಳಿದರು.
➡ಪುಟ ೪

ಕಿರುಸುದ್ದಿ

ವಿನಾಯಕಗೆ ಪಿಎಚ್‌ಡಿ

◆ **ಹುಬ್ಬಳ್ಳಿ:** ನಗರದ ಕೆ.ಎಲ್.ಇ. ಸಂಸ್ಥೆಯ ಪಿ.ಸಿ.ಜಾಬಿನ ವಿಜ್ಞಾನ ಮಹಾವಿದ್ಯಾಲಯದ ರಸಾಯನಶಾಸ್ತ್ರ ವಿಭಾಗದ ಉಪನ್ಯಾಸಕ ವಿನಾಯಕ ಚಂದ್ರಪ್ಪ ಬಾರಂಗಿ ಅವರಿಗೆ ಕರ್ನಾಟಕ ವಿಶ್ವವಿದ್ಯಾನಿಲವು ರಸಾಯನಶಾಸ್ತ್ರದಲ್ಲಿ ಸಿಂಥೆಸಿಸ್ ಕ್ಯಾರಕ್ಟರೈಜೇಶನ್ ಬಯಾಲಾಜಿಕಲ್ ಎವಾಲ್ಯುಯೇಷನ್ ಆ್ಯಂಡ್ ಫೋಟೋಫಿಸಿಕಲ್ ಸ್ಟಡೀಸ್ ಆಫ್ ಕ್ಯುಮರಿನ್ ಡೆರಿವೇಟಿವ್ಸ್ ಸಂಶೋಧನಾ ಮಹಾಪ್ರಬಂಧಕ್ಕೆ ಪಿಎಚ್‌ಡಿ ಪದವಿ ಪ್ರದಾನ ಮಾಡಿದೆ.

ಅವರಿಗೆ ಕ.ವಿ.ವಿ ರಸಾಯನ ಶಾಸ್ತ್ರದ ಪ್ರಾಧ್ಯಾಪಕ ಡಾ.ಲೋಕೇಶ್ ಶಾಸ್ತ್ರಿ ಅವರು ಮಾರ್ಗದರ್ಶಕರಾಗಿದ್ದರು. ಕೆ.ಎಲ್.ಇ. ಸಂಸ್ಥೆಯ ಗೌರವ ಅಧ್ಯಕ್ಷ ಡಾ. ಪ್ರಭಾಕರ ಬಿ. ಕೋರೆ, ಹಿರಿಯ ಸದಸ್ಯ ಶಂಕರಣ್ಣ ಮುನವಳ್ಳಿ, ಸಂಸ್ಥೆಯ ಕಾರ್ಯಾಧ್ಯಕ್ಷ ಅಮಿತ ಪಿ. ಕೋರೆ, ನಿರ್ದೇಶಕ ಮಂಜುನಾಥ ಶಂಕರಣ್ಣ ಮುನವಳ್ಳಿ, ಪ್ರಾಚಾರ್ಯ ಡಾ. ಸಂಧ್ಯಾ ಎಸ್. ಕುಲಕರ್ಣಿ, ವಿಭಾಗದ ಮುಖ್ಯಸ್ಥ ಡಾ. ಶಿವಕುಮಾರ ತೋರಗಲ್ಲಮಠ ಹರ್ಷವ್ಯಕ್ತಪಡಿಸಿದ್ದಾರೆ.

ನಾಳೆ ವಿದ್ಯುತ್ ವ್ಯತ್ಯಯ

◆ **ಹುಬ್ಬಳ್ಳಿ:** ರಾಮನಕೊಪ್ಪದ 110 ಕೆವಿ ವಿದ್ಯುತ್ ಉಪಕೇಂದ್ರ 1ನೇ ತ್ರೈಮಾಸಿಕ ನಿರ್ವಹಣೆ ಹಾಗೂ 110 ಕೆವಿ ವಿದ್ಯುತ್ ಉಪಕೇಂದ್ರ ರಾಮನಕೊಪ್ಪದಿಂದ ಹಿರೇಹೆಕುಣಿ (ಬುತರ್ಲಘಟ್ಟ) ಗ್ರಾಮದಲ್ಲಿರುವ 110/11 ಕೆವಿ ವಿದ್ಯುತ್ ಉಪಕೇಂದ್ರಕ್ಕೆ 110 ಕೆವಿ ಟವರ್‌ಗಳ ಮಾರ್ಗದ ನಿರ್ಮಾಣ ಹಾಗೂ ಇದೇ ಉಪ ಕೇಂದ್ರದಲ್ಲಿ ಟರ್ಮಿನಲ್ ವೇ ನಿರ್ಮಾಣ ಕಾಮಗಾರಿ ನಿಮಿತ್ತ ಏ.26 ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ. ಅಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 2ರ ವರೆಗೆ ಛಬ್ಬಿ, ಪಾಲಿಕೊಪ್ಪ (ನಿರಂತರ ಜ್ಯೋತಿ), ಅರಳಿಕಟ್ಟಿ, ದ್ಯಾಮಾಪುರ, ವರೂರು, ಮುತ್ತಳ್ಳಿ, ತಡಸ, ರಾಮನಕೊಪ್ಪ, ಮಲಾಲಿ, ಇಮಾಮ್‌ವೀರಾಪುರ ಹಾಗೂ ರಕ್ಷಂ ಮೆಡಿಕಲ್ ಡಿವೈಸ್ ಸೇರಿದಂತೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಹೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ತೆಂಗಿನ ಮರಕ್ಕೆ ಬೆಂಕಿ

◆ **ಕುಂದಗೋಳ:** ತಾಲೂಕಿನ ಗುಡೇನಕಟ್ಟಿ ಗ್ರಾಮದಲ್ಲಿ ಗುರುವಾರ ಸಂಜೆ ಸಿಡಿಲು ಬಡಿದು ತೆಂಗಿನ ಮರಕ್ಕೆ ಬೆಂಕಿ ಹತ್ತಿದ ಘಟನೆ ನಡೆದಿದೆ. ಗ್ರಾಮದ ಗಂಗವ್ವ ಶಿವಪ್ಪ ನಂದಣ್ಣವರ ಅವರ ಹಿತ್ತಲಿನಲ್ಲಿದ್ದ ತೆಂಗಿನ ಮರಕ್ಕೆ



ಸಿಡಿಲು ತಾಗಿದ್ದು, ಕ್ಷಣಾರ್ಧದಲ್ಲಿ ಬೆಂಕಿ ಕಾಣಿಸಿಕೊಂಡಿತು. ಸ್ಥಳೀಯರು ತಕ್ಷಣ ಸ್ಪಂದಿಸಿ ಬೆಂಕಿಯನ್ನು ನಂದಿಸಿದ ಪರಿಣಾಮ ದೊಡ್ಡ ಅನಾಹುತ ತಪ್ಪಿದೆ. ಘಟನೆ ಕುರಿತು ಗಂಗವ್ವ ಮಾತನಾಡಿ, ಸಣ್ಣ ಮಳೆಯ ನಡುವೆ ಏಕಾಏಕಿ ಗುಡುಗು, ಮಿಂಚು ಜೋರಾಗಿ ಸಂಭವಿಸಿ ಸಿಡಿಲು ಬಡಿದ ಶಬ್ದಕ್ಕೆ ಕೇಳಿದ ಕ್ಷಣಕ್ಕೆ ಮೈ ನಡುಕ ಬಂತು. ಇಂತಹ ಘಟನೆ ನಾನು ಎಂದಿಗೂ ನೋಡಿರಲಿಲ್ಲ ಎಂದರು.

ಆಲಿಕಲ್ಲು ಮಳೆ

◆ **ನವಲಗುಂದ:** ನವಲಗುಂದ ನಗರ ಸೇರಿದಂತೆ ತಾಲೂಕಿನ ಗ್ರಾಮಗಳಲ್ಲಿ ಗುರುವಾರ ಸಂಜೆ ಗುಡುಗು, ಬಿರುಗಾಳಿ ಸಹಿತ, ಆಲಿಕಲ್ಲು ಮಳೆಯಾಗಿದ್ದು, ತಾಲೂಕಿನ ವಿವಿಧ ಭಾಗಗಳಲ್ಲಿ ಮಳೆ ಸುರಿದಿದೆ. ನಗರದಲ್ಲಿ ಮುಂಜಾನೆಯಿಂದ ಬಿಸಿಲು ತೀವ್ರವಾಗಿದ್ದರೂ, ಸಂಜೆ ವೇಳೆಗೆ ಮೋಡ ಕವಿದ ವಾತಾವರಣ



ನಿರ್ಮಾಣವಾಗಿ ಗುಡುಗು ಸಹಿತ ಮಳೆ ಆರಂಭವಾಯಿತು. ನಗರದಲ್ಲಿ ಸಂಜೆ ಸುಮಾರು 4 ಗಂಟೆ ವೇಳೆಗೆ ಬಿರುಗಾಳಿ ಸಹಿತ ಮೋಡ ಕವಿದು, ನಂತರ ಆಲಿಕಲ್ಲು ಮಳೆ ಆರಂಭವಾಯಿತು. ಸುಮಾರು ಒಂದು ಗಂಟೆ ಕಾಲ ಸುರಿದ ಮಳೆಯಿಂದ ರಸ್ತೆ ಮತ್ತು ಚರಂಡಿಗಳು ನೀರಿನಿಂದ ತುಂಬಿಕೊಂಡವು. ಈ ಅಕಾಲಿಕ ಮಳೆಯಿಂದ ಜನಜೀವನದಲ್ಲಿ ಕೆಲ ಮಟ್ಟಿನ ವ್ಯತ್ಯಯ ಉಂಟಾದರೂ, ಬಿಸಿಲಿನಿಂದ ಬಳಲುತ್ತಿದ್ದ ಜನರಿಗೆ ತಂಪಿನ ಅನುಭವ ದೊರೆಯುವ ಜೊತೆಗೆ ರೈತರಲ್ಲಿ ಸಂತಸ ಮೂಡಿದೆ.

ರಾಜಕೀಯ ಷಡ್ಯಂತ್ರ

◆ **ಧಾರವಾಡ:** ಕಾಂಗ್ರೆಸ್ ಮುಖಂಡ ಫೈರೋಜ್ ಪಠಾಣ ಹತ್ಯೆ ಪ್ರಕರಣದಲ್ಲಿ ಇಸ್ಮಾಯಿಲ್ ತಮಟಗಾರ ಅವರ ಹೆಸರನ್ನು ಅನವಶ್ಯಕವಾಗಿ ತಳಕು ಹಾಕುತ್ತಿದ್ದು, ಇದರ ಹಿಂದೆ ರಾಜಕೀಯ ಷಡ್ಯಂತ್ರವಿದೆ ಎಂದು ಅಂಜುಮನ್ ಇಸ್ಲಾಂ ಸಂಸ್ಥೆ ಉಪಾಧ್ಯಕ್ಷ ಬಶೀರ ಅಹ್ಮದ ಜಾಗೀರದಾರ ಹೇಳಿದರು.

ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಫೈರೋಜ್ ಸೇರಿದಂತೆ ಇತರರೊಂದಿಗೆ ಇಸ್ಮಾಯಿಲ್ ತಮಟಗಾರ ಮಾತನಾಡಿದ್ದಾರೆ ಎಂಬ ಆಡಿಯೋಗಳು ಈಗ ಸಾಮಾಜಿಕ ಜಾಲತಾಣ ಸೇರಿದಂತೆ ಮಾಧ್ಯಮಗಳಲ್ಲಿಯೂ ಹರಿದಾಡುತ್ತಿದ್ದು, ಅವು ಕಳೆದ ನಾಲ್ಕು ವರ್ಷಗಳ ಹಿಂದೆಯೇ ಸಂಭಾಷಣೆ ಆದಂತಹ ಆಡಿಯೋ. ಆಗ ಅವರಿಗೆ ಎಂಎಲ್‌ಎ ಟಿಕೆಟ್ ಕೈತಪ್ಪಿತ್ತು. ಇದರಿಂದ ಹತಾಶರಾಗಿದ್ದ ಅವರು ಅವರ ಬೆಂಬಲಿಗರು ಸೇರಿದಂತೆ ಆಪ್ತ ವಲಯದ ಎಲ್ಲರೊಂದಿಗೆ ಮುನಿಸಿಕೊಂಡಿದ್ದರು. ಆ ಸಂದರ್ಭದಲ್ಲಿ ಈ ರೀತಿಯ ಸಂಭಾಷಣೆ ಮಾಡಿರಬಹುದು. ಈಗಾಗಲೇ ಪ್ರಕರಣದ ಕುರಿತು ಹಾಗೂ ಆಡಿಯೋ ಸಂಭಾಷಣೆ ಮಾಡಿರುವ ಕುರಿತು ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರು ಯಾರೇ ಇದ್ದರೂ ಅವರ ಮೇಲೆ ಕ್ರಮ ಕೈಗೊಳ್ಳುವಂತೆ ಪೊಲೀಸ್ ಆಯುಕ್ತರಿಗೆ ಮನವಿ ಸಲ್ಲಿಸಲಾಗಿದೆ ಎಂದರು. ಕಾಂಗ್ರೆಸ್ ಮುಖಂಡ ದೀಪಕ ಚಿಂಚೋರೆ, ಡಾ. ಎಸ್.ಎಸ್. ಸರಗಿರೋ, ಪಾಲಿಕೆ ಸದಸ್ಯ ಶಂಭು ಸಾಲಿಮನಿ, ತುಳಸಪ್ಪ ಪೂಜಾರ, ಮುಖಂಡ ತವನಪ್ಪ ಅಷ್ಟಗಿ, ಮೆಹಬೂಬ ಪಠಾಣ ಸೇರಿದಂತೆ ಇತರರಿದ್ದರು.



ಹುಬ್ಬಳ್ಳಿ: ಸಿದ್ಧಾರೂಢ ಸ್ವಾಮಿ ಮಠದ ಟ್ರಸ್ಟ್ ಕಮಿಟಿಯಿಂದ ಗುರುನಾಥರೂಢ ಸ್ವಾಮಿ 64 ನೇ ಪುಣ್ಯಾರಾಧನೆ ಶುಕ್ರವಾರ ನಡೆಯಿತು. ಉಭಯ ಶ್ರೀಗಳ ಅಭಿಷೇಕದ ಪೂಜೆಯೊಂದಿಗೆ ಪ್ರಾರಂಭವಾಗಿತು. ಕರುಣಿಸೆನಗಿದೆನೆ ಬೇಡುವೆನಭವ ಎಂಬ ವಿಷಯದ ಕುರಿತು ಸಚ್ಚಿದಾನಂದ ಸ್ವಾಮೀಜಿ ಆಶೀರ್ವಚನ ನೀಡಿದರು. ಅಧ್ಯಕ್ಷತೆ ರಾಮಾನಂದ ಸ್ವಾಮೀಜಿ, ಶಾಂತಾನಂದ ಸ್ವಾಮೀಜಿ ಬಸವನಾಂದ ಸ್ವಾಮೀಜಿ, ಕೃಷ್ಣಾನಂದ ಸ್ವಾಮೀಜಿ ಸಿದ್ಧಾನಂದ ಸ್ವಾಮೀಜಿ ಭಾಗವಹಿಸಿದ್ದರು. ಶ್ರೀಮಠದ ಧರ್ಮದರ್ಶಿ ಶಾಮಾನಂದ ಬಾ. ಪೂಜೇರಿ ಸ್ವಾಗತಿಸಿದರು. ಶ್ರೀಮಠದ ಚೇರ್‌ಮನ್ ಬಾಳು ಟಿ. ಮಗಜಿಕೊಂಡಿ, ಟ್ರಸ್ಟ್ ಕಮಿಟಿಯ ವೈಸ್-ಚೇರ್‌ಮನ್ ಗೀತಾ ಟಿ. ಕಲಬುರ್ಗಿ, ಧರ್ಮದರ್ಶಿ ಡಾ. ಗೋವಿಂದ ಮಣ್ಣೂರ ಇತರರಿದ್ದರು.

ಗ್ಯಾರಂಟಿ ಯೋಜನೆ ಸಮರ್ಪಕ ತಲುಪಿಸಿ

◆ **ಹುಬ್ಬಳ್ಳಿ:** ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಮಹಾನಗರ ಪಾಲಿಕೆ ಸಮಿತಿಯ ಪೂರ್ವ ವಿಧಾನಸಭಾ ಕ್ಷೇತ್ರದ 72ರ ಮಾಸಿಕ ಪ್ರಗತಿ ಪರಿಶೀಲನಾ ಸಭೆ ಮಹಾನಗರ ಪಾಲಿಕೆಯ ಆಯುಕ್ತರ ಸಭಾ ಭವನದಲ್ಲಿ ನಡೆಯಿತು. ಈ ಸಭೆಯ ಅಧ್ಯಕ್ಷತೆಯನ್ನು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಪೂರ್ವ ವಿಧಾನಸಭಾ ಕ್ಷೇತ್ರ 72ರ ಅಧ್ಯಕ್ಷ ರಶೀದ್ ಭೋಲಾಭಾಯಿ ವಹಿಸಿದ್ದರು. ಈ ಸಭೆಯನ್ನು ಉದ್ದೇಶಿಸಿ ಮಾತನಾಡಿದ ರಶೀದ್ ಭೋಲಾಬಾಯ್, ಸರ್ಕಾರದ 5 ಗ್ಯಾರಂಟಿ ಯೋಜನೆಗಳನ್ನು ಸಮರ್ಪಕವಾಗಿ ಫಲಾನುಭವಿಗಳಿಗೆ ತಲುಪಿ. ಯುವ ನಿಧಿಯ ಬಗ್ಗೆ ಕಾಲೇಜುಗಳಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲು ಅಧಿಕಾರಿಗಳಿಗೆ ತಿಳಿಸಿದರು. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯ ವಾದಿರಾಜ ಕುಲಕರ್ಣಿ ಮಾತನಾಡಿ, ರೇಷನ್ ವಿತರಣೆಯ ತೂಕದಲ್ಲಿ ಲೋಪವಾಗುತ್ತಿದ್ದು, ಇದರ ಬಗ್ಗೆ ಆಹಾರ ಇಲಾಖೆಯ ಅಧಿಕಾರಿಗಳು ಸರಿಯಾಗಿ ಕ್ರಮ ಕೈಗೊಳ್ಳಿ ಹಾಗೂ ಸರ್ಕಾರ ನಿಗದಿಪಡಿಸಿದ ದಿನಾಂಕದಲ್ಲಿ ರೇಷನ್ ವಿತರಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ಸಮಿತಿಯ ಸದಸ್ಯ ವೀರಣ್ಣ ಹೀರೆಹಾಳ, ಗ್ಯಾರಂಟಿ ಅನುಷ್ಠಾನ ಸಮಿತಿಯ ಪ್ರಮುಖ ಮಂಜುನಾಥ ಮಟ್ಟಿ, ನದೀಮ ಆಚಮಟ್ಟಿ, ಇಮ್ರಾನ್ ಸಿದ್ದಿಕಿ, ವಿವೇಕಾನಂದ ಮರೆಯಳ್ಳವರ ಇದ್ದರು.



ಹುಬ್ಬಳ್ಳಿ: ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಮಹಾನಗರ ಪಾಲಿಕೆ ಸಮಿತಿಯ ಪೂರ್ವ ವಿಧಾನಸಭಾ ಕ್ಷೇತ್ರದ 72ರ ಮಾಸಿಕ ಪ್ರಗತಿ ಪರಿಶೀಲನಾ ಸಭೆ ಮಹಾನಗರ ಪಾಲಿಕೆಯ ಆಯುಕ್ತರ ಸಭಾಭವನದಲ್ಲಿ ನಡೆಯಿತು.

ಡಾ.ರಾಜಕುಮಾರ್ ಆದರ್ಶ ಬೆಳೆಸಿಕೊಳ್ಳಿ

◆ **ಧಾರವಾಡ:** ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ವರನಟ ಡಾ.ರಾಜಕುಮಾರ್ ಅವರ 97ನೇ ಜಯಂತಿ ನಗರದ ರಂಗಾಯಣದ ಸುವರ್ಣ ಸಾಂಸ್ಕೃತಿಕ ಸಮುಚ್ಚಯ ಭವನದಲ್ಲಿ ಶನಿವಾರ ಜರುಗಿತು.

ಉದ್ಘಾಟಿಸಿದ ಪದ್ಮಶ್ರೀ ಪಂ. ವೆಂಕಟೇಶಕುಮಾರ್ ಮಾತನಾಡಿ, ಕಲಾವಿದರಿಗೆ ಯಾವುದೇ ಜಾತಿ ಇಲ್ಲ. ಡಾ.ರಾಜಕುಮಾರ್ ಅರ್ಧ ಜೀವನ ನಟನೆಯಲ್ಲಿ ಕಳೆದ ಬಳಿಕ ಗಾಯನ ಕ್ಷೇತ್ರಕ್ಕೆ ಬಂದು, ಸಾಕಷ್ಟು ಹಾಡುಗಳು ಹಾಡಿದ್ದಾಗಿ ಸ್ಮರಿಸಿದರು. ಸತತ ಪ್ರಯತ್ನ ಇದ್ದಾಗ ಮಾತ್ರ ಸಾಧನೆ ಸಾಧ್ಯವಿದೆ. ಹೀಗಾಗಿ ಇಂದಿನ ಯುವಜನಾಂಗ ಇಷ್ಟದ ಕ್ಷೇತ್ರದಲ್ಲಿ ಸಾಧನೆ ಮಾಡಲು ಮುಂದಾಗಬೇಕು. ಅಲ್ಲದೇ ಗುರು, ಹಿರಿಯರಿಗೆ ಗೌರವಿಸಬೇಕು ಎಂದರು.



▸▸ ಕಾರ್ಯಕ್ರಮದಲ್ಲಿ ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಶಾಲಾ ಮಕ್ಕಳು ಡಾ.ರಾಜಕುಮಾರ ಅವರ ಛದ್ಮವೇಶ, ಸಂಭಾಷಣೆ, ಹಾಡು, ವೇಷಭೂಷಣ ಧರಿಸುವ ಮೂಲಕ ಪ್ರೇಕ್ಷಕರನ್ನು ರಂಜಿಸಿದರು

> ರೈತರು ಮತ್ತು ಗ್ರಾಮೀಣ ಜನರು, ಕಾರ್ಮಿಕರು ಶ್ರಮ ಬಿಂಬಿಸುವ ಅನೇಕ ಸಿನೆಮಾ ಮಾಡಿದ ಡಾ.ರಾಜಕುಮಾರ್ ಅವರ ಜೀವನ ಸಂದೇಶಗಳು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕು.
> ■ ಸ್ನೇಹಲ್ ಆರ್., ಜಿಲ್ಲಾಧಿಕಾರಿ

ಅಧಿಕಾರಿಗಳಾದ ಶಶಿರೇಖಾ ಚಕ್ರಸಾಲಿ, ಡಾ. ಸುರೇಶ ಹಿರೇಮಠ, ಕುಮಾರ್ ಬೆಕ್ಕೇರಿ, ಶಶಿಕಲಾ ಹುಡೇದ, ಡಾ. ಎಸ್.ಕೆ.ಪತ್ತಾರ, ಪ್ರೊ.ಸರಸ್ವತಿ ಭಗವತಿ, ಡಾ. ಎಸ್.ಪಿ.ತಟಗಾರ, ಎಂ.ಎಂ.ಚಿಕ್ಕಮಠ ಅನೇಕರು ಇದ್ದರು.

ಅನೇಕರಿಗೆ ಸಹಾಯ ಹಸ್ತ ನೀಡಿದ ಈಶ್ವರಿ ಫೌಂಡೇಶನ್

◆ **ಹುಬ್ಬಳ್ಳಿ:** ನಗರದ ಈಶ್ವರಿ ಫೌಂಡೇಶನ್ 5ನೇ ವಾರ್ಷಿಕೋತ್ಸವದ ಅಂಗವಾಗಿ ಸವಾಯಿ ಗಂಧರ್ವ ಹಾಲ್‌ದಲ್ಲಿ ಅನಾಥರಿಗೆ ಸಹಾಯಕಾಗಿ ಆಯೋಜಿಸಿದ್ದ ಸ್ವರಾಂಜಲಿ ಸಂಗೀತ ಕಾರ್ಯಕ್ರಮವನ್ನು ವಿಧಾನ ಪರಿಷತ್ ಸದಸ್ಯ ಪ್ರದೀಪ ಶೆಟ್ಟರ ಹಾಗೂ ಡಾ.ವಿಎಸ್‌ವಿ ಪ್ರಸಾದ್ ಉದ್ಘಾಟಿಸಿದರು.

ಪ್ರದೀಪ ಶೆಟ್ಟರ್ ಮಾತನಾಡಿ, ಈಶ್ವರಿ ಫೌಂಡೇಶನ್ ಪ್ರಾರಂಭವಾದಾಗಿನಿಂದ ಅನೇಕ ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಾ ಬಂದಿದೆ. ಸಂಸ್ಥೆ ಅಧ್ಯಕ್ಷ ಸಂತೋಷ ವೇರ್ಣೇಕರ ಸಂಸ್ಥೆಯ ಮೂಲಕ ಅನೇಕ ಜನರಿಗೆ ಸಹಾಯ ಹಸ್ತ ನೀಡಿದ್ದಾರೆ. ಉಚಿತ ಕಾಲು ಜೋಡಣೆ, ಉಚಿತ ಕಣ್ಣಿನ ಚಿಕಿತ್ಸೆ ಹಾಗೂ ಬಹಳ ಸಾಂಸ್ಕೃತಿಕ, ಸಾಮಾಜಿಕ ಕಾರ್ಯಕ್ರಮ ಮಾಡಿ ಸಮಾಜದಲ್ಲಿ ಮಾದರಿಯಾಗಿದ್ದಾರೆ ಎಂದರು.

ಡಾ. ವಿಎಸ್‌ವಿ ಪ್ರಸಾದ್ ಮಾತನಾಡಿ, ಸಂಗೀತ ಕೇಳುವುದರಿಂದ ಮನಸ್ಸಿಗೆ ನೆಮ್ಮದಿ ಸಿಗುತ್ತದೆ. ಸಂಗೀತದಿಂದ ಹಲವು ರೋಗಗಳು ನಿವಾರಣೆ ಆಗುತ್ತದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ. ನಗರದಲ್ಲಿ ಇಂತಹ ಸಂಗೀತ ಕಾರ್ಯಕ್ರಮಗಳು ಹೆಚ್ಚೆಚ್ಚು ನಡೆಯಲಿ ಎಂದರು.

ಮೇಯರ್ ಜ್ಯೋತಿ ಪಾಟೀಲ್ ಮಾತನಾಡಿ, ಸಂತೋಷ್ ವೇರ್ಣೇಕರ್ ಅವರು ಸರ್ವ ಜನಾಂಗದವರನ್ನು ಸೇರಿಸಿಕೊಂಡು ಉತ್ತಮ ಕಾರ್ಯ ಮಾಡುತ್ತಿದ್ದಾರೆ. ಅವರ ಜನಪರ ಕಾರ್ಯಗಳು ಇನ್ನಷ್ಟು ನಡೆಯಲಿ. ಪ್ರತಿ ವರ್ಷ ಇಂತಹ ಸಂಗೀತ ಕಾರ್ಯಕ್ರಮಗಳನ್ನು ಮಾಡಿ ಜನರ ಮನಸ್ಸನ್ನು ಹಗುರ ಮಾಡಲಿ ಎಂದರು.

ಸಂಕಲ್ಪ ಶೆಟ್ಟರ ಮಾತನಾಡಿ, ಈಶ್ವರಿ ಫೌಂಡೇಶನ್ ಅಧ್ಯಕ್ಷ ಸಂತೋಷ್ ವೇರ್ಣೇಕರ ಎಲ್ಲಾ ಸಮಾಜದ ಸಂಗಿತ ಪ್ರತಿಭೆಗಳನ್ನು ತಮ್ಮ ವೇದಿಕೆ ಮುಖಾಂತರ ಜನರಿಗೆ ಮುಟ್ಟಿಸುವ ಕೆಲಸ ಮಾಡುತ್ತಿದ್ದಾರೆ ಎಂದರು. ಅಧ್ಯಕ್ಷ ಸಂತೋಷ ವೇರ್ಣೇಕರ, ಸಂಗಿತಕಾರ ವಿಠಲ್ ಪಡಸಲಗಿ, ರಾಹುಲ್ ಸಿಂದಗಿ, ಮಹಮದ್ ರಫೀಕ್, ರಮ್ಯಾ, ಕುಲಕರ್ಣಿ,ಶಂಕರ ಪುರೋಹಿತ್, ರೇಷ್ಮೆ ದೇಶಪಾಂಡೆ, ಬೀಮರಾಜ ಕಟಾರೆ, ರವಿಚಂದ್ರ ದೊಡಿಹಾಳ, ಶ್ರೀನಿವಾಸ ವಾಲಿಕಾರ, ವಿನಯ ಸಜ್ಜನರ, ಮುರುಗೇಶ್ ಶೆಟ್ಟರ ,ಅಜಯ್ ಬಾಯಕೇರಿಕರ , ಮಂಜು ವೇರ್ಣೇಕರ,ಅನುಷ ವೇರ್ಣೇಕರ, ವೇಣು ಮಾಧವ್,ಓಂ ಎಚ್, ಅಭಿಷೇಕ್ ಬೆಳಮಕರ ಇತರರಿದ್ದರು ಪ್ರಶಾಂತ ಮುಟಗಿ ಹಾಗೂ ಯಶಸ್ವಿನಿ ಸಿ.ಎಸ್. ನಿರೂಪಿಸಿದರು.



ನಿಮ್ಮತನ ಉಳಿಸಿಕೊಳ್ಳಿ: ಬೊಮ್ಮಾಯಿ

◆ **ಹುಬ್ಬಳ್ಳಿ:** ನಗರೀಕರಣದಲ್ಲಿ ಗ್ರಾಮೀಣ ಸಂಸ್ಕೃತಿ ಸೊಗಡು ಮುಳುಗಿ ಹೋಗಬಾರದು. ಕುಸುಗಲ್ ಗ್ರಾಮದಲ್ಲಿ ಗ್ರಾಮ ದೇವತೆಯ ಪುನರ್ ಸ್ಥಾಪನೆ ಮಾಡುವ ಮೂಲಕ ನಗರೀಕರಣದಲ್ಲಿ ಮುಳುಗದೆ ನಿಮ್ಮತನ ಉಳಿಸಿಕೊಂಡಿರುವುದು ಸಂತಸವಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಹಾಲಿ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ತಾಲೂಕಿನ ಕುಸುಗಲ್ಲ ಗ್ರಾಮದಲ್ಲಿ ಗ್ರಾಮದೇವತೆಯರ ಮೂರ್ತಿ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕುಸುಗಲ್ ಗ್ರಾಮ ನಮ್ಮ ತಂದೆ ಎಸ್. ಆರ್. ಬೊಮ್ಮಾಯಿ ಅವರಿಗೆ ಬಹಳ ಅಚ್ಚು ಮೆಚ್ಚು. ಅವರು ಮೂರು ಬಾರಿ ಇಲ್ಲಿ ಶಾಸಕರಾಗಿ ಆಯ್ಕೆಯಾಗಿ ಮಂತ್ರಿಯಾಗಿ, ಮುಖ್ಯಮಂತ್ರಿಯಾಗಿ ಸೇವೆ ಮಾಡಲು ಕುಸುಗಲ್ ಗ್ರಾಮದ ಗುರು ಹಿರಿಯರು ಮತ್ತು ಯುವಕರ ಬಹಳ ದೊಡ್ಡ ಆಶೀರ್ವಾದ ಇತ್ತು ಎಂದರು. ಈ ಊರಿನ ಜನರು ಶ್ರಮಜೀವಿಗಳು ಅಲಸಂಖ್ಯಾತರು, ಎಸ್ಸಿ, ಎಸ್ಟಿ, ಲಿಂಗಾಯತರು ಎಲ್ಲರೂ ಇದ್ದಾರೆ. ನಗರೀಕರಣದ ಭರದಲ್ಲಿ ಕುಸುಗಲ್ ತನ್ನತನ ಕಳೆದುಕೊಳ್ಳಬಾರದು. ಒಂದು ಗ್ರಾಮದಲ್ಲಿ ಆತ್ಮೀಯವಾದ ಸಂಬಂಧ, ಮಾವ ಅಳಿಯ, ಸೋದರ ಸಂಬಂಧ, ಅಕ್ಕ ತಂಗಿಯರ ಸಂಬಂಧ ಬಹಳ ಚೆನ್ನಾಗಿರುತ್ತದೆ. ಈ ಸಂಸ್ಕೃತಿ ಸೊಗಡು ನಗರೀಕರಣದಲ್ಲಿ



ಮುಳುಗಿ ಹೋಗಬಾರದು ಎಂದರು. ಈ ಊರಿನಲ್ಲಿ ನೀರಿನ ಸಮಸ್ಯೆ ಬಹಳ ಇತ್ತು. ಕುಸುಗಲ್ ಕೆರೆಗೆ ಎಷ್ಟೆ ಮಳೆ ಬಂದರೂ ನೀರು ನಿಲ್ಲುತ್ತಿರಲಿಲ್ಲ. ಈಗ ನೀರು ನಿಲ್ಲುತ್ತಿದೆ. ನಾನು ಜಲ ಸಂಪನ್ಮೂಲ ಸಚಿವನಾಗಿದ್ದಾಗ ಕುಸುಗಲ್, ಬ್ಯಾಹಟ್ಟಿ, ಅಣ್ಣಿಗೇರಿ ಗ್ರಾಮಗಳಿಗೆ ಮಲಪ್ರಭದಿಂದ ನೀರು ತರಲು ಅನುಕೂಲವಾಯಿತು ಎಂದು ತಿಳಿಸಿದರು. ಭೂಮಿ ತೆಗೆದುಕೊಂಡರೂ ಮಕ್ಕಳಿಗೆ ವಿದ್ಯೆ ನೀಡುವುದನ್ನು ಮರೆಯಬೇಡಿ. ಕುಸುಗಲ್ ಮಕ್ಕಳಿಗೆ ವಿದ್ಯೆ ನೀಡಿದರೆ ಅವರು ಜಗತ್ತಿನಲ್ಲಿ ಒಳ್ಳೆಯ ಹೆಸರು ಮಾಡುತ್ತಾರೆ. ನನ್ನನ್ನು ನೆನಪಿಟ್ಟು ಕರೆಯಿಸಿದ್ದಕ್ಕೆ ಧನ್ಯವಾದಗಳು, ನನ್ನ ಕೊನೆ ಉಸಿರಿರುವವರೆಗೂ ಈ ಊರಿನ ಜೊತೆಗೆ ಸಂಬಂಧ ಇರುತ್ತದೆ. ಸದಾ ನಿಮ್ಮ ಸೇವೆಗೆ ನಾನು ನಿಮ್ಮ ಜೊತೆಗೆ ಇರುತ್ತೇನೆ ಎಂದರು.


ಇಂದಿನಿಂದ ಇನ್ ಕಾಮೆಕ್ಸ್ 2026: ಕರಮರಿ

◆ **ಹುಬ್ಬಳ್ಳಿ:** ನಗರದ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ವತಿಯಿಂದ ಅಮರಗೋಳ ಎಪಿಎಂಸಿ ಆವರಣದಲ್ಲಿ ಏ.25 ರಿಂದ 29ರವರೆಗೆ ಇನ್ ಕಾಮೆಕ್ಸ್ 2026 ಬೃಹತ್ ಕೈಗಾರಿಕಾ ಹಾಗೂ ವಾಣಿಜ್ಯ ವಸ್ತು ಪ್ರದರ್ಶನ ಹಮ್ಮಿಕೊಳ್ಳಲಾಗಿದೆ ಎಂದು ಇನ್‌ಕಾಮೆಕ್ಸ್ ಅಧ್ಯಕ್ಷ ಮಹಾದೇವ ಕರಮರಿ ತಿಳಿಸಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜ.25ರಂದು ಸಂಜೆ 4 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮಾರಂಭಕ್ಕೆ ಚಾಲನೆ ನೀಡಲಿದ್ದಾರೆ. ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಕೇಂದ್ರ ಕೈಗಾರಿಕಾ ಸಚಿವ ಪಿಯೂಷ್ ಗೋಯಲ್, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಕೇಂದ್ರ ವಿಮಾನಯಾನ ಸಚಿವ ಕೆ. ರಾಮಮೋಹನ ನಾಯ್ಡು, ವಿಧಾನಸಭಾ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಚಿವರಾದ ಎಚ್.ಕೆ. ಪಾಟೀಲ, ಎಂ.ಬಿ. ಪಾಟೀಲ, ಪ್ರದರ್ಶನ ಮಳಿಗೆಗೆ ಕಾರ್ಮಿಕ ಸಚಿವ ಸಂತೋಷ ಲಾಡ್ ಚಾಲನೆ ನೀಡಲಿದ್ದಾರೆ. ಟಾಟಾ ಪ್ರಾಜೆಕ್ಟ್ ವ್ಯವಸ್ಥಾಪಕ ನಿರ್ದೇಶಕ ವಿನಾಯಕ ಪೈ ಮುಖ್ಯ ಭಾಷಣ ಮಾಡಲಿದ್ದಾರೆ ಎಂದು ತಿಳಿಸಿದರು.

ಸಂಸದ ಜಗದೀಶ ಶೆಟ್ಟರ, ಬಸವರಾಜ ಬೊಮ್ಮಾಯಿ, ಶಾಸಕರಾದ ಅರವಿಂದ ಬೆಲ್ಲದ, ಎನ್. ಎಚ್. ಕೋನರಡ್ಡಿ, ಪ್ರಸಾದ ಅಬ್ಬಯ್ಯ, ಮಹೇಶ ಟೆಂಗಿನಕಾಯಿ, ವಿವಿ ಸದಸ್ಯರಾದ ಎಸ್.ವಿ. ಸಂಕನೂರ, ಎಫ್. ಎಚ್. ಚಕ್ಕಪ್ಪನವರ, ಪ್ರದೀಪ ಶೆಟ್ಟರ, ಮಾಜಿ ಸದಸ್ಯ ಮೋಹನ ಲಿಂಬಿಕಾಯಿ, ಮಾಜಿ ಸಚಿವ ಮುರಗೇಶ ನಿರಾಣಿ ಭಾಗವಹಿಸಲಿದ್ದಾರೆ ಎಂದು ಹೇಳಿದರು. ರೈಲ್ವೆ ಇಲಾಖೆಯ ರೇಲ್ ಕೋಚ್ ಕಾರ್ಖಾನೆ, ಇಂಟಿಗ್ರಲ್ ಕೋಚ್ ಕಾರ್ಖಾನೆ, ಚೈನ್ ರೇಲ್ ವೀಲ್ ಕಾರ್ಖಾನೆ ಮಾರ್ಡನ್ ಕೋಚ್ ಕಾರ್ಖಾನೆ ಭಾಗವಹಿಸುತ್ತಿರುವುದು ಇದೇ ಮೊದಲು. ಹಸಿರು ಶಕ್ತಿ, ಅಗ್ರೋ, ಪ್ರೊಸೆಸಿಂಗ್ ಎಂಜಿನಿಯರಿಂಗ್, ರಕ್ಷಣಾ ಉತ್ಪಾದನೆ, ವಾಹನೋದ್ಯಮ, ಐಟಿ ಹಾಗೂ ಪ್ರವಾಸೋದ್ಯಮ ಹಲವು ಕ್ಷೇತ್ರ, ಹೂಡಿಕೆಗಳು ಆಕರ್ಷಿಸಲಿವೆ ಎಂದರು. ಏ. 26 ರಂದು ಬೆಳಿಗ್ಗೆ 11.30 ಕ್ಕೆ ಎಮರ್ಜಿಂಗ್ ನಾರ್ಥ್ ಕರ್ನಾಟಕ ಕಾನ್‌ಕ್ಲೇವ್‌ಏರ್ಪಡಿಸಲಾಗಿದೆ. ಏ.27ರಂದು ಬೆಳಿಗ್ಗೆ 11.30 ಅಗ್ರಿಕಲ್ಚರಲ್ ಕಾನ್‌ಕ್ಲೇವ್ ನಡೆಯಲಿದೆ. ಏ. 28 ರಂದು ಬೆಳಿಗ್ಗೆ 11.30 ಕ್ಕೆ ಲಾಜಿಸ್ಟಿಕ್ ಸಮ್ಮಿಟ್ ಹಾಗೂ ಗ್ಲೋಬಲ್ ಟ್ರೇಡ್ ಕನೆಕ್ಟ್ ನಡೆಯಲಿದೆ. ಏ. 29 ರಂದು ಮಹಿಳಾ ಉದ್ಯಮಿ ದಾರರ ಸಮಾವೇಶ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಕೆಸಿಸಿಐ ಅಧ್ಯಕ್ಷ ಜಿ.ಕೆ. ಆದಪ್ಪಗೌಡರ, ಉಪಾಧ್ಯಕ್ಷರಾದ ಪ್ರವೀಣ ಅಂಗಡಿ, ಸಿದ್ದೇಶ್ವರ ಕಮ್ಮಾರ, ವೀರಣ್ಣ ಕಲ್ಲೂರ, ಗೌರವ ಕಾರ್ಯದರ್ಶಿ ಉದಯ ರೇವಣಕರ, ಜೊತೆ ಗೌರವ ಕಾರ್ಯದರ್ಶಿ ಪ್ರಕಾಶ ಶೃಗೇರಿ, ಜಯಪ್ರಕಾಶ ಟೆಂಗಿನಕಾಯಿ, ವಸಂತ ಲಡ್ಡದ, ಶಶಿಧರ ಶೆಟ್ಟರ ಸೇರಿದಂತೆ ಅನೇಕರಿದ್ದರು.



ಗೋಡೆ ಕುಸಿದು ವ್ಯಕ್ತಿ ಸಾವು

◆ **ಧಾರವಾಡ:** ಕಳೆದ ಎರಡು ದಿನಗಳಿಂದ ಜಿಲ್ಲೆಯಲ್ಲಿ ಧಾರಾಕಾರ ಮಳೆ ಸುರಿದಿದ್ದು, ಮಳೆಯಿಂದ ಗೋಡೆ ಕುಸಿದ ವ್ಯಕ್ತಿಯೊಬ್ಬ ಮೃತಪಟ್ಟ ಘಟನೆ ನಗರದ ಟಿಕಾರೆ ರಸ್ತೆಯ ಗೌಳಿಗಲ್ಲಿಯಲ್ಲಿ ನಡೆದಿದೆ. ಮಾರುತಿ ಕಟಾರ್ (37) ಮೃತಪಟ್ಟ ವ್ಯಕ್ತಿ ಎಂದು ಗುರುತಿಸಲಾಗಿದೆ. ಮಳೆಯಿಂದ ಹಳೆಯ ಮನೆಯ ಗೋಡೆಗಳು ಬಹಳ ಸಡಿಲಗೊಂಡಿದ್ದು, ಮೂತ್ರ ವಿಸರ್ಜನೆಗೆ ಹೋದಾಗ ಮಾರುತಿ ಮೇಲೆ ಗೋಡೆ ಬಿದ್ದು ಈ ದುರ್ಘಟನೆ ಸಂಭವಿಸಿದೆ. ಈ ಕುರಿತು ಧಾರವಾಡ ಶಹರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೂರ್ತಿ ಪ್ರಾಣಪ್ರತಿಷ್ಠಾಪನೆ, ಕಳಸಾರೋಹಣ



◆ **ಕಲಘಟಗಿ:** ತಾಲೂಕಿನ ಕೂಡಲಗಿ ಗ್ರಾಮದಲ್ಲಿ ಈಶ್ವರ ಹಾಗೂ ಬಸವಣ್ಣ ದೇವರ ದೇವಸ್ಥಾನದ ಉದ್ಘಾಟನೆ ಹಾಗೂ ಮೂರ್ತಿ ಪ್ರಾಣ ಪ್ರತಿಷ್ಠಾಪನೆ, ಕಳಸಾರೋಹಣ ಕಾರ್ಯಕ್ರಮ ಬಸವ ಜಯಂತಿ ದಿನದಂದು ಧಾರ್ಮಿಕ ವಿಧಿ ವಿಧಾನಗಳಿಂದ ಅದ್ದೂರಿಯಾಗಿ ನೆರವೇರಿತು. ಈಶ್ವರ ಹಾಗೂ ಬಸವಣ್ಣ ದೇವರ ಮಹಾ ಮರ್ತಿಗಳ ವಾಸದಿ ಕಾರ್ಯಕ್ರಮ ಜರುಗಿದವು. ಶ್ರೀ ದೇವರುಗಳ ಮೂರ್ತಿಯನ್ನು ಗ್ರಾಮದ ಪ್ರಮುಖ ಬಿದಿಗಳಲ್ಲಿ ಭಜನೆ, ಡೊಳ್ಳು ಸೇರಿದಂತೆ ವಿವಿಧ ವಾದ್ಯಮೇಳಗಳೊಂದಿಗೆ ಮೆರವಣಿಗೆ ಮಾಡಿಕೊಂಡು ನಂತರ ರಾತ್ರಿ ವೇಳೆ ಅರ್ಚಕ ಪುರೋಹಿತರಿಂದ ನವಗ್ರಹ ಶಾಂತಿ ವಾಸ್ತು ಶಾಂತಿ ಸೇರಿದಂತೆ ವಿವಿಧ ಕಾರ್ಯಕ್ರಮ ಜರುಗಿದವು. ಈಶ್ವರ ದೇವರಿಗೆ ದೇವಸ್ಥಾನದ ಟ್ರಸ್ಟ್ ಕಮಿಟಿ ಹಾಗೂ ಗ್ರಾಮದ ಭಕ್ತಾದಿಗಳಿಂದ ಮಹಾ ರುದ್ರಭಿಷೇಕ, ಸಹಸ್ರ ಬಿಲ್ವಾರ್ಚನೆ ಹಾಗೂ ಮಹಾ ಮಂಗಳಾರುತಿ ಕಾರ್ಯಕ್ರಮ ಜರುಗಿದವು. ಕಲಘಟಗಿ ಪಟ್ಟಣದ ಹನ್ನೆರಡು ಮಠದ ರೇವಣಸಿದ್ಧ ಶಿವಾಚಾರ್ಯರಿಂದ ನೂತನ ದೇವಸ್ಥಾನದ ಕಳಸಾರೋಹಣ ಹಾಗೂ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರ ನೆರವೇರಿಸಿದರು.

ಇಂದು ಅಕ್ಕಮಹಾದೇವಿ ಶರಣೋತ್ಸವ

◆ **ಧಾರವಾಡ:** ಅಕ್ಕಮಹಾದೇವಿ ಮಠದ 58ನೇ ವಾರ್ಷಿಕೋತ್ಸವ ಮತ್ತು 17ನೇ ಶರಣೋತ್ಸವ ಸಮಾರಂಭ ಏ.25 ಮತ್ತು 26ರಂದು ಬೆಳಿಗ್ಗೆ 10ಕ್ಕೆ ನಗರದ ಅಕ್ಕಮಹಾದೇವಿ ಆಶ್ರಮದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಮಾತಾಜಿ ಚಂದ್ರಮ್ಮ ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಬಸವಧರ್ಮ ಪೀಠಾಧ್ಯಕ್ಷೆ ಡಾ.ಗಂಗಾ ಮಾತಾಜಿ, ಮನಗೂಳಿ ವಿರಕ್ತಮಠದ ವಿರತೀಶಾನಂದ ಶ್ರೀ ಸಾನ್ನಿಧ್ಯ, ಬಸವ ಕಲ್ಯಾಣದ ಸಿದ್ರಾಮೇಶ್ವರ ಶ್ರೀ, ಬಸವನಾಂದ ಶ್ರೀ ನೇತೃತ್ವ ವಹಿಸಲಿದ್ದಾರೆ. ಉಳವಿ ಯೋಗ ಪೀಠದ ದಾನೇಶ್ವರಿ ಮಾತಾಜಿ ಸಮ್ಮುಖ, ಬೀದರ ರಾಷ್ಟ್ರೀಯ ಬಸವ ದಳದ ಅಧ್ಯಕ್ಷ ಬಸವರಾಜ ಬುಳ್ಳಾ ಅಧ್ಯಕ್ಷತೆ ವಹಿಸುವರು. ಹುಧಾ ಮಾಜಿ ಮೇಯರ್ ಈರೇಶ ಅಂಚಟಗೇರಿ ಧ್ವಜಾರೋಹಣ ನೆರವೇರಿಸಲಿದ್ದಾರೆ. ವಕೀಲ ಕರಬಸಪ್ಪ ಕೋರಿಶೆಟ್ಟರ ಉಪನ್ಯಾಸ ನೀಡಲಿದ್ದು, ಹು-ಧಾ ಪೊಲೀಸ್ ಆಯುಕ್ತ ಎನ್. ಶಶಿಕುಮಾರ್, ಪಾಲಿಕೆ ಸದಸ್ಯ ಶಿವು ಹಿರೇಮಠ ಪಾಲ್ಗೊಳ್ಳುವರು. ಸಂಜೆ 4ಕ್ಕೆ ಅಕ್ಕನ ಅನುಭವ ಗೋಷ್ಠಿಯೂ ಸಹ ನಡೆಯಲಿದೆ ಎಂದು ಮಾಹಿತಿ ನೀಡಿದರು. ಜಾಗತಿಕ ಲಿಂಗಾಯತ ಮಹಾಸಭಾ ಧಾರವಾಡ ಜಿಲ್ಲಾಧ್ಯಕ್ಷೆ ಸವಿತಾ ನಡಕಟ್ಟಿ ಧ್ವಜಾರೋಹಣ ನೆರವೇರಿಸಲಿದ್ದು, ಜ್ಞಾನೇಶ್ವರಿ ಮಾತಾಜಿ, ಪ್ರತಿಭಾ ವಾಲದೊಡ್ಡಿ, ಲತಾ ಮುಳ್ಳೂರ, ಡಾ.ವೀಣಾ ಬಿರಾದಾರ, ರುದ್ರೇಶ ಘಾಳಿ ಪಾಲ್ಗೊಳ್ಳುವುದಾಗಿ ತಿಳಿಸಿದರು.


ಏ.26ರ ಬೆಳಗ್ಗೆ 10ಕ್ಕೆ ಅಕ್ಕಮಹಾದೇವಿ ಪೀಠದ ವಾರ್ಷಿಕೋತ್ಸವದ ಸಾನ್ನಿಧ್ಯ ಬಸವಧರ್ಮ ಪೀಠಾಧ್ಯಕ್ಷೆ ಡಾ.ಗಂಗಾ ಮಾತಾಜಿ ವಹಿಸಲಿದ್ದು, ಜ್ಞಾನೇಶ್ವರಿ ಮಾತಾಜಿ ಪೀಠಾರೋಹಣ ಜರುಗಲಿದ್ದು, ಶಂಕರ ಪಾಟೀಲ ಉದ್ಘಾಟಿಸುವುದಾಗಿ ಹೇಳಿದರು.

ಚಿಂತಕ ರಂಜಾನ್ ದರ್ಗಾ, ಮಡಿವಾಳಪ್ಪ ಹಡಪದ ಉಪನ್ಯಾಸ ನೀಡಲಿದ್ದು, ಶಿಕ್ಷಕಿ ಲಲಿತಾ ತಮ್ಮಿನಕಟ್ಟಿ, ಛಾಯಾಗ್ರಾಹಕ ಮಿಲಿಂದ ಪಿಸೆ, ಶಿವಾನಂದ ಲೋಲೆನವರ, ವಿರೇಶ ಮಟ್ಟಿ, ಸಂಗನಗೌಡ ಹೂವಣ್ಣವರ ಸನ್ಮಾನಿಸುವುದಾಗಿ ತಿಳಿಸಿದರು. ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ವಿರೇಶ ಪಾಟೀಲ, ಮಹೇಶ ಶೀಲವಂತರ ಅವರನ್ನು ಸನ್ಮಾನಿಸಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಬಸವ ಪ್ರಕಾಶ ಸ್ವಾಮೀಜಿ, ವಿಜಯಾಂಬಿಕಾ, ಮಾತೆ ಜ್ಞಾನೇಶ್ವರಿ, ಡಾ.ವೀಣಾ ಬಿರಾದಾರ ಇದ್ದರು.



ಮುಖ್ಯ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ

◆ **ಹುಬ್ಬಳ್ಳಿ:** ವಿದ್ಯಾನಗರ ಕೆಎಲ್‌ಇ ಸಂಸ್ಥೆಯ ಪ್ರೇರಣಾ ಪದವಿ ಪೂರ್ವ ವಿಜ್ಞಾನ ಕಾಲೇಜ್ ಒಟ್ಟು 9 ವಿದ್ಯಾರ್ಥಿಗಳು ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ (ಜೆಇಇ) ನಡೆಸಿದ ಮುಖ್ಯಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ.



ಅಜೀತ ಹರಿಜನ ಶೇ.95.61 ಅಂಕ ಗಳಿಸಿ 2469 ರ‍್ಯಾಂಕ್ ಪಡೆದುಕೊಂಡು ಮಹಾವಿದ್ಯಾಲಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ. ರೋಹನ ಕಂಠಿ ಶೇ. 94.7, ಮರಡಾನಾ ಚಿನ್ಮಿತಾ ಶೇ.87.36, ಸಚ್ಚಿದಾನಂದ ನಾಗೂರ ಶೇ. 84.65, ವಿನಾಯಕ ಉಳ್ಳೇಗಡ್ಡಿ ಶೇ.82.34, ಪೂಜಾ ಸಂತೋಷ ಚವ್ಹಾಣ ಶೇ.76.3, ಶಿವರಾಜ ಕೋಲಕಾರ ಶೇ.71.06 ಅಂಕದೊಂದಿಗೆ 9442 ರ‍್ಯಾಂಕ್ ಪಡೆದುಕೊಂಡಿದ್ದಾರೆ. ದೀಕ್ಷಾ ಪೂಜಾರ, ರಾಹುಲ್ ಲಮಾಣಿ ಈ ಎಲ್ಲಾ ವಿದ್ಯಾರ್ಥಿಗಳು ಅಡ್ವಾನ್ಸ್ ಪರೀಕ್ಷೆಗೆ ಅರ್ಹರಾಗಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಗೌರವ ಚೇರಮನ್ ಡಾ.ಪ್ರಭಾಕರ ಕೋರೆ, ಚೇರಮನ್ ಅಮಿತ್ ಕೋರೆ, ವಿಶ್ವವಿದ್ಯಾಲಯದ ಪ್ರೊ.ಚಾನ್ಸಲರ್ ಡಾ.ಅಶೋಕ ಶೆಟ್ಟರ್ ಹಾಗೂ ಮಹಾವಿದ್ಯಾಲಯದ ಪ್ರಾಚಾರ್ಯ ಪ್ರೊ.ಕುಮಾರಸ್ವಾಮಿ ಮೇವುಂಡಿಮಠ ಹರ್ಷವ್ಯಕ್ತಪಡಿಸಿದ್ದಾರೆ.

ಶೇ.100ರಷ್ಟು ಫಲಿತಾಂಶ

◆ **ಕುಂದಗೋಳ:** ಪಟ್ಟಣದ ಸದ್ಗುರು ಶಿವಾನಂದ ಬಾಲಿಕಾ ಪ್ರೌಢಶಾಲೆಯ ಪ್ರಸಕ್ತ ಸಾಲಿನ ಎಸ್ ಎಸ್‌ಎಲ್‌ಸಿ ಪರೀಕ್ಷೆ-1ರ ಫಲಿತಾಂಶ ಪ್ರಕಟವಾಗಿದ್ದು, ಶೇ.100 ಫಲಿತಾಂಶ ಸಾಧಿಸಿ ಗಮನ ಸೆಳೆದಿದೆ.



ಶಾಲೆಯ ಎಲ್ಲಾ ವಿದ್ಯಾರ್ಥಿನಿಯರೂ ಉತ್ತೀರ್ಣರಾಗಿದ್ದು, ಒಟ್ಟು 23 ವಿದ್ಯಾರ್ಥಿನಿಯರು ಡಿಸ್ಟಿಂಕ್ಷನ್‌ನಲ್ಲಿ ತೇರ್ಗಡೆಯಾಗಿದ್ದಾರೆ. ಪ್ರಥಮ ದರ್ಜೆಯಲ್ಲಿ 12 ಮಂದಿ ಹಾಗೂ ದ್ವಿತೀಯ ದರ್ಜೆಯಲ್ಲಿ 4 ಮಂದಿ ವಿದ್ಯಾರ್ಥಿನಿಯರು ಉತ್ತೀರ್ಣರಾಗಿರುವುದು ವಿಶೇಷ. ವೈಯಕ್ತಿಕ ಸಾಧನೆಯಲ್ಲಿ ಪ್ರಿಯಾಂಕ ಗೋಜನೂರ ಶೇ.94 ಅಂಕಗಳೊಂದಿಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ. ರೇಣುಕಾ ಪೂಜಾರ ಶೇ.91.04 ಅಂಕಗಳೊಂದಿಗೆ ದ್ವಿತೀಯ, ವಿನುತಾ ವಾರಕಾರ ಶೇ.90.56 ಅಂಕಗಳೊಂದಿಗೆ ತೃತೀಯ ಸ್ಥಾನ ಪಡೆದಿದ್ದಾರೆ. ವಿದ್ಯಾರ್ಥಿಗಳ ಸಾಧನೆಗಾಗಿ ಶಾಲಾ ಆಡಳಿತ ಮಂಡಳಿಯ ಅಧ್ಯಕ್ಷ ಟಿ.ಎಸ್. ಗೌಡಪ್ಪನವರ, ಚೇರ್ಮನ್ ಡಾ.ಅರವಿಂದ ಕಟಗಿ, ಉಪಾಧ್ಯಕ್ಷ ಬಸವರಾಜ ಬ್ಯಾಹಟ್ಟಿ, ಶಾಲಾ ಸುಧಾರಣಾ ಸಮಿತಿ ಅಧ್ಯಕ್ಷ ಶೇಖಣ್ಣ ಬಾಳಿಕಾಯಿ,ಆಡಳಿತ ಮಂಡಳಿ ಸದಸ್ಯರು, ಪ್ರಾಚಾರ್ಯ ಎಲ್.ಎಲ್.ಲಮಾಣಿ, ಮುಖ್ಯೋಪಾಧ್ಯಾಯ ಸಿ.ಎಚ್.ಕುದುರಿ, ಸಿಬ್ಬಂದಿ ಹರ್ಷವ್ಯಕ್ತಪಡಿಸಿದ್ದಾರೆ.

ಪರಸ್ಪರ ಜ್ಞಾನ ಹಂಚಿಕೊಳ್ಳಿ

◆ **ಧಾರವಾಡ:** ಸ್ಥಳೀಯ ಸತ್ತೂರಿನ ಎಸ್‌ಡಿಎಂ ದಂತ ಮಹಾವಿದ್ಯಾಯ-ಆಸ್ಪತ್ರೆಯ ಬಾಯಿ ಮತ್ತು ಮುಖದ ಶಸ್ತ್ರ ಚಿಕಿತ್ಸಾ ವಿಭಾಗದ ಸಹಯೋಗದಲ್ಲಿ ಟ್ರಾಮಾಕಾನ್ ಕಾರ್ಯಾಗಾರ ಕ್ರಾನಿಯೋಫೇಶಿಯಲ್ ಹಂಸ ಧ್ವನಿ ಸಭಾಂಗಣದಲ್ಲಿ ಶುಕ್ರವಾರ ಜರುಗಿತು.

ಉದ್ಘಾಟಿಸಿ ಮಾತನಾಡಿದ ಎಸ್‌ಡಿಎಂ ಉಪಕುಲಪತಿ ಡಾ.ನಿರಂಜನಕುಮಾರ್, ಮ್ಯಾಕ್ಸಿಲೊಫೇಶಿಯಲ್ ಸರ್ಜರಿ ಕ್ಷೇತ್ರದಲ್ಲಿ ತಜ್ಞರು ಮತ್ತು ವೃತ್ತಿಪರರನ್ನು ಒಗ್ಗೂಡಿಸಿ, ಜ್ಞಾನ ಹಂಚಿಕೊಳ್ಳಲು ಇಂತಹ ಕಾರ್ಯಾಗಾರ ಸಹಕಾರಿಯಾಗಿವೆ ಎಂದರು.

ಡಾ. ವೆಂಕಟೇಶ ಆನೆಹೊಸೂರ ಮಾತನಾಡಿ, ಕಾರ್ಯಾಗಾರದಲ್ಲಿ ವೈಜ್ಞಾನಿಕ ಚರ್ಚೆಗಳು, ಪ್ರಾಯೋಗಿಕ ಅವಧಿಗಳು ಹೆಚ್ಚು ಪ್ರಯೋಜನ ನೀಡುತ್ತಿವೆ. ವೃತ್ತಿಪರ ಸಾಮರ್ಥ್ಯ ಬಲಪಡಿಸುವಲ್ಲಿ ಮತ್ತು ರೋಗಿಗಳ ಆರೈಕೆಯಲ್ಲಿ ಸಹಕಾರಿಯಾಗಿವೆ ಎಂದರು. ಎಸ್‌ಡಿಎಂ ವಿಶ್ವವಿದ್ಯಾಲಯದ ಪದಾಧಿಕಾರಿಗಳು ಹಾಗೂ ಅಧಿಕಾರಿಗಳು ಮತ್ತು ಪ್ರಾಚಾರ್ಯರು, ಹಿರಿಯ ಶಸ್ತ್ರಚಿಕಿತ್ಸಕರು, 150ಕ್ಕೂ ಅಧಿಕ ಪ್ರಾಧ್ಯಾಪಕರು ಸೇರಿ ಸ್ನಾತಕೋತ್ತರ ವಿದ್ಯಾರ್ಥಿಗಳು, ವಿವಿಧ ತಜ್ಞ ವೈದ್ಯರು ಇದ್ದರು.



ಪಂಚಗ್ರಹ ಹಿರೇಮಠದ ಆಸ್ತಿಗಳ ಮೇಲೆ ಸಂಪೂರ್ಣ ಹಕ್ಕಿದೆ

◆ **ಕುಂದಗೋಳ:** ಪಟ್ಟಣದ ಪಂಚಗ್ರಹ ಹಿರೇಮಠವು ಶತಮಾನಗಳ ಇತಿಹಾಸ ಹೊಂದಿದ ಮಠವಾಗಿದ್ದು, ಕ್ರಿ.ಶ. 1517ರಲ್ಲಿ ಸ್ಥಾಪನೆಯಾಗಿದೆ. ಇದು ಪುತ್ರವರ್ಗ ಮಠವಾಗಿದ್ದು, ಮಠದ ಸ್ಥಿರ ಮತ್ತು ಚರಾಸ್ತಿಗಳ ಮೇಲಿನ ಸಂಪೂರ್ಣ ಹಕ್ಕು ಪಂಚಗ್ರಹ ಹಿರೇಮಠದ ಶಿತಿಕಂಠೇಶ್ವರ ಸ್ವಾಮೀಜಿಗೆ ಸೇರಿದೆ ಎಂದು ಪಂಚಗ್ರಹ ಹಿರೇಮಠದ ಶಿತಿಕಂಠೇಶ್ವರ ಶಿವಾಚಾರ್ಯ ಸ್ವಾಮೀಜಿ ದಾಖಲೆಗಳ ಸಮೇತ ಸ್ಪಷ್ಟಪಡಿಸಿದರು.



ಪಟ್ಟಣದ ಪಂಚಗ್ರಹ ಹಿರೇಮಠದಲ್ಲಿ ಶುಕ್ರವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಏ.22ರಂದು ಕೆಲ ಸಾರ್ವಜನಿಕರು ಜಿಲ್ಲಾಧಿಕಾರಿಗಳಿಗೆ ಎನ್.ಎ. ಪ್ಲಾಟ್ ನಿರ್ಮಾಣಕ್ಕೆ ಅನುಮತಿ ನೀಡಬಾರದೆಂದು ಮನವಿ ಮಾಧ್ಯಮಗಳಿಂದ ತಿಳಿದುಬಂದಿದೆ. ಆದರೆ ಮಠವು ಜಂಗಮ ಪರಂಪರೆಯ ಸ್ವಂತ ಮಠವಾಗಿದ್ದು, ಇದರ ಮೇಲೆ ನಮ್ಮದೇ ಹಕ್ಕಿದೆ. ಮಠದ ವತಿಯಿಂದ ಸಾಮಾಜಿಕ, ಧಾರ್ಮಿಕ ಹಾಗೂ ಶೈಕ್ಷಣಿಕ ಚಟುವಟಿಕೆಗಳನ್ನು ನಿರಂತರವಾಗಿ ನಡೆಸಲಾಗುತ್ತಿದೆ. ಶಿಕ್ಷಣಾಭಿವೃದ್ಧಿಗಾಗಿ ಪಟ್ಟಣದ ಸರ್ಕಾರಿ ಪದವಿಪೂರ್ವ ಕಾಲೇಜಿಗೆ 1 ಎಕರೆ, ಪದವಿ ಕಾಲೇಜಿಗೆ 2 ಎಕರೆ, ಖಾಸಗಿ ಶಿಕ್ಷಣ ಸಂಸ್ಥೆಯ ಸನ್‌ಶೈನ್ ಶಾಲೆಗೆ 1 ಎಕರೆ ಜಮೀನು ನೀಡಲಾಗಿದೆ. ಜೊತೆಗೆ, ಶಿರೂರು ಮಾರ್ಗದಲ್ಲಿನ ರುದ್ರಭೂಮಿಗೆ 2 ಎಕರೆ 12 ಗುಂಟೆ ಹಾಗೂ ಎಪಿಎಂಸಿ ಸಮೀಪ 2 ಎಕರೆ 22 ಗುಂಟೆ ಜಾಗವನ್ನು ಸಹ ಒದಗಿಸಲಾಗಿದೆ. ಪ್ರಸ್ತುತ ಊರ ಹತ್ತಿರ ಇರುವ 53 ಎಕರೆ ಜಮೀನು ಕೃಷಿಗೆ ಅನಾನುಕೂಲಕರವಾಗಿದ್ದು, ಅದನ್ನು ಎನ್.ಎ.ಗೆ ಪರಿವರ್ತಿಸಿ ಬಡವರು ಹಾಗೂ ರೈತರ ಕಲ್ಯಾಣಕ್ಕಾಗಿ ಕಲ್ಯಾಣ ಮಂಟಪ ನಿರ್ಮಿಸಿ ಉಚಿತವಾಗಿ ಮದುವೆ ಸಮಾರಂಭಕ್ಕೆ ನೀಡುವುದು, ಗೋಶಾಲೆ, ವೃದ್ಧಾಶ್ರಮ ಮತ್ತು ಉಚಿತ ವಿದ್ಯಾರ್ಥಿ ವಸತಿ ನಿಲಯ ನಿರ್ಮಿಸುವ ಯೋಜನೆ ರೂಪಿಸಲಾಗಿದೆ. ಮಠ ಶಿಥಿಲಾವಸ್ಥೆಗೆ ತಲುಪಿರುವುದರಿಂದ ಜೀರ್ಣೋದ್ಧಾರ ಕಾರ್ಯಕ್ಕೂ ಇದರಿಂದ ನೆರವಾಗಲಿದೆ ಎಂದರು. ಈ ಹಿನ್ನೆಲೆಯಲ್ಲಿ ಸಾರ್ವಜನಿಕರು ಸಲ್ಲಿಸಿರುವ ಮನವಿಯನ್ನು ಜಿಲ್ಲಾಧಿಕಾರಿಗಳು ಪರಿಗಣಿಸಬಾರದು ಎಂದು ಅವರು ಮನವಿ ಮಾಡಿದರು.

ಕಿರುಸುದ್ದಿ

33,37,532 ರೂ. ಕಾಣಿಕೆ ಸಂಗ್ರಹ

ಹುಬ್ಬಳ್ಳಿ: ನಗರದ ಸಿದ್ಧಾರೂಢ ಸ್ವಾಮಿ ಮಠದಲ್ಲಿ 33,37,532 ರೂ. ಕಾಣಿಕೆ ಹಾಗೂ 2,60,750 ರೂ. ಮೌಲ್ಯದ ಬಂಗಾರ ಹಾಗೂ ಬೆಳ್ಳಿ ವಸ್ತುಗಳು ಸಂಗ್ರಹವಾಗಿದೆ ಎಂದು ಸಿದ್ಧಾರೂಢ ಸ್ವಾಮಿ ಮಠ ಟ್ರಸ್ಟ್ ಕಮಿಟಿ ತಿಳಿಸಿದರು.

ಈ ಕುರಿತು ಪ್ರಕಟಣೆಗೆ ತಿಳಿಸಿದ ಅವರು, ಗುರುವಾರ ಸಿದ್ಧಾರೂಢ ನಗರ ಶಾಖೆಯ ಮ್ಯಾನೇಜರ್, ಶ್ರೀಮಠದ ಪದಾಧಿಕಾರಿಗಳು ಹಾಗೂ ಭಕ್ತರ ಸಮ್ಮುಖದಲ್ಲಿ ಎಣಿಕೆ ಮಾಡಲಾಗಿದೆ. 2026 ಮಾ.25ರಿಂದ ಏ. 23 ರ ವರೆಗೆ 29 ದಿವಸಗಳಲ್ಲಿ ಸಂಗ್ರಹವಾದ ಕಾಣಿಕೆಯಾಗಿದೆ. ಕಮಿಟಿ ಚೇರಮನ್ ಬಾಳು ಮಗಜಿಕೊಂಡಿ, ವೈಸ್‌ಚೇರಮನ್ ಗೀತಾ ಕಲಬುರಗಿ, ಗೌರವ ಕಾರ್ಯದರ್ಶಿ ವಿನಾಯಕ ಅ. ಘೋಡಕೆ, ಧರ್ಮದರ್ಶಿಗಳಾದ ಚನ್ನವೀರ ಡಿ. ಮುಂಗುರವಾಡಿ, ಉದಯಕುಮಾರ ಡಿ. ನಾಯಕ, ವಸಂತ ವಾಯ್. ಸಾಲಗಟ್ಟಿ, ಬಸವರಾಜ ಸಿ. ಕಲ್ಯಾಣಶೆಟ್ಟರ, ಶಾಮಾನಂದ ಬಾ. ಪೂಜೇರಿ ಹಾಗೂ ಗಂಗಾಧರ ಶಂಕರ ಘೋಡಕೆ ಇದ್ದರು.

ಆರ್‌ಟಿಓ ಕಚೇರಿಯಲ್ಲಿ ಬೆಂಕಿ !

ಕಾರವಾರ: ಇಲ್ಲಿಯ ಆರ್‌ಟಿಓ ಕಚೇರಿಯಲ್ಲಿ ಆರ್‌ಟಿಓ ಅಧಿಕಾರಿ ಫ್ಯಾನ್ ಸ್ವಿಚ್ ಹಾಕಿದ ಕೂಡಲೇ ವಿದ್ಯುತ್ ಶಾರ್ಟ ಸರ್ಕ್ಯೂಟ್ ಆಗಿ ಬೆಂಕಿ ಕಂಡು ಬಂದ ಘಟನೆಯು ಶುಕ್ರವಾರ ಮಧ್ಯಾಹ್ನ ನಡೆದಿದೆ.

ಕಚೇರಿ ಮಧ್ಯಾಹ್ನದ ವೇಳೆ ಆರ್‌ಟಿಓ ಕಚೇರಿ ಅಧಿಕಾರಿ ತಮ್ಮ ಛೇಂಬರಗೆ ತೆರಳಿ ಅಲ್ಲಿಯ ಫ್ಯಾನ್ ಸ್ವಿಚ್ ಆನ್ ಮಾಡುತ್ತಿದ್ದಂತೆ ಇದ್ದಕ್ಕಿದ್ದಂತೆ ಶಾರ್ಟ ಸರ್ಕೂಟ್ ಆಗಿ ಬೆಂಕಿ ಹೊಗೆ ಕಾಣಿಸಿಕೊಂಡಿತು ಎನ್ನಲಾಗಿದೆ. ಕೂಡಲೇ ಅಲ್ಲಿದ್ದ ಸ್ಥಳೀಯರು ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿದ್ದು, ಅನಾಹುತ ತಪ್ಪಿದಂತಾಗಿದೆ. ಏಕಾಏಕಿ ಬೆಂಕಿ ಹೊಗೆ ಕಾಣಿಸಿಕೊಂಡ ಪರಿಣಾಮ ಕಚೇರಿಗೆ ಬಂದಿದ್ದ ಜನರಲ್ಲಿಯೂ ಆತಂಕ ವ್ಯಕ್ತಪಡಿಸುವಂತಾಯಿತು. ಈ ಬಗ್ಗೆ ತಮ್ಮ ಮೇಲಾಧಿಕಾರಿಗಳಿಗೆ ಅನಾಹುತದ ಬಗ್ಗೆ ಮಾಹಿತಿ ನೀಡಿ ವಿದ್ಯುತ್ ವಿಭಾಗದವರು ಪರಿಶೀಲನೆ ನಡೆಸಿದರು.

ಸರಣಿ ಅಪಘಾತ: ಕಾರುಗಳು ಜಖಂ

ಕಾರವಾರ: ರಾಜ್ಯ ಸಾರಿಗೆ ಬಸ್ ನಗರದ ಹೊಟೆಲ್ ಮುಂದೆ ರಸ್ತೆಯ ಪಕ್ಕ ನಿಲ್ಲಿಸಿದ್ದ ಕಾರಿಗೆ ಡಿಕ್ಕಿ ಹೊಡೆದ ಪರಿಣಾಮ ಆ ಕಾರು ಅದರ ಪಕ್ಕದಲ್ಲಿದ್ದ ಇನ್ನೆರಡು ಕಾರಿಗೆ ತಗಲು ಜಖಂಗೊಂಡ ಘಟನೆಯು ಗ್ರೀನಸ್ಟ್ರೀಟ್‌ನ ಪ್ರಿಮಿಯರ್ ಹೊಟೆಲ್ ಎದುರು ನಡೆದಿದೆ.

ಕಾರವಾರದಿಂದ ಚಿತ್ತಾಕುಲ ಕ್ಕೆ ತೆರಳುತ್ತಿದ್ದ ಬಸ್ಸು ಚಾಲಕನ ನಿಯಂತ್ರಣ ತಪ್ಪಿದ ಕಾರಣವು ತಿಳಿದುಬಂದಿಲ್ಲ. ಹೊಟೆಲ್ ಮುಂದೆ ನಿಲ್ಲಿಸಿದ್ದ ಸ್ವಿಫ್ಟ ಕಾರಿಗೆ ಡಿಕ್ಕಿ ಹೊಡೆದಿದೆ. ಈ ಕಾರು ಅದರ ಪಕ್ಕದಲ್ಲಿದ್ದ ಇನ್ನೋವಾ ಮತ್ತು ಫೋರ್ಡ ಹಾಗು ಮತ್ತೊಂದು ಕಾರಿಗೆ ಹೋಗಿ ಬಡಿದಿದೆ. ಇದರಿಂದ ಈ ಎಲ್ಲ ಕಾರುಗಳು ಜಖಂ ಗೊಂಡಿದೆ. ಘಟನೆಯು ಸಂಭವಿಸುತ್ತಲೆ ಕಾರಿನ ಮಾಲಿಕರು ಹೊರಬಂದು ಸಾರಿಗೆ ಚಾಲಕನ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಈ ಮಧ್ಯೆ ಪೋಲಿಸರು ಸ್ಥಳಕ್ಕೆ ಧಾವಿಸಿ ಬಂದು ವಾತಾವರಣ ತಿಳಿಗೊಳಿಸಿದರು.

ಹಣ ವಸೂಲಿ: ಮೂವರ ವಿರುದ್ಧ ಎಸ್ಪಿಗೆ ದೂರು

ಖಾನಾಪುರ: ತಾಲೂಕಿನ ಗೋಲಿಹಳ್ಳಿ ಅರಣ್ಯ ವಲಯದ ಮಾಸ್ಕೇನಟ್ಟಿ ಗ್ರಾಮದ ಬಳಿ ಇತ್ತೀಚೆಗೆ ಅಕ್ರಮವಾಗಿ ಮರಳು ಸಾಗಿಸುತ್ತಿದ್ದ ಎರಡು ಟ್ರಾಕ್ಟರ್‌ಗಳನ್ನು ಹಿಡಿದ ಮೂವರು ಪತ್ರಕರ್ತರು ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸಿ ಅಕ್ರಮ ಮರಳುಗಾರಿಕೆ ಬಗ್ಗೆ ಮಾಧ್ಯಮಗಳಲ್ಲಿ ವರದಿ ಮಾಡುವುದಾಗಿ ಬೆದರಿಸಿದ್ದು, ಅಧಿಕಾರಿಗಳಿಂದ 15 ಸಾವಿರ ಹಣ ವಸೂಲಿ ಮಾಡಿದ್ದಾರೆ ಎಂದು ಆರೋಪಿಸಿರುವ ಮಾಸ್ಕೇನಟ್ಟಿ ಗ್ರಾಮದ ಜ್ಯೋತಿಬಾ ಗಂಗಾರಾಮ ಭೇಂಡಿಗೇರಿ, ಈ ಪತ್ರಕರ್ತರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಲಿಖಿತ ದೂರು ಸಲ್ಲಿಸಿದ್ದಾರೆ.

ಎಸ್‌ಪಿ ಅವರಿಗೆ ಸಲ್ಲಿಸಿರುವ ಎರಡು ಪುಟಗಳ ದೂರಿನಲ್ಲಿ ಪತ್ರಕರ್ತರಾದ ಪ್ರಸನ್ನ ಕುಂಬಾರ, ನಾಗೇಶ ನಾಯ್ಕರ ಮತ್ತು ಜಾವೇದ ಮೊಕಾಶಿ ಎಂಬ ಮೂವರು ಕರ್ನಾಟಕ ಪತ್ರಕರ್ತರ ಸಂಘ ಎಂಬ ಸಂಘದ ಹೆಸರಲ್ಲಿ ಅಧಿಕಾರಿಗಳನ್ನು ಮತ್ತು ಸರ್ಕಾರಿ ನೌಕರರನ್ನು ಹೆದರಿಸಿ ಅವರಿಂದ ಹಣ ವಸೂಲಿ ಮಾಡುತ್ತಿದ್ದಾರೆ. ಸರ್ಕಾರಿ ಕಚೇರಿಗಳಿಗೆ ತೆರಳಿ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಬೆದರಿಕೆ ಹಾಕುತ್ತಿದ್ದಾರೆ. ಇವರ ವರ್ತನೆಯಿಂದ ಜನರಿಗೆ ಮಾಧ್ಯಮ ಕ್ಷೇತ್ರದ ಮೇಲಿನ ವಿಶ್ವಾಸ ಕಡಿಮೆಯಾಗುತ್ತಿದೆ. ಇವರ ವಿರುದ್ಧ ವಿಚಾರಣೆ ನಡೆಸಬೇಕು ಮತ್ತು ಇವರ ಹೆದರಿಕೆ, ಬೆದರಿಕೆಯಿಂದ ನೊಂದವರಿಗೆ ನ್ಯಾಯ ದೊರಕಿಸಿಕೊಡಬೇಕು ಎಂದು ಉಲ್ಲೇಖಿಸಿದ್ದಾರೆ.

ಬಾಗಲಕೋಟೆ ವಿವಿಯ ಪ್ರಥಮ ಘಟಿಕೋತ್ಸವ | 16 ಸ್ನಾತಕೋತ್ತರ ಪದವಿಧರರಿಗೆ ಚಿನ್ನದ ಪದಕ

ಶಿಕ್ಷಣದ ಜೊತೆಗೆ ಸಂಸ್ಕಾರ ಬೆಳೆಸಿಕೊಳ್ಳಿ : ಗೆಹ್ಲೋಟ್

ಜಮಖಂಡಿ: ಶಿಕ್ಷಣದ ಜೊತೆಗೆ ಸಂಸ್ಕಾರ, ಸಂಪ್ರದಾಯಗಳನ್ನು ಬೆಳೆಸಿಕೊಂಡು, ಆ ಸಂಪ್ರದಾಯಗಳ ಜೊತೆ ಆಧುನಿಕತೆಯಲ್ಲಿ ಮುನ್ನಡೆಯಬೇಕಿದೆ ಎಂದು ರಾಜ್ಯದ ರಾಜ್ಯಪಾಲರಾದ ಥಾವರಚೆಂದ್ ಗೆಹ್ಲೋಟ್ ಹೇಳಿದರು.

ನಗರದ ಬಿಎಲ್‌ಡಿಇಎ ಸಂಸ್ಥೆಯ ಆವರಣದಲ್ಲಿರುವ ದರ್ಬಾರ್ ಸಭಾಂಗಣದಲ್ಲಿ ಜರುಗಿದ ಬಾಗಲಕೋಟೆ ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವದಲ್ಲಿ 16 ಜನ ಸ್ನಾತಕೋತ್ತರ ಪದವಿಯ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಸಹಿತ ಪ್ರಶಸ್ತಿ ಪ್ರಧಾನ ಮಾಡಿ ಮಾತನಾಡಿದ ಅವರು, ಆಧುನಿಕ ತಂತ್ರಜ್ಞಾನ ಬೆಳೆದಂತೆಲ್ಲ ನೀವೆಲ್ಲಾ ಬೆಳೆದುಕೊಂಡು ಹೋಗಬೇಕಿದೆ. ನಿಮ್ಮ ಭವಿಷ್ಯ ನಿಮ್ಮ ಕೈಯಲ್ಲಿದ್ದು, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಭಾಗವಹಿಸಿ ನಿಮ್ಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ತಿಳಿಸಿದರು.

ಮುಖ್ಯ ಅತಿಥಿ ಹಾಗೂ ಘಟಿಕೋತ್ಸವದ ಭಾಷಣಕಾರರಾಗಿ ಆಗಮಿಸಿದ್ದ ಮಹಾರಾಷ್ಟ್ರ ನಾಗಪುರದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜಮೆಂಟ್‌ನ ನಿರ್ದೇಶಕ ಡಾ.ಭೀಮರಾಯ ಮೇತ್ರಿ ಮಾತನಾಡಿ, ಪದವಿ ಪಡೆದ ವಿದ್ಯಾರ್ಥಿಗಳು ಅದೃಷ್ಟವಂತರಾಗಿದ್ದಿರಿ. ಏಕೆಂದರೆ ನೀವು ಡಿಜಿಟಲ್ ಜಗತ್ತಿನ ಜನಿಸಿದ್ದೀರಿ. ಇಂದು ದೇಶ ಚಲನೆಯಲ್ಲಿದ್ದು, ಭಾರತ ಜಾಗತಿ ಬ್ರ್ಯಾಂಡ್ ಆಗಿದೆ. 2027-28ರಲ್ಲಿ ಭಾರತವು 3ನೇ ಅತೀದೊಡ್ಡ ಜೆಡಿಪಿಯೊಂದಿಗೆ ಆರ್ಥಿಕವಾಗಿ ಮುಂದೆ ಬರಲಿದೆ. ಭಾರತ ಇಂದು ಆತ್ಮ ನಿರ್ಭರ ಭಾರತ ಮತ್ತು ವೀಕ್ಷಿತ ಭಾರತದೊಂದಿಗೆ ಉತ್ತಮ ವೇಗದಲ್ಲಿ ಸಾಗುತ್ತಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮೂರು ಜನರಿಗೆ ಡಾಕ್ಟರೇಟ ಹಾಗೂ 16 ಜನ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಚಿನ್ನದ ಪದಕದ ಜೊತೆಗೆ ಪ್ರಶಸ್ತಿ ಪ್ರಧಾನ ಮಾಡಲಾಯಿತು. ಕಾರ್ಯಕ್ರಮದಲ್ಲಿ ಬಾಗಲಕೋಟೆ ವಿವಿಯ ಕುಲಪತಿ ಪ್ರೊ.ಆನಂದ ಶರದ್ ದೇಶಪಾಂಡೆ, ಕುಲಸಚಿವ ಸೋಮಲಿಂಗ ಗೆಣ್ಣೂರ, ಮೌಲ್ಯಮಾಪನ ವಿಭಾಗದ ಕುಲಸಚಿವೆ ಪ್ರೊ.ಲತಾ ಕೆ.ಜಿ, ಹಣಕಾಸು ಅಧಿಕಾರಿ ಡಾ.ಚಿದಾನಂದ ಢವಳೇಶ್ವರ ಸೇರಿದಂತೆ ಸಿಂಡಿಕೇಟ ಸದಸ್ಯರು, ವಿದ್ಯಾವಿಷಯಕ್ ಪರಿಷತ್ ಸದಸ್ಯರು ಉಪಸ್ಥಿತರಿದ್ದರು.



16 ಜನರಿಗೆ ಚಿನ್ನದ ಪದಕ ಪ್ರದಾನ

ಉತ್ತಮ ಸಾಧನೆ ಮಾಡಿದ 16 ಜನ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ರಾಜ್ಯಪಾಲರಾದ ಥಾವರಚಂದ್ ಗೆಹ್ಲೋಟ್ ಅವರು ಚಿನ್ನದ ಪದಕ ಪ್ರದಾನ ಮಾಡಿದರು. ಆಯಿಷಾ ಅಲಾಸ್, ಪ್ರಿಯಾಂಕ ಹಡಪದ, ಭಾಗ್ಯಶ್ರೀ ಗವಾಲಿ, ಅನೀಲ ತೆಗ್ಗಿ, ಗಾಯತ್ರಿ ಲಲಕಿ, ಜ್ಯೋತಿ ದಂಡಿನ, ವಜ್ರಕುಮಾರ ಕುಸಾನಲ್, ಗುರುರಾಜ ಗೌಡರ, ಸುಷ್ಮಾ ತಂಬಕು, ರಾಜಕುಮಾರ ಅರಳಗುಂಡಿ, ನಿಶ್ಮಿತಾ ಚೂರಿ, ಸಾತ್ವಿಕಾ, ಐಶ್ವರ್ಯ ಕೊಡಗ, ರಾಜೇಶ್ವರಿ ಹಿರೇದೇಸಾಯಿ, ಸುಜಾತಾ ಲವಟೆ, ಸನ್ಮತಿ ಕುರ್ಪೆ ಅವರು ಚಿನ್ನದ ಪದಕ ಪಡೆದುಕೊಂಡರು.

ಗೌರವ ಡಾಕ್ಟರೇಟ್ ಪ್ರದಾನ

ಬಾಗಲಕೋಟೆ ವಿವಿಯ ಘಟಿಕೋತ್ಸವದಲ್ಲಿ ಪದ್ಮಭೂಷಣ ಪ್ರಶಸ್ತಿ ಪುರಸ್ಕೃತ ಮತ್ತು ಪ್ರಸಿದ್ಧ ಬಾಹ್ಯಾಕಾಶ ವಿಜ್ಞಾನಿ ಎಸ್.ನಂಬಿ ನಾರಾಯಣನ್ ಹಾಗೂ ಟೆಕ್ ಉದ್ಯಮಿ ಮತ್ತು ಲೋಕೋಪಕಾರಿ ತಂತ್ರಜ್ಞಾನ ಉದ್ಯಮಿ ಮಹೇಶ ಬೆಲ್ಲದ ಅವರಿಗೆ ರಾಜ್ಯಪಾಲರಾದ ಥಾವರಚಂದ್ ಗೆಹ್ಲೋಟ್ ಅವರು ಗೌರವ ಡಾಕ್ಟರೇಟ್ ಪ್ರದಾನ ಮಾಡಿದರು.

ಉಪನ್ಯಾಸ-ರಾಷ್ಟ್ರೀಯ ಪ್ರಶಸ್ತಿ ಪ್ರದಾನ ನಾಳೆ

ಧಾರವಾಡ: ವಿಶ್ವ ಕಲಾ ದಿನದ ಅಂಗವಾಗಿ ಗ್ರಂಥ ಬಿಡುಗಡೆ, ರಾಷ್ಟ್ರೀಯ ಪ್ರಶಸ್ತಿ ಪ್ರದಾನ, ವಿಶೇಷ ಉಪನ್ಯಾಸ, ಛಾಯಾಚಿತ್ರ ಪ್ರದರ್ಶನ, ಪ್ರಾತ್ಯಕ್ಷಿಕೆ ಸಮಾರಂಭ ಏ.26, 27ರಂದು ಎರಡು ದಿನ ಜೆಎಸ್ಸೆಸ್ ಹಾಲಭಾವಿ ಸ್ಕೂಲ್ ಸಭಾಭವನದಲ್ಲಿ ಹಮ್ಮಿಕೊಂಡಿದೆ.

ರಾಷ್ಟ್ರೀಯ ದೃಶ್ಯಕಲಾ ಅಕ್ಯಾಡೆಮಿ ಧಾರವಾಡ, ಜೆಎಸ್ಸೆಸ್ ಹಾಲಭಾವಿ ಸ್ಕೂಲ್ ಆಫ್ ಆರ್ಟ ಧಾರವಾಡ ಹಾಗೂ ರೋಟರಿ ಕ್ಲಬ್ ಧಾರವಾಡದ ಸಹಯೋಗದಲ್ಲಿ ಸಮಾರಂಭವನ್ನು ಜೆಎಸ್ಸೆಸ್ ವಿದ್ಯಾಪೀಠದ ಆಡಳಿತಾಧಿಕಾರಿ ಎಸ್.ಜಿ.ಬಿರಾದಾರಉದ್ಘಾಟಿಸಲಿದ್ದಾರೆ.

ಶುಕ್ರವಾರ ಸುದ್ದಿಗೋಷ್ಠಿಯಲಿ ಮಾತನಾಡಿದ ದೃಶ್ಯಕಲಾ ಅಕ್ಯಾಡೆಮಿ ಅಧ್ಯಕ್ಷ ಪ್ರೊ. ಎಸ್.ಸಿ.ಪಾಟೀಲ, ಏ.26ರ ಸಂಜೆ 4ಕ್ಕೆ 'ಪದ್ಮಶ್ರೀ ಕ.ಕ. ಹೆಬ್ಬಾರ ಒಂದು ಸಂಕಥನ' ಕೃತಿ ವಿಶ್ರಾಂತ ಕುಲಪತಿ ಡಾ. ಎ.ಮುರಿಗೆಪ್ಪ ಬಿಡುಗಡೆ ಮಾಡಲಿದ್ದಾರೆ ಎಂದರು.

ಡಾ.ಚಂದ್ರಶೇಖರ ರೊಟ್ಟಿಗವಾಡ ಕೃತಿ ಪರಿಚಯಿಸಲಿದ್ದು, ಅಕ್ಯಾಡೆಮಿ ಉಪಾಧ್ಯಕ್ಷ ಎಂ.ಎಸ್.ಚೌಧರಿ, ರೋಟರಿ ಅಧ್ಯಕ್ಷ ಪಿ.ಕೆ.ನಂದ್ಯಾಳಕರ, ಜೆಎಸ್ಸೆಸ್ ಪಬ್ಲಿಕ್ ಶಾಲೆಮುಖ್ಯಾಧ್ಯಾಪಕ ನಾಗೇಂದ್ರ ಪ್ರಸಾದ, ಎಸ್.ಕೆ.ಪತ್ತಾರ ಪಾಲ್ಗೊಳ್ಳುವುದಾಗಿ ತಿಳಿಸಿದರು. ಏ.27ರ ಬೆಳಿಗ್ಗೆ 10.30ಕ್ಕೆ ಛಾಯಾಚಿತ್ರ ಮತ್ತು ಸಮೂಹ ಚಿತ್ರಕಲಾ ಪ್ರದರ್ಶನ ಹಾಲಭಾವಿ ಟ್ರಸ್ಟ್ ಅಧ್ಯಕ್ಷ ಬಿ.ಮಾರುತಿ ಉದ್ಘಾಟಿಸಲಿದ್ದು, ವಿಜಯ ಚಿತ್ರಕಲಾ ಕಾಲೇಜಿನ ಪ್ರಾಚಾರ್ಯ ಛಾಯಾಚಿತ್ರ ಪ್ರದರ್ಶನಕ್ಕೆ ಚಾಲನೆ ನೀಡಲಿದ್ದಾರೆ ಎಂದು ಹೇಳಿದರು.

ಲಿಯೋನಾರ್ಡೋ ಡಾ ವಿಂಚಿ ಬಗ್ಗೆ ಹಂಪಿ ವಿವಿ ದೃಶ್ಯಕಲಾ ವಿಭಾಗದ ಮುಖ್ಯಸ್ಥ ಮೋಹನರಾವ್ ಪಂಚಾಳ ಉಪನ್ಯಾಸಬಳಿಕಡಾ.ಬಿ.ಬಿ.ಬಿರಾದಾರ, ಡಾ.ಶಶಿಕಲಾ ಹೂಗಾರ, ಡಾ. ಸುನಿತಾ ಪಾಟೀಲ ದೃಶ್ಯಕಲಾ ಪ್ರಾತ್ಯಕ್ಷಿಕೆ ನಡೆಸಿಕೊಡಲಿದ್ದಾರೆ ಎಂದರು. ಕಲ್ಬುರ್ಗಿ ವಿ.ಬಿ.ಬಿರಾದಾರ, ಹುಬ್ಬಳ್ಳಿ ಆರ್.ಬಿ.ಗರಗ, ದಾವಣಗೇರಿ ದತ್ತಾತ್ರೇಯ ಭಟ್ ಅವರಿಗೆ 2025ನೇ ಸಾಲಿನ ಕಲಾನ್ವೇಷಕ ಪ್ರೊ. ಎಸ್.ಸಿ.ಪಾಟೀಲ ರಾಷ್ಟ್ರೀಯ ಪ್ರಶಸ್ತಿಯನ್ನು ಕುಲಪತಿ ಪ್ರೊ. ಟಿ.ಎಂ.ಭಾಸ್ಕರ್ ಪ್ರದಾನಿಸುವುದಾಗಿ ಹೇಳಿದರು.

ಇನ್ನೂ ಡಾ.ಬಸವರಾಜ ಕುರಿಯವರ, ಡಾ.ಶಶಿಕಲಾ ಹೂಗಾರ, ಡಾ.ಸುನಿತಾಪಾಟೀಲಅವರಿಗೆ2026ನೇ ಸಾಲಿನ ಸಾಲಿನ ಕಲಾನ್ವೇಷಕ ಪ್ರೊ. ಎಸ್.ಸಿ.ಪಾಟೀಲ ರಾಷ್ಟ್ರೀಯ ಪ್ರಶಸ್ತಿಯನ್ನು ಪಿ.ಕೆ.ನಂದ್ಯಾಳಕರ ಪ್ರದಾನಿಸಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಜೆಎಸ್ಸೆಸ್ ಹಾಲಭಾವಿ ಸ್ಕೂಲ್ ಆಫ್ ಆರ್ಟ ಕಾಲೇಜಿನ ಪ್ರಾಚಾರ್ಯ ಡಾ. ಬಿ.ಎಂ.ಪಾಟೀಲ, ವೆಂಕಟೇಶ ಕೆ.ಎಚ್., ಬಿ.ಎಸ್.ಗುರಣ್ಣವರ, ಯುವರಾಜ ಇದ್ದರು.



ಕಾನೂನು ಸಂಶೋಧನೆಗೆ ಆದ್ಯತೆ ನೀಡಿ

ಹುಬ್ಬಳ್ಳಿ: ಕಾನೂನು ವಿದ್ಯಾರ್ಥಿಗಳು ಕೃತಕ ಬುದ್ಧಿ ಮತ್ತೆ(ಎಐ) ತಂತ್ರಜ್ಞಾನ ಅರಿವು, ಕಾನೂನು ಸಂಶೋಧನೆಗೆ ಆದ್ಯತೆ ನೀಡಬೇಕು ಎಂದು ಹೈಕೋರ್ಟ್ ಧಾರವಾಡ ಪೀಠದ ನ್ಯಾಯಮೂರ್ತಿ ಬಿ.ಎಂ. ಶ್ಯಾಮ್ ಪ್ರಸಾದ್ ತಿಳಿಸಿದರು.

ಶುಕ್ರವಾರ ನಗರದ ಬಿವಿಬಿ ಕಾಲೇಜು ಆವರಣದಲ್ಲಿರುವ ಐಎಂಎಸ್‌ಆರ್ ಸಭಾಂಗಣದಲ್ಲಿ ಕೆಎಲ್‌ಇ ಸಂಸ್ಥೆಯ ಜಿ.ಕೆ. ಕಾನೂನು ಕಾಲೇಜು ವತಿಯಿಂದ ಆಯೋಜಿಸಿದ್ದ ರಾಷ್ಟ್ರೀಯ ಮಟ್ಟದ 4ನೇ ಸಂಧಾನ ಸ್ಪರ್ಧೆಯನ್ನು ಉದ್ಘಾಟಿಸಿ ಮಾತನಾಡಿದರು.

ಯಾರು ಹುಟ್ಟುತ್ತಲೇ ವಕೀಲರಾಗಲು ಸಾಧ್ಯವಿಲ್ಲ. ವಕೀಲರನ್ನು ಸೃಷ್ಟಿ ಮಾಡುವುದೆ ಶಿಕ್ಷಣ ಸಂಸ್ಥೆಗಳು. ಶಿಕ್ಷಕರು, ವಿದ್ಯಾರ್ಥಿಗಳ ಅಭಿವೃದ್ಧಿಗೆ ಅಪಾರ ಕೊಡುಗೆ ನೀಡುತ್ತಾರೆ. ವರ್ಷಗಳು ಕಳೆದ ನಂತರ ಇದರ ಅರಿವಾಗುತ್ತದೆ ಎಂದರು.

ಸಂಧಾನ ಪ್ರಕ್ರಿಯೆ ಸೇರಿದಂತೆ ವಿವಿಧ ವೃತ್ತಿಕೌಶಲಗಳ ಕಲಿಕೆ ಅತ್ಯಗತ್ಯ. ಇದಕ್ಕೆ ಇಂತಹ ಸ್ಪರ್ಧೆ ಉತ್ತಮ ವೇದಿಕೆಯಾಗಿದೆ. ಇಂದಿನ ಡಿಜಿಟಲ್ ಯುಗದಲ್ಲಿ ಅಪಾರ ದತ್ತಾಂಶವನ್ನು ಸಂಗ್ರಹಿಸಬಹುದಾಗಿದೆ. ಕಾನೂನು ಶಿಕ್ಷಣದಲ್ಲಿ ಹೊಸ ವಿಚಾರಗಳ ಕಲಿಕೆ ಅಗತ್ಯವಿದೆ. ವಿದ್ಯಾರ್ಥಿಗಳು ಕೌಶಲ ಕಲಿತರೆ ವೃತ್ತಿ ಬದುಕಿನಲ್ಲಿ ಯಶಸ್ಸು ಸಾಧಿಸಬಹುದು ಎಂದು ಹೇಳಿದರು.

ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕಾನೂನು ಅಧ್ಯಯನ ವಿಭಾಗದ ಮಾಜಿ ಅಧ್ಯಕ್ಷ ಸಿ. ರಾಜಶೇಖರ ಮಾತನಾಡಿ, ದೇಶದಲ್ಲಿ ಕಾನೂನು ಶಿಕ್ಷಣಕ್ಕೆ ಮಹತ್ವ ಹೆಚ್ಚಿದೆ. ಅದಕ್ಕೆ ಕಾರಣ ಸುಪ್ರೀಂ ಕೋರ್ಟ್ ಸೇರಿದಂತೆ ದೇಶದ ನ್ಯಾಯಾಲಗಳಲ್ಲಿ ಕೋಟ್ಯಂತರ ಪ್ರಕರಣಗಳು ಬಾಕಿ ಇವೆ. ಶೀಘ್ರವಾಗಿ ಇತ್ಯರ್ಥವಾಗದ ಕಾರಣ ನ್ಯಾಯಾಲಯಗಳ ಮೇಲೆ ಒತ್ತಡ ಹೆಚ್ಚುತ್ತಿದೆ ಎಂದು ತಿಳಿಸಿದರು.

ಜಿ.ಕೆ. ಕಾಲೇಜ್ ಪ್ರಾಚಾರ್ಯ ಜ್ಞಾನೇಶ್ವರ ಚೌರಿ ಮಾತನಾಡಿದರು. ಮುಂಬೈ, ಬೆಂಗಳೂರು, ಶಿವಮೊಗ್ಗ ಸೇರಿದಂತೆ ವಿವಿಧೆಡೆಯಿಂದ 22 ತಂಡಗಳು ಒಟ್ಟು45 ಸ್ಪರ್ಧಾಳುಗಳು ಭಾಗವಹಿಸಿದ್ದಾರೆ. ಕಾಲೇಜಿನ ಐಕ್ಯುಎಸಿ ಸಂಯೋಜಕಿ ಶಾರದಾ ಜಿ. ಪಾಟೀಲ ಅವರು ಅತಿಥಿಗಳನ್ನು ಪರಿಚಯಿಸಿದರು.

ಸಂಧಾನ ಜ್ಞಾನವಿರಲಿ

ಎಐ ತಂತ್ರಜ್ಞಾನವು ಜೀವನದ ಭಾಗವಾಗಿದ್ದು, ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಕಾನೂನು ಕ್ಷೇತ್ರದಲ್ಲಿ ನ್ಯಾಯಾಲಯವೊಂದೇ ಆಯ್ಕೆಯಾಗಿಲ್ಲ, ಹೊಸ ಅವಕಾಶಗಳೂ ಇವೆ. ಕಾರ್ಪೊರೇಟ್ ವಲಯದಲ್ಲಿ ಸಂಧಾನ ಪ್ರಕ್ರಿಯೆ ಹೆಚ್ಚು ಪ್ರಚಲಿತದಲ್ಲಿದೆ. ಹಾಗಾಗಿ, ಕಾನೂನು ವಿದ್ಯಾರ್ಥಿಗಳಿಗೆ ಉತ್ತಮ ಸಂಧಾನದ ಜ್ಞಾನ ಇರಬೇಕು. ಅಧ್ಯಯನಶೀಲರಾಗಬೇಕು ಎಂದು ಗೋವಾ ರಾಜ್ಯ ಪಣಜಿಯ ಸಾಲಗಾಂವ್ಕರ್ ಕಾನೂನು ಕಾಲೇಜಿನ ಸಹ ಪ್ರಾಧ್ಯಾಪಕ ಬಾಬುಗೌಡ ಎಸ್. ಪಾಟೀಲ ಹೇಳಿದರು.



ಶಿವಸೇನೆಯ ರಾಜ್ಯಾಧ್ಯಕ್ಷ ಸಿದ್ದಲಿಂಗ ಸ್ವಾಮೀಜಿ ಹೇಳಿಕೆ

ಗಲಭೆಕೋರರನ್ನು ಪ್ರಕರಣದಿಂದ ಕೈ ಬಿಟ್ಟರೆ ಕಾನೂನು ಸಮರ !

ಕಲಬುರಗಿ: 2022ರಲ್ಲಿ ಜಿಲ್ಲೆಯ ಆಳಂದ ಪಟ್ಟಣದ ರಾಘವ ಚೈತನ್ಯರ ಶಿವಲಿಂಗ ಪೂಜೆಗೆ ತೆರಳಿದ್ದ ಹಿಂದೂ ಭಕ್ತರು ಹಾಗೂ ಜಿಲ್ಲಾಡಳಿತದ ಮೇಲೆ ನಡೆದದಾಳಿಪ್ರಕರಣಕ್ಕೆಸಂಬಂಧಿಸಿದಂತೆ ನೂರಾರು ಜನರ ಮೇಲೆ ದೂರು ದಾಖಲಾಗಿದ್ದು,ಇದೀಗ ಆ ಪ್ರಕರಣದ ಆರೋಪಿಗಳಾಗಿರುವವರು ಅಮಾಯಕರು ಎಂದು ಹೇಳಿ ದೂರು ಹಿಂಪಡೆಯುವಂತೆ ಸಭಾಧ್ಯಕ್ಷ ಯು.ಟಿ. ಖಾದರ್ ಗೃಹ ಇಲಾಖೆಗೆ ಪತ್ರ ಬರೆದಿರುವುದು ಅಕ್ಷಮ್ಯ ಹಾಗೂ ಕಾನೂನು ಬಾಹಿರವಾದ ನಡೆ ಎಂದು ಶಿವಸೇನೆಯ ರಾಜ್ಯಾಧ್ಯಕ್ಷ ಸಿದ್ದಲಿಂಗ ಸ್ವಾಮಿ ಹೇಳಿದ್ದಾರೆ.

ನಗರದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಖಾದರ್ ಅವರ ನಡೆಗೆ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ.ನ್ಯಾಯಾಂಗ ಪ್ರಕ್ರಿಯೆಯಲ್ಲಿ ನೇರ ಹಸ್ತಕ್ಷೇಪ ಮಾಡಲಾಗಿದೆ.ಸಭಾಧ್ಯಕ್ಷರ ಸ್ಥಾನ ಪಕ್ಷಾತೀತ ಮತ್ತು ಜಾತ್ಯಾತೀತವಾಗಿರಬೇಕು.ಆದರೆ, ಈ ರೀತಿಯ ಕ್ರಮವು ಸಂವಿಧಾನಾತ್ಮಕ ಅಧಿಕಾರದ ದುರುಪಯೋಗವಾಗಿದ್ದು ಪ್ರಜಾಪ್ರಭುತ್ವಕ್ಕೆ ಹಾನಿಕಾರಕ. ಗಲಭೆ ಪ್ರಕರಣಗಳಲ್ಲಿ ಭಾಗಿಯಾದವರ ಮೇಲಿನದೂರುಗಳನ್ನುಹಿಂಪಡೆಯಲು ಪ್ರಯತ್ನಿಸಲಾಗುತ್ತಿದ್ದು, ಗಲಭೆಕೋರರ ಮೇಲೆ ದಾಖಲಾಗಿರುವ ದೂರು ಹಿಂಪಡೆಯುವ ಪರಿಸ್ಥಿತಿ ಬಂದರೆ ಕಾನೂನು ಹೋರಾಟ ಕೈಗೊಳ್ಳುವುದಾಗಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ಗುರುಶಾಂತ್‌ಟೆಂಗಳಿಮಾತನಾಡಿದರು. ರಾಕೇಶ್ ಜಮಾದಾರ್, ಶಿವಕುಮಾರ್ ಬಾಳಿ, ರೋಹಿತ್ ಪಿಸ್ಕೆ ಸೇರಿದಂತೆ ಇತರರು ಉಪಸ್ಥಿತರಿದ್ದರು.



ದಾವೆ ಮುಂದುವರಿಸದ ಹಿನ್ನೆಲೆ ಪ್ರಕರಣ ವಜಾ

ಕಲಬುರಗಿ: ಬೆಂಗಳೂರು ನಗರದ ಎಂಟನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ (ಸಿಸಿಎಚ್15) ನಲ್ಲಿ ನಡೆದ ಮಹತ್ವದ ದಾವೆ ಒಂದು ಮುಂದುವರಿಸದ ಹಿನ್ನೆಲೆಯಲ್ಲಿ ನ್ಯಾಯಾಲಯ ಕೇಸು ವಜಾಗೊಳಿಸಿದೆ ಎಂದು ಶಿವಸೇನೆಯ ರಾಜ್ಯಾಧ್ಯಕ್ಷ ಸಿದ್ದಲಿಂಗ ಸ್ವಾಮೀಜಿ ತಿಳಿಸಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು,ಜಿಲ್ಲೆಯ ಚಿತ್ತಾಪುರ ತಾಲೂಕು ಪಾಕಿಸ್ತಾನವಾಗಿ ಮಾರ್ಪಾಡುತ್ತಿದೆ ರಕ್ಷಣೆ ನೀಡುವಂತೆ 2020ರಲ್ಲಿ ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿಗೆ ನಾವು ಮನವಿ ಕೊಡಲು ಹೋಗಿದೇವು.ಅದನ್ನೆ ಆಧಾರವಾಗಿಟ್ಟುಕೊಂಡು ಸ್ಥಳೀಯ ಶಾಸಕ ಪ್ರಿಯಾಂಕ್ ಖರ್ಗೆ ಅವರು ನನ್ನ ಮೇಲೆ ಬೆಂಗಳೂರಿನ ಸಿಟಿ ಕೋರ್ಟ್ ನಲ್ಲಿ ಮಾನನಷ್ಟ ಮೊಕದ್ದಮೆ ಹೂಡಿದ್ದು,ಪ್ರಕರಣ ವಿಚಾರಣೆ ಇದ್ದಾಗ ನಾವು ನಮ್ಮ ಪರ ವಕೀಲರು ಕೋರ್ಟ್‌ಗೆ ಹಾಜರಾಗಿದ್ದೇವೆ.ಆದರೆ,ಎದುರಾಳಿಯ ವಕೀಲರು ಹಾಜರಾಗದ ಹಿನ್ನೆಲೆಯಲ್ಲಿ ಕೋರ್ಟ್ ಪ್ರಕರಣವನ್ನು ವಜಾಗೊಳಿಸಿದೆ ಎಂದು ಹೇಳಿದರು.

ಪ್ರಧಾನಿ ಆಡಳಿತ ಸಹಿಸದೆ ಕೀಳು ಮಟ್ಟದ ಹೇಳಿಕೆ

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ದೇಶದ ಪ್ರಧಾನಿಯ ಬಗ್ಗೆ ಬಳಸಿದ ಪದಪ್ರಯೋಗ ಶೋಭೆ ತರುವಂತಹದಲ್ಲ ಎಂದು ಶಿವಸೇನೆಯ ರಾಜ್ಯಾಧ್ಯಕ್ಷ ಸಿದ್ದಲಿಂಗ ಸ್ವಾಮಿ ಹೇಳಿದರು. ಆಳಂದನಲ್ಲಿ ಗಲಭೆ ನಡೆಸಿದವರು ಭಯೋತ್ಪಾದಕರು, ನಾವು ಮನಸ್ಸು ಮಾಡಿದ್ರೆ ಒಬ್ಬರನ್ನೂ ಜಿಲ್ಲೆಯಲ್ಲಿ ಓಡಾಡೋಕೆ ಬಿಡೋಲ್ಲ,ಡಿಪೋಗೆ ಬೆಂಕಿ ಹಚ್ಚುತ್ತೇನೆ ಅಂದವರು ಭಯೋತ್ಪಾದಕರು,ಹಿಂದು ಸ್ವಾಮೀಜಿಗಳ, ಬಿಜೆಪಿ ಶಾಸಕ ಮತ್ತು ಪ್ರಮುಖರ ಹತ್ಯೆಗೆ ಸುಪಾರಿ ಕೊಟ್ಟವರು ಭಯೋತ್ಪಾದಕರು, ಸುಳ್ಳು ಅಟ್ರಾಸಿಟಿ ಕೇಸ್ ಹಾಕುವವರು ನಿಜವಾದ ಭಯೋತ್ಪಾದಕರಾಗಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರ ಆಡಳಿತ ಸಹಿಸಲಾರದೆ ಬಾಯಿಗೆ ಬಂದಂತೆ ಹೇಳುವುದು ಶೋಭೆಯಲ್ಲ ಎಂದು ಹೇಳಿದರು.

ಮಧ್ಯಸ್ಥಿಕೆ ಕೆಲಸ ಬಹಳ ಅಮೂಲ್ಯ

ಧಾರವಾಡ: ಕರ್ನಾಟಕ ಮಧ್ಯಸ್ಥಿಕೆ ಕೇಂದ್ರ. ಕಾನೂನು ಸೇವಾ ಪ್ರಾಧಿಕಾರದಿಂದ ನಗರದ ಜಿಲ್ಲಾ ನ್ಯಾಯಾಲಯದ ಸಂಕೀರ್ಣದಲ್ಲಿ ಗದಗ ಮತ್ತು ಧಾರವಾಡ ಜಿಲ್ಲೆಗಳಿಗೆ ಹೊಸದಾಗಿ ನಿಯೋಜನೆಗೊಂಡ 50 ಜನರ ಮಧ್ಯಸ್ಥಿಕೆಗಾರರ ಸಭೆ ಜರುಗಿತು.

ಸಭೆ ಉದ್ಘಾಟಿಸಿದ ಕಾನೂನು ಸೇವಾ ಪ್ರಾಧಿಕಾರದ ಜಿಲ್ಲಾಧ್ಯಕ್ಷ ರಾಜಕುಮಾರ್ ಸಿ. ಮಾತನಾಡಿ, ರಾಜ್ಯದ ನ್ಯಾಯಾಲಯಗಳಲ್ಲಿ ದಾಖಲಾಗುವ ಪ್ರಕರಣಗಳಲ್ಲಿ ರಾಜೀ ಸಂಧಾನ ಪ್ರಕ್ರಿಯೆಯಲ್ಲಿ ಮಧ್ಯಸ್ಥಿಕೆಯು ತುಂಬಾ ಅತ್ಯಮೂಲ್ಯವಾಗಿದೆ ಎಂದರು. ನ್ಯಾಯಾಲಯದಲ್ಲಿ ಬಹಳ ವರ್ಷಗಳಿಂದ ಬಾಕಿ ಉಳಿದರುವ ಹಳೆಯ ಪ್ರಕರಣ ಹಾಗೂ ಹೊಸ ಪ್ರಕರಣಗಳ ಇತ್ಯರ್ಥದಲ್ಲಿ ಮಧ್ಯಸ್ಥಿಕೆಗಾರರ ತುಂಬಾ ಮಹತ್ವದ ಪಾತ್ರ ವಹಿಸುತ್ತಾರೆ. ಹೀಗಾಗಿ ಜವಾಬ್ದಾರಿಯುತವಾಗಿ ನಿರ್ವಹಣೆ ಮಾಡಬೇಕು ಎಂದರು. ಅಧ್ಯಕ್ಷತೆ ವಹಿಸಿದ್ದ ಖ್ಯಾಯಂ ಜನತಾ ನ್ಯಾಯಾಲಯದ ನ್ಯಾಯಾಧೀಶೆ ಸುವರ್ಣಾ ಮಿರ್ಜಿ ಮಾತನಾಡಿ, ಮಧ್ಯಸ್ಥಿಕೆಗಾರರು ನ್ಯಾಯಾಲಯದ ಅರ್ಧ ಕೆಲಸ ಕಡಿಮೆ ಮಾಡುತ್ತಾರೆ. ತರಬೇತಿ ಹಂತದ ಕಾರ್ಯವೈಖರಿ ವೃತ್ತಿಯಲ್ಲಿ ಅಳವಡಿಸಿಕೊಳ್ಳಲು ಹೇಳಿದರು.

ನ್ಯಾಯಾಧೀಶರಾದ ಎ.ಕೆ.ನಾಗರಾಜಪ್ಪ, ಜರೀನಾ, ಪೂರ್ಣಿಮಾ ಎನ್. ಪೈ, ಕರ್ನಾಟಕ ವಕೀಲರ ಪರಿಷತ್ ಅಧ್ಯಕ್ಷ ವಿ.ಡಿ.ಕಾಮರಡ್ಡಿ, ಕಾನೂನು ಸೇವಾ ಪ್ರಾಧಿಕಾರದ ಆನಂದಕುಮಾರ್ ಮಗದುಮ, ಕೆ.ಎಲ್.ಪಾಟೀಲ, ಅಶೋಕ ಏಣಗಿ ಇದ್ದರು.



ಬೋರಗಾಂವ - ಮಾಣಕಾಪೂರದಲ್ಲಿ ಭಾರಿ ಮಳೆ ಗಾಳಿ

ಚಿಕ್ಕೋಡಿ: ನಿಪ್ಪಾಣಿ ತಾಲೂಕಿನ ಬೋರಗಾಂವ ಪಟ್ಟಣ ಹಾಗೂ ಮಾಣಕಾಪೂರ ಗ್ರಾಮದಲ್ಲಿ ಗುರುವಾರ ತಡರಾತ್ರಿ ಜೋರಾಗಿ ಬೀಸಿದಮಳೆಗಾಳಿಯಿಂದಶಾಲೆಯ ತಗಡಿನ ಛಾವಣಿ ಹಾರಿ ಹೋಗಿದ್ದು, ಜವಳಿ ಘಟಕದೊಳಗೆ ನೀರು ನುಗ್ಗಿ ಯಂತ್ರೋಪಕರಣಗಳು ಹಾನಿಗೊಳಗಾಗಿವೆ. ಮಾಣಕಾಪೂರ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯ ಛಾವಣಿ ಹಾರಿ ಹೋಗಿರುವ ಘಟನೆ ನಡೆದಿದೆ. ಶಾಲೆಯ ಕೆಲವೊಂದು ಕೊಠಡಿಗಳ ಗೋಡೆಗಳು ಬಿರುಕು ಬಿಟ್ಟಿದ್ದು, ಕಿಟಕಿ ಬಾಗಿಲುಗಳಿಗೂ ಹಾನಿಯಾಗಿದೆ.

ಬೋರಗಾಂವ ಪಟ್ಟಣದಲ್ಲಿಯ ಕೆಲವೊಂದು ಜವಳಿ ಘಟಕಗಳಿಗೆ ನೀರು ನುಗ್ಗಿದ್ದು, ಯಂತ್ರೋಪಕರಣಗಳು ನೀರಿನಲ್ಲಿ ನಿಂತಿವೆ. ಹೀಗಾಗಿ ಲಕ್ಷಾಂತರ ರೂಪಾಯಿ ಮೌಲ್ಯದ ವಸ್ತುಗಳು ಹಾನಿಗೊಳಗಾಗಿವೆ. ಕೆಲವೊಂದು ಮನೆಗಳ ಛಾವಣಿ ಹಾಗೂ ದನದ ಶೆಡ್‌ಗಳಿಗೂ ಹಾನಿಯಾಗಿದೆ.



ಘಟನಾ ಸ್ಥಳಕ್ಕೆ ಸ್ಥಳೀಯ ಅಧಿಕಾರಿಗಳೊಂದಿಗೆ ಯುವ ಮುಖಂಡ ಉತ್ತಮ ಪಾಟೀಲ ಶುಕ್ರವಾರ ಭೇಟಿ ನೀಡಿ, ವಿಧಾನ ಪರಿಷತ್ ಸದಸ್ಯ ಪ್ರಕಾಶ ಹುಕ್ಕೇರಿ ಅವರಿಗೆ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಮಾಹಿತಿ ನೀಡಿದರು. ಇದೀಗ ಬೇಸಿಗೆ ರಜೆ ಇದ್ದು, ಶಾಲೆ ಪುನರಾರಂಭಕ್ಕೂ ಮೊದಲು ಹಾನಿಯಾಗಿರುವ ಶಾಲೆಯ ಕೊಠಡಿ ಹಾಗೂ ಛಾವಣಿ ರಿಪೇರಿ ಮಾಡುವಂತೆ ಮನವಿ ಮಾಡಿಕೊಂಡರು. ಅಲ್ಲದೇ ಹಾನಿಗೊಳಗಾದ ಯಂತ್ರೋಪಕರಣಗಳ ಮಾಲೀಕರಿಗೆ ಸೂಕ್ತ ಪರಿಹಾರ ಘೋಷಣೆ ಮಾಡುವಂತೆ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಮಾಣಕಾಪೂರದ ಸರ್ಕಾರಿ ಪ್ರಾಥಮಿಕ ಶಾಲೆಯ ಎಸ್ಡಿಎಂಸಿ ಅಧ್ಯಕ್ಷ, ಉಪಾಧ್ಯಕ್ಷ, ಸದಸ್ಯರು ಹಾಗೂ ಗ್ರಾಮ ಪಂಚಾಯಿತಿ ಅಧ್ಯಕ್ಷ, ಉಪಾಧ್ಯಕ್ಷ, ಸದಸ್ಯರು, ಶಾಲಾ ಶಿಕ್ಷಕರು, ಸ್ಥಳೀಯರು ಉಪಸ್ಥಿತರಿದ್ದರು.

ಲಕ್ಷಾಂತರ ಮೌಲ್ಯದ ಚಿನ್ನಾಭರಣ ದೋಚಿ ಪರಾರಿಯಾಗಿದ್ದ ಐವರ ಖದೀಮರ ಬಂಧನ

ಬೆಳಗಾವಿ: ನಗರ ವ್ಯಾಪ್ತಿಯ ಚಿನ್ನಾಭರಣ, ನಗದು ದೋಷಿ ಪರಾರಿಯಾಗುತ್ತಿದ್ದ ಐವರು ಖದೀಮರನ್ನು ಬಂಧಿಸಿ, ಆರೋಪಿಗಳಿಂದ 67 ಲಕ್ಷ ರೂ. ಮೌಲ್ಯದ ಚಿನ್ನಾಭರಣವನ್ನು ಜಪ್ತಿ ಮಾಡಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಭೂಷಣ್ ಬೊರಸೆ ಹೇಳಿದರು.

ನಗರದ ಮಾಳಮಾರುತಿ ಪೊಲೀಸ್ ಠಾಣೆಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಹನುಮಾನ ನಗರ, ಉಜ್ವಲನಗರ, ಅಜಮ ನಗರ ಮನೆಗಳ್ಳತನ ಕುರಿತು ದೂರ ದಾಖಲಿಸಿಕೊಂಡು ಪೊಲೀಸ್‌ರು ಖದೀಮರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ರಿಹಾನ್ ದಪೇದಾರ, ಮಲ್ಲಿಕ ಹುಬ್ಬಳ್ಳಿ, ಅರಮಾನ ಶೇಖ ಕಿಡಿಗೇಡಿಗಳು ಕಳ್ಳತನ ಮಾಡುತ್ತಿದ್ದರು ಇದನ್ನು ಖಲೀಲ್ ಹುಬ್ಬಳ್ಳಿ, ಶಾನವಾಜ ಪಠಾಣ್ ಖರೀದಿ ಮಾಡುತ್ತಿದ್ದವರು. ಇಲ್ಲಿವರೆಗೂ ಸುಮಾರು 415 ಗ್ರಾಂ ಚಿನ್ನ, 1 ಕೆಜಿ 300 ಗ್ರಾಂ ಬೆಳ್ಳಿ ವಶಪಡಿಸಿಕೊಳ್ಳಲಾಗಿದೆ. ಮಾಳಮಾರುತಿ, ಎಪಿಎಂಸಿ ಹಾಗೂ ಮಾರ್ಕೆಟ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 11 ಚಿನ್ನಾಭರಣ ಕೇಸ್ ಪತ್ತೆಯಾಗಿವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಡಿಸಿಪಿ ನಿರಂಜನ ರಾಜೆ ಅರಸ, ಎಸಿಪಿ ಸಂತೋಷ ಸತ್ಯನಾಯಕ, ಸಿಪಿಐ ಬಿ.ಆರ್.ಗಡ್ಡೇಕರ್ ಸೇರಿದಂತೆ ಇತರರು ಇದ್ದರು.



ಜಿಲ್ಲೆಯ ಚಿಂಚೋಳಿ ಬಳಿ ಭೀಕರ ಅಪಘಾತ

10 ಜನರಿಗೆ ಗಂಭೀರ ಗಾಯ

ಕಲಬುರಗಿ: ಜಿಲ್ಲೆಯ ಚಿಂಚೋಳಿ ತಾಲೂಕಿನ ಬೀದರ್ ಮಹೇಬೂಬ್ ನಗರ ರಾಷ್ಟ್ರೀಯ ಹೆದ್ದಾರಿಯ ಪೊಲಕಪಳ್ಳಿ ತಾಂಡಾ ಸಮೀಪ ಶುಕ್ರವಾರ ಸಂಜೆ ಭೀಕರ ರಸ್ತೆ ಅಪಘಾತ ಸಂಭವಿಸಿದೆ.ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆಯ ಬಸ್, ತುಂಬಿದ ಸಿಮೆಂಟ್ ಟ್ಯಾಂಕರ್ ಹಾಗೂ ಟಂ ಟಂ ವಾಹನಗಳ ಮಧ್ಯೆ ಡಿಕ್ಕಿ ಸಂಭವಿಸಿದ ಘಟನೆ ಚಿಂಚೋಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಚಿಂಚೋಳಿ ಬಸ್ ನಿಲ್ದಾಣದಿಂದ ವೆಂಕಟಾಪುರದತ್ತ ತೆರಳುತ್ತಿದ್ದ ಬಸ್‌ಗೆ, ಕಲ್ಲೂರು ಗ್ರಾಮದ ದಿಕ್ಕಿನಿಂದ ಎದುರಾಗಿ ಬರುತ್ತಿದ್ದ ಸಿಮೆಂಟ್ ಟ್ಯಾಂಕರ್ ಡಿಕ್ಕಿ ಹೊಡೆದ ಪರಿಣಾಮ ಬಸ್ ಪಲ್ಟಿ ಹೊಡೆದಿದೆ. ಬಸ್‌ನಲ್ಲಿ ಚಾಲಕ ಮತ್ತು ನಿರ್ವಾಹಕ ಸೇರಿದಂತೆ ಒಟ್ಟು 11 ಮಂದಿ ಪ್ರಯಾಣಿಸುತ್ತಿದ್ದರು ಎಂದು ತಿಳಿದುಬಂದಿದೆ.

ಅಪಘಾತದಲ್ಲಿ ಯಾವುದೇ ಪ್ರಾಣಹಾನಿ ಸಂಭವಿಸದಿದ್ದರೂ, 10 ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ತಕ್ಷಣವೇ ಚಿಂಚೋಳಿ ಸಾರ್ವಜನಿಕ ಆಸ್ಪತ್ರೆಗೆ ಸಾಗಿಸಲಾಗಿದ್ದು, ವೈದ್ಯಾಧಿಕಾರಿ ಡಾ. ಗಫಾರ್ ನೇತೃತ್ವದ ತಂಡ ಪ್ರಥಮ ಚಿಕಿತ್ಸೆ ನೀಡಿದೆ. ಬಳಿಕ ಗಂಭೀರವಾಗಿ ಗಾಯಗೊಂಡವರನ್ನು ಕಲಬುರಗಿ ಹಾಗೂ ಬೀದರ್ ಜೇಮ್ಸ್ ಆಸ್ಪತ್ರೆಗೆ ರವಾನಿಸಲಾಗಿದೆ. ವೈದ್ಯಾಧಿಕಾರಿಗಳ ಪ್ರಕಾರ, ಐದು ಮಂದಿಗೆ ತಲೆಗೆ ಗಂಭೀರ ಪೆಟ್ಟುಗಳಾಗಿದ್ದು, ಉಳಿದವರಿಗೆ ಮೂಗು ಹಾಗೂ ಭುಜದ ಮೂಳೆಗಳಲ್ಲಿ ಗಾಯಗಳಾಗಿವೆ.



ಘಟನಾ ಸ್ಥಳಕ್ಕೆ ಠಾಣಾಧಿಕಾರಿ ಗಂಗಮ್ಮ ಜಿನಕೇರಿ ಹಾಗೂ ಸರ್ಕಲ್ ಇನ್ಸ್ಪೆಕ್ಟರ್ ಕಪಿಲದೇವ್ ಭೇಟಿ ನೀಡಿ ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ. ಗಾಯಾಳುಗಳ ವಿವರ: ಶಂಕರ ರಾಮಶೆಟ್ಟಿ ಪವಾರ (65), ಸುಶೀಲಬಾಯಿ ಲಿಂಬೈ (60), ಎಂ.ಡಿ. ಇಲಿಯಾಜ್ ಎಂ.ಡಿ. ಆಯೂಬ್ (23), ಲಾಲ್ ಪಟೇಲ್ ಚಾಂದ್ ಪಟೇಲ್ (35), ಉಮೇಶ ಶ್ರೀಮಂತ (30), ರಮೇಶ ವೀರಶೆಟ್ಟಿ (36), ರವಿ ಸಂಗಪ್ಪ (38), ವಿಜಯಕುಮಾರ ವಿಠಲ್ (37), ಭಾಗಮ್ಮ ಕಾಶಿನಾಥ (36), ವಿದ್ಯಾವತಿ ಕಾಶಿನಾಥ (38).

ಏಳು ಆಪ್ ಸಂಸದರ ಬಿಜೆಪಿ ಸೇರ್ಪಡೆ ಶೀಘ್ರ

ಪುಟ ೧➜ಈ ಸಂದರ್ಭದಲ್ಲಿ ಸಂದೀಪ್ ಪಾಠಕ್ ಮತ್ತು ಅಶೋಕ್ ಮಿತ್ತಲ್ ಸಹ ಉಪಸ್ಥಿತರಿದ್ದರು. ಇನ್ನು ಹರ್ಭಜನ್ ಸಿಂಗ್, ರಾಜಿಂದರ್ ಗುಪ್ತಾ, ವಿಕ್ರಮ್ ಸಾಹ್ನಿ ಮತ್ತು ಸ್ವಾತಿ ಮಲಿವಾಲ್ ಕೂಡ ಈ ನಿರ್ಧಾರಕ್ಕೆ ಬೆಂಬಲ ನೀಡಿದ್ದಾರೆ ಎಂದು ತಿಳಿಸಿದರು. ನಾನು ಪಕ್ಷದ ಕೆಲವು ಚಟುವಟಿಕೆಗಳಲ್ಲಿ ಭಾಗಿಯಾಗಲು ಇಚ್ಛಿಸಲಿಲ್ಲ, ಅವುಗಳಲ್ಲಿ ಭಾಗವಹಿಸದ ಕಾರಣ ನಾನು ಅವರ ವಿಶ್ವಾಸಕ್ಕೆ ಅರ್ಹನಾಗಲಿಲ್ಲ. ನಮ್ಮ ಮುಂದೆ ಎರಡು ಆಯ್ಕೆಗಳು ಇದ್ದವು? ಒಂದು ರಾಜಕೀಯ ಮತ್ತು ಕಳೆದ 15-16 ವರ್ಷಗಳಲ್ಲಿ ಮಾಡಿದ ಸಾರ್ವಜನಿಕ ಸೇವೆಯನ್ನು ತ್ಯಜಿಸುವುದು; ಇನ್ನೊಂದು ಸಕಾರಾತ್ಮಕ ರಾಜಕೀಯದ ಮೂಲಕ ಮುಂದುವರಿಯುವುದು. ನಾವು ಎರಡನೇ ಆಯ್ಕೆಯನ್ನು ಆರಿಸಿಕೊಂಡಿದ್ದೇವೆ ಎಂದು ಚಡ್ಡಾ ಸ್ಪಷ್ಟಪಡಿಸಿದರು. ಸಂದೀಪ್ ಪಾಠಕ್ ಮಾತನಾಡಿ, ನಾನು 10 ವರ್ಷಗಳಿಂದ ಈ ಪಕ್ಷದ ಜತೆ ಇದ್ದೆ. ಇಂತಹ ಪರಿಸ್ಥಿತಿ ಬರುತ್ತದೆ ಎಂದು ನಾನು ಎಂದಿಗೂ ಭಾವಿಸಿರಲಿಲ್ಲ. ಆದರೆ ಇಂದು ನಾನು ಎಎಪಿಗೆ ವಿದಾಯ ಹೇಳುತ್ತಿದ್ದೇನೆ ಎಂದರು. ಇತ್ತೀಚೆಗೆ ರಾಜ್ಯಸಭೆಯಲ್ಲಿ ಎಎಪಿ ಉಪನಾಯಕ ಸ್ಥಾನದಿಂದ ಚಡ್ಡಾರನ್ನು ತೆಗೆದುಹಾಕಲಾಗಿತ್ತು ಮತ್ತು ಅವರ ಬದಲು ಅಶೋಕ್ ಮಿತ್ತಲ್ ನೇಮಕಗೊಂಡಿದ್ದರು.

ಪಂಜಾಬ್‌ನಲ್ಲೂ ಆಪ್‌ಗೆ ಸಂಕಷ್ಟ!

ಪುಟ ೧➜ರಾಜ್ಯಸಭಾ ಸದಸ್ಯರಿಗಿಂತ ಭಿನ್ನವಾಗಿ, ಪಂಜಾಬ್‌ನ ಶಾಸಕರು ಮುಖ್ಯಮಂತ್ರಿ ಭಗವಂತ್ ಮಾನ್ ನೇತೃತ್ವದ ಸರ್ಕಾರದೊಂದಿಗೆ ನೇರವಾಗಿ ಸಂಬಂಧ ಹೊಂದಿದ್ದಾರೆ. ಅವರ ರಾಜಕೀಯ ಭವಿಷ್ಯವೂ ಸರ್ಕಾರದ ಸ್ಥಿರತೆಯ ಮೇಲೆ ಅವಲಂಬಿತವಾಗಿರುವುದರಿಂದ, ತಕ್ಷಣದ ಬಂಡಾಯ ಸಂಭವಿಸುವ ಸಾಧ್ಯತೆ ಕಡಿಮೆ ಎಂದು ಅಂದಾಜಿಸಲಾಗಿದೆ.

ದೇಶದ ವಿವಿಧೆಡೆ ಏಕಕಾಲಕ್ಕೆ ಇಡಿ ದಾಳಿ | ತನಿಖೆ ಚುರುಕು

ಹಣ ಅಕ್ರಮ ವರ್ಗಾವಣೆ ಜಾಲ ಪತ್ತೆ

ಬೆಂಗಳೂರು: ಆರ್ಥಿಕ ನಿಯಮಗಳನ್ನು ಗಾಳಿಗೆ ತೂರಿ ವಿದೇಶಿ ಡೆಬಿಟ್ ಕಾರ್ಡ್‌ಗಳ ಮೂಲಕ ಕೋಟ್ಯಂತರ ರೂ. ಹಣವನ್ನು ಅಕ್ರಮವಾಗಿ ದೇಶಕ್ಕೆ ವರ್ಗಾಯಿಸುತ್ತಿದ್ದ ಬೃಹತ್ ಜಾಲವೊಂದನ್ನು ಜಾರಿ ನಿರ್ದೇಶನಾಲಯ (ಇ.ಡಿ.) ಪತ್ತೆಹಚ್ಚಿದೆ. ಈ ಸಂಬಂಧ ಫೆಮಾ ಕಾಯ್ದೆಯಡಿ ದೇಶದ ವಿವಿಧೆಡೆ ಏಕಕಾಲಕ್ಕೆ ದಾಳಿ ನಡೆಸಲಾಗಿದ್ದು, ತನಿಖೆ ಚುರುಕುಗೊಂಡಿದೆ.

ದಿ ತಿಮೋತಿ ಇನಿಶಿಯೇಟಿವ್ ಎಂಬ ಸಂಸ್ಥೆಯು ಎಫ್‌ಸಿಆರ್‌ಎ ಅಡಿಯಲ್ಲಿ ನೋಂದಣಿಯಾಗದೆ ಅಕ್ರಮವಾಗಿ ಹಣಕಾಸು ಚಟುವಟಿಕೆ ನಡೆಸುತ್ತಿರುವ ಬಗ್ಗೆ ಇಡಿಗೆ ಮಾಹಿತಿ ಲಭ್ಯವಾಗಿತ್ತು. ಈ ಹಿನ್ನೆಲೆಯಲ್ಲಿ ಏ.18 ಮತ್ತು 19ರಂದು ದೇಶದ ಆರು ಪ್ರಮುಖ ಸ್ಥಳಗಳಲ್ಲಿ ಅಧಿಕಾರಿಗಳು ಶೋಧ ಕಾರ್ಯ ನಡೆಸಿದ್ದಾರೆ.

ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಸಿಕ್ಕಿಬಿದ್ದ ವ್ಯಕ್ತಿ: ಮಿಕಾ ಮಾರ್ಕ್ ಎಂಬಾತ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನನಿಲ್ದಾಣದಲ್ಲಿ ವಿದೇಶಿ ಡೆಬಿಟ್ ಕಾರ್ಡ್‌ಗಳೊಂದಿಗೆ ಸಿಕ್ಕಿಬಿದ್ದಿದ್ದಾನೆ. ಈತನ ಬಳಿ ಇದ್ದ 24 ವಿದೇಶಿ ಡೆಬಿಟ್ ಕಾರ್ಡ್‌ಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಇವನು ಈ ಅಕ್ರಮ ಜಾಲದ ಪ್ರಮುಖ ಕೊಂಡಿಯಾಗಿದ್ದಾನೆ ಎಂದು ಶಂಕಿಸಲಾಗಿದೆ.

ಕಾರ್ಯಾಚರಣೆಯ ವಿಧಾನ: ಅಮೆರಿಕದ ಟ್ರುಸ್ಟ್ ಬ್ಯಾಂಕ್‌ಗೆ ಸೇರಿದ ಡೆಬಿಟ್ ಕಾರ್ಡ್‌ಗಳನ್ನು ಭಾರತಕ್ಕೆ ತಂದು, ಅವುಗಳ ಮೂಲಕ ವಿವಿಧ ರಾಜ್ಯಗಳ ಎಟಿಎಂಗಳಿಂದ ನಿರಂತರವಾಗಿ ನಗದು ವಿತ್‌ಡ್ರಾ ಮಾಡಲಾಗುತ್ತಿತ್ತು. ಈ ಹಣವನ್ನು ಟಿಟಿಐ ಸಂಸ್ಥೆಯ ಚಟುವಟಿಕೆಗಳಿಗೆ ಬಳಸಲಾಗುತ್ತಿತ್ತು. ವಿಶೇಷವಾಗಿ ನಕ್ಸಲ್ ಪೀಡಿತ ಪ್ರದೇಶಗಳಾದ ಛತ್ತೀಸ್‌ಗಢದ ಬಸ್ತಾರ್ ಮತ್ತು ಧಮ್ತಾರಿ ಭಾಗಗಳಲ್ಲಿ ಸುಮಾರು 6.5 ಕೋಟಿ ರೂ.ಗಳನ್ನು ಈ ಕಾರ್ಡ್‌ಗಳ ಮೂಲಕವೇ ಪಡೆಯಲಾಗಿದೆ ಎಂಬುದು ಆತಂಕಕಾರಿ ವಿಚಾರವಾಗಿದೆ.

ಬೃಹತ್ ಮೊತ್ತದ ಅವ್ಯವಹಾರ: ನವೆಂಬರ್ 2025 ರಿಂದ ಏ.2026ರ ವರೆಗಿನ ಅಲ್ಪ ಅವಧಿಯಲ್ಲಿ ಸುಮಾರು 95 ಕೋಟಿ ರೂ. ಗಳನ್ನು ಇದೇ ರೀತಿ ಭಾರತಕ್ಕೆ ಅಕ್ರಮವಾಗಿ ರವಾನಿಸಲಾಗಿದೆ ಎಂದು ಇ.ಡಿ. ಅಂದಾಜಿಸಿದೆ. ಈ ಇಡೀ ಪ್ರಕ್ರಿಯೆಯನ್ನು ವಿದೇಶದಿಂದ ನಿಯಂತ್ರಿಸಲಾಗುವ ಆನ್‌ಲೈನ್ ಬಿಲ್ಲಿಂಗ್ ಪ್ಲಾಟ್‌ಫಾರ್ಮ್ ಮೂಲಕ ನಿರ್ವಹಿಸಲಾಗುತ್ತಿತ್ತು. ದಾಳಿಯಲ್ಲಿ ಇಡಿ ಅಧಿಕಾರಿಗಳು ಒಟ್ಟು 25 ವಿದೇಶಿ ಡೆಬಿಟ್ ಕಾರ್ಡ್‌ಗಳು, 40 ಲಕ್ಷ ರೂ. ನಗದು ಮತ್ತು ಹತ್ತಾರು ಡಿಜಿಟಲ್ ಪುರಾವೆಗಳನ್ನು ವಶಪಡಿಸಿಕೊಂಡಿದ್ದಾರೆ.

ಸಂಘರ್ಷ ತಡೆಗೆ ಕ್ರಮ: ಖಂಡ್ರೆ

ಬೆಂಗಳೂರು: ಹೊಸತನಕ್ಕೆ ಒಗ್ಗಿಕೊಂಡಾಗ ಮಾತ್ರ ಸಮಸ್ಯೆಗಳಿಗೆ ಪರಿಹಾರ ದೊರಕಲು ಸಾಧ್ಯ. ಅರಣ್ಯ ಅಧಿಕಾರಿಗಳು ಕೂಡ ಮಾನವ-ವನ್ಯಜೀವಿ ಸಂಘರ್ಷಕ್ಕೆ ವಿನೂತನ ಮಾರ್ಗೋಪಾಯ ಸಂಶೋಧಿಸಬೇಕು ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಅಭಿಪ್ರಾಯಪಟ್ಟಿದ್ದಾರೆ.



ಅರಣ್ಯ ಭವನದಲ್ಲಿ ನಡೆದ 2 ದಿನಗಳ ಕೆಡಿಪಿ ಮತ್ತು ಎಂ.ಎಂ.ಆರ್. ಸಭೆಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ಇ-ಗಸ್ತು ಮತ್ತು ಅತ್ಯಾಧುನಿಕ ಉಪಕರಣಗಳ ಬಳಕೆಯಿಂದ ಮಾನವ ವನ್ಯಜೀವಿ ಸಂಘರ್ಷ ತಡೆಗಟ್ಟಬಹುದಾಗಿದೆ. ಇದನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲು ಮತ್ತು ಅಭಿವೃದ್ಧಿಪಡಿಸಲು ಸೂಚಿಸಿದರು.

ಅರಣ್ಯ ಪ್ರದೇಶದಲ್ಲಿ ಮರಗಳನ್ನು ಅಕ್ರಮವಾಗಿ ಕಡಿಯುವುದು, ವನ್ಯಜೀವಿಗಳ ಅಸಹಜ ಸಾವು, ಕಳ್ಳಬೇಟೆ, ಅರಣ್ಯ ಒತ್ತುವರಿ, ಮಾನವ-ವನ್ಯಜೀವಿ ಸಂಘರ್ಷ ಇದು ಮುಖ್ಯವಾಗಿ ನಮ್ಮ ಮುಂದಿರುವ ಸವಾಲು. ಪ್ರತಿಯೊಂದು ಜೀವವೂ ಅಮೂಲ್ಯವಾಗಿದ್ದು, ವನ್ಯಜೀವಿಗಳಿಂದ ಯಾವುದೇ ಸಾವು ಸಂಭವಿಸದಂತೆ ಶಾಶ್ವತ ಪರಿಹಾರ ಒದಗಿಸಲು ಕಾಡಿನೊಂದಿಗೆ ಹೆಚ್ಚು ಒಡನಾಟ ಹೊಂದಿರುವ ನೀವೆಲ್ಲರೂ ಶ್ರಮಿಸಬೇಕು. ಯಾವ ಪ್ರದೇಶದಲ್ಲಿ ಹೆಚ್ಚಿನ ವನ್ಯಜೀವಿ ಸಂಘರ್ಷವಿದೆ? ಈ ಸಂಘರ್ಷಕ್ಕೆ ಕಾರಣವೇನು? ಅದನ್ನು ಪರಿಹರಿಸಲು ಏನು ಮಾಡಬೇಕು? ಎಂಬ ಬಗ್ಗೆ ಅಧಿಕಾರಿಗಳು ತಜ್ಞರೊಂದಿಗೆ ಸಮಾಲೋಚಿಸಿ ಪರಿಹಾರೋಪಾಯಗಳನ್ನು ಕಂಡುಕೊಳ್ಳಬೇಕು ಎಂದರು.

ಅರಣ್ಯ ಸಿಬ್ಬಂದಿ ಕಾಡಿನಂಚಿನ ಜನರೊಂದಿಗೆ ಸೌಹಾರ್ದತೆ ಹೆಚ್ಚಿಸಿಕೊಳ್ಳಬೇಕು. ವಿವಿಧ ಪ್ರತಿಷ್ಠಾನಗಳಿಗೆ ಸರ್ಕಾರಿಯಿಂದ ಬರುವ ಹಣದಿಂದ ಕಾಡಿನಂಚಿನಲ್ಲಿ ಜನಸಂಪರ್ಕ ಸಭೆ ನಡೆಸಬೇಕು, ಸೌಕರ್ಯ ಒದಗಿಸಬೇಕು. ಸರ್ಕಾರ ಕೈಗೊಳ್ಳುವ ಕಾರ್ಯಕ್ರಮಗಳನ್ನು, ಆದೇಶಗಳನ್ನು ಅನುಷ್ಠಾನಗೊಳಿಸಬೇಕು ಎಂದು ಹೇಳಿದರು.

ಇದೇ ವೇಳೆ ಅರಣ್ಯ ಇಲಾಖೆಯ ವಿವಿಧ ವೃತ್ತಗಳ ಸಿಬ್ಬಂದಿ ಛಾಯಾಚಿತ್ರ ತೆಗೆದು, ಸಂಶೋಧನೆಯ ಮೂಲಕ ಹೊರ ತಂದಿರುವ ಹಲವು ಕೃತಿಗಳನ್ನು ಈಶ್ವರ ಖಂಡ್ರೆ ಬಿಡುಗಡೆ ಮಾಡಿದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೇಜಿ

ಕೇವಲ ವೈಯಕ್ತಿಕ ಸುಖಕ್ಕಾಗಿ ಪ್ರಾರ್ಥಿಸುವ ಬದಲು ಸಮಾಜದ, ದೇಶದ ಪರವಾಗಿ ಪ್ರಾರ್ಥಿಸೋಣ – ಡಾ. ವೀರೇಂದ್ರ ಹೆಗ್ಗಡೆ

– ಹಾಗಂತ ಹೇಳುವ, ಹೇಳಿದಂತೆ ಮಾಡುವ ಏಕೈಕ ದೇಶ ನಮ್ಮ ಹೆಮ್ಮೆಯ ಭಾರತ. ಲೋಕಾಃ ಸಮಸ್ತಾ ಸುಖಿನೋ ಭವಂತು ಅಂದರೆ ಅದೇ ತಾನೆ?

ದಿನ ಭವಿಷ್ಯ

ಮೇಷ
ಮಾಮೂಲಾಗಿ ದಿನ ಆರಂಭಗೊಂಡರೂ ಬಳಿಕ ಮಹತ್ವದ ಬೆಳವಣಿಗೆ ಉಂಟಾದೀತು. ಸಮಾರಂಭದಲ್ಲಿ ಭಾಗಿ. ಬಂಧುಮಿತ್ರರ ಭೇಟಿ.

ವೃಷಭ
ಜವಾಬ್ದಾರಿ ಹೆಚ್ಚಳ. ಇಷ್ಟವಿಲ್ಲದಿದ್ದರೂ ಕೆಲಸ ಮಾಡಲೇ ಬೇಕು. ಆತ್ಮೀಯರ ಜತೆ ಭಾವನೆ ಹಂಚಿಕೊಳ್ಳಲು ಬಯಸುವಿರಿ.

ಮಿಥುನ
ನಿಮಗೆ ಸಂಬಂಧಿಸಿ ಮುಖ್ಯ ಬೆಳವಣಿಗೆ ಸಂಭವಿಸಬಹುದು. ಆ ಬಗ್ಗೆ ಎಚ್ಚರದಿಂದಿರಿ. ಆರೋಗ್ಯ ಕಾಳಜಿ ವಹಿಸಿ. ಕೌಟುಂಬಿಕ ಸಹಕಾರ.

ಕಟಕ
ಆಪ್ತರ ಭೇಟಿಯು ನಿಮ್ಮ ದಿನದ ಸಂತೋಷ ಹೆಚ್ಚಿಸಲಿದೆ. ಆರ್ಥಿಕ ಅಭಿವೃದ್ಧಿ. ನಿಮ್ಮ ಕಾರ್ಯದಲ್ಲಿ ತೃಪ್ತಿಕರ ಫಲಿತಾಂಶ ಕಾಣುವಿರಿ.

ಸಿಂಹ
ವೃತ್ತಿಯಲ್ಲಿ ಒತ್ತಡ. ಸಹನೆಯ ವರ್ತನೆ ಮುಖ್ಯ. ಆರ್ಥಿಕ ಲಾಭ. ಆರೋಗ್ಯ ಸಮಸ್ಯೆ ಕಾಡಬಹುದು. ಮಿತಾಹಾರ ಒಳಿತು.

ಕನ್ಯಾ
ಒತ್ತಡ ತುಂಬಿದ ದಿನ. ಕಾಲಮಿತಿಯಲ್ಲಿ ಕೆಲಸ ಪೂರೈಸಬೇಕು. ಆಪ್ತರ ಜತೆಗಿನ ಭಿನ್ನಮತ ನಿವಾರಿಸಿಕೊಳ್ಳಿ. ದೈಹಿಕ ಆಲಸ್ಯ ಕಾಡಬಹುದು.

ತುಲಾ
ತೃಪ್ತಿ ತರುವ ದಿನ. ಅದಕ್ಕೆ ಕಾರಣ ನಿಮ್ಮ ಮುಖ್ಯ ಉದ್ದೇಶ ಸಾಧನೆ. ಆರ್ಥಿಕ ಅಭಿವೃದ್ಧಿ. ವಿರೋಧಿಗಳು ಮೌನ. ಆಪ್ತರಿಂದ ಸಹಕಾರ.

ವೃಶ್ಚಿಕ
ಸಣ್ಣ ವಿಷಯ ಕೆಲವೊಮ್ಮೆ ಕಡೆಗಣಿಸಬಾರದು. ಗಂಭೀರ ಪರಿಣಾಮ ಸಂಭವ. ಭಾವನಾತ್ಮಕ ಏರುಪೇರು ಅನುಭವಿಸುವಿರಿ.

ಧನು
ನಿಮ್ಮ ಸತತ ಪ್ರಯತ್ನದಿಂದ ಉದ್ದೇಶ ಸಾಧನೆ. ಧನ ಪ್ರಾಪ್ತಿ. ಅನಿರೀಕ್ಷಿತ ಲಾಭ ಖುಷಿ ತರಲಿದೆ. ಕೌಟುಂಬಿಕ ಅಸಹಕಾರ ನಿವಾರಣೆ.

ಮಕರ
ಊಹಾಪೋಹಕ್ಕೆ ಬೆಲೆ ಕೊಡಬೇಡಿ. ವಸ್ತುಸ್ಥಿತಿ ಅರಿತು ವ್ಯವಹರಿಸಿ. ಕೆಲವರ ವಿರೋಧ ಬೇಡ. ಹೊಂದಿಕೊಂಡು ಬಾಳಿ.

ಕುಂಭ
ಸವಾಲಿನ ದಿನ. ಏಳು-ಬೀಳು ಎರಡನ್ನೂ ಎದುರಿಸುವಿರಿ. ಆಪ್ತರ ಜತೆ ಭಾವನೆ ಹಂಚಿಕೊಂಡು ಸಮಾಧಾನ ಪಡೆಯುವಿರಿ.

ಮೀನ
ಎಲ್ಲರ ದೃಷ್ಟಿ ನಿಮ್ಮ ಮೇಲೆ. ನಿಮ್ಮ ಸೋಲನ್ನೆ ಕೆಲವರು ಬಯಸುವರು. ಅವರಿಗೆ ಅಂತಹ ಸಂತೋಷ ನೀಡಬೇಡಿ. ಸಂಬಂಧದಲ್ಲಿ ಒಡಕು.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ: 1,5,8,2

ಒಳಮೀಸಲಾತಿ ಹಂಚಿಕೆಯಲ್ಲಿ ಸರ್ಕಾರದ ನಡೆ ಖಂಡನೀಯ: ವಿಪಕ್ಷ ನಾಯಕ

ಪಲಾಯನ ಸೂತ್ರ: ಅಶೋಕ

ಬೆಂಗಳೂರು: ಒಳಮೀಸಲಾತಿಯನ್ನು ಹಂಚಿಕೆ ಮಾಡುವುದರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಎಸ್ಕೇಪ್ ಸೂತ್ರ ಅನುಸರಿಸಿದ್ದಾರೆ. ಇದರಿಂದ ಯಾವುದೇ ಸಮುದಾಯಕ್ಕೆ ಪ್ರಯೋಜನ ಸಿಗುವುದಿಲ್ಲ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ ಹೇಳಿದರು.



ಸುದ್ದಿಗಾರರೊಂದಿಗೆ ಮಾತನಾಡಿ, ಒಳಮೀಸಲಾತಿಯನ್ನು ಹಂಚಿಕೆ ಮಾಡುವುದರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಫಲರಾಗಿದ್ದಾರೆ. ಒಂದು ಕಡೆ ಯುವಜನರು ಸರ್ಕಾರಿ ನೌಕರಿಗಾಗಿ ಹೋರಾಟ ಮಾಡುತ್ತಿದ್ದರೆ, ಮತ್ತೊಂದೆಡೆ ಪರಿಶಿಷ್ಟ ಸಮುದಾಯದವರು ಒಳಮೀಸಲಾತಿಗಾಗಿ ಹೋರಾಟ ಮಾಡುತ್ತಿದ್ದಾರೆ. ಇವೆರಡರಿಂದ ತಪ್ಪಿಸಿಕೊಳ್ಳಲು ಕಾಂಗ್ರೆಸ್ ಸರ್ಕಾರ ಈ ನಾಟಕವಾಡುತ್ತಿದೆ.

ಬಿಜೆಪಿ ಸರ್ಕಾರವಿದ್ದಾಗ ಶೇ. 17 ಮೀಸಲು ನೀಡಿತ್ತು. ನ್ಯಾಯಾಲಯಕ್ಕೆ ಈ ಬಗ್ಗೆ ಮನವರಿಕೆ ಮಾಡಬೇಕಿತ್ತು. ಇದರ ಬದಲು ಸರ್ಕಾರ ಎಸ್ಕೇಪ್ ಸೂತ್ರ ಅನುಸರಿಸಿದ್ದು, ಇದರಿಂದ ಪರಿಶಿಷ್ಟ ಸಮುದಾಯಕ್ಕೆ ನಿಜವಾದ ಪ್ರಯೋಜನ ದೊರೆತಿಲ್ಲ ಎಂದರು.

ಬಿಜೆಪಿ ನೀಡಿದ್ದ ಶೇ. 17 ಮೀಸಲನ್ನು ಶೇ. 15ಕ್ಕೆ ಇಳಿಸಿದ್ದು ಏಕೆ? ಇದನ್ನು ಕೋರ್ಟ್‌ನಲ್ಲಿ ಪ್ರಶ್ನಿಸುವ ಬದಲು ಕಡಿಮೆ ಮಾಡಿರುವುದರಿಂದ ಎಲ್ಲರಿಗೂ ಮೀಸಲಿನಲ್ಲಿ ಅನ್ಯಾಯವಾಗುತ್ತದೆ. ಸರ್ಕಾರ 52 ಜಾತಿಗಳು ಸೇರಿದಂತೆ ಯಾವುದೇ ಜಾತಿ ಸಮುದಾಯಗಳನ್ನು ಕರೆದು ಚರ್ಚೆ ಮಾಡಿಲ್ಲ. ಎಲ್ಲ ಸಮುದಾಯದ ಮುಖಂಡರು ಹಾಗೂ ಸ್ವಾಮೀಜಿಗಳ ಅಭಿಪ್ರಾಯ ಪಡೆದು ಈ ತೀರ್ಮಾನ ಕೈಗೊಳ್ಳಬೇಕಿತ್ತು ಎಂದು ಅಭಿಪ್ರಾಯಪಟ್ಟರು.

ಸರ್ಕಾರ ವಿಷಬೀಜ ಬಿತ್ತುತ್ತಿದೆ: ಕಾರಜೋಳ ಆರೋಪ

ಬೆಂಗಳೂರು: ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ದಲಿತರಿಗೆ ಒಳಮೀಸಲಾತಿ ನೀಡುವ ಬದಲು ಗೊಂದಲ ಸೃಷ್ಟಿಸಿ ವಿಷಬೀಜ ಬಿತ್ತಿ ಬೀದಿಯಲ್ಲಿ ನಿಂತು ಬಡಿದಾಡುವಂತೆ ಮಾಡಿದೆ. ನಾಡಿನ ಜನ ಇವರನ್ನು ಕ್ಷಮಿಸುವುದಿಲ್ಲ ಎಂದು ಸಂಸದ ಗೋವಿಂದ ಕಾರಜೋಳ ಆರೋಪಿಸಿದ್ದಾರೆ. ರಾಜ್ಯ ಬಿಜೆಪಿ



ಕಾರ್ಯಾಲಯದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರು ಅಹಿಂದ ನಾಯಕ ಎನಿಸಿಕೊಳ್ಳಲು ಯೋಗ್ಯತೆ ಇಲ್ಲ. ದಲಿತ ಸಮುದಾಯಗಳಿಗೆ ಅವರು ದೊಡ್ಡ ಮೋಸ ಮಾಡಿದ್ದಾರೆ. ಮೂವತ್ತು ವರ್ಷಗಳಿಂದ ರಾಜ್ಯದಲ್ಲಿ ಒಳಮೀಸಲಾತಿಗೆ ಹೋರಾಟ ನಡೆಯುತ್ತಿದೆ. ಜನಸಂಖ್ಯೆಗೆ ಅನುಗುಣವಾಗಿ ಎಸ್‌ಸಿ ಮತ್ತು ಎಸ್‌ಟಿ ಮೀಸಲಾತಿ ಹೆಚ್ಚಳ ಆಗಬೇಕೆಂಬ ಬೇಡಿಕೆಯಿದೆ. ಆದರೆ, ಇದನ್ನು ಲೆಕ್ಕಿಸದೆ ಕಾಂಗ್ರೆಸ್ ಸರ್ಕಾರ ಕೋರ್ಟ್ ಆದೇಶವನ್ನೇ ಬದಲಿಸಿ ಸರಿಯಾಗಿ ಮೀಸಲಾತಿ ಅನುಷ್ಠಾನ ಮಾಡಲಿಲ್ಲ ಎಂದರು. ಮೀಸಲಾತಿ ವಿಷಯದಲ್ಲಿ ಜಾತಿಗಳ ಮಧ್ಯೆ ಜಗಳ ಹಚ್ಚಬೇಡಿ. ಕೋರ್ಟ್ ಆದೇಶ ಮಾರ್ಪಾಡು ಮಾಡಿ ಕಡಿಮೆ ಮೀಸಲಾತಿ ನೀಡುವ ನಿಮ್ಮನ್ನು ಅಹಿಂದ ನಾಯಕ ಎಂದು ಒಪ್ಪಿಕೊಳ್ಳುತ್ತಾರೆಯೇ? ಒಳಮೀಸಲಾತಿಗೆ ರಾಜ್ಯದಲ್ಲಿ ಹೋರಾಟ ತೀವ್ರಗೊಂಡಾಗ ನ್ಯಾ. ಸದಾಶಿವ ಆಯೋಗವನ್ನು ಕಾಂಗ್ರೆಸ್ ಸರ್ಕಾರ ನೇಮಿಸಿತ್ತು. ನ್ಯಾ. ನಾಗಮೋಹನ್ ದಾಸ್ ಅವರ ವರದಿ ತರಿಸಿಕೊಂಡಿತ್ತು. ಬಿಜೆಪಿ ಸರ್ಕಾರವಿದ್ದಾಗ ದಲಿತರ ಹೋರಾಟಕ್ಕೆ ಮಾನ್ಯತೆ ನೀಡಿ ಬಸವರಾಜ ಬೊಮ್ಮಾಯಿ ಅವರು ಜನಸಂಖ್ಯೆಗೆ ಅನುಗುಣವಾಗಿ ಎಸ್‌ಸಿಗೆ ಶೇ.15ರಿಂದ 17, ಎಸ್‌ಟಿಗೆ ಶೇ.3 ರಿಂದ 7ಕ್ಕೇರಿಸಿದರು. ಸಾಮಾಜಿಕ ನ್ಯಾಯದ ಅಡಿಯಲ್ಲಿ ನಾಲ್ಕು ವರ್ಗೀಕರಣ ಮಾಡಿದರು ಎಂದು ವಿವರಿಸಿದರು.

₹20 ಲಕ್ಷ ಲಂಚದ ಬೇಡಿಕೆ: ರಮೇಶ್

ಬೆಂಗಳೂರು: ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಡಬ್ಲ್ಯುಎಂಎಲ್)ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಕರೀಗೌಡ ಸೇರಿದಂತೆ ಕೆಲವು ಅಧಿಕಾರಿಗಳ ಮೇಲೆ ಸಾಲು ಸಾಲು ಆರೋಪ ಕೇಳಿಬಂದಿದೆ.

ಸರ್ಕಾರದ ಆದೇಶದಂತೆ ವರ್ಗಾವಣೆಗೊಂಡಿರುವ 27 ಮಂದಿ ಪರಿಸರ ಅಭಿಯಂತರರನ್ನು ಕಾನೂನು ಬಾಹಿರವಾಗಿ ಸಂಸ್ಥೆಯಲ್ಲೇ ಉಳಿಸಿಕೊಳ್ಳಲು ತಲಾ 20 ಲಕ್ಷ ರೂ.ಗಳ ಲಂಚದ ಬೇಡಿಕೆ ಇಟ್ಟಿದ್ದಾರೆ ಎಂದು ಬಿಜೆಪಿ ಮುಖಂಡ ಎನ್.ಆರ್. ರಮೇಶ್ ಗಂಭೀರ ಆರೋಪ ಮಾಡಿದ್ದಾರೆ. ಘನತ್ಯಾಜ್ಯ ನಿರ್ವಹಣೆ ವಿಭಾಗದಲ್ಲಿ ಕಳೆದ 6-7 ವರ್ಷಗಳಿಂದ ಅಂಟಿಕೊಂಡಿದ್ದ 3 ಮಂದಿ ಕಾರ್ಯಪಾಲಕ ಅಭಿಯಂತರರು ಮತ್ತು 24 ಮಂದಿ ಸಹಾಯಕ ಕಾರ್ಯಪಾಲಕ ಅಭಿಯಂತರರನ್ನು ಏ.13ರಂದು ರಾಜ್ಯ ಸರ್ಕಾರವು ಸಾಮೂಹಿಕವಾಗಿ ವರ್ಗಾವಣೆ ಮಾಡಿ ಆದೇಶ ಹೊರಡಿಸಿತ್ತು. ಸರ್ಕಾರದ ಈ ಕ್ರಮವು ಕಾನೂನುಬದ್ಧವಾಗಿದ್ದರೂ, ಇದನ್ನು ತಡೆಹಿಡಿಯಲು ಸಂಸ್ಥೆಯ ಒಳಗೇ ಬೃಹತ್ ಸಂಚು ರೂಪಿಸಲಾಗಿದೆ ಎಂದು ರಮೇಶ್ ದೂರಿದ್ದಾರೆ.

ಕೋರ್ಟ್ ಮೆಟ್ಟಿಲೇರಿದ ಗುತ್ತಿಗೆದಾರ

ಬೆಂಗಳೂರಿನ ಘನತ್ಯಾಜ್ಯ ನಿರ್ವಹಣಾ ಟೆಂಡರ್ ಪ್ರಕ್ರಿಯೆಯಲ್ಲಿ ಭಾರೀ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪ ಕೇಳಿಬಂದಿದ್ದು, ಈ ಸಂಬಂಧ ಗುತ್ತಿಗೆದಾರ ಎಸ್.ಎನ್.ಬಾಲಸುಬ್ರಮಣ್ಯಂ ಕರ್ನಾಟಕ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತದ (ಬಿಡಬ್ಲ್ಯುಎಂಎಲ್) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಕರೀಗೌಡ ಅವರು ತಮಗೆ ಹಾಗೂ ಸರ್ಕಾರದ ಮೇಲಧಿಕಾರಿಗಳ ಪರವಾಗಿ ಶೇ. 15ರಷ್ಟು ಕಮಿಷನ್ ನೀಡುವಂತೆ ಒತ್ತಾಯಿಸಿದ್ದಾರೆ. ಈ ಸಂಬಂಧ ಎಫ್‌ಐಆರ್ ದಾಖಲಿಸಿ ಎಸ್‌ಐಟಿ ತನಿಖೆಗೆ ನಿರ್ದೇಶಿಸಬೇಕೆಂದು ಕೋರಿ ಬಾಲಸುಬ್ರಮಣ್ಯಂ ರಿಟ್ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿಯನ್ನು ಹೈಕೋರ್ಟ್‌ನ ಏಕಸದಸ್ಯ ಪೀಠ ವಿಚಾರಣೆ ನಡೆಸುತ್ತಿದೆ.

ಪ್ರಕರಣ ದಾಖಲು

ಪುಟ ೧➜ಮಡಿವಾಳ ಠಾಣಾ ಸರಹದ್ದಿನಲ್ಲಿರುವ ಕೃಪಾನಿಧಿ ಕಾಲೇಜಿನಲ್ಲಿ ಕೆಸಿಇಟಿ ಭೌತಶಾಸ್ತ್ರ ಪರೀಕ್ಷೆ ನಡೆಯುತ್ತಿತ್ತು. ಈ ವೇಳೆ ಪರೀಕ್ಷೆ ಬರೆಯಲು ಬಂದಿದ್ದ ವಿದ್ಯಾರ್ಥಿಯನ್ನು ಕಾಲೇಜಿನ ಪ್ರವೇಶ ದ್ವಾರದಲ್ಲಿ ತಪಾಸಣೆ ನಡೆಸುತ್ತಿದ್ದ ಸಿಬ್ಬಂದಿ, ಆತ ಧರಿಸಿದ್ದ ಜನಿವಾರವನ್ನು ತೆಗೆದುಹಾಕುವಂತೆ ಸೂಚಿಸಿದ್ದಾರೆ. ಇದು ನಮ್ಮ ಧಾರ್ಮಿಕ ಭಾವನೆಗೆ ಧಕ್ಕೆ ತಂದಿದೆ ಎಂದು ವಿದ್ಯಾರ್ಥಿಯ ಪೋಷಕರು ಆರೋಪಿಸಿದ್ದಾರೆ. ಈ ಕುರಿತು ವಿದ್ಯಾರ್ಥಿಯ ಪೋಷಕರು ನೀಡಿದ ದೂರಿನನ್ವಯ ಮಡಿವಾಳ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಪರೀಕ್ಷಾ ತಪಾಸಣಾ ಕರ್ತವ್ಯದಲ್ಲಿದ್ದ ಕಾಲೇಜಿನ ಮೂವರು ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಪರೀಕ್ಷಾ ಕೇಂದ್ರಗಳಲ್ಲಿ ಕಟ್ಟುನಿಟ್ಟಿನ ತಪಾಸಣೆ ಅಗತ್ಯವಿದ್ದರೂ, ಧಾರ್ಮಿಕ ಸಂಕೇತಗಳನ್ನು ತೆಗೆಸುವ ಮೂಲಕ ವಿವಾದ ಸೃಷ್ಟಿಸಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಸದ್ಯ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ದುರದೃಷ್ಟಕರ ಸಂಗತಿ

ತಪ್ಪಿತಸ್ಥರ ವಿರುದ್ಧ ವಿಚಾರಣೆ ನಡೆಸಿ ವರದಿ ಅನ್ವಯ ಕ್ರಮ ಕೈಗೊಳ್ಳಲಾಗುವುದು.



ಗುರುವಾರ ಕೃಪಾನಿಧಿ ಪಿಯು ಕಾಲೇಜಿನಲ್ಲಿ ಜನಿವಾರ ತೆಗೆಸಿದ ಘಟನೆ ಗಮನಕ್ಕೆ ಬಂದಿದೆ. ಕಳೆದ ಸಲ ಬೀದರ್‌ನಲ್ಲಿ ಇಂತಹ ಘಟನೆ ಆಗಿತ್ತು, ಇದು ದುರದೃಷ್ಟಕರ, ಸರ್ಕಾರಿ, ಖಾಸಗಿ ಕಾಲೇಜುಗಳಲ್ಲಿ ಸಿಇಟಿ ಪಾರದರ್ಶಕವಾಗಿ ಮಾಡುತ್ತಿದ್ದೇವೆ ಎಂದು ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಹೇಳಿದ್ದಾರೆ.

ಮಂಗಳಸೂತ್ರ ಮತ್ತು ಜನಿವಾರವನ್ನು ತೆಗೆದುಹಾಕಲು ಒತ್ತಾಯಿಸುವಂತಹ ಕಾಂಗ್ರೆಸ್ ಸರ್ಕಾರದ ಹಿಂದು ವಿರೋಧಿ ಕೃತ್ಯಗಳು ನಿರಂತರವಾಗಿ ಮುಂದುವರಿದಿವೆ. ಕಳೆದ ವರ್ಷ ಕೆಪಿಎಸ್‌ಸಿ ಪರೀಕ್ಷೆಯ ಸಮಯದಲ್ಲಿ ಅಭ್ಯರ್ಥಿಗಳು ಮಂಗಳಸೂತ್ರ ತೆಗೆಯುವಂತೆ ಮಾಡಿತ್ತು. ಈ ವರ್ಷವೂ ಅದೇ ಪದ್ಧತಿಯನ್ನು ಮುಂದುವರಿಸಿದೆ.

■ **ಆರ್. ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ**

ತನಿಖಾ ಸಮಿತಿ ರಚನೆ

ಪುಟ ೧➜ಈ ಸಮಿತಿಯಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು(ದಕ್ಷಿಣ ವಲಯ), ಜಿಲ್ಲಾಧಿಕಾರಿ ಕಚೇರಿಯ ಕಚೇರಿ ಸಹಾಯಕರು ಹಾಗೂ ಬೆಂಗಳೂರು ದಕ್ಷಿಣ ತಾಲೂಕಿನ ತಹಶೀಲ್ದಾರ್ ಅವರು ಸದಸ್ಯರಾಗಿ ಕಾರ್ಯನಿರ್ವಹಿಸಲಿದ್ದಾರೆ. ಸಮಿತಿಯು ಕೂಡಲೇ ವಿಚಾರಣೆ ಆರಂಭಿಸಿ, ಎರಡು ದಿನಗಳ ಒಳಗಾಗಿ ಸಮಗ್ರ ವರದಿಯನ್ನು ಸಲ್ಲಿಸುವಂತೆ ಜಿಲ್ಲಾಧಿಕಾರಿಗಳು ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. 2026ನೇ ಸಾಲಿನ ಸಿಇಟಿ ಪರೀಕ್ಷೆಯ ಸಂದರ್ಭದಲ್ಲಿ, ಕೆಲವು ಅಭ್ಯರ್ಥಿಗಳ ಜನಿವಾರವನ್ನು ತೆಗೆಸಿದ ನಂತರವೇ ಪರೀಕ್ಷೆಗೆ ಅನುಮತಿ ನೀಡಲಾಗಿತ್ತು. ಈ ಸೂಕ್ಷ್ಮ ವಿಚಾರವನ್ನು ಗಂಭೀರವಾಗಿ ಪರಿಗಣಿಸಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕರು, ಘಟನೆಯ ಬಗ್ಗೆ ಹಿರಿಯ ಅಧಿಕಾರಿಗಳಿಂದ ತನಿಖೆ ನಡೆಸಿ ಕಾನೂನು ಕ್ರಮಕ್ಕೆಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿದ್ದರು.

5.25: 5.25: 4.5

ಪುಟ ೧➜**ರೋಸ್ಟರ್ ಬಿಂದು ಗೊಂದಲ ಪರಿಹಾರ:** ರೋಸ್ಟರ್ ಬಿಂದುಗೊಂದಲವನ್ನು ಸರಿಪಡಿಸಲು ಎಲ್ಲರಿಗೂ ಒಪ್ಪಿತವಾಗುವ ತೀರ್ಮಾನ ಕೈಕೊಂಡಿದ್ದೇವೆ. ಆ ಪ್ರಕಾರ, ಕಡಿಮೆ ಸಂಖ್ಯೆಯ ಹುದ್ದೆಗಳಿದ್ದಾಗ ಅವುಗಳನ್ನು ಎಸ್‌ಸಿ ಜನರಲ್ ಎಂದು ಮಾಡಲಾಗುವುದು. ಆ ಹುದ್ದೆಗೆ ಎ, ಬಿ, ಸಿ ವರ್ಗದವರು ಸ್ಪರ್ಧಿಸಬಹುದು. ಅಲ್ಲದೇ ಸಿ ವರ್ಗದ ಹುದ್ದೆಗಳಲ್ಲಿ ಶೇ.20ರಷ್ಟು ಹುದ್ದೆಗಳನ್ನು 59 ಅಲೆಮಾರಿ ಜಾತಿಗಳಿಗೆ ಮೀಸಲಾಗಿ ಇಡಲಾಗುವುದು ಎಂದು ಸಿದ್ದರಾಮಯ್ಯ ವಿವರಿಸಿದರು.

ಒಳಮೀಸಲಾತಿ ವಿಚಾರ ತೀರ್ಮಾನ ಆಗಿರುವುದರಿಂದ ವಿವಿಧ ಇಲಾಖೆಗಳ 56,432 ಹುದ್ದೆಗಳ ಭರ್ತಿಗೆ ಈ ಹಿಂದೆ ಹೊರಡಿಸಿರುವ ಅಧಿಸೂಚನೆಯನ್ನು ಹಿಂಪಡೆದು ತಕ್ಷಣ ಹೊಸದಾಗಿ ಅಧಿಸೂಚನೆ ಹೊರಡಿಸಲಾಗುವುದು. ಉಳಿದ ಹುದ್ದೆಗಳನ್ನು ಹಂತ-ಹಂತವಾಗಿ ಪ್ರತಿ ವರ್ಷ ಭರ್ತಿ ಮಾಡಲಾಗುವುದು ಎಂದು ಸ್ಪಷ್ಟಪಡಿಸಿದರು.

ಶೇ.24 ಮೀಸಲಾತಿ ಕಲ್ಪಿಸಲು ಸರ್ಕಾರ ಬದ್ಧ: ನಮ್ಮ ಸರ್ಕಾರವು ಶೇ.24 ಮೀಸಲಾತಿಗೆ ಅಂದರೆ ಪರಿಶಿಷ್ಟ ಜಾತಿ ಶೇ.17 ಮತ್ತು ಪರಿಶಿಷ್ಟ ಪಂಗಡ ಶೇ.7 ತೀರ್ಮಾನಕ್ಕೆ ಬದ್ಧವಾಗಿದೆ. ಭವಿಷ್ಯದಲ್ಲಿ ಶೇ.17ರಷ್ಟು ಮೀಸಲಾತಿ ಕಲ್ಪಿಸಬಹುದು ಎಂದು ಕೋರ್ಟ್ ತೀರ್ಪು ಸರ್ಕಾರದ ಪರವಾಗಿ ಬಂದಲ್ಲಿ ಈ ಹಿಂದೆ ಸಚಿವ ಸಂಪುಟದಲ್ಲಿ ತೆಗೆದುಕೊಂಡಿರುವ 6:6:5 ಮೀಸಲಾತಿ ತೀರ್ಮಾನದಂತೆ ಶೇ.6ನ್ನು ಬ್ಯಾಕ್‌ಲಾಗ್ ಎಂದು ತೀರ್ಮಾನಿಸಲಾಗುವುದು ಎಂದರು.

ಒಳಮೀಸಲಾತಿ ಸಂಬಂಧಿಸಿ ಏನೇನಾಗಿತ್ತು?

ಪುಟ ೧➜ಅದರಲ್ಲಿ 6:5:4:1:1 ಹಂಚಿಕೆ ಮಾಡಲಾಗಿತ್ತು. ಆದರೆ, ಸಂಪುಟದಲ್ಲಿ ಎಡಗೈ ಸಮುದಾಯಗಳಿಗೆ ಶೇ.6, ಬಲಗೈ ಸಮುದಾಯಗಳಿಗೆ ಶೇ.6 ಹಾಗೂ ಇತರೆ ಶೇ.5 ಹಂಚಿಕೆ ಮಾಡಿದ್ದೆವು. ಬಳಿಕ ಕಾನೂನು ಮಾಡಲಾಗಿತ್ತು. ಆದರೆ, ರೋಸ್ಟರ್ ಬಿಂದುವಿನಲ್ಲಿ ಗೊಂದಲ ನಿರ್ಮಾಣವಾಗಿ ಅಲೆಮಾರಿ ಸಮುದಾಯ ನ್ಯಾಯಾಲಯದ ಮೆಟ್ಟಿಲೇರಿತ್ತು. ನಾಗಮೋಹನ್ ದಾಸ್ ಆಯೋಗವು ಎಸ್‌ಸಿ-ಎಸ್‌ಟಿ ಮೀಸಲಾತಿ ಪ್ರಮಾಣ ಶೇ.24 ನೀಡಿತ್ತು. ಹೀಗಾಗಿ ಮೀಸಲಾತಿ ಪ್ರಮಾಣ ಶೇ.56 ಕ್ಕೇರಿಕೆ ಆಗಿತ್ತು. ಹೀಗಾಗಿ, ಶೇ.50 ಮಿತಿ ಮೀರಬಾರದು ಎಂದು ನ್ಯಾಯಾಲಯ ಆದೇಶ ನೀಡಿತ್ತು. ಇಂದಿರಾ ಸಹಾನಿ ಪ್ರಕರಣದಲ್ಲಿ ನೀಡಿದ್ದ ತೀರ್ಪನ್ನು ಹೈಕೋರ್ಟ್ ಪುನರುಚ್ಚಾರ ಮಾಡಿತ್ತು ಎಂದು ಸಿದ್ದರಾಮಯ್ಯ ವಿವರಿಸಿದರು. ಒಳ ಮೀಸಲಾತಿಗೆ ಸಂಬಂಧಿಸಿದಂತೆ ತಾಂತ್ರಿಕ ಸಮಿತಿ ಮಾಡಬೇಕೆಂದು ಕಳೆದ ಸಂಪುಟ ಸಭೆಯಲ್ಲಿ ತೀರ್ಮಾನ ಆಗಿತ್ತು. ಆ ಸಮಿತಿ ಶುಕ್ರವಾರ ವರದಿ ನೀಡಿದೆ. ಅದರಲ್ಲಿ ಶೇ.15 ಪ್ರಮಾಣದಂತೆ ದಲಿತ ಎಡಗೈ ಸಮುದಾಯಕ್ಕೆ ಶೇ.5.3, ಎಡಗೈ ಸಮುದಾಯಕ್ಕೆ ಶೇ.5.3 ಹಾಗೂ ಶೇ.4.4 ಹಂಚಿಕೆ ಮಾಡುವಂತೆ ತಿಳಿಸಿತ್ತು. ಆದರೆ, ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ನಡೆದ ಬಳಿಕ ಮೀಸಲಾತಿ ಪ್ರಮಾಣವನ್ನು 5.25: 5.25: 4.5 ಹಂಚಿಕೆ ಮಾಡಲಾಗಿದೆ ಎಂದು ತಿಳಿಸಿದರು.



ಯಾರಿಗೂ ಅನ್ಯಾಯವಾಗದಂತೆ ಸರ್ಕಾರ ತೀರ್ಮಾನ ತೆಗೆದುಕೊಂಡಿದೆ. ರೋಸ್ಟರ್ ಬಿಂದು ಬಗ್ಗೆ ವಿಶೇಷವಾಗಿ ಸಿ ಗುಂಪಿನವರಿಗೆ ಆತಂಕವಿತ್ತು. ಇದೀಗ ಎ, ಬಿ, ಸಿ ಯಾರಿಗೂ ಅನ್ಯಾಯವಾಗದಂತೆ ಅದರಲ್ಲೂ ಸಿ ಗುಂಪಿನವರಿಗೆ ಶೇ.20 ಮೀಸಲಾತಿ ನೀಡಲಾಗಿದೆ. ಬಿಜೆಪಿ ಎಸ್‌ಸಿಗೆ ಶೇ.17 ಮೀಸಲಾತಿ ಇದ್ದಾಗಲೂ ಇತರರಿಗೆ ಶೇ.4.5 ಒಳ ಮೀಸಲು ನೀಡಿತ್ತು. ಕಾಂಗ್ರೆಸ್ ಸರ್ಕಾರ ಶೇ.15ರಲ್ಲೂ ಶೇ.4.5 ಒಳ ಮೀಸಲು ಕೊಟ್ಟಿದೆ.

■ **ಶಿವರಾಜ್ ತಂಗಡಗಿ, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ**

ಈ ಸಂದರ್ಭದಲ್ಲಿ ಹಿರಿಯ ಸಚಿವರಾದ ಎಚ್.ಕೆ.ಪಾಟೀಲ್, ಡಾ.ಜಿ.ಪರಮೇಶ್ವರ, ಕೆ.ಎಚ್.ಮುನಿಯಪ್ಪ, ಡಾ. ಎಚ್.ಸಿ. ಮಹದೇವಪ್ಪ, ಆರ್.ಬಿ.ತಿಮ್ಮಾಪುರ, ಶಿವರಾಜ್ ಬಿ.ತಂಗಡಗಿ, ಪ್ರಿಯಾಂಕ್ ಖರ್ಗೆ, ಡಾ.ಎಂ.ಸಿ. ಸುಧಾಕರ್, ಬೈರತಿ ಸುರೇಶ್, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ ಉಪಸ್ಥಿತರಿದ್ದರು.

ಸಮಾಜದ ಶ್ರೇಯಸ್ಸಿಗೆ ಸಂಘದ ಸೇವೆ

ಪುಟ ೧➜ಹಡ್ಸನ್ ಸಂಸ್ಥೆಯು ಆಯೋಜಿಸಿದ ನ್ಯೂ ಇಂಡಿಯಾ ಕಾನ್ಫರೆನ್ಸ್‌ನಲ್ಲಿ ಸಂವಾದ ಗೋಷ್ಠಿಯಲ್ಲಿ ಲೇಖಕ ವಾಲ್ಟರ್ ರುಸೆಲ್ ಜತೆ ಚರ್ಚೆ ಸಂದರ್ಭ ಹೊಸಬಾಳೆ ಈ ರೀತಿ ಹೇಳಿದರು.

ಸರ್ವಾಧಿಕಾರದ ಪ್ರಶ್ನೆಯೇ ಇಲ್ಲ: ಆರೆಸ್ಸೆಸ್‌ನ ಧನಾತ್ಮಕ ವಿಚಾರಗಳನ್ನು ಪ್ರಚಾರ ಮಾಡಿಲ್ಲ, ಬದಲಾಗಿ ಆರೆಸ್ಸೆಸ್‌ಗೆ ವಿರುದ್ಧವಾದ ಸಂಗತಿಗಳನ್ನೇ ಸದಾ ಪ್ರಚಾರ ಮಾಡಲಾಗುತ್ತದೆ. ಆದರೆ, ನಾವು ಮಾತ್ರ ಭಾರತೀಯ ಕು ಕ್ಲುಕ್ಸ್ ಕ್ಲಾನ್ ಅಲ್ಲ ಎಂದು ಹೊಸಬಾಳೆ ಪುನರುಚ್ಚರಿಸಿದರು. ಹಿಂದು ತತ್ತ್ವ ಸಿದ್ಧಾಂತಗಳು ಮತ್ತು ಸಂಸ್ಕೃತಿಗಳ ಪ್ರಕಾರ ಇಡೀ ಜಗತ್ತೇ ಒಂದು ಪರಿವಾರವಿದ್ದಂತೆ ಮತ್ತು ಯಾವ ಕಾರಣಕ್ಕೂ ಸರ್ವಾಧಿಕಾರವನ್ನು ಪ್ರತಿಪಾದಿಸಲ್ಲ, ನಾವು ಜೀವಿ-ನಿರ್ಜೀವಿಗಳಲ್ಲೂ ಏಕತೆಯನ್ನು ಕಾಣುತ್ತೇವೆ. ಹಿಂದುಗಳ ಮೂಲ ಸಿದ್ಧಾಂತ ಇದಾಗಿರುವಾಗ ಸರ್ವಾಧಿಕಾರವಾದದ ಪ್ರಮೇಯವೇ ಉದ್ಭವಿಸುವುದಿಲ್ಲ. ಹೊಸಬಾಳೆ ಗೌರವಾರ್ಥ ಅಮೆರಿಕದ ಭಾರತೀಯ ಸಮುದಾಯ ಗುರುವಾರ ಸಂಜೆ ವರ್ಜೀನಿಯಾ ಅರೆನಗರದಲ್ಲಿ ಸಾರ್ವಜನಿಕ ಸತ್ಕಾರಕೂಟ ಕೂಡ ಆಯೋಜಿಸಿತು. ಬಹಳಷ್ಟು ಸಂಖ್ಯೆಯಲ್ಲಿ ಭಾರತೀಯರು ಸತ್ಕಾರಕೂಟದಲ್ಲಿ ಭಾಗಿಗಳಾಗಿದ್ದರು.

ಯಾವುದೇ ರಾಷ್ಟ್ರದ ಮೇಲೆ ಹಿಂದುಗಳು ದಾಳಿ ಮಾಡಿಲ್ಲ

ಪುಟ ೧➜ಆರೆಸ್ಸೆಸ್ ಭಾರತೀಯ ಸಂಸ್ಕೃತಿ ಮತ್ತು ನಾಗರೀಕತೆ ಭಾವನೆಗಳಲ್ಲಿ ಒಂದಾಗಿರುವ ಸ್ವಯಂಸೇವಾ ಆಂದೋಲನವಾಗಿದೆ. ಭಾರತದ ಪ್ರಾಚೀನ ಸಮಾಜ ವ್ಯವಸ್ಥೆ ಹಾಗೂ ರಾಷ್ಟ್ರದ ಸಾಂಸ್ಕೃತಿಕ ಗುಣವಿಶೇಷಗಳು ಮತ್ತು ನಾಗರೀಕತೆಯ ಮೌಲ್ಯಗಳಿಂದ ಪ್ರೇರಿತ ಜನರ ಸ್ವಯಂಸೇವಾ ಆಂದೋಲನವಾಗಿದೆ ಆರೆಸ್ಸೆಸ್.

ಇದನ್ನೇ ಹಿಂದು ಸಂಸ್ಕೃತಿ ಎಂದು ಕರೆಯಲಾಗುತ್ತೆ. ಕಾರ್ಯಕರ್ತರಲ್ಲಿ ಆತ್ಮವಿಶ್ವಾಸ ತುಂಬಲು, ಚಾರಿತ್ರ್ಯ ನಿರ್ಮಾಣ ಮತ್ತು ಸಮುದಾಯ ಸೇವಾಭಾವ ಮೂಡಿಸಲು ಹಾಗೂ ಸಮಾಜ ಸಂಘಟನೆಗಾಗಿ ಆರೆಸ್ಸೆಸ್ ನಿತ್ಯ ಒಂದು ತಾಸು ಅವಧಿಯ ಸಭೆ ಅಥವಾ ಸಾಪ್ತಾಹಿಕ ಸಭೆಗಳ ಆಯೋಜಿಸುತ್ತೆ. ಶಾಖೆಗಳೆಂದು ಕರೆಯಲ್ಪಡುವ ಈ ಒಂದು ತಾಸಿನ ಸಭೆಯಲ್ಲಿ ಬದುಕಿನ ಮೌಲ್ಯಗಳನ್ನು ಸ್ವಯಂಸೇವಕರಿಗೆ ನಾವು ಪರಿಚಯಿಸುತ್ತೇವೆ. ಆರೆಸ್ಸೆಸ್ ದೃಷ್ಟಿಕೋನದಲ್ಲಿ ಹಿಂದು ಅಸ್ಮಿತೆ ನಾಗರೀಕತೆ ಆಧಾರಿತ ವಿನಾ ಧಾರ್ಮಿಕ ಅಸ್ಮಿತೆ ಅಲ್ಲ ಎಂದು ಹೊಸಬಾಳೆ ವಿವರಿಸಿದರು. ಚರಿತ್ರೆಯ ತಪ್ಪು ವಿಶ್ಲೇಷಣೆ ಮತ್ತು ರಾಜಕೀಯ ಹಿತಾಸಕ್ತಿಗಳೇ ಅಲ್ಪಸಂಖ್ಯಾತ ಗುಂಪುಗಳು ಮತ್ತು ನೆರೆ ರಾಷ್ಟ್ರಗಳೊಂದಿಗಿನ ಗೊಂದಲಗಳಿಗೆ ಮೂಲ ಕಾರಣ. ಅಲ್ಪಸಂಖ್ಯಾತ ಸಮುದಾಯಗಳ ಜತೆ ಸಾಗಿರುವ ಮಾತುಕತೆಗಳು ತಪ್ಪುಕಲ್ಪನೆಗಳ ನಿವಾರಿಸಲು ತೀರಾ ಮುಖ್ಯ. ರಾಜಕೀಯ ನಾಯಕತ್ವ ಸಹಿತ ವಿವಿಧ ವಿಚಾರಗಳು ನೆರೆರಾಷ್ಟ್ರಗಳ ನಡುವಣ ಉದ್ವಿಗ್ನತೆಗಳಿಗೆ ಕಾರಣ. ಸಮಸ್ಯೆ ಇರುವುದು ಒಂದೇ ಒಂದು ನೆರೆ ರಾಷ್ಟ್ರದೊಂದಿಗೆ ಮತ್ತು ಆ ರಾಷ್ಟ್ರ ಕೂಡ ಭಾರತಾಂಬೆಯ ಗರ್ಭದಿಂದಲೇ ಜನಿಸಿದ ರಾಷ್ಟ್ರವಾಗಿದೆ. ಈ ರಾಷ್ಟ್ರವೀಗ ನಮಗೆ ನೆರೆ ರಾಷ್ಟ್ರವಾಗಿದೆ, ಇದಕ್ಕೂ ಮಿಗಿಲಾಗಿ ಸಮಸ್ಯೆಗಳನ್ನು ಸೃಜಿಸಲೆಂದೇ ಹಲವು ಜನರು ಈ ರಾಷ್ಟ್ರದ ಹಿಂದಿದ್ದಾರೆ ಎಂದು ಆರೋಪಿಸಿದರು.

83 ಸಾವಿರ ಶಾಖೆಗಳು

ಆರೆಸ್ಸೆಸ್ 83 ಸಾವಿರ ನಿತ್ಯ ಶಾಖೆಗಳನ್ನು ನಡೆಸುತ್ತದೆ. ಸಾಮಾಜಿಕ ಸೌಹಾರ್ದತೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ, ಸ್ವಯಂಸೇವಕರಲ್ಲಿ ಸೇವಾ ಮನೋಭಾವ ಮೂಡಿಸುವುದು ಮತ್ತು ಬದುಕಿನ ಮೌಲ್ಯಗಳನ್ನು ಕಲಿಸುವುದು ಶಾಖೆಗಳ ಮೂಲೋದ್ದೇಶವಾಗಿದೆ.

ಬದುಕಿನ ಅನ್ಯಾನ್ಯ ರಂಗಗಳ ನಾನಾ ವಯೋಮಿತಿಯ ಜನರು ಆರೆಸ್ಸೆಸ್ ಸ್ವಯಂಸೇವಕರಾಗಿದ್ದಾರೆ. ಪ್ರಾಕೃತಿಕ ವಿಕೋಪಗಳ ಸಂದರ್ಭ ಪರಿಹಾರ ಕಾರ್ಯಗಳಲ್ಲಿ ಮುಂಚೂಣಿಯಲ್ಲಿರುವ ಆರೆಸ್ಸೆಸ್ ಶಿಕ್ಷಣ, ಆರೋಗ್ಯ, ಆತ್ಮರಕ್ಷಣೆ, ಗ್ರಾಮೀಣಾಭಿವೃದ್ಧಿ ಮತ್ತು ಪರಿಸರಾತ್ಮಕ ವಿಚಾರಗಳಲ್ಲೂ ಸಕ್ರಿಯವಾಗಿ ಕಾರ್ಯತತ್ಪರವಿದೆ. ಒಂದಷ್ಟು ಗೊಂದಲಗಳ ಹೊರತಾಗಿಸಿದರೆ ಸಾಂಸ್ಕೃತಿಕ ಮೌಲ್ಯಗಳು ಮತ್ತು ಆಧುನೀಕರಣ ಖಂಡಿತ ತದ್ವಿರುದ್ಧವಲ್ಲ. ಇವು ಜತೆ ಜತೆಯಾಗಿ ಸಾಗಬಲ್ಲುವು.

ಸಾಂಸ್ಕೃತಿಕ ಮೌಲ್ಯಗಳು ಮತ್ತು ಆಧುನೀಕರಣ ಎರಡನ್ನೂ ಕಾಲಕ್ಕನುಗುಣವಾಗಿ ಅಳವಡಿಸಿಕೊಳ್ಳೋದು ಮುಖ್ಯ. ಆಧುನೀಕರಣವು ಕೈಗಾರಿಕೀಕರಣ, ತಂತ್ರಜ್ಞಾನ ಮತ್ತು ವ್ಯೆಯ್ಯಕ್ತಿಕವಾದಗಳಿಗೆ ಹೇತುವಾದರೂ ಸಂಸ್ಕೃತಿ ಮತ್ತು ಸಾಂಸ್ಕೃತಿಕ ಮೌಲ್ಯಗಳ ಜತೆ ಸಾಗಬಲ್ಲುದು. ಈಚಿನ ದಶಕಗಳಲ್ಲಿ ಹಲವು ಸಮಾಜಗಳಲ್ಲಿ ಸಂಸ್ಕೃತಿ ಮತ್ತು ಆಧುನೀಕತೆಗಳು ಜತೆಜತೆಯಾಗಿ ಸಾಗುವುದನ್ನು ಕಾಣಬಹುದಾಗಿದೆ ಎಂದು ಹೇಳಿದರು.

ಭಾರತ ವಿಶ್ವಗುರು ಆಗುವುದು ಖಚಿತ

ಪುಟ ೧➜ಭಾರತ ವಿಶ್ವಗುರುವಾಗುವ ಕನಸು ನಿರಂತರ ಪ್ರಯತ್ನ ಮತ್ತು ಸಾಮೂಹಿಕ ಶಿಸ್ತುಗಳ ಮೂಲಕ ಸಾಕಾರಗೊಳ್ಳುತ್ತದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು. ಈ ಬದಲಾವಣೆಯನ್ನು ಪ್ರಸ್ತುತ ತಲೆಮಾರಿನಲ್ಲೇ ಕಾಣಬಹುದು ಎಂದು ಹೇಳಿದರು. 'ದೇಶದ ಭವಿಷ್ಯದ ಬಗ್ಗೆ ಸಂದೇಹ ಬೇಡ. ಧೈರ್ಯದಿಂದ, ಸ್ವಾವಲಂಬನೆಯಿಂದ ಬದುಕಿ, ಈ ಮೌಲ್ಯಗಳನ್ನು ದೈನಂದಿನ ಜೀವನದಲ್ಲಿ ಅನುಸರಿಸಿ. ಭಾರತ ಬಲಶಾಲಿಯಾಗಿ, ವಿಶ್ವಕ್ಕೆ ಮಾರ್ಗದರ್ಶನ ನೀಡುತ್ತದೆ,' ಎಂದು ಭಾಗ್ವತ್ ಅಭಿಪ್ರಾಯವ್ಯಕ್ತಪಡಿಸಿದರು.

'ಇದು ನಡೆಯುತ್ತದೆಯೋ ಇಲ್ಲವೋ ಎಂಬ ಗೊಂದಲ ಬೇಡ. ಯಾವುದು ವಿಧಿಯಲ್ಲಿದೆಯೋ ಅದು ನಡೆಯುತ್ತದೆ,' ಎಂದು ರಾಮ ಮಂದಿರ ಚಳವಳಿಯನ್ನು ಉದಾಹರಣೆಯಾಗಿ ನೀಡಿ ವಿವರಿಸಿದರು. 'ನಮ್ಮ ನಿರ್ಧಾರಕ್ಕೆ ಅನುಗುಣವಾಗಿ ಹಂತ ಹಂತವಾಗಿ ಕೆಲಸ ಮಾಡಿದರೆ ಭಾರತ ಬಲಶಾಲಿ, ಸತ್ವಶಾಲಿ ಮತ್ತು ವಿಶ್ವಗುರುವಾಗುತ್ತದೆ,' ಎಂದು ಅವರು ಹೇಳಿದರು.

ಭಾರತವನ್ನು ನಿಜವಾಗಿ ಅರ್ಥ ಮಾಡಿಕೊಳ್ಳಬೇಕಾದರೆ ಮೊದಲು ಭಾರತವನ್ನು ಆಳವಾಗಿ ಅರ್ಥ ಮಾಡಿಕೊಂಡು, ಆ ನಂತರ ದೈನಂದಿನ ಜೀವನದಲ್ಲಿ ಅದನ್ನು ಬದುಕಬೇಕು ಎಂದು ಭಗವತ್ ಸಲಹೆ ನೀಡಿದರು. 'ಭಾರತ ಮಾತೆಯನ್ನು ಪೂಜಿಸಬೇಕಾದರೆ ನಾವು ನಾವೇ ಭಾರತರಾಗಬೇಕು,' ಎಂದು ಹೇಳಿದರು. ದೇಶವನ್ನು 150 ವರ್ಷಗಳ ವಸಾಹತುಶಾಹಿ ಅಥವಾ ಪಾಶ್ಚಾತ್ಯ ದೃಷ್ಟಿಕೋನದಿಂದ ನೋಡಬಾರದು. ನಮ್ಮ ಸ್ವಂತ ನಾಗರಿಕತೆಯ ಮೌಲ್ಯಗಳಿಂದಲೇ ಅರ್ಥ ಮಾಡಿಕೊಳ್ಳಬೇಕು ಎಂದು ಅವರು ಒತ್ತಿ ಹೇಳಿದರು. ಪಾಶ್ಚಾತ್ಯ ಚಿಂತನೆಯ ಪದರಗಳನ್ನು ತೆಗೆದುಹಾಕಿ, ಭಾರತೀಯ ಸಂಪ್ರದಾಯಗಳೊಂದಿಗೆ ಮತ್ತೆ ಸಂಪರ್ಕ ಸಾಧಿಸಬೇಕು ಎಂದು ಕರೆ ನೀಡಿದರು. 'ಭಾರತವನ್ನು ತಿಳಿದುಕೊಳ್ಳಬೇಕು, ಅಂಗೀಕರಿಸಬೇಕು ಮತ್ತು ದೈನಂದಿನ ಜೀವನದಲ್ಲಿ ಬದುಕಬೇಕು,' ಎಂದು ಆಶಿಸಿದರು.

ಟ್ರಂಪ್ ಪೋಸ್ಟ್ ಅಜ್ಞಾನಪೂರಿತ

ಪುಟ ೧➜ಆದರೆ ಟ್ರಂಪ್ ಅವರ ಸಾಮಾಜಿಕ ಜಾಲತಾಣ ಪೋಸ್ಟ್ ಸಂಪೂರ್ಣ ತದ್ವಿರುದ್ಧವಾಗಿದೆ ಎಂದು ಜೈಸ್ವಾಲ್, ಟ್ರಂಪ್ ವಿರುದ್ಧ ಟೀಕಾಪ್ರಹಾರ ಮಾಡಿದ್ದಾರೆ. ಅಮೆರಿಕದ ರೇಡಿಯೋ ಕಾರ್ಯಕ್ರಮ ನಿರೂಪಕ ಮೈಕಲ್ ಸ್ಯಾವೇಜ್ ತಮ್ಮ ಕಾರ್ಯಕ್ರಮವೊಂದರಲ್ಲಿ ಭಾರತ ಮತ್ತು ಚೀನಾ ನರಕದ ಕೂಪಗಳೆಂದು ಅವಹೇಳನಕಾರಿ ಮಾತುಗಳನ್ನಾಡಿದ್ದು, ಕಾರ್ಯಕ್ರಮದ ತುಣುಕುಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದರು. ಸ್ಯಾವೇಜ್ ಪೋಸ್ಟ್‌ಗೆ ತಮ್ಮ ಸಹಮತ ಸೂಚಿಸಿದ ಟ್ರಂಪ್ ರೀಪೋಸ್ಟ್ ಮಾಡಿದ್ದರು.

ಟ್ರಂಪ್ ಯೂ-ಟರ್ನ್: ಟ್ರಂಪ್ ಪೋಸ್ಟ್‌ಗೆ ಭಾರತೀಯರ ಭಾರೀ ವಿರೋಧ ವ್ಯಕ್ತವಾಗುತ್ತಿದ್ದಂತೆ ಅಮೆರಿಕ ರಾಯಭಾರ ಕಚೇರಿ ಮೂಲಕ ಟ್ರಂಪ್ ಸಂದೇಶ ರವಾನಿಸಿದ್ದಾರೆ, ಭಾರತವೊಂದು ಶ್ರೇಷ್ಠ ರಾಷ್ಟ್ರ, ನನ್ನ ಆತ್ಮೀಯ ಸ್ನೇಹಿತನೇ ಆ ರಾಷ್ಟ್ರವನ್ನು ಮುನ್ನಡೆಸುತ್ತಿದ್ದಾರೆ ಎಂದು ಟ್ರಂಪ್ ಯೂ-ಟರ್ನ್ ಹೊಡೆದಿದ್ದಾರೆ.

ನಾಳೆ ಪ್ರಶಸ್ತಿ ಪ್ರದಾನ ಸಮಾರಂಭ

ಬೆಂಗಳೂರು/ಕಾರವಾರ: ಸೌರಭ ಸಂಸ್ಥೆ ವತಿಯಿಂದ ಭಿಸಾಧನಾ ಸೌರಭ :ಸಾಂಸ್ಕೃತಿಕ ಅನುಸಂಧಾನ ಮತ್ತು ರಾಷ್ಟ್ರೀಯ ಸೌರಭ ಸಮ್ಮಾನ್ ಪ್ರಶಸ್ತಿ ಪ್ರದಾನ ಸಮಾರಂಭವು ಏ.26ರಂದು ಬೆಳಗ್ಗೆ 9.30 ಗಂಟೆಗೆ ಉತ್ತರ ಕನ್ನಡ ಜಿಲ್ಲೆಯ ಕುಮಟಾದ ಹವ್ಯಕ ಸಭಾಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ.

» ವಿಶ್ವೇಶ್ವರ ಭಟ್‌ಗೆ ರಾಷ್ಟ್ರೀಯ ಸೌರಭ ಸಮ್ಮಾನ್ ಪ್ರಶಸ್ತಿ

ಕಾರ್ಯಕ್ರಮದಲ್ಲಿ ಈ ಬಾರಿಯ ರಾಷ್ಟ್ರೀಯ ಸೌರಭ ಸಮ್ಮಾನ್ ಪ್ರಶಸ್ತಿಯನ್ನು ವಿಶ್ವವಾಣಿ ಪ್ರಧಾನ ಸಂಪಾದಕ ಹಾಗೂ ಹಿರಿಯ ಪತ್ರಕರ್ತ ವಿಶ್ವೇಶ್ವರ ಭಟ್ ಅವರಿಗೆ ಪ್ರದಾನ ಮಾಡಲಾಗುತ್ತದೆ. ಕಾರ್ಯಕ್ರಮವನ್ನು ಖ್ಯಾತ ವಾಗ್ಮಿ ಚಕ್ರವರ್ತಿ ಸೂಲಿಬೆಲೆ ಅವರು ಉದ್ಘಾಟಿಸಲಿದ್ದಾರೆ.

ವಿಶ್ವೇಶ್ವರ ಭಟ್ ಅವರ ಕುರಿತು ಸಂವಾದ: ಬೆಳಗ್ಗೆ 11.10ಕ್ಕೆ ಸಂವಾದದಲ್ಲಿ ಹೊನ್ನಾವರದ ನಾಗರಿಕ ಪತ್ರಿಕೆ ಸಂಪಾದಕರಾದ ಕೃಷ್ಣಮೂರ್ತಿ ಹೆಬ್ಬಾರ ಕರ್ಕಿ ಅವರು ವಿಶ್ವೇಶ್ವರ ಭಟ್ ಅವರ ಪತ್ರಿಕಾ ಪಥ ಕುರಿತು, ಬೆಳಗ್ಗೆ 11.45ಕ್ಕೆ ಉಡುಪಿ ಜಿಲ್ಲೆ ಗಿಳಿಯಾರದ ಜನಸೇವಾ ಟ್ರಸ್ಟ್ ಪ್ರವರ್ತಕ ವಸಂತ ಗಿಳಿಯಾರ್ ಅವರು ವಿಶ್ವೇಶ್ವರ ಭಟ್ ಅವರ ಸಾಹಿತ್ಯ ಪಥದ ಕುರಿತು, ಮಧ್ಯಾಹ್ನ 2.15ಕ್ಕೆ ಸಾಹಿತಿ, ಅಂಕಣಕಾರ, ಹಿರಿಯ ಪತ್ರಕರ್ತ ರಾಜು ಅಡಕಳ್ಳಿ ಅವರು ವಿಸ್ಮಯ ಪಥ ಕುರಿತು, ಮಧ್ಯಾಹ್ನ 2.45ಕ್ಕೆ ಲೇಖಕ ಹಾಗೂ ಅಂಕಣಕಾರ ಕಿರಣ್ ಉಪಾಧ್ಯಾಯ ಅವರು ವಿಶ್ವೇಶ್ವರ ಭಟ್ ಅವರ ಪ್ರವಾಸ ಕಥನ ಕುರಿತು, ಮಧ್ಯಾಹ್ನ 3.35ಕ್ಕೆ ಮಾಜಿ ಸಂಸದ ಹಾಗೂ ಖ್ಯಾತ ಅಂಕಣಕಾರ ಪತ್ರಕರ್ತ ಪ್ರತಾಪ್ ಸಿಂಹ ಅವರು ಅಂತರಂಗ ಪಥ ಕುರಿತು ಮಾತನಾಡಲಿದ್ದಾರೆ.

ಪ್ರಶಸ್ತಿ ಪ್ರದಾನ ಹಾಗೂ ಸಮಾರೋಪ: ಸಂಜೆ 4.35ಕ್ಕೆ ಪ್ರಶಸ್ತಿ ಪ್ರದಾನ ಹಾಗೂ ಸಮಾರೋಪ ಸಮಾರಂಭ ನಡೆಯಲಿದ್ದು, ಈ ವೇಳೆ ಪ್ರಧಾನ ಅಭ್ಯಾಗತರಾಗಿ ಖ್ಯಾತ ಆಯುರ್ವೇದ ಮತ್ತು ಶಿಕ್ಷಣ ತಜ್ಞ ಹಾಗೂ ಮೂಡುಬಿದಿರೆ ಆಳ್ವಾಸ್ ಫೌಂಡೇಶನ್ ಸಂಸ್ಥಾಪಕ ಡಾ.ಎಂ.ಎನ್. ಮೋಹನ ಆಳ್ವ ಅವರು ಭಾಗವಹಿಸಲಿದ್ದು, ಸೌರಭ ಅಧ್ಯಕ್ಷ ಶ್ರೀಕಾಂತ ಕೆ. ಭಟ್ಟ, ಉಪಾಧ್ಯಕ್ಷ ಮೋಹನಭಾಸ್ಕರ ಹೆಗಡೆ, ಪ್ರಧಾನ ಕಾರ್ಯದರ್ಶಿ ಅರುಣ ಎನ್.ಹೆಗಡೆ ಅವರು ಉಪಸ್ಥಿತರಿರಲಿದ್ದಾರೆ.

ಪುತ್ಥಳಿ ಅನಾವರಣ



ಬೆಂಗಳೂರಿನ ಜಯನಗರದಲ್ಲಿ ನಿರ್ಮಿಸಲಾಗಿರುವ ಡಾ.ರಾಜಕುಮಾರ್ ಅವರ ಕಂಚಿನ ಪುತ್ಥಳಿಯನ್ನು ಶುಕ್ರವಾರ ಅಶ್ವಿನಿ ಪುನೀತ್ ರಾಜಕುಮಾರ್ ಉದ್ಘಾಟಿಸಿದರು. ಸಂಸದ ತೇಜಸ್ವಿ ಸೂರ್ಯ, ಶಾಸಕ ರಾಮಮೂರ್ತಿ, ನಟಿ ತಾರಾ ಇದ್ದರು.

ಜನಿವಾರ ತೆಗೆಸಿದ್ದು ಅಕ್ಷಮ್ಯ ಅಪರಾಧ

ಬೆಂಗಳೂರು: ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಬರೆಯಲು ಬಂದಿದ್ದ ಬ್ರಾಹ್ಮಣ ವಿದ್ಯಾರ್ಥಿಗಳ ಜನಿವಾರವನ್ನು ಬಲವಂತವಾಗಿ ತೆಗೆಸಿರುವುದು ಅಥವಾ ಕತ್ತರಿಸಿರುವುದು ಅಕ್ಷಮ್ಯ ಅಪರಾಧ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ತೀವ್ರವಾಗಿ ಖಂಡಿಸಿದೆ.

ನಗರದ ಕೋರಮಂಗಲದ ಕೃಪಾನಿಧಿ ಕಾಲೇಜಿನಲ್ಲಿ ಈ ವಿವಾದಾತ್ಮಕ ಘಟನೆ ನಡೆದಿದೆ ಎನ್ನಲಾಗಿದ್ದು, ಈ ಕುರಿತು ಮಹಾಸಭಾದ ಅಧ್ಯಕ್ಷ ಎಸ್. ರಘುನಾಥ್ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದು ಕಠಿಣ ಕ್ರಮಕ್ಕೆ ಆಗ್ರಹಿಸಿದ್ದಾರೆ.

ಗುರುವಾರ ನಡೆದ ಸಿಇಟಿ ಪರೀಕ್ಷೆಯ ಸಂದರ್ಭದಲ್ಲಿ ವಿದ್ಯಾರ್ಥಿಗಳನ್ನು ತಪಾಸಣೆ ಮಾಡುವ ನೆಪದಲ್ಲಿ ಧಾರ್ಮಿಕ ಭಾವನೆಗೆ ಧಕ್ಕೆ ತರಲಾಗಿದೆ. ವಿದ್ಯಾರ್ಥಿಗಳು ಧರಿಸಿದ್ದ ಪವಿತ್ರ ಜನಿವಾರವನ್ನು ತೆಗೆಸುವ ಮೂಲಕ ಅವಮಾನಿಸಲಾಗಿದೆ ಎಂಬ ದೂರುಗಳು ಕೇಳಿಬಂದಿವೆ. ಈ ಸಂಬಂಧ ಸಂತ್ರಸ್ತ ವಿದ್ಯಾರ್ಥಿಗಳು ಮತ್ತು ಪೋಷಕರು ಮಡಿವಾಳ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲು ಮುಂದಾಗಿದ್ದರೂ, ದೂರು ಸ್ವೀಕರಿಸಲು ಹಿಂಜರಿಯಲಾಗುತ್ತಿದೆ ಎಂಬ ಮಾಹಿತಿ ಲಭ್ಯವಾಗಿದೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಸರ್ಕಾರದ ಮುಚ್ಚಳಿಕೆ ಉಲ್ಲಂಘನೆ: ಕಳೆದ ವರ್ಷವೂ ಇದೇ ರೀತಿಯ ಘಟನೆಗಳು ವರದಿಯಾದಾಗ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯು ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸಲ್ಲಿಸಿತ್ತು. ಈ ಸಂದರ್ಭದಲ್ಲಿ ರಾಜ್ಯ ಸರ್ಕಾರವು ಮುಂದೆ ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರವಹಿಸಲಾಗುವುದು ಎಂದು ನ್ಯಾಯಾಲಯಕ್ಕೆ ಮುಚ್ಚಳಿಕೆ ಬರೆದುಕೊಟ್ಟಿತ್ತು. ಆದರೆ ಈ ಬಾರಿಯೂ ಇಂತಹದ್ದೇ ಕೃತ್ಯ ನಡೆದಿರುವುದು ಸರ್ಕಾರದ ಮುಚ್ಚಳಿಕೆಗೆ ಬೆಲೆಯಿಲ್ಲದಂತಾಗಿದೆ ಎಂದು ಪತ್ರದಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕೆಲವು ಶಿಕ್ಷಣ ಸಂಸ್ಥೆಗಳು ಬ್ರಾಹ್ಮಣರ ವಿರುದ್ಧ ವ್ಯವಸ್ಥಿತವಾಗಿ ಹಗೆತನ ಸಾಧಿಸುತ್ತಿರುವುದು ಈ ಘಟನೆಯಿಂದ ಸ್ಪಷ್ಟವಾಗುತ್ತಿದೆ. ಕೂಡಲೇ ಇಂತಹ ತಾರತಮ್ಯ ಎಸಗಿದ ಕಾಲೇಜುಗಳ ಪರವಾನಗಿಯನ್ನು ರದ್ದುಗೊಳಿಸಬೇಕು. ಧಾರ್ಮಿಕ ಆಚರಣೆಯ ಭಾಗವಾಗಿರುವ ಜನಿವಾರವನ್ನು ಪರೀಕ್ಷೆಯ ನೆಪದಲ್ಲಿ ತೆಗೆಸುವುದು ಸಾಂವಿಧಾನಿಕ ಹಕ್ಕುಗಳ ಉಲ್ಲಂಘನೆಯಾಗಿದೆ. ಸರ್ಕಾರವು ಈ ಕೂಡಲೇ ಮಧ್ಯಪ್ರವೇಶಿಸಿ ತಪ್ಪಿತಸ್ಥ ಅಧಿಕಾರಿಗಳು ಹಾಗೂ ಕಾಲೇಜು ಮಂಡಳಿಯ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಮಹಾಸಭಾ ಆಗ್ರಹಿಸಿದೆ.

ಕಿರುಸುದ್ದಿ

ಮೇ 20ರೊಳಗೆ ಸಂಪುಟ ವಿಸ್ತರಣೆ ವಿಶ್ವಾಸ: ಸಲೀಂ

ಹಾವೇರಿ: ಎಲ್ಲ ಹಿರಿಯ ಶಾಸಕರು ದೆಹಲಿಯಲ್ಲಿ ಹೈಕಮಾಂಡ್ ಭೇಟಿ ಮಾಡಿದ್ದಾರೆ. ಮೇ 20ರೊಳಗೆ ಸಚಿವ ಸಂಪುಟ ವಿಸ್ತರಣೆಯಾಗುವ ವಿಶ್ವಾಸವಿದೆ ಎಂದು ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್ ಹೇಳಿದರು. ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ಈ ವಿಚಾರದಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಮತ್ತು ಹೈಕಮಾಂಡ್ ತೀರ್ಮಾನವೇ ಅಂತಿಮವಾಗಿದೆ. ಸಿಎಂ ಸಿದ್ದರಾಮಯ್ಯ ಅವರಿಗೆ ಎಲ್ಲರೂ ಆಪ್ತರು. ಅವರು ತಮ್ಮ ಮಂತ್ರಿ ಮಂಡಲದ ಸಭೆ ಮತ್ತು ಶಾಸಕರ ಸಭೆ ಮಾಡುತ್ತಾರೆ. ಇದಕ್ಕೆ ವಿಶೇಷ ಅರ್ಥ ಕಲ್ಪಿಸುವ ಅಗತ್ಯವಿಲ್ಲ ಎಂದು ಪ್ರತಿಕ್ರಿಯಿಸಿದರು. ನಮಗೆ ಜವಾಬ್ದಾರಿ ಕೊಟ್ಟಿದ್ದರು, ಆ ಪ್ರಕಾರ ನಾವು ವರದಿಯನ್ನು ಕೊಟ್ಟಿದ್ದೇವೆ. ಪಕ್ಷದ ಎಲ್ಲಾ ವಿಚಾರಗಳನ್ನು ಹೈಕಮಾಂಡ್ ಗಮನಿಸುತ್ತಿದೆ. ಮೇ 4ಕ್ಕೆ ಉಪಚುನಾವಣೆ ಫಲಿತಾಂಶ ಬರುತ್ತದೆ. ದಾವಣಗೆರೆ ಮತ್ತು ಬಾಗಲಕೋಟೆ ಎರಡೂ ಕ್ಷೇತ್ರದಲ್ಲಿ ನಾವು ಗೆಲ್ಲುತ್ತೇವೆ. ಗೆದ್ದು ವಿಜಯೋತ್ಸವ ಮಾಡುತ್ತೇವೆ ಎಂದರು.



ಶಾಖದಿಂದಾಗುವ ಸಮಸ್ಯೆ ತಡೆಗೆ ಕ್ರಮ

ಬೆಂಗಳೂರು: ಬೇಸಿಗೆಯಲ್ಲಿ ಅತಿಯಾದ ಶಾಖ ಮತ್ತು ಶಾಖ ತರಂಗದಿಂದ ಸಾರ್ವಜನಿಕರಿಗೆ ಉಂಟಾಗುವ ಆರೋಗ್ಯ ಸಮಸ್ಯೆಗಳನ್ನು ತಡೆಯಲು ರಾಜ್ಯ ಆರೋಗ್ಯ ಇಲಾಖೆ ಮುಂಜಾಗ್ರತಾ ಕ್ರಮ ಕೈಗೊಂಡಿರುವ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಯುಕ್ತರು ಆದೇಶ ಹೊರಡಿಸಿದ್ದಾರೆ. ಮಾ.1ರಿಂದ ಜು.31 ರವರೆಗೆ ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ತಾಪಾಘಾತ ನಿರ್ವಹಣಾ ಕೊಠಡಿ ಕಡ್ಡಾಯವಾಗಿ ಕಾರ್ಯನಿರ್ವಹಿಸಬೇಕು. ಸಮುದಾಯ ಆರೋಗ್ಯ ಕೇಂದ್ರದಲ್ಲಿ 2 ಹಾಸಿಗೆ, ತಾಲೂಕು ಆಸ್ಪತ್ರೆಯಲ್ಲಿ 5 ಹಾಸಿಗೆ ಹಾಗೂ ಜಿಲ್ಲಾ ಆಸ್ಪತ್ರೆಯಲ್ಲಿ 10 ಹಾಸಿಗೆಗಳ ವ್ಯವಸ್ಥೆ ಮಾಡಬೇಕು. ಶಾಖ ಸಂಬಂಧಿತ ಕಾಯಿಲೆಗಳ ನಿರ್ವಹಣೆ ಕುರಿತು ಎಲ್ಲಾ ವೈದ್ಯರು ಮತ್ತು ಆರೋಗ್ಯ ಸಿಬ್ಬಂದಿಗೆ ತರಬೇತಿ ನೀಡಬೇಕು, ಪ್ರತಿ ಆಸ್ಪತ್ರೆಯಲ್ಲಿ ಓ.ಆರ್.ಎಸ್. ಮೂಲೆಯನ್ನು ಸ್ಥಾಪಿಸಬೇಕು, ತಾಪಾಘಾತ ನಿರ್ವಹಣಾ ಕೊಠಡಿಯಲ್ಲಿ ಗಾಳಿಯಂತ್ರ, ಮಂಜುಗಡ್ಡೆ, ಜ್ವರಮಾಪಕ ಸೇರಿದಂತೆ ಎಲ್ಲಾ ಅಗತ್ಯ ಸೌಲಭ್ಯ ಇರಬೇಕು, ಶಾಖ ಸಂಬಂಧಿತ ಕಾಯಿಲೆಗಳ ದೈನಂದಿನ ವರದಿಯನ್ನು ಸಮಗ್ರ ಆರೋಗ್ಯ ಮಾಹಿತಿ ವೇದಿಕೆಯಲ್ಲಿ ಸಲ್ಲಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ನಿವೇಶನ ಅಕ್ರಮ ನೋಂದಣಿ: ಸಬ್ ರಿಜಿಸ್ಟ್ರಾರ್ ಅಮಾನತು

ಮೈಸೂರು: ಸರ್ಕಾರದ ಸುತ್ತೋಲೆಗಳು ಹಾಗೂ ಇಲಾಖೆಯ ನಿರ್ದೇಶನಗಳನ್ನು ಉಲ್ಲಂಘಿಸಿ, ಕೋರ್ಟ್ ಡಿಕ್ರಿ, ಅಥವಾ ಆದೇಶದ ಸಬ್ ಆರ್ಟಿಕಲ್ ದುರ್ಬಳಕೆ ಮಾಡಿಕೊಂಡು 24 ನಿವೇಶನಗಳ ದಾಖಲೆಗಳನ್ನು ನೋಂದಾಯಿಸಿದ ಆರೋಪದಡಿ ಮೈಸೂರು ಪಶ್ಚಿಮ ಉಪ ನೋಂದಣಿ ಕಚೇರಿಯ ಉಪ ನೋಂದಣಾಧಿಕಾರಿ (ಸಬ್ ರಿಜಿಸ್ಟ್ರಾರ್) ಎನ್.ಶ್ರೀಕಾಂತ್ ಅವರನ್ನು ಸಸ್ಪೆಂಡ್ ಮಾಡಿ ಶಿಸ್ತು ಪ್ರಾಧಿಕಾರ ಹಾಗೂ ನೋಂದಣೀ ಮಹಾ ಪರಿವೀಕ್ಷಕರು ಆದೇಶ ಹೊರಡಿಸಿದ್ದಾರೆ. ಶ್ರೀಕಾಂತ್ ವಿರುದ್ಧ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿದ್ದಾರೆ. ಅಲ್ಲದೇ ಅವರನ್ನು ಪ್ರಸ್ತುತ ಸ್ಥಳದಲ್ಲೇ ಮುಂದುವರೆಸಿದರೆ ಸಾಕ್ಷ್ಯಾಧಾರಗಳನ್ನು ನಾಶಪಡಿಸುವ ಸಾಧ್ಯತೆ ಇರುವುದರಿಂದ, ಲೀನ್ ಅನ್ನು ಕೇಂದ್ರ ಕಚೇರಿಗೆ ವರ್ಗಾಯಿಸಿ ಆದೇಶಿಸಲಾಗಿದೆ.

ಗ್ಲೋಬಲ್ ಅಗ್ರಿಟೆಕ್ ಸಮ್ಮಿಟ್‌ನಲ್ಲಿ ಸಿಎಂ ಸಿದ್ದರಾಮಯ್ಯ ಹೇಳಿಕೆ
ಕೃಷಿ ಬಲವರ್ಧನೆಗೆ ಆದ್ಯತೆ

ಬೆಂಗಳೂರು: ಕೃಷಿ ಕ್ಷೇತ್ರದಲ್ಲಿನ ಹೊಸ ಬದಲಾವಣೆಗಳು ಪ್ರತಿ ರೈತರನ್ನೂ ತಲುಪಬೇಕು. ಕೃಷಿ ಲಾಭದಾಯಕಗೊಂಡರೆ ಯುವಜನತೆ ಕೃಷಿಯತ್ತ ಮುಖ ಮಾಡುತ್ತಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಅರಮನೆ ಮೈದಾನದಲ್ಲಿ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ(ಎಫ್‌ಕೆಸಿಸಿಐ) ವತಿಯಿಂದ ನಡೆದ ಗ್ಲೋಬಲ್ ಅಗ್ರಿಟೆಕ್ ಸಮ್ಮಿಟ್-2026ನ್ನು ಉದ್ಘಾಟಿಸಿ ಮಾತನಾಡಿದ ಅವರು, ಭಾರತ ದೇಶ ಕೃಷಿಪ್ರಧಾನ ದೇಶ. ಕೃಷಿಯನ್ನು ಸುಸ್ಥಿರಗೊಳಿಸುವುದು ಹಾಗೂ ಲಾಭದಾಯಕಗೊಳಿಸುವುದೇ ಈ ಕಾರ್ಯಕ್ರಮದ ಉದ್ದೇಶವಾಗಿದೆ. ಇಂದಿನ ಯುವಜನತೆ ಕೃಷಿಯಿಂದ ವಿಮುಖರಾಗುತ್ತಿದ್ದಾರೆ. ಕೃಷಿ ಲಾಭದಾಯಕವಾದರೆ ಯುವಜನತೆ ಸಹಜವಾಗಿ ಕೃಷಿಯತ್ತ ಮುಖಮಾಡುತ್ತಾರೆ. ಸರ್ಕಾರ ಕೃಷಿಯನ್ನು ಲಾಭದಾಯಕಗೊಳಿಸಲು ಹಲವು ಯೋಜನೆಗಳನ್ನು ರೂಪಿಸಿ, ಈ ಉದ್ದೇಶಕ್ಕೆ ಕೈಗಾರಿಕೆಗಳೂ ಕೈಜೋಡಿಸಬೇಕು ಎಂದರು.

ಕೃಷಿಭಾಗ್ಯ ಪುನಃ ಜಾರಿ: ರಾಜ್ಯದಲ್ಲಿ ಒಣ ಭೂಮಿಯ ಪ್ರಮಾಣ ಹೆಚ್ಚಿದ್ದು, ಸಣ್ಣ ಹಿಡುವಳಿದಾರರಿಗೆ ಕೃಷಿಯನ್ನು ಲಾಭದಾಯಕಗೊಳಿಸಬೇಕಿದೆ. ಆದ್ದರಿಂದ ಸರ್ಕಾರ ಕೃಷಿಭಾಗ್ಯ ಯೋಜನೆಯನ್ನು ಜಾರಿಗೆ ತಂದಿದೆ. ಸುಮಾರು 83 ಲಕ್ಷ ರೈತರಿಗೆ 70 ಸಾವಿರ ಕೋಟಿ ರೂ.ಗಳ ಕೃಷಿಸಾಲವನ್ನು ನೀಡಲಾಗಿದೆ. ಕೈಗಾರಿಕೆ, ಗ್ರಾಮೀಣಾಭಿವೃದ್ಧಿಯಲ್ಲಿ ಕರ್ನಾಟಕ ಮೊದಲನೇ ಸ್ಥಾನದಲ್ಲಿದ್ದು, ಕೃಷಿ ಕ್ಷೇತ್ರದಲ್ಲಿಯೂ ಹೂಡಿಕೆಗಳು ಹೆಚ್ಚಾಗಬೇಕು. ಆಗ ಮಾತ್ರ ಕೃಷಿ ಲಾಭದಾಯಕವಾಗಲಿದೆ ಎಂದು ಅಭಿಪ್ರಾಯಪಟ್ಟರು.

ಕೃಷಿ ವಿವಿ ಹಾಗೂ ಎಫ್‌ಕೆಸಿಸಿಐ ಸಹಭಾಗಿತ್ವದಲ್ಲಿ ಏರ್ಪಡಿಸಲಾದ ಗ್ಲೋಬಲ್ ಅಗ್ರಿಟೆಕ್ ಸಮ್ಮಿಟ್-2026 ರೈತರಿಗೆ ಸಹಕಾರಿಯಾಗಿದೆ. ರೈತರಿಗೆ ಉಪಯುಕ್ತವಾದ ಈ ಕಾರ್ಯಕ್ರಮದಲ್ಲಿ ಸಾವಯವ ಕೃಷಿ ಹಾಗೂ ಯಂತ್ರೋಪಕರಣಗಳ ವಸ್ತುಪ್ರದರ್ಶನ ಏರ್ಪಡಿಸಿರುವುದು ಉತ್ತಮವಾಗಿದೆ. ಇಂತಹ ಕಾರ್ಯಕ್ರಮಗಳಲ್ಲಿ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತಾಗಬೇಕು ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಎಫ್‌ಕೆಸಿಸಿಐ ಅಧ್ಯಕ್ಷೆ ಉಮಾ ರೆಡ್ಡಿ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.



ಗ್ರಾಮೀಣ ರೈತರ ಆದಾಯ ಹೆಚ್ಚಿಸುವ ಉದ್ದೇಶ

ರಾಜ್ಯದ ಆರ್ಥಿಕತೆಯಲ್ಲಿ ಕೃಷಿಯ ಪಾತ್ರ ಅತ್ಯಂತ ಮಹತ್ವದ್ದಾಗಿದ್ದು, ಒಟ್ಟು ರಾಜ್ಯದ ಆದಾಯದಲ್ಲಿ ಶೇ.17ರಷ್ಟು ಕೊಡುಗೆ ನೀಡುವುದರೊಂದಿಗೆ, ಶೇಕಡಾ 58ರಷ್ಟು ಜನರಿಗೆ ಉದ್ಯೋಗವನ್ನು ಒದಗಿಸುವ ಪ್ರಮುಖ ಕ್ಷೇತ್ರವಾಗಿದೆ. 2025-26ನೇ ಸಾಲಿನಲ್ಲಿ ದೇಶದ ಆಹಾರ ಉತ್ಪಾದನೆ 355 ದಶಲಕ್ಷ ಟನ್ ತಲುಪುವ ನಿರೀಕ್ಷೆಯಿದ್ದು, ರಾಜ್ಯದಲ್ಲಿಯೂ ಆಹಾರ ಉತ್ಪಾದನೆ 155-160 ದಶಲಕ್ಷ ಟನ್ ಮಟ್ಟದಲ್ಲಿ ಸಾಧನೆಯಾಗಿದೆ ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ಹೇಳಿದರು. ತೋಟಗಾರಿಕೆ ಉತ್ಪಾದನೆ ಹಾಗೂ ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಗೆ ಹೆಚ್ಚಿನ ಒತ್ತು ನೀಡಲಾಗಿದೆ. ರಾಜ್ಯದ 49 ಕೃಷಿ ಉತ್ಪನ್ನಗಳಿಗೆ ಜಿಐ ಟ್ಯಾಗ್ ದೊರೆತಿದೆ. ಇದರಿಂದ ಜಾಗತಿಕ ಮಟ್ಟದಲ್ಲಿ ರಫ್ತು ಅವಕಾಶಗಳು ವೃದ್ಧಿಯಾಗಿವೆ. ಆಹಾರ ಸಂಸ್ಕರಣಾ ಕ್ಷೇತ್ರದಲ್ಲಿ ರಾಜ್ಯ ಮುಂಚೂಣಿಯಲ್ಲಿದ್ದು, 6500 ಘಟಕಗಳನ್ನು ಸ್ಥಾಪಿಸಿ ಸುಮಾರು 90 ಸಾವಿರ ಜನರಿಗೆ ಉದ್ಯೋಗ ಒದಗಿಸಲಾಗಿದೆ. ಕೃಷಿಯನ್ನು ಆಧುನೀಕರಣಗೊಳಿಸುವುದರ ಜೊತೆಗೆ, ಪರಿಸರ ಸ್ನೇಹಿ ಮತ್ತು ಸ್ಥಿರ ಕೃಷಿ ಪದ್ಧತಿಗಳನ್ನು ಉತ್ತೇಜಿಸುವತ್ತ ದಿಟ್ಟ ಹೆಜ್ಜೆ ಇಡುತ್ತಿದೆ ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ತಿಳಿಸಿದರು.

> ಮಾಹಿತಿ ತಂತ್ರಜ್ಞಾನದಲ್ಲಿ ಬೆಂಗಳೂರು ರಾಜಧಾನಿ ಯಾದಂತೆ, ಕೃಷಿ ತಂತ್ರಜ್ಞಾನದಲ್ಲಿಯೂ ಬೆಂಗಳೂರು ರಾಜಧಾನಿಯಾಗಬೇಕು. ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ಕೃತಕ ಬುದ್ಧಿಮತ್ತೆ ಸೇರಿದಂತೆ ಎಲ್ಲಾ ಕ್ಷೇತ್ರಗಳ ತಂತ್ರಜ್ಞಾನವನ್ನು ಬಳಸಿಕೊಳ್ಳಬೇಕು.
> ■ ಸಿದ್ದರಾಮಯ್ಯ, ಸಿಎಂ

ಇಂಜಿನಿಯರಿಂಗ್ ಶುಲ್ಕ ನಿರ್ಧರಿಸಿಲ್ಲ: ಸುಧಾಕರ್

ಬೆಂಗಳೂರು: ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳ ಆಡಳಿತ ಮಂಡಳಿಯವರು ಇಂಜಿನಿಯರಿಂಗ್ ಸೀಟು ಶೇ.20 ಶುಲ್ಕ ಹೆಚ್ಚಳ ಮಾಡಲು ಕೋರಿದ್ದಾರೆ. ಆದರೆ ಈ ಬಗ್ಗೆ ಯಾವುದೇ ನಿರ್ಧಾರ ಕೈಗೊಂಡಿಲ್ಲ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಹೇಳಿದರು.

ಮಲ್ಲೇಶ್ವರನಲ್ಲಿರುವ ಸಿ.ಇ.ಟಿ ಪರೀಕ್ಷಾ ಕೇಂದ್ರಕ್ಕೆ ಭೇಟಿ ನೀಡಿ ವಿದ್ಯಾರ್ಥಿಗಳ ಸ್ವತಃ ಮುಖ ಚಹರೆ ಪತ್ತೆ ತಂತ್ರಜ್ಞಾನದ ಮೊಬೈಲ್ ಆಪ್ ಮೂಲಕ ತಪಾಸಣೆ ನಡೆಸಿ, ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ಅನಾನುಕೂಲವಾಗದಂತೆ, ಪಾರದರ್ಶಕವಾಗಿ ಹಾಗೂ ಯಾವುದೇ ಪರೀಕ್ಷಾ ಅಕ್ರಮ ನಡೆಯದಂತೆ ಕಟ್ಟುನಿಟ್ಟಿನಿಂದ ಸಿಇಟಿ ಪರೀಕ್ಷೆ ನಡೆಸಲಾಗಿದೆ. ವಿದ್ಯಾರ್ಥಿಗಳು ಪರೀಕ್ಷಾ ಕೊಠಡಿ ಆಗಮನದಿಂದ ಪರೀಕ್ಷೆ ಬರೆದು ಮುಗಿಸುವವರೆಗೂ ಸಿ.ಸಿ.ಟಿ.ವಿ ಕ್ಯಾಮರಾಗಳ ಮೂಲಕ ಮಾನಿಟರ್ ಮಾಡಲಾಗಿದೆ ಎಂದು ತಿಳಿಸಿದರು.

ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ನಿರ್ಧಾರ ತೆಗೆದುಕೊಳ್ಳಲಿದೆ. ಈ ಹಿಂದಿನ ಸರ್ಕಾರ ಒಂದೇ ಬಾರೀ ಮೂರು ವರ್ಷಗಳಿಗೆ ವರ್ಷಕ್ಕೆ ಶೇ.10ರಷ್ಟು ಹೆಚ್ಚಳದ ಆದೇಶ ನೀಡಿತ್ತು. ಆದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಅದನ್ನು ರದ್ದುಗೊಳಿಸಿ ಆಯಾ ವರ್ಷಕ್ಕೆ ಸೂಕ್ತವಾಗಿ ಹೆಚ್ಚಳ ಮಾಡಿಕೊಂಡು ಬಂದಿದ್ದೇವೆ.

ಈ ವರ್ಷ ಶೇ.7.5ರಷ್ಟು ಮಾಡುವ ಬಗ್ಗೆ ಇನ್ನೂ ಅಧಿಕೃತ ನಿರ್ಧಾರವಾಗಿಲ್ಲ ಎಂದು ಹೇಳಿದರು.



ಹೆಚ್ಚುವರಿ ಶುಲ್ಕಕ್ಕೆ ಕಡಿವಾಣ

ಖಾಸಗಿ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು ಕೆ.ಇ.ಎ ಯಲ್ಲಿ ಶುಲ್ಕ ಕಟ್ಟಿ ಕಾಲೇಜಿಗೆ ದಾಖಲಾಗಲು ಹೋದಾಗ ನಿಗದಿತ ಸ್ಕಿಲ್ ಲ್ಯಾಬ್ ಶುಲ್ಕಕಿಂತ ಹೆಚ್ಚುವರಿಯಾಗಿ ವಸೂಲಿ ಮಾಡುತ್ತಿರುವುದು ಗಮನಕ್ಕೆ ಬಂದಿದ್ದು, ಈ ಬಗ್ಗೆ ಕಟುನಿಟ್ಟಿನ ಕ್ರಮಕ್ಕೆ ನಿರ್ಧರಿಸಲಾಗಿದೆ. ಈ ಹಿಂದೆ ಇದಕ್ಕೆ ಸಂಬಂಧಪಟ್ಟಂತೆ ರಚಿಸಲಾಗಿದ್ದ ವಿಶ್ರಾಂತ ಕುಲಪತಿ ಕರಿಸಿದ್ದಪ್ಪ ಸಮಿತಿ ನೀಡಿದ್ದ ವರದಿಯ ಹಿನ್ನೆಲೆಯಲ್ಲಿ 5 ಸಾವಿರದಿಂದ 20 ಸಾವಿರದವರೆಗೆ ಆಯಾ ಕಾಲೇಜುಗಳಲ್ಲಿನ ಸ್ಕಿಲ್ ಲ್ಯಾಬ್‌ಗಳನ್ನು ಆಧರಿಸಿ ವಿದ್ಯಾರ್ಥಿಗಳಿಂದ ಶುಲ್ಕ ಪಡೆಯಲು ನಿರ್ಧರಿಸಲಾಗಿತ್ತು. ದೂರು ಬಂದ ಕಾರಣ ಖಾಸಗಿ ಶಿಕ್ಷಣ ಸಂಸ್ಥೆಗಳೊಂದಿಗೆ ಮಾತನಾಡಿ, ಸ್ಕಿಲ್ ಲ್ಯಾಬ್ ಶುಲ್ಕವನ್ನು ಕೆಇಎಯಲ್ಲಿ ಸಂಗ್ರಹಿಸಲು ನಿರ್ಧರಿಸಲಾಗಿದೆ ಎಂದರು.

ವಿಶ್ವದೆಲ್ಲೆಡೆ ವೀರಶೈವ ಸಮಾಜದವರ ಸಂಘಟಿಸಲು ಮಹಾಸಭಾ ಶ್ರಮ
ಇಷ್ಟಲಿಂಗ ಪೂಜೆ ತರಬೇತಿ ಆರಂಭ: ಖಂಡ್ರೆ

ಬೆಂಗಳೂರು: ಅಖಿಲ ಭಾರತ ವೀರಶೈವ ಮಹಾಸಭಾ ವಿಶ್ವದ ಎಲ್ಲ ಕಡೆಗಳಲ್ಲಿ ಇರುವ ಸಮಾಜದವರನ್ನು ಸಂಘಟಿಸಲಾಗುತ್ತಿದೆ. ಸ್ವಾಮೀಜಿಗಳು, ಗಣ್ಯರು ನಮ್ಮ ಸಮಾಜದ ಏಳಿಗೆಗಾಗಿ, ಸಂಘಟನೆ ಗಾಗಿ ಶ್ರಮಿಸಿದ್ದಾರೆ. ವೈಜ್ಞಾನಿಕವಾಗಿ ಇಷ್ಟಲಿಂಗ ಪೂಜೆ ತರಬೇತಿ ಆರಂಭಿಸ ಲಾಗುವುದು ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ತಿಳಿಸಿದ್ದಾರೆ.

ನಗರದ ಟೌನ್‌ಹಾಲ್‌ನಲ್ಲಿ ಅಖಿಲ ಭಾರತ ವೀರ ಶೈವ ಲಿಂಗಾಯತ ಮಹಾಸಭಾ (ರಿ) ರಾಷ್ಟ್ರೀಯ ಮಹಿಳಾ ಮತ್ತು ಯುವ ವಿಭಾಗಗಳ ಪದಗ್ರಹಣ ಕಾರ್ಯಕ್ರಮದಲ್ಲಿ ಮಾತನಾಡಿ, ಬಸವಕಲ್ಯಾಣದಲ್ಲಿ 650 ಕೋಟಿ ರೂ.ವೆಚ್ಚದಲ್ಲಿ ನೂತನ ಅನುಭವ ಮಂಟಪ ನಿರ್ಮಿಸಲಾಗುತ್ತಿದೆ. ಮುಂದಿನ ಬಸವ ಜಯಂತಿಯಂದು ಅನುಭವ ಮಂಟಪ ಉದ್ಘಾಟನೆ ಮಾಡಲಾಗುವುದು ಎಂದು ತಿಳಿಸಿದರು.

ಸಂಸದ ಜಗದೀಶ್ ಶೆಟ್ಟರ್ ಮಾತನಾಡಿ, ಭೀಮಣ್ಣ ಖಂಡ್ರೆಯವರು ಅಧ್ಯಕ್ಷರಾಗಿ ಸಂಘಟನೆ ಮಾಡಿದ ಕಾರಣದಿಂದ ನಮ್ಮ ಸಮಾಜದಲ್ಲಿ ಅತಿ ಹೆಚ್ಚು ಶಾಸಕರು ಆಯ್ಕೆಯಾದರು ವೀರಶೈವ- ಲಿಂಗಾಯತ ಒಡೆಯಬೇಡಿ, ಹಿಂದುಳಿದ ವರ್ಗಕ್ಕೆ ಸೇರಿಸಲು ಹೋರಾಟ ಮಾಡೋಣ, ನಮ್ಮಲ್ಲಿ ಕಚ್ಚಾಟಬೇಡ ಎಂದರು.

ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, ಸ್ವಾಮೀಜಿರವರು ಸಮಾಜ ಬೆಳಸಬೇಕು, ರಾಜಕಾರಣಿಗಳ ಮಾತಿಗೆ ತಲೆ ತೂಗಬಾರದು. ಒಳಪಂಗಡ ಕಚ್ಚಾಟ ನಿಲ್ಲಿಸಿ. ಬಸವಣ್ಣರವರ ತತ್ವ, ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಿ ಎಂದರು.

ಮಹಿಳಾ ಘಟಕದ ರಾಷ್ಟ್ರೀಯ ಅಧ್ಯಕ್ಷೆ ವೀಣಾ ಕಾಶಪ್ಪನವರ ಮಾತನಾಡಿ, ಮಹಿಳಾ ಸಬಲೀಕರಣ, ಸಮಾಜ ಸಂಘಟನೆಗಾಗಿ ಒಳಪಂಗಡದ ಸಹೋದರರನ್ನು ಒಗ್ಗೂಡಿಸಿ ಮನ್ನಡೆಯಲಾಗುವುದು ಎಂದರು.



> ರಾಜ್ಯದಲ್ಲಿ ವೀರಶೈವ-ಲಿಂಗಾಯತ ಸಮಾಜದವರು ಪ್ರತಿ ಜಿಲ್ಲೆ, ಹಳ್ಳಿಗಳಲ್ಲಿ ಇದ್ದಾರೆ. ನಮ್ಮ ಸಮಾಜದ ಹುಡುಗ-ಹುಡುಗಿಯರು ವಿದ್ಯಾವಂತರು ಆದರೆ, ಐಎಎಸ್ ಮತ್ತು ಉನ್ನತ ಹುದ್ದೆಗಳಲ್ಲಿ ನಮ್ಮ ಸಮಾಜದವರು ಕಡಿಮೆ ಇದ್ದಾರೆ.
> ■ ಲಕ್ಷ್ಮೀ ಹೆಬ್ಬಾಳ್ಕರ್, ಸಚಿವೆ

ಗ್ಯಾರಂಟಿಗಳಿಂದ ಆರ್ಥಿಕ ವ್ಯವಸ್ಥೆಗೆ ಧಕ್ಕೆ: ಎಚ್‌ಡಿಕೆ

ಮೈಸೂರು: ಜನರನ್ನು ಮರಳು ಮಾಡಲೆಂದು ಕಾಂಗ್ರೆಸ್ ನೀಡುತ್ತಿರುವ ಗ್ಯಾರಂಟಿಗಳಿಂದ ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳ ಆರ್ಥಿಕ ವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.



ಶುಕ್ರವಾರ ಮೈಸೂರು ಜಿಲ್ಲೆಯ ಕೆ.ಆರ್.ನಗರ ತಾಲೂಕಿನ ಬಸವನಪುರ, ಗೇರದಡ ಹಾಗೂ ಕೆಂಚನಹಳ್ಳಿ ಗ್ರಾಮಗಳ ಮೇಲನಕಟ್ಟೆ ಗಣಪತಿ ದೇವಾಲಯ ಲೋಕಾರ್ಪಣೆ, ಹೊಸ ಅಗ್ರಹಾರ ಗ್ರಾಮದಲ್ಲಿನ ಬಸವೇಶ್ವರಸ್ವಾಮಿ ದೇವಾಲಯದ ಗೋಪುರ ಲೋಕಾರ್ಪಣೆ ಹಾಗೂ ಬಸವೇಶ್ವರ ದೇವರ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ಮಾತ ನಾಡಿ, ಸಾಲ ಮಾಡಿ ತುಪ್ಪ ತಿನ್ನು ಎನ್ನುವಂತೆ ಸರ್ಕಾರ ಲಕ್ಷಾಂತರ ಕೋಟಿ ರೂಪಾಯಿ ಸಾಲ ಮಾಡಿ ಗ್ಯಾರಂಟಿ ಯೋಜನೆಗಳಿಗೆ ಸುರಿಯುತ್ತಿದೆ. ಈಗಾಗಲೇ ಈ ಸರ್ಕಾರ 7.26 ಲಕ್ಷ ಕೋಟಿ ಸಾಲ ಮಾಡಿದೆ. ಈ ಮೂಲಕ ರಾಜ್ಯದ ಪ್ರತಿಯೊಬ್ಬರ ಮೇಲೂ ಕನಿಷ್ಠ 1 ಲಕ್ಷ ಸಾಲ ಹೇರಿದೆ ಎಂದು ದೂರಿದರು.

ಕಾಂಗ್ರೆಸ್ ಸರ್ಕಾರ ಜಾರಿಗೊಳಿಸಿರುವ ಗ್ಯಾರಂಟಿ ಯೋಜನೆಗಳ ಪರಿಣಾಮದಿಂದ ರಾಜ್ಯದ ಖಜಾನೆ ಖಾಲಿಯಾಗಿದೆ. ಸಕಾಲಕ್ಕೆ ಸರ್ಕಾರಿ ನೌಕರರಿಗೆ ಸಂಬಳ ಕೊಡುವ ಶಕ್ತಿಯನ್ನೂ ಸರ್ಕಾರ ಕಳೆದುಕೊಂಡಿದೆ. ಹಾಗೆಯೇ ಗ್ಯಾರಂಟಿಗಳ ಆಮಿಷವೊಡ್ಡಿ ಹಿಮಾಚಲಪ್ರದೇಶದಲ್ಲಿ ಅಧಿಕಾರ ಹಿಡಿದಿರುವ ಕಾಂಗ್ರೆಸ್ ಪಕ್ಷವು ಆ ರಾಜ್ಯವನ್ನೂ ಆರ್ಥಿಕವಾಗಿ ದಿವಾಳಿ ಮಾಡಿದೆ. ಸಂಬಳ ಕೊಡಲು ಹಣವಿಲ್ಲದೆ ಅಧಿಕಾರಿಗಳ ವೇತನದಲ್ಲಿ ಕಡಿತಗೊಳಿಸುತ್ತಿದೆ. ಆ ರಾಜ್ಯದ ಅಧಿಕಾರಿ ವರ್ಗದ ಮುಖ್ಯಸ್ಥರಾಗಿರುವ ಮುಖ್ಯ ಕಾರ್ಯದರ್ಶಿ ವೇತನವನ್ನೂ ಕಡಿತ ಮಾಡಲಾಗಿದೆ ಎಂಬ ವರದಿಗಳು ಮಾಧ್ಯಮದಲ್ಲಿ ಬಂದಿದೆ. ಹಿಮಾಚಲಪ್ರದೇಶದ ನಿರ್ಮಾಣವಾಗಿರುವ ಆ ದುಸ್ಥಿತಿ ಕರ್ನಾಟಕಕ್ಕೂ ಬರಲಿದೆ ಎಂದು ಎಚ್ಚರಿಕೆ ನೀಡಿದರು.

ಆನೆ ಕಾರ್ಯಪಡೆಗೆ 13 ಹೊಸ ವಾಹನ ಸೇರ್ಪಡೆ

ಬೆಂಗಳೂರು: ಆನೆಗಳ ಹಾವಳಿ ಹೆಚ್ಚಿರುವ ಹಾಸನ ಜಿಲ್ಲೆಯಲ್ಲಿ ಸಾರ್ವಜನಿಕರಿಗೆ ಮಾಹಿತಿ ನೀಡಲು ಮತ್ತು ಆನೆಗಳನ್ನು ಕಾಡಿಗೆ ಮರಳಿಸಲು ಜಿಲ್ಲಾ ಆನೆ ಕಾರ್ಯಪಡೆಗೆ 13 ಹೊಸ ವಾಹನಗಳು ಸೇರ್ಪಡೆಯಾಗಿದ್ದು, ಅರಣ್ಯ ಸಚಿವ ಈಶ್ವರ ಖಂಡ್ರೆ ಶುಕ್ರವಾರ ಹಸಿರು ನಿಶಾನೆ ತೋರಿಸಿದರು.

ಬೆಂಗಳೂರು ಮಲ್ಲೇಶ್ವರದ ಅರಣ್ಯ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಚಿವರು, 1 ಸ್ಕಾರ್ಪಿಯೋ, 2 ಕ್ಯಾಂಪರ್ ಹಾಗೂ 10 ದ್ವಿಚಕ್ರವಾಹನಗಳಿಗೆ ಹಸಿರು ನಿಶಾನೆ ತೋರಿ, ತಾವೇ ಬೈಕ್ ಓಡಿಸುವ ಮೂಲಕ ಚಾಲನೆ ನೀಡಿದರು. ಮಾನವ-ವನ್ಯಜೀವಿ ಸಂಘರ್ಷ ನಿಯಂತ್ರಣಕ್ಕೆ ಇದು ಹೊಸ ಉಪಕ್ರಮವಾಗಿದೆ. ಈ ಎಲ್ಲ ವಾಹನಗಳಿಗೆ ವಾಕಿಟಾಕಿ ಮತ್ತು ಧ್ವನಿವರ್ಧಕ ಅಳವಡಿಸಲಾಗಿದೆ.

ಜಿಲ್ಲಾ ಆನೆ ಕಾರ್ಯಪಡೆ ಸಿಬ್ಬಂದಿ ವಾಹನಗಳಲ್ಲಿ ಗಸ್ತು ಮಾಡುತ್ತಾ ಆನೆಗಳು ತೋಟ ಅಥವಾ ವಸತಿ ಪ್ರದೇಶಗಳ ಬಳಿ ಬಂದಾಗ ಸ್ಥಳೀಯರಿಗೆ ಧ್ವನಿವರ್ಧಕಗಳ ಮೂಲಕ ಎಚ್ಚರಿಕೆ ನೀಡುತ್ತಾರೆ ಮತ್ತು ಆನೆಗಳನ್ನು ಕಾಡಿಗೆ ಮರಳಿಸುತ್ತಾರೆ ಎಂದರು.

ಒಂದು ವಾರದಲ್ಲಿ 110 ಕೋಳಿ ಸಾವು | ಉರಿಬಿಸಿಲಿನಿಂದ ಕಕ್ಕುಟೋದ್ಯಮಕ್ಕೆ ಹೊಡೆತ
ರಣಬಿಸಿಲಿಗೆ ನಲುಗಿದ ಫಾರ್ಮ್ ಕೋಳಿ

▶ ಜಗದೀಶ ಎಂ.ಗಾಣಿಗೇರ

ಬಾಗಲಕೋಟೆ: ದಿನದಿಂದ ದಿನಕ್ಕೆ ರಣಬಿಸಿಲಿನ ತಾಪಮಾನ ಹೆಚ್ಚಾಗುತ್ತಿರುವುದರಿಂದ ಜಿಲ್ಲೆಯ ಜನರು ತತ್ತರಿಸಿ ಹೋಗಿದ್ದರೆ ಇತ್ತ ಪ್ರಾಣಿ, ಪಕ್ಷಿಗಳು ಕೂಡ ಬಿಸಿಲಿನ ಹೊಡೆತಕ್ಕೆ ನಲುಗಿ ಹೋಗಿವೆ. ಬಿಸಿಲಿನ ಝಳಕ್ಕೆ ಫಾರ್ಮ್ ಕೋಳಿಗಳು ಸಾವೀಗೀಡಾಗುತ್ತಿವೆ.

ಕಳೆದ ಒಂದು ವಾರದಿಂದ 39 ಡಿಗ್ರಿ ಸೆಲ್ಸಿಯಸ್‌ನಷ್ಟು ತಾಪಮಾನ ದಾಖಲಾಗುತ್ತಿದ್ದು, ಇನ್ನು ಮುಂದಿನ ವಾರವಂತೂ 40 ಡಿಗ್ರಿ ಸೆಲ್ಸಿಯಸ್‌ನಷ್ಟು ಬಿಸಿಲು ಏರಿಕೆಯಾಗುವ ಸಾಧ್ಯತೆಯಿದೆ. ಕೃಷಿಯೊಂದಿಗೆ ಕೋಳಿ ಸಾಕಾಣಿಕೆ ಮಾಡಿಕೊಂಡಿರುವ ರೈತರಿಗೆ ಈಗ ಬಿಸಿಲಿನ ಪರಿಣಾಮ ಫಾರ್ಮ್‌ನಲ್ಲಿರುವ ಕೋಳಿಗಳನ್ನು ಸಾಕುವುದು ದೊಡ್ಡ ಕಷ್ಟವಾಗಿದೆ. ಕೋಳಿ ಫಾರ್ಮ್‌ನಲ್ಲಿನ ಮರಿಗಳು ದೊಡ್ಡದಾಗಬೇಕಾದರೆ 45 ದಿನಗಳು ಬೇಕಾಗುತ್ತವೆ. ಇದಕ್ಕೆ 29 ಡಿಗ್ರಿ ಸೆಲ್ಸಿಯಸ್‌ನಷ್ಟು ಬಿಸಿಲು ಇದ್ದರೆ ಕೋಳಿಗಳಿಗೆ ಅನುಕೂಲಕರ ವಾತಾವರಣ ಇರಲಿದೆ. ಆದರೆ, ಈಗಿನ ಬಿಸಿಲು ನೋಡಿದರೆ 2 ಪಟ್ಟು ಆಗಿದ್ದರಿಂದ ಫಾರ್ಮ್‌ನಲ್ಲಿನ ಕೋಳಿಗಳು ಬಿಸಿಲಿನ ಝಳಕ್ಕೆ ನಲುಗಿ ಹೋಗಿವೆ.



ದಿಗಂತ ವಿಶೇಷ

110 ಕೋಳಿಗಳ ಸಾವು: ಜಿಲ್ಲೆಯ ಗದ್ದನಕೇರಿ ಸಮೀಪದ ನೂರಜಹಾನ್ ಹುಸೇನಸಾಬ್ ರೊಳ್ಳಿಯವರ ತೋಟದಲ್ಲಿ ಇರುವ ಕೋಳಿ ಫಾರ್ಮ್‌ನಲ್ಲಿ ಕಳೆದ ಒಂದು ವಾರದಲ್ಲಿ ಉರು ಬಿಸಿಲು ತಡೆದುಕೊಳ್ಳದೆ 110 ಕೋಳಿಗಳು ಮೃತಪಟ್ಟಿವೆ. ಸಣ್ಣ ಮಕ್ಕಳಂತೆ ಕೋಳಿಗಳನ್ನು ರೈತ ಕುಟುಂಬ ಜೋಪಾನ ಮಾಡಿದರೂ ಬಿಸಿಲಿನ ಝಳ ತಡೆದುಕೊಳ್ಳಲು ಕೋಳಿಗಳಿಗೆ ಆಗುತ್ತಿಲ್ಲ. ಬಿಸಿಲು ಹೆಚ್ಚಾಗುತ್ತಿರುವುದರಿಂದ ಪ್ರತಿದಿನ ಐದಾರು ಕೋಳಿಗಳು ಮೃತಪಡುತ್ತಿವೆ.

ಬಿಸಿಲಿನಿಂದ ನಲುಗಿರುವ ಕೋಳಿಗಳನ್ನು ಫಾರ್ಮ್‌ನಲ್ಲಿ ತಂಪಾಗಿಡಲು ಪ್ರತಿದಿನ ಫಾರ್ಮ್‌ನ ಮೇಲೆ ಸ್ಪಿಂಕ್ಲರ್‌ನಿಂದ ನೀರು ಹರಿಸಲಾಗುತ್ತಿದೆ. ಫಾರ್ಮ್ ತಂಪಾಗಿಡಲು ಕಬ್ಬಿನ ರವದಿ, ತೆಂಗಿನ ಗರಿಯನ್ನು ಮೇಲ್ಛಾವಣಿ ಮೇಲೆ ಹಾಕಲಾಗಿದೆ. ಇನ್ನೂ ಫಾರ್ಮ್ ಒಳಗಡೆ ಕೂಡ ಪಾಗರ (ಸ್ಪಿಂಕ್ಲರ್‌ನಿಂದ ನೀರು) ಮಾಡಲಾಗುತ್ತಿದೆ. ಅಲ್ಲದೆ ಗ್ಲುಕೋಸ್ ಕೂಡ ನೀಡಲಾಗುತ್ತಿದೆ.

ಬಿಸಿಲಿನಿಂದ ಪಾರಾಗಲು ರೈತ ಕುಟುಂಬ ನಿತ್ಯ ಹರಸಾಹಸ ಪಡುವಂತಾಗಿದೆ. ದಿನಕ್ಕೆ ಐದಾರು ಬಾರಿ ಫಾರ್ಮ್‌ನಲ್ಲಿ ಸ್ಪಿಂಕ್ಲರ್‌ನಿಂದ ನೀರು ಬಿಡಲಾಗುತ್ತಿದೆ. ಒಬ್ಬರು ಮಾಡುವ ಕೆಲಸವನ್ನು ಈಗ ಬಿಸಿಲಿನಲ್ಲಿ ಎರಡ್ಮೂರು ಜನ ಮಾಡಬೇಕಾಗಿದೆ. ಇದೇ ರೀತಿ ಬಿಸಿಲು ಮುಂದುವರೆದರೆ ನಮ್ಮ ಫಾರ್ಮ್‌ನಲ್ಲಿರುವ ಕೋಳಿಗಳಿಗೆ ದೊಡ್ಡ ಪ್ರಮಾಣದ ಹಾನಿಯಾಗಲಿದೆ. ಪ್ರಕೃತಿ ಯಾರ ಕೈಯಲ್ಲಿಯೂ ಇಲ್ಲ. ಆದಷ್ಟು ಕೋಳಿಗಳನ್ನು ರಕ್ಷಣೆ ಮಾಡುವತ್ತ ಗಮನ ಹರಿಸುತ್ತಿದ್ದೇವೆ ಎಂದು ರೈತ ಮಹಿಳೆ ನೂರಜಹಾನ್ ಹುಸೇನಸಾಬ್ ರೊಳ್ಳಿ ಹೇಳುತ್ತಾರೆ.

> ನಮ್ಮ ಕೋಳಿ ಫಾರ್ಮ್‌ನಲ್ಲಿ ಸದ್ಯ 1,700 ಕೋಳಿಗಳು ಇದ್ದು ಇದರಲ್ಲಿ ಬಿಸಿಲಿನ ಝಳಕ್ಕೆ ಒಂದು ವಾರದಲ್ಲಿ 110 ಕೋಳಿಗಳು ಮೃತಪಟ್ಟಿವೆ. ಸಣ್ಣ ಮಗುವಿನ ತರಹ ಅವುಗಳನ್ನು ಜೋಪಾನ ಮಾಡುತ್ತಿದ್ದೇವೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಬಿಸಿಲು ಹೆಚ್ಚಾಗಿರುವುದರಿಂದ ಕೋಳಿಗಳಿಗೆ ತಡೆದುಕೊಳ್ಳಲು ಆಗುತ್ತಿಲ್ಲ. ಒಂದು ವಾರದಲ್ಲಿ ಸುಮಾರು 20 ಸಾವಿರ ರೂ.ಗಳಷ್ಟು ನಷ್ಟವಾಗಿದೆ.
> ■ ನೂರಜಹಾನ್ ಹುಸೇನಸಾಬ್ ರೊಳ್ಳಿ, ಮುರನಾಳ ರೈತ ಮಹಿಳೆ

ಯುವತಿಯನ್ನು ನಂಬಿಸಿ ಗರ್ಭವತಿ ಮಾಡಿದ ಆರೋಪ
ತಿಂಗಳಿಗೆ ₹75 ಸಾವಿರ ನೀಡಿ: ಹೈ

ಬೆಂಗಳೂರು: ಭವಿಷ್ಯ ನೋಡಬೇಕಾದ 20 ವರ್ಷದ ಯುವತಿ ಗರ್ಭಿಣಿಯಾಗಿ ಮಗುವಿಗೆ ಜನ್ಮ ನೀಡಿದ್ದಾಳೆ. ಆ ಹುಡುಗಿಯ ಭವಿಷ್ಯವನ್ನು ನೀವು ಸಂಪೂರ್ಣವಾಗಿ ಕೊಂದಿದ್ದೀರಿ. ಆಕೆ ಈಗ ಮಗುವನ್ನು ನೋಡಿಕೊಳ್ಳಬೇಕೇ ಅಥವಾ ತನ್ನ ಭವಿಷ್ಯವನ್ನು ನೋಡಿಕೊಳ್ಳಬೇಕೇ ಎಂದು ಪುತ್ತೂರಿನ ಕೃಷ್ಣರಾವ್ ಅವರನ್ನು ಹೈಕೋರ್ಟ್ ಶುಕ್ರವಾರ ತೀಕ್ಷ್ಣವಾಗಿ ಪ್ರಶ್ನಿಸಿದೆ.

ಇದೇ ವೇಳೆ, ಸಂತ್ರಸ್ತೆ ಹಾಗೂ ಮಗುವಿನ ಅಗತ್ಯತೆ ಪೂರೈಸಲು ಆರೋಪಿಯು ಪ್ರತಿ ತಿಂಗಳು 75 ಸಾವಿರ ರೂ.ಗಳನ್ನು ಪಾವತಿಸಬೇಕು ಎಂಬ ಷರತ್ತಿಗೆ ಒಳಪಟ್ಟಂತೆ ಕೃಷ್ಣರಾವ್ ವಿರುದ್ಧದ ಪ್ರಕರಣದ ಮುಂದಿನ ಎಲ್ಲ ಪ್ರಕ್ರಿಯೆಗಳಿಗೆ ನ್ಯಾಯಾಲಯ ಮಧ್ಯಂತರ ತಡೆ ನೀಡಿದೆ.

ಪ್ರೀತಿಸಿದ ಯುವತಿಯನ್ನು ಮದುವೆಯಾಗುವುದಾಗಿ ನಂಬಿಸಿ ಗರ್ಭವತಿ ಮಾಡಿದ ಆರೋಪ ಸಂಬಂಧ ದಾಖಲಾಗಿರುವ ಪ್ರಕರಣ ರದ್ದು ಕೋರಿ ಕೃಷ್ಣರಾವ್ ಸಲ್ಲಿಸಿರುವ ಅರ್ಜಿಯನ್ನು ಶುಕ್ರವಾರ ವಿಚಾರಣೆ ನಡೆಸಿದ ನ್ಯಾ. ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠವು ಮಧ್ಯಂತರ ಆದೇಶ ಮಾಡಿತು.

ಕೆಲಕಾಲ ಅರ್ಜಿ ಆಲಿಸಿದ ಪೀಠವು ಒಂದು ವೇಳೆ ಈ ಪ್ರಕರಣವು ಕೇವಲ ಇಬ್ಬರ ನಡುವಿನ ಒಮ್ಮತದ ಸಂಬಂಧವಾಗಿದ್ದು, ಮಗು ಜನಿಸುವ ಹಂತಕ್ಕೆ ತಲುಪದೆ ಇದ್ದಿದ್ದರೆ ಹಾಗೂ ತಾಯಿ-ಮಗು ಸಂಕಷ್ಟಕ್ಕೆ ಸಿಲುಕದೆ ಇದ್ದಿದ್ದರೆ, ಈ ನ್ಯಾಯಾಲಯ ಪ್ರಕರಣದ ಪ್ರಕ್ರಿಯೆಗಳಿಗೆ ಸಂಪೂರ್ಣ ತಡೆ ನೀಡುತ್ತಿತ್ತು.

ಆದರೆ, ಈಗ ಪರಿಸ್ಥಿತಿ ಭಿನ್ನವಾಗಿದ್ದು, ಸಂತ್ರಸ್ತೆಯ ಪೋಷಕರು ಮಗುವನ್ನು ನೋಡಿಕೊಳ್ಳುವ ಸ್ಥಿತಿಯಲ್ಲಿ ಇಲ್ಲ. ಅರ್ಜಿದಾರರ ಕೃತ್ಯಗಳಿಂದಾಗಿ ಸಂತ್ರಸ್ತೆ ಮತ್ತು ಮಗು ಇಂದು ಸಂಕಷ್ಟದಲ್ಲಿದ್ದಾರೆ. ಆದ್ದರಿಂದ, ಪ್ರಕರಣ ಇತ್ಯರ್ಥವಾಗುವವರೆಗೆ ಅರ್ಜಿದಾರ ಆರೋಪಿಯು ಸ್ವತಃ, ತನ್ನ ಪೋಷಕರ ಮೂಲಕ ಸಂತ್ರಸ್ತೆ ಹಾಗೂ ಮಗುವಿನ ಅಗತ್ಯತೆಗಳನ್ನು ಪೂರೈಸಲು ಪ್ರತಿ ತಿಂಗಳು 75 ಸಾವಿರ ರೂ. ಪಾವತಿಸಬೇಕು ಎಂಬ ಷರತ್ತಿಗೆ ಒಳಪಟ್ಟು ಅರ್ಜಿದಾರರ ವಿರುದ್ಧದ ಪ್ರಕರಣಕ್ಕೆ ತಡೆ ನೀಡಿ, ಅರ್ಜಿ ವಿಚಾರಣೆಯನ್ನು ಜೂ.5ಕ್ಕೆ ಮುಂದೂಡಿತು. ಮುಂದಿನ ಒಂದು ವಾರದ ಒಳಗೆ 75 ಸಾವಿರ ರೂ.ಗಳ ಮೊದಲ ಕಂತನ್ನು ಸಂತ್ರಸ್ತೆಗೆ ಪಾವತಿಸಬೇಕು ನ್ಯಾಯಾಲಯ ಅರ್ಜಿದಾರರಿಗೆ ನಿರ್ದೇಶಿಸಿದೆ.

ಸಂಪಾದಕೀಯ

ದಾಖಲೆಯ ಮತದಾನ

ತಮಿಳುನಾಡು ವಿಧಾನಸಭೆಗೆ ನಡೆದ ಏಕಹಂತದ ಮತದಾನವು ಶೇ.85ಕ್ಕಿಂತ ಹೆಚ್ಚಿನ ಮತದಾನವನ್ನು ದಾಖಲಿಸಿರುವುದು ಮತ್ತು ಪಶ್ಚಿಮ ಬಂಗಾಳದ ಮೊದಲ ಹಂತದ ಚುನಾವಣೆಯಲ್ಲಿ ದಾಖಲೆಯ ಶೇ.92.8 ಮತದಾನವಾಗಿರುವುದು ಭಾರತದ ಪ್ರಜಾತಂತ್ರವು ಅದೆಷ್ಟು ಸಂವೇದನಾಶೀಲವಾಗಿದೆ ಹಾಗೂ ಜನರು ಅದರಲ್ಲಿ ಹೇಗೆ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ ಎನ್ನುವುದಕ್ಕೆ ನಿದರ್ಶನ. ತಮಿಳುನಾಡಿನ ಮತದಾನವು ಶಾಂತಿಯುತವಾಗಿದ್ದರೆ, ಪ.ಬಂಗಾಳದಲ್ಲಿ ಕೆಲವೆಡೆಗಳಲ್ಲಿ



ಸಣ್ಣಪುಟ್ಟ ಘರ್ಷಣೆ ನಡೆಯಿತಾದರೂ ಉಳಿದಂತೆ ಅಲ್ಲಿನ ಚುನಾವಣೆಯೂ ಯಶಸ್ವಿಯಾಗಿಯೇ ನಡೆಯಿತೆನ್ನಬಹುದು. ಪ.ಬಂಗಾಳದಲ್ಲಿ ಮೊದಲ ಹಂತದಲ್ಲಿ 152 ಸ್ಥಾನಗಳಿಗೆ ಮತದಾನ ನಡೆದಿದ್ದು, ಇಷ್ಟು ದೊಡ್ಡ ಪ್ರಮಾಣದಲ್ಲಿ ಮತದಾನ ನಡೆದಿರುವುದು ಇದೇ ಪ್ರಥಮ.

ದಾಖಲೆ ಪ್ರಮಾಣದಲ್ಲಿ ಮತದಾನ ನಡೆಯಲು ಕಾರಣವೇನು ಹಾಗೂ ಹೆಚ್ಚು ಮತದಾನವಾಗಿರುವುದು ಯಾವ ಪಕ್ಷಕ್ಕೆ ಹೆಚ್ಚು ಲಾಭ ತರಲಿದೆ ಎಂಬುದರ ಲೆಕ್ಕಾಚಾರವೂ ಈಗ ನಡೆದಿದೆ. ಬಹುತೇಕವಾಗಿ ಅಧಿಕ ಮತದಾನವಾಗಿರುವುದನ್ನು 'ಆಡಳಿತ ವಿರೋಧಿ ಅಲೆ'ಯ ಪ್ರಭಾವವೆಂದು ವಿಶ್ಲೇಷಿಸಲಾಗುತ್ತದಾದರೂ, ಎಲ್ಲಾ ಬಾರಿ ಅದನ್ನೇ ಪರಿಗಣಿಸಲಾಗುವುದಿಲ್ಲ. ಬಿಜೆಪಿಯಂತೂ ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಆಡಳಿತ ಉರುಳುವುದು ಖಚಿತ, ಆಕೆಯ ಆಡಳಿತದಿಂದ ರೋಸಿರುವ ಜನರೇ ಈ ಪ್ರಮಾಣದಲ್ಲಿ ಮತದಾನ ಮಾಡಿದ್ದಾರೆ ಎಂದು ಹೇಳಿಕೊಂಡಿದೆ. ಆದರೆ ಅತಿ ಹೆಚ್ಚ ಮತದಾನವಾಗಿರುವುದು ತಮಗೇ ಲಾಭ ಎಂದು ಟಿಎಂಸಿ ಹೇಳಿಕೊಂಡಿದೆ. ಇತ್ತ ತಮಿಳುನಾಡಿನಲ್ಲಿ ಅಧಿಕ ಮತದಾನ ಆಗಿರುವುದು ಆಡಳಿತಾರೂಢ ಡಿಎಂಕೆಗೆ ತುಸು ತಲೆಬೇನೆ ತಂದಿದ್ದರೆ ಅದು ಸಹಜವೇ. ಇಲ್ಲಿನ ರಾಜಕೀಯ ವೀಕ್ಷಕರು ಮಾತ್ರ ಭಾರೀ ಮತದಾನವು ಡಿಎಂಕೆಗೆ ಪ್ರತಿಕೂಲವಾಗಲಿದೆ ಎಂದು ವಿಶ್ಲೇಷಿಸುತ್ತಿದ್ದಾರೆ.

ಈ ಬಾರಿಯ ವಿಧಾನಸಭಾ ಚುನಾವಣೆಗಳಲ್ಲಿ ಅಧಿಕ ಮತದಾನವಾಗಲು 'ಮತದಾರ ಪಟ್ಟಿಯ ವಿಶೇಷ ಪರಿಷ್ಕರಣೆ' (ಎಸ್‌ಐಆರ್) ಕೂಡಾ ಸ್ವಲ್ಪ ಮಟ್ಟಿಗೆ ಕಾರಣವಾಗಿದೆ ಎಂಬುದನ್ನು ತಳ್ಳಿ ಹಾಕಲಾಗುವುದಿಲ್ಲ. ಮತದಾರ ಪಟ್ಟಿಯಲ್ಲಿ ಮತದಾರರ ಸಂಖ್ಯೆಯು ಈಗ ಹಿಂದಿನದಕ್ಕಿಂತ ಕ್ಷೀಣಿಸಿರುವುದರಿಂದ ಮತದಾನ ಪ್ರಮಾಣವು ಅಧಿಕವಾಗಿ ದಾಖಲಾಗುವುದು ಸಹಜವೇ ಆಗಿದೆ.

ಈ ವಿಶ್ಲೇಷಣೆಗಳು ಯಾವ ಬಗೆಯಲ್ಲೇ ಫಲಿತಾಂಶ ನೀಡಲಿ, ಒಂದು ವಿಷಯವನ್ನು ಮಾತ್ರ ಅಲ್ಲಗಳೆಯಲಾಗುವುದಿಲ್ಲ. ಭಾರತದ ಪ್ರಜಾತಂತ್ರವು ಜಗತ್ತಿಗೇ ಅತ್ಯಂತ ಮಾದರಿಯಾಗಿರುವುದನ್ನು ಇದು ತೋರ್ಪಡಿಸಿದೆ. ದೇಶದ ಜನರು ತಮ್ಮ ಸರಕಾರವನ್ನು ಆರಿಸುವ ನಿಟ್ಟಿನಲ್ಲಿ ಅತ್ಯಂತ ಉತ್ಸಾಹದಿಂದ ಕಾರ್ಯಾಚರಿಸಿರುವುದು ಇದರಿಂದ ಕಂಡುಬರುತ್ತದೆ. ಪಶ್ಚಿಮ ಬಂಗಾಳದಂತಹ ರಾಜ್ಯದಲ್ಲಿ ಚುನಾವಣಾ ಅಕ್ರಮ, ಹಿಂಸೆ ಮೊದಲಾದವು ಕೂಡಾ ತಹಬಂದಿಗೆ ಬಂದಿರುವುದನ್ನು ಇದು ತೋರ್ಪಡಿಸಿದೆ.

ಸಹಸ್ರಾರ ಮತ್ತು ಸೂರ್ಯ ರೇಖೆ

ಕಠಿಣ ಶ್ರಮ, ಸಾಧನೆ, ತಪಸ್ಸಿನಿಂದ ಹಣೆಬರೆಹವನ್ನು ಕೂಡಾ ಬದಲಾಯಿಸಲು ಸಾಧ್ಯ.

ಪೂರ್ಣ ಪರಿಪೂರ್ಣ

• ಪೂರ್ಣಪ್ರಜ್ಞ ಬೇಳೂರು
poornaprajnabelur@gmail.com



ಸಹಸ್ರಾರ ಎಂದರೆ ನೀವು ಪ್ರಕೃತಿಯೊಂದಿಗೆ, ಪರಮಾತ್ಮನೊಂದಿಗೆ, ಈ ವಿಶ್ವದೊಳಗೆ ಲೀನವಾಗುವ ಕೇಂದ್ರ. ಬರೀ ಲೀನವಾಗುವ ಮಾತ್ರವಲ್ಲ, ಮತ್ತೆ ಹಿಂತಿರುಗಿ ಲೌಕಿಕಕ್ಕೆ ಬರುವ ಮತ್ತೆ ಲೀನವಾಗುವ ಹೀಗೆ ಲೌಕಿಕದಲ್ಲಿದ್ದೂ ಅಲೌಕಿಕವನ್ನು ಪಡೆಯುವ ಸಾಧನೆ. ಉನ್ನತ ಪ್ರಜ್ಞೆಯನ್ನು ಹೊಂದುವ ಪ್ರದೇಶ. ಅದನ್ನು ನೀವು ಹೊಂದುವಿರಾದರೆ ನಿಮ್ಮ ಕೈಯಲ್ಲಿರುವ ಸೂರ್ಯ ರೇಖೆಯು ಅದನ್ನು ತೋರಿಸುತ್ತದೆ. ಮಣಿಕಟ್ಟಿನಿಂದ ಬರುವ ಸೂರ್ಯ ರೇಖೆಯು ಸೂರ್ಯ ಪರ್ವತವನ್ನು ತಲುಪಿ ಅಲ್ಲಿ ತ್ರಿಶೂಲದಂತೆ ಮೂರು ಕವಲೊಡೆದರೆ ನಿಮಗೆ ಕೈಲಾಸಪ್ರಾಪ್ತಿ. ಅಂದರೆ ಸಹಸ್ರಾರದಲ್ಲಿರುವ ಸಹಸ್ರ ದಳಗಳ ಕಮಲ ನಿಮ್ಮಲ್ಲಿ ಅರಳುವುದು ಖಚಿತ. ಒಂದೊಮ್ಮೆ ತ್ರಿಶೂಲದ ಬದಲು ನಕ್ಷತ್ರ ಚಿಹ್ನೆಯನ್ನು ಹೊಂದಿದ್ದರೆ ಆಗಲೂ ಸಹಾ ನಿಮಗೆ ಕೈವಲ್ಯ ಪ್ರಾಪ್ತಿಯಾಗುತ್ತದೆ. ಬದುಕಿರುವಾಗಲೇ ನೀವು ಸಹಸ್ರಾರದಲ್ಲಿರುವ ಸಹಸ್ರ ದಳಗಳ ಕಮಲವು ವಿಕಸಿಸುವುದನ್ನು ಕಾಣುವಿರಿ.

ಇದು ಅತ್ಯುನ್ನತ ಸ್ಥಿತಿ. ಇಲ್ಲಿ ವ್ಯಕ್ತಿಯು ಲೌಕಿಕದ ಯಾವ ಅಪೇಕ್ಷೆಯನ್ನೂ ಸಹಾ ಹೊಂದಿರುವುದಿಲ್ಲ. ಕೇವಲ ಆಧ್ಯಾತ್ಮಿಕ ಜ್ಞಾನವನ್ನು ಪಡೆದುಕೊಂಡು ಪಾರಮಾರ್ಥಿಕ ಸಂವೇದನೆಯನ್ನು ಪಡೆಯುತ್ತಿರುತ್ತಾನೆ. ಈ ಮೂಲಕ ವಿಶ್ವವ್ಯಾಪಿ ಪ್ರಸಿದ್ಧಿಯನ್ನು ಪಡೆಯುತ್ತಾನೆ.

ಹೀಗೆ ಹಸ್ತದಲ್ಲಿರುವ ಸೂರ್ಯ ರೇಖೆಯು ದೇಹದೊಳಗೆ ಅಂತರ್ಗತವಾಗಿರುವ ಕುಂಡಲಿನಿ ಶಕ್ತಿಯೊಂದಿಗೆ ಬೆರೆತು ಜೀವನವನ್ನು ದಿವ್ಯವಾಗಿಸುತ್ತದೆ. ಯಾವ ಚಕ್ರವು ಹೆಚ್ಚು ಸಕ್ರಿಯವಾಗಿದೆ ಎನ್ನುವುದನ್ನು ಸೂರ್ಯ ರೇಖೆಯ ಆರಂಭದ ಸ್ಥಾನವು ತಿಳಿಸುತ್ತದೆ. ನೀವು ಕುಂಡಲಿನಿ ಸಾಧನೆಯನ್ನು ಮಾಡುತ್ತಾ ಬಂದಂತೆ ಸೂರ್ಯ ರೇಖೆಯು ಇನ್ನಷ್ಟು ಸ್ಪಷ್ಟವಾಗುತ್ತಾ ಹೋಗುತ್ತದೆ. ಅದರ ಮೇಲಿನ ಮಚ್ಚೆಗಳು, ಕಪ್ಪು ಕಲೆಗಳು, ಕತ್ತರಿಸಿದ ಗುರುತುಗಳು ಮಾಯವಾಗುತ್ತಾ ರೇಖೆಯು ಪ್ರಕಾಶಮಾನವಾಗುತ್ತಾ ಹೋಗುತ್ತದೆ.

ಸಾಧನೆಯ ಪ್ರತಿಫಲ

ಕುಂಡಲಿನಿ ಶಕ್ತಿಯನ್ನು ನಮ್ಮ ಆಂತರಿಕ ಜಾಗೃತಿಗೆ ಉತ್ತೇಜಿಸುತ್ತೇವೆ. ಹೀಗೆ ಉತ್ತೇಜನ ನೀಡಿದಂತೆ ಸೂರ್ಯ ರೇಖೆಯು ಬಲಗೊಳ್ಳುತ್ತಾ ಹೋಗುತ್ತದೆ. ಅದನ್ನು ನೀವು ನಿಮ್ಮ ಕೈಯಲ್ಲಿ ಕಾಣಬಹುದು. ಸೂರ್ಯ ರೇಖೆಯೇ ಇಲ್ಲದವರಿಗೂ ಸಹಾ ಕುಂಡಲಿನಿ ಜಾಗೃತವಾದರೆ ಸೂರ್ಯ ರೇಖೆಯು ಮೂಡುತ್ತಾ ಹೋಗುತ್ತದೆ. ಅವರ ಸಾಧನೆಯು ಹೆಚ್ಚುತ್ತಾ ಹೋದಂತೆ ಮಣಿಕಟ್ಟಿನಿಂದಲೇ ಉಂಗುರ ಬೆರಳಿನವರೆಗೂ ವ್ಯಾಪಿಸುತ್ತದೆ. ಅಂದರೆ ನಿಮ್ಮ ಸಾಧನೆಯು ನಿಮ್ಮ ಭವಿಷ್ಯವನ್ನು ರೂಪಿಸಿದಂತೆ. ನಿಮ್ಮ ತಪಸ್ಸು ನಿಮ್ಮ ಶಕ್ತಿಯನ್ನು ಹೆಚ್ಚಿಸಿದಂತೆ. ನಿಮ್ಮ ಶ್ರಮವು ನಿಮಗೆ ಯಶಸ್ಸನ್ನು ತಂದುಕೊಟ್ಟಂತೆ. ಸೂರ್ಯ ರೇಖೆಯು ದಟ್ಟವಾಗುತ್ತಾ ಹೋಗುತ್ತದೆ.

ಒಂದೊಮ್ಮೆ ನಿಮ್ಮ ಹಣೆಬರಹದಲ್ಲಿ ಇರುವುದೇ ಆಗುತ್ತದೆ ಎಂದು ನೀವು ಸಾಧನೆ ಮಾಡುವುದನ್ನು, ಶ್ರಮ ಪಡುವುದನ್ನು, ತಪಸ್ಸು ಮಾಡುವುದನ್ನು ಮಾಡದಿದ್ದರೆ ಹಣೆಬರೆಹ ಎಂದಿಗೂ ಬದಲಾಗುವುದಿಲ್ಲ. ಹೌದು ಹಣೆಬರೆಹ ವನ್ನೂ ಸಹಾ ಬದಲಾಯಿಸಲು ಕಠಿಣ ಶ್ರಮ, ಸಾಧನೆ, ತಪಸ್ಸಿನಿಂದ ಸಾಧ್ಯ ಎಂದು ಪುರಾಣಗಳಲ್ಲಿ ನೀವು ಹಿಂದೆಯೇ ಓದಿದ್ದೀರಿ. ನೀವು ಇದನ್ನೆಲ್ಲಾ ಮಾಡಿದಂತೆ ಸೂರ್ಯ ರೇಖೆಯು ದೋಷ ರಹಿತವಾಗಿ, ಪ್ರಕಾಶಮಾನವಾಗಿ ಕಾಣಿಸುತ್ತದೆ. ಕುಂಡಲಿನಿ ಶಕ್ತಿಯು ಕಲ್ಮಶಗಳಿಂದ ಮುಕ್ತವಾಗಿ ಶುದ್ಧವಾಗುತ್ತಾ ಹೋಗುತ್ತದೆ.

ಸೂರ್ಯ ರೇಖೆಯು ನಿಮ್ಮ ಅಂಗೈಯಲ್ಲಿ ಇರುವುದು ಒಂದು ಲೌಕಿಕ ಸಂಗತಿ ಮಾತ್ರವಲ್ಲ, ಅದು ನಿಮ್ಮ ದೇಹವನ್ನು ಪ್ರತಿಬಿಂಬಿಸುವ ಗೆರೆಯಾಗಿದೆ. ಏಳು ಚಕ್ರಗಳ ವಿಕಾಸದ ಹಾದಿಯಾಗಿದೆ. ಕುಂಡಲಿನಿಯು ಒಂದೊಂದೇ ಚಕ್ರವನ್ನು ದಾಟಿದಂತೆ ಸೂರ್ಯ ರೇಖೆಯೇ ಬದಲಾಗುತ್ತದೆ. ವ್ಯಕ್ತಿಯ ಭವಿಷ್ಯವೇ ಬದಲಾಗುತ್ತದೆ. ಅವರ ಪ್ರಭಾವ ಎಲ್ಲೆಡೆಗೂ ಪಸರಿಸುತ್ತದೆ. ಅವರು ನಾಯಕರಾಗುತ್ತಾರೆ. ಅವರು ದಾರ್ಶನಿಕರಾಗುತ್ತಾರೆ. ಅವರು ಯೋಗಿಗಳಾಗುತ್ತಾರೆ. ಅಧಿಕಾರಿಗಳಾಗುತ್ತಾರೆ. ಪ್ರೇಮಮಯಿಗಳಾಗುತ್ತಾರೆ. ಶ್ರೀಮಂತರಾಗುತ್ತಾರೆ. ಕಲಾವಿದರಾಗುತ್ತಾರೆ. ಸಂಗೀತಸಾಮ್ರಾಟರಾಗುತ್ತಾರೆ. ಶ್ರೇಷ್ಠ ನಟರಾಗುತ್ತಾರೆ. ಶಿಕ್ಷಣ ತಜ್ಞರಾಗುತ್ತಾರೆ.

ಚಿಹ್ನೆಗಳಿಂದ ಅಭ್ಯುದಯ

ಸೂರ್ಯ ರೇಖೆಯ ಮೇಲೆ ಅಥವಾ ತುದಿಯಲ್ಲಿ ಕೆಲವು ಚಿಹ್ನೆಗಳು ಇದ್ದರೆ ಅದರ ಶಕ್ತಿಯು ದ್ವಿಗುಣವಾಗುತ್ತದೆ ಅಥವಾ ಅಪಾರವಾಗುತ್ತದೆ.

ಚೌಕದ ಚಿಹ್ನೆ: ಇದೊಂದು ರಕ್ಷಾ ಚಿಹ್ನೆ. ಯಾವುದೇ ತೊಡಕುಗಳನ್ನು ಈ ಚೌಕ ಚಿಹ್ನೆ ನಿವಾರಿಸುತ್ತದೆ. ಉದಾಹರಣೆಗೆ ದ್ವೀಪ ಚಿಹ್ನೆಯಿಂದ ಉಂಟಾಗುವ ಕಂಟಕಗಳನ್ನು ಈ ಚೌಕ ಚಿಹ್ನೆ ನಿಷ್ಕ್ರಿಯಗೊಳಿಸುತ್ತದೆ. ಅಪವಾದ ಬರುವುದನ್ನು ತಡೆಯುತ್ತದೆ. ದೊಡ್ಡ ನಷ್ಟ ಆಗುವುದನ್ನು ತಪ್ಪಿಸುತ್ತದೆ. ಒಂದೊಮ್ಮೆ ತಡೆಗಳು ಬಂದರೂ ಅದು ತಾತ್ಕಾಲಿಕವಾಗಿರುತ್ತದೆ. ಬಳಿಕ ಮರುಚೇತರಿಕೆ ಉಂಟಾಗುವಂತೆ ಚೌಕ ಚಿಹ್ನೆಯು ನೋಡಿಕೊಳ್ಳುತ್ತದೆ. ಕಾನೂನಿನ ತೊಡಕುಗಳು, ಮಾನಹಾನಿ, ಬಂಧನ ಇತ್ಯಾದಿಗಳು ಬಂದರೂ ಸಹಾ ಚೌಕದ ಚಿಹ್ನೆಯು ನಿಮ್ಮ ಸೂರ್ಯ ರೇಖೆಯ ಮೇಲೆ ಇದ್ದರೆ ತಡೆಯುತ್ತದೆ. ಅಂದರೆ ಸಮಾಜದಲ್ಲಿ ನೀವು ತುಂಬಾ ಹೆಸರು ಮಾಡುವ ಕಾರಣ ಅವುಗಳೆಲ್ಲಾ ಬಂದಂತೆ ಕರಗಿಹೋಗುತ್ತವೆ. ಚೌಕವು ಸೂರ್ಯ ರೇಖೆಯನ್ನು ಸಂಪೂರ್ಣವಾಗಿಸುತ್ತುವರೆದಿದ್ದರೆ; ರಕ್ಷಣೆ ಬಲವಾಗಿರುತ್ತದೆ. ಅದರೊಳಗೆ ದ್ವೀಪವಾಗಲೀ, ಅಡ್ಡಗೆರೆಗಳಾಗಲೀ ಇದ್ದರೆ ಕಷ್ಟ ಬರುತ್ತದೆ ಮತ್ತು ಅದರಿಂದ ಬೇಗ ಪಾರಾಗುತ್ತೀರಿ. ಚೌಕವು ಸಣ್ಣದಾಗಿದ್ದು ಸೂರ್ಯ ರೇಖೆಯು ಅದಕ್ಕಿಂತಲೂ ಮುಂದುವರೆದಿದ್ದರೆ, ಯಶಸ್ಸು ಮತ್ತೆ ಮತ್ತೆ ಸಿಗುತ್ತದೆ. ಸೂರ್ಯ ರೇಖೆ ನಿಂತರೆ ಆ ಕ್ಷೇತ್ರದ ಬಗ್ಗೆ ನಿಮ್ಮ ಆಸಕ್ತಿ ಹೋಗುತ್ತದೆ. ಚೌಕವು ಎಂತಹಾ ಅಶುಭವನ್ನೂ ಸಹಾ ಶುಭಕರವಾಗಿ ಮಾಡುತ್ತದೆ.

ನಕ್ಷತ್ರ ಚಿಹ್ನೆ: ಸೂರ್ಯ ರೇಖೆಯ ಮೇಲೆ ಎಲ್ಲಿಯಾದರೂ ನಕ್ಷತ್ರ ಚಿಹ್ನೆ ಇದ್ದರೆ ಅಂತಹಾ ವ್ಯಕ್ತಿಯು ವಿಶ್ವ ವಿಖ್ಯಾತರಾಗುತ್ತಾರೆ. ಮಣಿಕಟ್ಟಿನ ಬುಡದಲ್ಲೇ ಇದ್ದರೆ ಅವರು ಬಾಲ್ಯದಲ್ಲೇ ಪ್ರಖ್ಯಾತಿಯನ್ನು ಪಡೆಯುತ್ತಾರೆ. ಅಂದರೆ ನಕ್ಷತ್ರವು ರಾಜಯೋಗದ ಸೂಚನೆ. ಕೇವಲ ಒಂದು ಘಟನೆ ಮಾತ್ರ ಸಾಕು ನಿಮಗೆ ಹೆಸರು, ಹಣ ಮತ್ತು ಮನ್ನಣೆ ಸಿಗುತ್ತದೆ. ವಿಶೇಷವಾಗಿ ಕಲಾ ಪ್ರಕಾರ, ಮಾಧ್ಯಮ, ಸಾರ್ವಜನಿಕ ಕ್ಷೇತ್ರಗಳಲ್ಲಿ ಇರುವವರಿಗೆ ಇದು ತುಂಬಾ ಸಹಾಯ ಮಾಡುತ್ತದೆ. ಅವರ ಜೀವನದಲ್ಲಿ ದೊಡ್ಡ ಬ್ರೇಕ್ ನೀಡುತ್ತದೆ. ಸೂರ್ಯ ರೇಖೆಯ ತುತ್ತತುದಿಯಲ್ಲಿ ನಕ್ಷತ್ರ ಇದ್ದರೆ ಅವರು ಮರಣಾನಂತರವೂ ಅನೇಕ ವರ್ಷಗಳ ಕಾಲ ಜಗತ್ತಿನಲ್ಲೇ ನೆನಪಲ್ಲಿ ಉಳಿಯುತ್ತಾರೆ. ದೊಡ್ಡ ಕೀರ್ತಿಯನ್ನು ಧನ ಲಾಭವನ್ನೂ ಸಹಾ ಹೊಂದುತ್ತಾರೆ. ಸೂರ್ಯ ರೇಖೆಯ ಮಧ್ಯದಲ್ಲಿ ನಕ್ಷತ್ರ ಇದ್ದರೆ, ಮಧ್ಯವಯಸ್ಸಿನಲ್ಲಿ ಏರಿಕೆ ಕಾಣುತ್ತದೆ. ಕೆಲವು ಆಘಾತವೂ ಉಂಟಾಗಬಹುದು. ಆದರೆ ನಕ್ಷತ್ರದ ಬಳಿಕ ಸಹಾ ರೇಖೆ ಮುಂದುವರೆದಿರಬೇಕು. ಇಲ್ಲದಿದ್ದರೆ ಅಪವಾದ ಕಟ್ಟಿಟ್ಟದ್ದು. ಹಾಗೂ ವಿವಾದ ಪದೇ ಪದೇ ಬರುತ್ತದೆ.

ನಕ್ಷತ್ರ ಎಂದರೆ ವಿಶೇಷವಾದ ಶಕ್ತಿ. ಅದನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ನಿಮ್ಮೊಳಗೆ ಇರಬೇಕಾದ್ದು ತುಂಬಾ ಮುಖ್ಯ. ಅದಕ್ಕಾಗಿಯೇ ಕುಂಡಲಿನಿಯನ್ನು ನೀವು ಸಾಧನೆ ಮಾಡಬೇಕು. ಅನ್ಯಥಾ ನಿತ್ಯ ಅನುಷ್ಠಾನವನ್ನಾದರೂ ಮಾಡಬೇಕು. ಸೂರ್ಯ ರೇಖೆಯು ದುರ್ಬಲವಾಗಿದ್ದರೆ ಅಥವಾ ಹಾನಿಗೊಳಗಾಗಿದ್ದರೆ ಆಗ ನಕ್ಷತ್ರವು ವ್ಯತಿರಿಕ್ತವಾದ ಪರಿಣಾಮವನ್ನು ಮಾಡಬಹುದು. ಜೈಲಿಗೂ ಸೇರಿಸಬಹುದು. ಚೌಕವು ಯಶಸ್ಸನ್ನು ನೀಡಿದರೆ, ನಕ್ಷತ್ರವು ಹಠಾತ್ ಯಶಸ್ಸನ್ನು ನೀಡುತ್ತದೆ. ಎರಡೂ ಒಂದೊಮ್ಮೆ ಇದ್ದರೆ ಸಮತೋಲನ. ಅಥವಾ ದುರ್ಬಲ ಸೂರ್ಯ ರೇಖೆಯ ಮೇಲಿನ ನಕ್ಷತ್ರದಿಂದ ಆಗುವ ಹಿನ್ನಡೆಯನ್ನು ಚೌಕವು ತಪ್ಪಿಸುತ್ತದೆ. ಸೂರ್ಯ ರೇಖೆಯು ಅಲ್ಲಲ್ಲಿ ಕತ್ತರಿಸಿ ಮುಂದುವರೆಯದೇ ಹೋಗಿದ್ದರೆ, ಆಗ ಅದರಿಂದಾಗುವ ಅನಾಹುತವನ್ನು ತಡೆಯುವುದು ಕಷ್ಟ.

ತ್ರಿಕೋನ ಚಿಹ್ನೆ: ಸೂರ್ಯ ರೇಖೆಯ ಮೇಲೆ ಎಲ್ಲಾದರೂ ತ್ರಿಕೋನದ ಚಿಹ್ನೆ ಇದ್ದರೆ ಆತ ಕೀರ್ತಿ ಪಿಪಾಸುವಾಗಿರುತ್ತಾನೆ. ಅಂತಹವರನ್ನು ವಿಶೇಷ ಪ್ರತಿಭೆ ಎಂದು ಕರೆಯಬಹುದು. ಯಶಸ್ಸು, ಕೀರ್ತಿಗಳನ್ನು ಅವರು ತಮ್ಮ ಸ್ವಂತ ಬಲದಿಂದ ಪಡೆಯುತ್ತಾರೆ. ಯಾವುದಾದರೂ ಒಂದು ಆವಿಷ್ಕಾರವನ್ನು ಮಾಡಿಯೇ ಸಿದ್ಧ. ದೊಡ್ಡ ದೊಡ್ಡ ಐಡಿಯಾಗಳು ಹೊಳೆದು ಅವರು ಅದನ್ನು ತಕ್ಷಣದಲ್ಲಿಯೇ ಕಾರ್ಯರೂಪಕ್ಕೆ ತರುತ್ತಾರೆ. ಅದೃಷ್ಟವನ್ನು ಇವರು ನಂಬುವುದೇ ಇಲ್ಲ. ಬದಲಿಗೆ ತಮ್ಮ ಶ್ರಮದ ಮೇಲೆ ನಂಬಿಕೆ. ಸ್ವ ಪ್ರಯತ್ನದಿಂದ ಇವರು ಎಲ್ಲವನ್ನೂ ಸಾಧಿಸುತ್ತಾರೆ. ತ್ರಿಕೋನವು ದ್ವೀಪ, ಕತ್ತರಿಸಿರುವುದು, ಮಚ್ಚೆ ಇವುಗಳ ಹಿಂದೆ ಇದ್ದರೆ ಹಣಕಾಸಿನ ನಷ್ಟ ಮತ್ತು ಅಪವಾದ ಬಂದೇ ಬರುತ್ತದೆ. ಅದೇ ಇವೆಲ್ಲದರ ಬಳಿಕ ತ್ರಿಕೋನ ಇದ್ದರೆ ಎಲ್ಲವನ್ನೂ ಸಹಾ ಸರಿತೂಗಿಸುವ ಶಕ್ತಿ ವ್ಯಕ್ತಿಯಲ್ಲಿ ಉಂಟಾಗುತ್ತದೆ. ಯಾವುದೇ ಕೆಲಸವನ್ನೂ ಮಾಡುವುದಾದರೂ ಇವರು ಆಲೋಚನೆ ಮಾಡದೇ, ತಂತ್ರವನ್ನು ರೂಪಿಸದೇ ಮಾಡುವುದೇ ಇಲ್ಲ. ಸೂರ್ಯ ರೇಖೆಯ ತುದಿಯಲ್ಲಿ ತ್ರಿಕೋನ ಇದ್ದರೆ ವೃದ್ಧಾಪ್ಯದಲ್ಲೂ ಅವರೇ ಗಳಿಸಿದ ಆಸ್ತಿಯು ಅವರನ್ನು ರಕ್ಷಣೆ ಮಾಡುತ್ತದೆ. ಮಧ್ಯದಲ್ಲಿ ಇದ್ದರೆ, ಮಧ್ಯ ವಯಸ್ಸಿನಲ್ಲಿ ಕೀರ್ತಿ, ಗೌರವ, ಅಧಿಕಾರ, ಹಣ ಎಲ್ಲಾ ಹರಿದು ಬರುತ್ತದೆ. ದೊಡ್ಡ ಅವಕಾಶ, ಪ್ರಮೋಶನ್, ಉನ್ನತಹುದ್ದೆ ಎಲ್ಲವೂ ಸಿಗುತ್ತದೆ. ಆರಂಭದಲ್ಲೇ ಇದ್ದರೆ ಅವರು ಶಾಲೆಯಲ್ಲಿ ಅತ್ಯುತ್ತಮ, ಪ್ರತಿಭಾವಂತ ವಿದ್ಯಾರ್ಥಿ ಆಗಿರುತ್ತಾರೆ.

ತ್ರಿಕೋನವು ಸ್ಪಷ್ಟವಾಗಿದ್ದರೆ ಮಾತ್ರ ಪೂರ್ಣಫಲ ದೊರೆಯುತ್ತದೆ. ಅರ್ಧವಾಗಿದ್ದರೆ, ಗೆರೆಗಳು ಎತ್ತೆತ್ತಲೋ ಹೋಗಿದ್ದರೆ, ಅಡ್ಡಗೆರೆಗಳು ಇದ್ದರೆ ಫಲ ಕಡಿಮೆ. ಹೀಗೆ ತ್ರಿಕೋನದ ಚಿಹ್ನೆಯು ಲಕ್ಷ್ಮಿ ಮತ್ತು ಸರಸ್ವತಿಯರ ಸಮಾಗಮ.

ಚಿಕ್ಕದಾದರೂ ಬೆಟ್ಟದಂತೆ

ಯದಾ ಪ್ರಿಯೋ ದೋಷಭಾಕ್ ಸ್ಯಾತ್ ತದಾಲ್ಪೋ ಭಾತಿ ದೋಷಕಃ ।
ಅಪ್ರಿಯೇ ತು ಸ್ಥಿತೋ ದೋಷಃ ಸ್ವಲ್ಪೋ ಭೂಮಿಧರಾಯತೇ ॥ –ಸುವಚನಶತಕಂ

ನಮಗೆ ಇಷ್ಟವಾದವರಲ್ಲಿ ಯಾವ ದೋಷವಿದ್ದರೂ ಅದು ಸಣ್ಣ ದೋಷ ಎನಿಸುತ್ತದೆ. ನಮಗೆ ಇಷ್ಟವಿಲ್ಲದವರ ದೋಷವು ಚಿಕ್ಕದಾದರೂ ಬೆಟ್ಟದಂತೆ ದೊಡ್ಡದಾಗಿ ಕಾಣಿಸುತ್ತದೆ –ಎಂಬುದು ಶ್ಲೋಕಾರ್ಥ.

ಮನುಷ್ಯ ಪ್ರಪಂಚದ ವ್ಯವಹಾರವು ವೈವಿಧ್ಯದಿಂದ ಕೂಡಿದೆ. ಮನುಷ್ಯ ಅವನನ್ನೇ ಕೇಂದ್ರವಾಗಿರಿಸಿಕೊಂಡು ವ್ಯವಹರಿಸುತ್ತಾನೆ. ಈ ಕಾರಣಕ್ಕಾಗಿ ತನಗೆ ಇಷ್ಟವಾದವರು ಕೆಡುಕು ಮಾಡಿದರೂ ಅವನಿಗೆ ಅದು ಕೇಡು ಎನಿಸುವುದಿಲ್ಲ. ತನಗೆ



ಇಷ್ಟವಿಲ್ಲದವರಿಂದ ಒಳಿತಾದರೂ ಆತ ಒಳಿತಾಯಿತೆಂದು ಭಾವಿಸುವುದಿಲ್ಲ.

ಸಂಸ್ಕೃತದಲ್ಲಿ 'ಯಥಾದೃಷ್ಟಿ ತಥಾ ಸೃಷ್ಟಿ' ಎಂಬ ಉಕ್ತಿ ಅತ್ಯಂತ ಪ್ರಸಿದ್ಧ. ಇದು ಮನುಷ್ಯನ ಸಹಜ ಗುಣ ಸ್ವಭಾವವನ್ನು ತೆರೆದಿರಿಸುತ್ತದೆ. ತನಗೆ ಪೂರಕವಾದ ವಾತಾವರಣವಿದ್ದರೆ ತನಗೆ ಬೇಕಾದವರ ಜೊತೆಗೆ ವ್ಯವಹಾರ ನಡೆಸಬೇಕಾದರೆ ಎಷ್ಟೇ ದೋಷವಿದ್ದರೂ ದೋಷವನ್ನು ಅಷ್ಟಾಗಿ ಎಣಿಸದೆ ವ್ಯವಹಾರ ಸಾಗುತ್ತದೆ. ಯಾವ ಆತಂಕವೂ ಎದುರಾಗುವುದಿಲ್ಲ.

ಇದಕ್ಕೆ ವ್ಯತಿರಿಕ್ತವಾಗಿ ಅಂದರೆ ತನಗೆ ಒಪ್ಪಿತರೆನಿಸದವರೊಂದಿಗೆ ವ್ಯವಹರಿಸುವಾಗ ಅವರಲ್ಲಿರುವ ಸಣ್ಣಪುಟ್ಟ ದೋಷಗಳು ದೊಡ್ಡದಾಗಿ ಕಾಣುತ್ತವೆ. ಅವರಾಡುವ ಸಾಮಾನ್ಯ ಮಾತುಗಳೂ ನಮಗೆ ಅಷ್ಟಾಗಿ ರುಚಿಸುವುದಿಲ್ಲ.

ಇಂತಹ ಲೋಕಸಹಜವಾದ ಸ್ವಭಾವವನ್ನು ಕವಿಯು ಪ್ರಕೃತ ಶ್ಲೋಕದಲ್ಲಿ ನಿರೂಪಿಸುತ್ತಾನೆ. ಕವಿಕಥನದ ತಾತ್ಪರ್ಯವನ್ನು ಈ ಪ್ರಕಾರವಾಗಿ ನಾವು ಗ್ರಹಿಸಬಹುದು. ಎಲ್ಲರೊಂದಿಗೂ ಸದ್ಭಾವವನ್ನು ಬೆಳೆಸಿಕೊಳ್ಳಬೇಕು. ಲೋಕದಲ್ಲಿ ವ್ಯವಹಾರ ನಡೆಸುವ ನಾವು ನಮ್ಮ ದೃಷ್ಟಿಕೋನವನ್ನು ಬದಲಾಯಿಸಿಕೊಳ್ಳಬೇಕು. ನಮ್ಮ ಆಚಾರ- ವಿಚಾರ ವ್ಯವಹಾರಗಳಲ್ಲಿ ಕಿಂಚಿತ್ ಔದಾರ್ಯವನ್ನು ರೂಢಿಸಿಕೊಳ್ಳಬೇಕು. ದೋಷೈಕ್ಯ ದೃಷ್ಟಿಯ ಬದಲಾಗಿ ಗುಣಗ್ರಾಹಿ ದೃಷ್ಟಿಯನ್ನು ಬೆಳೆಸಿಕೊಳ್ಳಬೇಕು. ಜಗತ್ತಿನಲ್ಲಿ ದೋಷವಿಲ್ಲದ ವಸ್ತು ಯಾವುದೂ ಇಲ್ಲ. ಒಂದಲ್ಲ ಒಂದು ಬಗೆಯ ದೋಷ ಸ್ವಲ್ಪಮಟ್ಟಿಗಾದರೂ ಇರುತ್ತದೆ.

ಬದುಕೆಂದ ಮೇಲೆ ಒಂದಷ್ಟು ಕೊರತೆಗಳು ಇದ್ದೇ ಇರುತ್ತವೆ. ಯಾರ ಬದುಕೂ ಪರಿಪೂರ್ಣವಲ್ಲ. ಯಾರೂ ಪರಿಪೂರ್ಣರಲ್ಲ. ಯಾರೇ ಕೆಲಸ ಮಾಡಲಿ, ನೂರಕ್ಕೆ ನೂರರಷ್ಟು ಸರಿ ಎನ್ನುವಂತಿಲ್ಲ. ಇದನ್ನು ಗಮನದಲ್ಲಿರಿಸಿ ಜೀವನವನ್ನು ನಿರ್ವಹಿಸಬೇಕು. ಎಲ್ಲರೊಂದಿಗೆ ಪ್ರೀತಿಯನ್ನು ಇರಿಸಿಕೊಂಡಾಗ ದೋಷವು ದೂರಾಗಿ ಗುಣವು ಕಾಣಿಸುತ್ತದೆ. ದೋಷವನ್ನು ನೋಡಿ ದೂರುವುದಕ್ಕಿಂತ ಗುಣ ನೋಡಿ ಹೊಗಳುವುದನ್ನು ರೂಢಿಸಿಕೊಳ್ಳಬೇಕು.

ಆಗ ಎಲ್ಲರೂ ಇಷ್ಟವಾಗುತ್ತಾರೆ. ಎಲ್ಲರಿಗೂ ಇಷ್ಟವಾಗುತ್ತೇವೆ. ಎಲ್ಲರೂ ನಮಗೆ ಹೊಂದಿಕೊಳ್ಳಬೇಕು, ನಮಗೆ ಬೇಕಾದ ರೀತಿಯಲ್ಲಿ ಅವರು ನಡೆದುಕೊಳ್ಳಬೇಕು ಎಂಬುದನ್ನು ಬಿಟ್ಟು ನಾವೇ ಹೊಂದಿಕೊಂಡು ಬದುಕಬೇಕು. ಇತರರಿಗೆ ಪೂರಕವಾದ ರೀತಿಯಲ್ಲಿ ನಮ್ಮ ನಡೆ ನುಡಿಯನ್ನು ಬದಲಾಯಿಸಿಕೊಳ್ಳಬೇಕು.

ಮನೋನಿಯಂತ್ರಣವೇ ಎಲ್ಲ ಸಮಸ್ಯೆಗಳಿಗೆ ಪರಿಹಾರ

ಒಳನೋಟ

• ಹೆ.ಬಾ. ಮಲ್ಯ



ಇಂದು ಭಾರತವೂ ಸೇರಿದಂತೆ ಇಡೀ ಜಗತ್ತಿನಲ್ಲಿ ವಾತಾವರಣ ಹದಗೆಟ್ಟಿರುವುದು ಕಂಡು ಬರುತ್ತಿದೆ. ಎಲ್ಲೆಡೆ ಯುದ್ಧ, ಮತೀಯ ಸಂಘರ್ಷ, ಸಾಮಾಜಿಕ ಸಮಸ್ಯೆಗಳು, ಗೊಂದಲಗಳೇ ಎದ್ದು ಕಾಣುತ್ತಿವೆ. ಮನುಷ್ಯ ಸುಖವನ್ನು ಬಯಸುತ್ತಾನೆ. ಸುಖವನ್ನು ಅರಸುತ್ತಾನೆ. ಆಧುನಿಕ ವಿಜ್ಞಾನ ಹಾಗೂ ತಂತ್ರಜ್ಞಾನ ಅನೇಕ ಸೌಲಭ್ಯಗಳನ್ನು ಒದಗಿಸಿದೆ. ಅನೇಕರ ಬಳಿ ಹೇರಳ ಹಣ, ಆಸ್ತಿ ಎಲ್ಲ ಇದೆ. ಆದರೆ ಮನಸ್ಸಿಗೆ ನೆಮ್ಮದಿ ಇಲ್ಲ. ಬಾಹ್ಯ ಭೌತಿಕ ಸೌಲಭ್ಯಗಳಿಂದ ಸುಖ ಸಿಗುತ್ತದೆ ಎಂಬುದು ಭ್ರಮೆ. ಸುಖ-ದುಃಖಗಳು ಮನಸ್ಸಿಗೆ ಸಂಬಂಧಪಟ್ಟವುಗಳು. ಸುಖವೆಂಬುದು ಮನಸ್ಸಿನ ಆಯ್ಕೆ. ಕೆಲವರು ಯಾವುದನ್ನು ಕಷ್ಟ-ದುಃಖಕರ ಎಂದೆಣಿಸುತ್ತಾರೋ ಅದರಲ್ಲೇ ಇನ್ನು ಕೆಲವರು ಸುಖವನ್ನು ಕಾಣುತ್ತಾರೆ. ಹಣವಿಲ್ಲದಿದ್ದರೂ, ಸರಳ ಜೀವನದಲ್ಲೇ ನೆಮ್ಮದಿಯಿಂದ ಬದುಕುವವರಿದ್ದಾರೆ. ಇದ್ದುದರಲ್ಲೇ ಸಂತೃಪ್ತಿ ಪಡುವವರಿದ್ದಾರೆ.

ಹಾಗಂತ ಕಾಲಚಕ್ರವನ್ನು ಹಿಂದಕ್ಕೆ ತಿರುಗಿಸಲಾಗುವುದಿಲ್ಲ. ಹಿಂದಿನ ಕಾಲಕ್ಕೆ ಹೋಗಲು ಸಾಧ್ಯವೂ ಇಲ್ಲ, ಹೋಗುವ ಅಗತ್ಯವೂ ಇಲ್ಲ. ಏನೇನು ಆಗಬೇಕೋ ಅದು ಆಗುತ್ತಲೇ ಹೋಗುತ್ತದೆ. ಅದರ ಮೇಲೆ ಮನುಷ್ಯನ ಹಿಡಿತ ಅತ್ಯಂತ ಕಡಿಮೆ. ಜಗತ್ತಿನ ಆಗುಹೋಗುಗಳನ್ನು ನಾವೇ ನಿಯಂತ್ರಿಸುತ್ತಿದ್ದೇವೆ ಎಂದು ಅನೇಕರು ಭಾವಿಸಿದ್ದಾರೆ. ಅದೊಂದು ಭ್ರಮೆ. ದೊಡ್ಡ ಚಕ್ರದ ಹಿಡಿಯನ್ನು ನಾವು ಹಿಡಿದಿರುತ್ತೇವೆ. ಈ ಬೃಹತ್ ಚಕ್ರವನ್ನು ನಾವೇ ತಿರುಗಿಸುತ್ತಿದ್ದೇವೆ ಎಂಬ ಭ್ರಮೆಯಲ್ಲಿರುತ್ತೇವೆ. ಆದರೆ ಆ ಚಕ್ರ ನಮ್ಮನ್ನೇ ತಿರುಗಿಸುತ್ತಿರುತ್ತದೆ. ನಾವು ಹಿಡಿಯನ್ನು ಹಿಡಿದು ನೇತಾಡುವುದು ಮಾತ್ರ.

ಹಿಂದಿನದೆಲ್ಲವೂ ಒಳ್ಳೆಯದು, ಆಧುನಿಕವಾದುದೆಲ್ಲವೂ ಕೆಟ್ಟದು ಎಂದು ಭಾವಿಸುವವರು ಕೆಲವರಾದರೆ, ಆಧುನಿಕವೆಲ್ಲವೂ ಒಳ್ಳೆಯದು ಹಿಂದಿನದೆಲ್ಲವೂ ಕೆಟ್ಟದು, ಅನಾಗರಿಕ, ಮೂಢನಂಬಿಕೆ ಎನ್ನುವವರು ಇದ್ದಾರೆ. ಎರಡು ಕಡೆಯವರ ಅಭಿಪ್ರಾಯಗಳೂ ಪೂರ್ಣ ಸತ್ಯವಲ್ಲ. ದೇವರು ಮನುಷ್ಯನಿಗೆ ವಿಶೇಷವಾದ ಬುದ್ಧಿಶಕ್ತಿ ಹಾಗೂ ವಿವೇಚನಾ ಶಕ್ತಿಯನ್ನು ಕೊಟ್ಟಿದ್ದಾನೆ. ಹಿಂದಿನ ಒಳ್ಳೆಯ ಸಂಗತಿಗಳ ಸ್ಫೂರ್ತಿಯನ್ನು (Spirit) ಪಡೆದು ಆಧುನಿಕ ಕಾಲದ ಒಳ್ಳೆಯ ಸಂಗತಿಗಳನ್ನು ಜೋಡಿಸಿಕೊಳ್ಳುವುದು ಸರಿಯಾದ ಕ್ರಮ. ಈಗಲೂ ನಡೆದುಕೊಂಡೇ ಪ್ರಯಾಣ ಮಾಡುವುದು, ಎತ್ತಿನಗಾಡಿಯಲ್ಲಿ ಹೋಗುವುದು, ಚಿಮಿಣಿ ದೀಪವನ್ನು ಉಪಯೋಗಿಸುವುದು ಇತ್ಯಾದಿ ಸಂಗತಿಗಳನ್ನು ಇಂದಿಗೂ ಅನುಸರಿಸಬೇಕೆಂದೇನಿಲ್ಲ. ಆಧುನಿಕ ವಿಜ್ಞಾನ ಅನೇಕ ಪರ್ಯಾಯ ಸಾಧನ ಸೌಲಭ್ಯಗಳನ್ನು ನೀಡಿದೆ. ಅವುಗಳ ಉಪಯೋಗ ತಪ್ಪಲ್ಲ. ಆದರೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಸ್ವೀಕರಿಸಬೇಕು. ಆಧುನಿಕ ತಂತ್ರಜ್ಞಾನ ಉತ್ಪಾದಿಸಿ ನೀಡುವ ಅನೇಕ ಯಂತ್ರಗಳನ್ನಾಗಲೀ, ವಾಹನಗಳನ್ನಾಗಲೀ, ಎಲೆಕ್ಟ್ರಾನಿಕ್ ಗ್ಯಾಜೆಟ್‌ಗಳನ್ನಾಗಲಿ ಒಂದು ಮಿತಿಯಲ್ಲಿ ಉಪಯೋಗಿಸುವುದು ಸರಿಯಾದ ಕ್ರಮ. ಇವುಗಳಲ್ಲೂ ಒಳ್ಳೆಯ ಅಂಶಗಳು ಇವೆ. ಶರೀರಕ್ಕೆ, ಮನಸ್ಸಿಗೆ ಹಾನಿಕರವಾದ ಅಂಶಗಳೂ ಇವೆ.

ಎಲ್ಲದಕ್ಕೂ ಮೊದಲು ಈ ಜಗತ್ ಅಂದರೆ ಏನು, ಮಾನವ, ಪ್ರಾಣಿ, ಸಸ್ಯಗಳು ಎಲ್ಲಿಂದ ಬಂದುವು? ಮಾನವನ ಮುಂದಿನ ಗಮ್ಯ ಸ್ಥಾನ ಯಾವುದು, ಉದ್ದೇಶ ಏನು ಇತ್ಯಾದಿಗಳ ಬಗ್ಗೆ ಸರಿಯಾದ ತಿಳಿವಳಿಕೆ ಪಡೆದುಕೊಂಡು ಅದಕ್ಕನುಗುಣವಾಗಿ ಜೀವನ ನಡೆಸುವುದು ಸೂಕ್ತ.

ನಾವು ದೇವರೆಂದು ಕರೆಯುವ ಅಗಾಧ ಶಕ್ತಿ ಸಾಗರ (energy) ದಿಂದ ಈ ಜಗತ್ತು, ಮಾನವ, ಪ್ರಾಣಿ, ಸಸ್ಯ ಎಲ್ಲವೂ ಹುಟ್ಟಿದೆ. ಚೇತನ- ಅಚೇತನ ಹೀಗೆ ಎರಡು ಆಯಾಮಗಳಿವೆ. ಭಗವಂತನಿಗೆ ಇದೊಂದು ಆಟ. ನಾವೆಲ್ಲ ಸೂತ್ರದ ಬೊಂಬೆಗಳು ಎಂಬುದನ್ನು ಸಹಸ್ರಾರು ವರ್ಷಗಳ ಮೊದಲೇ ಋಷಿ-ಮುನಿಗಳು ಸಾಧನೆ ಹಾಗೂ ಅಂತರ್ಬೋಧೆಯ ಮೂಲಕ ಕಂಡುಕೊಂಡು ವೇದ, ಉಪನಿಷತ್ತು, ಭಗವದ್ಗೀತೆ, ಭಾಗವತ, ಪುರಾಣಗಳ ಮೂಲಕ ಮಾನವ ಸಮೂಹಕ್ಕೆ ತಿಳಿಸಿಕೊಟ್ಟರು. ಅದನ್ನು ತಿಳಿಸಿಕೊಡಲು ಗುರುಕುಲಗಳನ್ನು ಸ್ಥಾಪಿಸಿದರು. ಜಗತ್ತಿನಲ್ಲಿ ಒಳ್ಳೆಯದು (ಧರ್ಮ) ಕೆಟ್ಟದ್ದು (ಅಧರ್ಮ) ಎಂಬ ಎರಡು ಆಯಾಮಗಳಿವೆ. ಒಳ್ಳೆ ಕರ್ಮಗಳಿಂದ ಪುಣ್ಯ, ಕೆಟ್ಟ ಕರ್ಮಗಳಿಂದ ಪಾಪ. ಕಲ್ಪಾದಿಯಲ್ಲೇ ಈ ಎರಡು ಆಯಾಮಗಳು ಪ್ರಾರಂಭವಾದವು. ಕರ್ಮಗಳಿಂದ ಪುನರ್ಜನ್ಮ- ಪಾಪ, ಪುಣ್ಯಗಳನ್ನು ಭೋಗಿಸುವುದಕ್ಕಾಗಿ. ಮನಸ್ಸು- ಬುದ್ಧಿ- ವಿವೇಕವನ್ನು ಸರಿಯಾಗಿ ಉಪಯೋಗಿಸಿದರೆ ಜೀವಾತ್ಮ- ಶರೀರಗಳು ಪುಣ್ಯ ಕಾರ್ಯದಲ್ಲಿ ತೊಡಗಿ ಪುಣ್ಯ ಸಂಚಯವಾಗುತ್ತದೆ. ಇಲ್ಲವಾದಲ್ಲಿ ಪಾಪ ಸಂಚಯ. ಮನಸ್ಸಿನ ನಿಯಂತ್ರಣದಿಂದ ಈ ಕರ್ಮ ಚಕ್ರದಿಂದ ಬಿಡುಗಡೆಯಾಗಿ ಮತ್ತೆ ಎಲ್ಲಿಂದ ಬಂದವೋ ಅಲ್ಲಿಗೆ ತಲಪುವುದೇ ಮಾನವ ಜೀವಿತದ ಮುಖ್ಯ ಉದ್ದೇಶ ಎನ್ನಲಾಗಿದೆ. ಅದನ್ನೇ ಮೋಕ್ಷ ಎನ್ನುವುದು. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ ಎಂಬ ಹಂತಗಳನ್ನು ದಾಟಿದಾಗ ಸಮಾಧಿ ಸ್ಥಿತಿ ಲಭ್ಯ. ಅದನ್ನು ಜೀವನ್ಮುಕ್ತಿ ಎನ್ನುತ್ತಾರೆ. ರಾಮಕೃಷ್ಣ ಪರಮಹಂಸ ಮುಂತಾದವರು ಈ ಸ್ಥಿತಿ ತಲುಪಿದವರು. ಈ ಶರೀರವನ್ನು ತ್ಯಾಗ ಮಾಡಿದಾಗ ಅವರು ಮೋಕ್ಷ ಅಂದರೆ ಬ್ರಹ್ಮಚೈತನ್ಯದಲ್ಲಿ ಲೀನವಾಗಿ ಹೋಗುತ್ತಾರೆ. ಮತ್ತೆ ಮರು ಜನ್ಮ ಇಲ್ಲ. ಶಂಕರಾಚಾರ್ಯರ "ಅಹಂ ಬ್ರಹಾಸ್ಮಿ, ತತ್ ತ್ವಂ ಅಸಿ"- "ನಾನು ಬ್ರಹ್ಮ ಚೈತನ್ಯದ ಅಂಶ, ನೀನೂ ಅದೇ ಆಗಿದ್ದೀಯಾ" ಎಂಬ ಅದ್ವೈತ ತತ್ವವನ್ನು ಸಾರಿದ್ದಾರೆ. ಪುಣ್ಯ ಸಂಚಯನದಿಂದ, ಭಗವಂತನಲ್ಲಿ ಪರಿಪೂರ್ಣ ಶ್ರದ್ಧೆ ಇಡುವುದರಿಂದ, ಭಕ್ತಿ ಮಾರ್ಗದಿಂದ, ವಿಷ್ಣು ಪರಮಾತ್ಮನ ಸಾನಿಧ್ಯ ಪಡೆಯಲು ಸಾಧ್ಯ ಎಂದು ಮಧ್ವಾಚಾರ್ಯರು ತಮ್ಮ ದ್ವೈತ ತತ್ವದಲ್ಲಿ ಸಾರಿದ್ದಾರೆ. ಜೀವಾತ್ಮಗಳು ತಮ್ಮ ಬಾಕಿ ಉಳಿದಿರುವ ಕರ್ಮಗಳನ್ನು ಅನುಭವಿಸಲು ಮತ್ತೆ ಜನ್ಮ ತಾಳಬೇಕಲ್ಲವೇ. ಆದ್ದರಿಂದ ಜೀವಾತ್ಮಗಳು ಅವಿನಾಶಿ. ಹೀಗೆ ಪರಮಾತ್ಮ, ಜೀವಾತ್ಮ, ಜಡ ಪ್ರಕೃತಿ ಈ ಮೂರು ತತ್ವಗಳು ಶಾಶ್ವತ ಎನ್ನಲಾಗಿದೆ.

ಪರಮಾತ್ಮನಲ್ಲಿ ಲೀನವಾಗಲು ಅಥವಾ ಸಾನಿಧ್ಯದಲ್ಲಿರಲು ಸಾಧನೆ ಅಗತ್ಯ. ಋಷಿಗಳು ಮಾರ್ಗವನ್ನು ಬೋಧಿಸಿದ್ದಾರೆ. ಧರ್ಮ- ಅರ್ಥ- ಕಾಮ- ಮೋಕ್ಷ ಜೀವನದಲ್ಲಿ ಹಾದು ಹೋಗಬೇಕಾದ ಹಂತಗಳನ್ನೂ, ಆಯಾ ಹಂತದ ಕರ್ತವ್ಯಗಳನ್ನೂ ಬೋಧಿಸಿದ್ದಾರೆ. ಇದೇ ಆಶ್ರಮ ವ್ಯವಸ್ಥೆ- ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸನ್ಯಾಸ- ಇವೆರಡನ್ನು ಸರಿಯಾಗಿ ಅರ್ಥಮಾಡಿಕೊಂಡು ಪ್ರಾಮಾಣಿಕವಾಗಿ ಆಚರಿಸಿದರೆ ನಮ್ಮ ಜೀವನದ ಎಲ್ಲಾ ಜಂಜಾಟಗಳಿಂದ ಪಾರಾಗಿ ಆನಂದಮಯ ಸ್ಥಿತಿಯನ್ನು ಹೊಂದಲು ಸಾಧ್ಯ ಎಂದಿದ್ದಾರೆ ಋಷಿಗಳು.

ಎಲ್ಲದಕ್ಕೂ ಮನಸ್ಸೇ ಕಾರಣ ಎಂದಾದ ಮೇಲೆ ಅದರ ಮೇಲೆ ನಿಯಂತ್ರಣ ಸಾಧಿಸಿದಾಗ ಸಾಧನೆ ಸುಲಭ. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಅರಿಷಡ್ವರ್ಗಗಳ ಮೇಲೆ ಹತೋಟಿ ಸಾಧಿಸಿದಾಗ ಮನಸ್ಸು ಹತೋಟಿಗೆ ಬರುತ್ತದೆ. ಜಗತ್ತಿನಲ್ಲಿ ಚೆನ್ನಾಗಿ ಬದುಕಬೇಕು. ಎಲ್ಲವನ್ನೂ ಅನುಭವಿಸಬೇಕು. ಆದರೆ ಹಿತಮಿತವಾಗಿ ಅನುಭವಿಸಬೇಕು. ಯಾವುದರ ಬಗ್ಗೆಯೂ, ಯಾರ ಬಗ್ಗೆಯೂ ಅತಿಯಾದ ಮೋಹ (attachment) ಇರಬಾರದು. ನಿಸ್ಸಂಗತ್ವ (Detachment) ಇರಬೇಕು ಎನ್ನುತ್ತಾರೆ. ಪ್ರತಿಯೊಬ್ಬರದೂ ಒಂಟಿ ಪ್ರಯಾಣ. ಬರುವಾಗ ಜೊತೆಗೆ ಯಾರೂ ಬರಲಿಲ್ಲ, ಏನನ್ನೂ ತರಲಿಲ್ಲ. ಹೋಗುವಾಗಲೂ ಒಂಟಿಯಾಗಿಯೇ ಹೋಗುತ್ತೇವೆ.

ಈ ಆಧ್ಯಾತ್ಮಿಕದ ದೃಷ್ಟಿಯಿಂದ ಯೋಚಿಸಿದಾಗ ದುರಾಸೆಗಳು ದೂರವಾಗುತ್ತವೆ. ಹಾಸಿಗೆ ಇದ್ದಷ್ಟೇ ಕಾಲು ಚಾಚಬೇಕು ಎಂಬ ಹಳೆ ಗಾದೆ ಮಾತೊಂದು ಇದೆ. ಇದನ್ನು ಅಪರಿಗ್ರಹ ಎನ್ನುತ್ತಾರೆ. ಇಂದಿನ ಎಲ್ಲಾ ಸಮಸ್ಯೆಗಳಿಗೆ ನಾವೇ ಕಾರಣಕರ್ತರು ಎಂಬ ಸತ್ಯ ಆಳವಾಗಿ ಚಿಂತಿಸಿದಾಗ ಹೊಳೆಯುತ್ತದೆ. ಮನಸ್ಸಿನ ಗುಲಾಮರಾಗಿರುವುದೇ ಸಮಸ್ಯೆ. ಬೇಡಿಕೆಗೆ ಅನುಗುಣವಾಗಿ ಫ್ಯಾಕ್ಟರಿಗಳು, ಉದ್ಯಮಿಗಳು ಏನೇನೋ ವಸ್ತುಗಳನ್ನು ಉತ್ಪಾದಿಸಿ ಮಾರ್ಕೆಟಿಗೆ ಹಾಕುತ್ತಾರೆ. ಅಗತ್ಯವಿಲ್ಲದಿದ್ದರೂ ಕೈಯಲ್ಲಿ ಸುಲಭವಾಗಿ, ಅಡ್ಡದಾರಿಯಿಂದ ದಕ್ಕಿದ ಹಣದಿಂದ ಜನರು ಕೊಂಡುಕೊಳ್ಳುತ್ತಾರೆ. ಜೀವನ ಶೈಲಿ, ಆಹಾರದ ಆಯ್ಕೆ ಸರಿಯಾಗಿಲ್ಲದ ಕಾರಣ ಗಳಿಸಿದ ಹಣವನ್ನೆಲ್ಲ ವೈದ್ಯರಿಗೆ ಅರ್ಪಿಸುತ್ತಾರೆ. ಹೀಗೆ ಪ್ರತಿಯೊಂದು ಸಮಸ್ಯೆಯ ಮೂಲವು ಸ್ವಾರ್ಥಿಯಾದ ಮನಸ್ಸಿನ ಮೇಲೆ ನಿಯಂತ್ರಣವಿಲ್ಲದ ಮಾನವನಿಂದಲೇ ಉದ್ಭವವಾಗಿದೆ ಎಂಬುದು ಗೋಚರವಾಗುತ್ತದೆ.

ಹಾಗೆ ನೋಡಿದರೆ ನಮ್ಮ ಪ್ರಾಚೀನ ಭಾರತೀಯರ ಜೀವನಶೈಲಿಯೇ ಉತ್ತಮವಾದುದು. ಶಾಂತಿ, ಸಮಾಧಾನ ತಂದು ಕೊಡುವಂಥದು. ಪ್ರಾಚೀನ ಗುರು ಕುಲ ಶಿಕ್ಷಣ ಪದ್ಧತಿಯೇ ಶ್ರೇಷ್ಠವಾದುದು. ಆಯುರ್ವೇದ, ಪ್ರಕೃತಿ ಚಿಕಿತ್ಸೆ, ಆಸನ, ಪ್ರಾಣಾಯಾಮ, ಧ್ಯಾನ, ದೇವರಲ್ಲಿ ನಂಬಿಕೆ ಇವುಗಳಿಂದ ಉತ್ತಮ ಆರೋಗ್ಯ, ಮನೋನಿಯಂತ್ರಣ, ಒತ್ತಡರಹಿತ ಜೀವನ ಸಾಧ್ಯ; ಸುಖ ಜೀವನ ಸಾಧ್ಯ.

ಒಟ್ಟಾರೆ ಹೇಳಬೇಕೆಂದರೆ ಮನೋನಿಯಂತ್ರಣವೇ ಸುಖಕ್ಕೆ ಸಾಧನ ಎಂಬ ಸತ್ಯ ಈ ಎಲ್ಲ ಸಂಗತಿಗಳಿಂದ ಗೊತ್ತಾಗುತ್ತದೆ. ಶರೀರಕ್ಕೆ ಶಿಕ್ಷಣ ಹೇಗೆ ಅಗತ್ಯವೋ ಮನಸ್ಸಿಗೂ ಶಿಕ್ಷಣ ಅಷ್ಟೇ ಅಗತ್ಯ. ಲೋಕಹಿತದ ದೃಷ್ಟಿಯಿಂದ ಈ ಭಾರತೀಯ ಚಿಂತನೆಯನ್ನು ಜಗತ್ತಿನಾದ್ಯಂತ ಹರಡಬೇಕಾದ ಅಗತ್ಯವಿದೆ. ಆಗಲೇ ಇಂದು ಜಗತ್ತು ಹೆದರಿಸುತ್ತಿರುವ ಎಲ್ಲಾ ಸಮಸ್ಯೆಗಳಿಗೆ, ಗೊಂದಲ, ಟೆನ್ಶನ್‌ಗಳಿಗೆ ಪರಿಹಾರ ಸಿಗಬಲ್ಲದು.


ಬ್ರ್ಯಾಂಡ್ ಬೆಂಗಳೂರಿನ ಹೆಮ್ಮೆ ಬ್ರಾಹ್ಮಣರ ಕಾಫಿ ಬಾರ್

• ಸು.ನಾಗರಾಜ್

ಬಾಳಿನಲ್ಲಿ ಮಹತ್ಸಾಧನೆ ಮಾಡಿದವರ ಜೀವನ ಚರಿತ್ರೆಗಳನ್ನು ಓದುವುದೇ ಒಂದು ಚೇತೋಹಾರಿ ಅನುಭವ. ಯೋಗ, ಆಧ್ಯಾತ್ಮ, ಸಾಹಿತ್ಯ, ಸಾಮಾಜಿಕ, ರಾಜಕೀಯ, ಸಂಗೀತ, ನೃತ್ಯ, ಸೈನ್ಯ... ಹೀಗೆ ಹಲವಾರು ಕ್ಷೇತ್ರಗಳಲ್ಲಿ ಉತ್ತುಂಗ ಸಾಧನೆ ಮಾಡಿದವರ ಜೀವನ ಚರಿತ್ರೆಗಳನ್ನು ಸಾಕಷ್ಟು ಓದಿರಬಹುದು. ಆದರೆ ಹೊಟ್ಟೆಪಾಡಿಗಾಗಿ ಮಡದಿಯೊಂದಿಗೆ ಬೆಂಗಳೂರಿಗೆ ಬಂದು ದಶಕಗಳ ಕಾಲ ಕಷ್ಟ ನಷ್ಟಗಳನ್ನು ಅನುಭವಿಸಿ, ಸಾಲು ಸಾಲಾಗಿ ಎಂಟು ಮಕ್ಕಳ ಸಂಸಾರದ ಉದರ ಪೋಷಣೆ ಮಾಡಲು ರಕ್ತವನ್ನು ಬೆವರಾಗಿ ಹರಿಸಿ ದುಡಿದ ಜೀವವೊಂದು ಸ್ಥಾಪಿಸಿದ ಚಿಕ್ಕ ಹೋಟೆಲ್ ಇಂದು ಬೆಂಗಳೂರಿನ ಹೆಮ್ಮೆಯ ಬ್ರಾಂಡ್ ಆಗಿ ನಿಲ್ಲುವಂತೆ, ಬೆಂಗಳೂರಿನ ಬಹುತೇಕ ಗಣ್ಯ ವ್ಯಕ್ತಿಗಳ ಬಾಯಲ್ಲಿ ನಲಿದಾಡುವಂತೆ ಮಾಡಿದವರ ಜೀವನ ಚರಿತ್ರೆ ಓದುವುದು ನಿಜಕ್ಕೂ ಕುತೂಹಲ ಹುಟ್ಟಿಸುತ್ತದೆ.

ಬೆಂಗಳೂರಿನ ಶಂಕರಪುರದ ರಂಗರಾವ್ ರಸ್ತೆಯ ತುದಿಯಲ್ಲಿ ಇರುವ 'ಬ್ರಾಹ್ಮಣರ ಕಾಫಿ ಬಾರ್' ಎಂಬ ಹೋಟೆಲಿನ ಯಶೋಗಾಥೆಯೇ 'ರಾಧಾಕೃಷ್ಣ ಅಡಿಗ-ಇಡ್ಲಿ ಕಾಫಿ ಪರಂಪರೆ-ಪಯಣ' ಎಂಬ ಸುಂದರ ಕಥನ. ಇದರಲ್ಲಿ ಅಡಕವಾಗಿರುವುದು ರಾಧಾಕೃಷ್ಣ ಅಡಿಗರ ಬಾಳಪಯಣವಷ್ಟೇ ಅಲ್ಲ, ಅವರ ಇಡೀ ಕುಟುಂಬವು ಹೇಗೆ ತನ್ನ ಉದ್ಯಮವನ್ನು ಗ್ರಾಹಕ ಕೇಂದ್ರಿತವಾಗಿ, ತನ್ನ ಸ್ಥಾಪಕರ ಮೂಲ ಆಶಯಗಳಿಗೆ ಅನುಗುಣವಾಗಿ ಶ್ರದ್ಧಾಭಕ್ತಿಯಿಂದ, ಪಾರಂಪರಿಕ ಮೌಲ್ಯಗಳನ್ನು ಉಳಿಸಿಕೊಂಡೇ ಬೆಳೆಯಿತು ಎಂಬ ವಿಸ್ಮಯಕರ ಒಳನೋಟ.

ಕೆಲವು ದಶಕಗಳ ಮೊದಲು ಬೆಂಗಳೂರಿನಲ್ಲಿ ಹೋಟೆಲ್ ಎಂದರೆ ಅಡಿಗರ ಕಾಫಿ ಬಾರ್ ಎನ್ನುವ ಅನ್ವರ್ಥನಾಮ ಪ್ರಚಲಿತದಲ್ಲಿತ್ತು. ಇದರ ಹಿಂದೆ ರಾಧಾಕೃಷ್ಣರ ತಂದೆ ನಾಗೇಶ ಅಡಿಗರ, ಅಮ್ಮ ಸರಸ್ವತಿಯವರ ಏಳುಬೀಳಿನ ಸಂಗ್ರಾಮವಿದೆ. ಎಲ್ಲಕ್ಕೂ ಸಂವಾದಿಯಾಗಿ ರಾಧಾಕೃಷ್ಣರ ವ್ಯವಹಾರ ಕುಶಲತೆ, ದೂರದೃಷ್ಟಿ, ಸ್ನೇಹಶೀಲತೆ, ಛಲ ಇದೆ. ನಾಗೇಶ ಅಡಿಗರು ಬಾಲ್ಯದಿಂದ ಮೃದು ಸ್ವಭಾವದವರಾದರೂ ಸ್ವಾಭಿಮಾನಿ. ತಮ್ಮ ಉಪನಯನದ ಖರ್ಚನ್ನು ತಾವೇ ದುಡಿದು ಸಂಪಾದಿಸಿಕೊಂಡು ಜನಿವಾರ ಹಾಕಿದವರು. ಕೊಲ್ಲೂರಿನಲ್ಲಿ ವೇದಪಾಠ ಕಲಿತವರು. ಹಾಗೇ ಅಡುಗೆ ಮಾಡುವುದನ್ನೂ ಕಲಿತಿದ್ದರು. ಜೀವನ ನಿರ್ವಹಣೆಗೆ ಪೌರೋಹಿತ್ಯವಾದರೂ ಸರಿ, ಅಡುಗೆ ಭಟ್ಟನಾಗಿ ಆದರೂ ಸರಿ ಎಂಬ ಮನೋದಾರ್ಢ್ಯ. ಅವರಿಗಿಂತ 14 ವರ್ಷ ಕಿರಿಯ ಸರಸ್ವತಿಯವರನ್ನು ವರಿಸಿದಾಗ ಆಕೆಗಿನ್ನೂ 13 ವರ್ಷ. ಕಷ್ಟಗಳಿಂದ ಮಾಗಿದ ಆಕೆಯ ವ್ಯಕ್ತಿತ್ವ ಮುಂದೆ ಅದೆಂತಹ ಬೆಳಕನ್ನು ಪಸರಿಸಿತು ಎಂದರೆ, ಅವರ 8 ಜನ ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮಕ್ಕಳು, ಹೋಟೆಲಿನ ಸಿಬ್ಬಂದಿ ವರ್ಗ ಆ ಬೆಳಕಿನಲ್ಲಿ ತಮ್ಮ ನೆಲೆ ಕಂಡುಕೊಂಡವರೇ, ನೆಮ್ಮದಿ ಉಂಡವರೇ.



ಸಾತ್ವಿಕ ಸ್ವಭಾವದ ನಾಗೇಶ ಅಡಿಗರು ಬೆಂಗಳೂರಿನಲ್ಲಿ ಪ್ರಾರಂಭಿಸಿ ಕೈ ಸುಟ್ಟುಕೊಂಡ ಹೋಟೆಲ್‌ಗಳು ಹಲವಾರು. ಆದರೂ ಛಲ ಬಿಡದೆ 1965ರ ಜನವರಿ 27ನೇ ತಾರೀಕು 150 ಅಡಿ ಚಿಕ್ಕ ಜಾಗದಲ್ಲಿ, ಎರಡು ಕಟ್ಟಿಗೆ ಒಲೆ ಹೂಡಿ ಆರಂಭಿಸಿದ ಬ್ರಾಹ್ಮಣರ ಕಾಫಿ ಬಾರ್ ಕ್ರಮೇಣ ಮಡದಿಯ ಕೈಗುಣದ ರುಚಿಗೆ ಆಕರ್ಷಿತರಾದ ಗ್ರಾಹಕರ ಬೆಂಬಲದೊಂದಿಗೆ ಬೆಳೆಯುತ್ತಾ ಹೋಯಿತು. ಆಗ ಕಾಫಿಯ ಬೆಲೆ 4 ಪೈಸೆ ಮತ್ತು ಮೊದಲ ದಿನದ ಗಳಿಕೆ 7 ರೂ 50 ಪೈಸೆ!

8 ಚಿಕ್ಕ ಮಕ್ಕಳ ಪೋಷಣೆಯ ಜೊತೆಗೇ ದಿನದಿನಕ್ಕೆ ಬೇಕಾಗುವ ದಿನಸಿ ತರಿಸಿ, ಹಿಟ್ಟು ಚಟ್ನಿ ರುಬ್ಬಿ ಸರಸ್ವತಿ ಅಮ್ಮ ಮಾಡಿದ ಅವಿಶ್ರಾಂತ ದುಡಿಮೆಯಿಂದಾಗಿ ಹೋಟೆಲ್ ಅಭಿವೃದ್ಧಿ ಕಾಣತೊಡಗಿತು. ಮೂರನೇ ಕ್ಲಾಸ್‌ವರೆಗೆ ಓದಿದ ಅಮ್ಮ ಯಾವುದೇ ಹೋಟೆಲ್ ಮ್ಯಾನೇಜ್ಮೆಂಟ್ ಪದ ಪಡೆದವರಿಗಿಂತ ಒಂದು ಕೈ ಮಿಗಿಲು ಎನಿಸಿಕೊಂಡರು. ನಾಗೇಶ ಅಡಿಗರು ಮಡದಿಯ ಅಸೀಮ ಕರ್ತೃತ್ವಕ್ಕೆ ತಲೆಬಾಗಿ ತಮ್ಮ ಸಂಪೂರ್ಣ ವ್ಯವಹಾರಗಳನ್ನು ಅವರಿಗೆ ಒಪ್ಪಿಸಿ ತಾವು ನಿಷ್ಕಾಮ ಯೋಗಿಯಂತೆ ಬದುಕಿದರು. ಅವರ ಮಕ್ಕಳೂ ಕಷ್ಟ ಪಟ್ಟು ಕೆಲಸ ಮಾಡುತ್ತಿದ್ದರು. ಕಡೆಯ ಕುಡಿ ರಾಧಾಕೃಷ್ಣರಿಗೆ ಅಮ್ಮನ ಶಿಸ್ತು, ವ್ಯವಹಾರ ಕೌಶಲ್ಯ, ಸಂಸ್ಕಾರ, ಅಪ್ಪನ ಪ್ರಾಮಾಣಿಕತೆ, ದೈವಭಕ್ತಿ, ಸರಳತೆ ಎಲ್ಲವೂ ಮೈಗೂಡಿತು.

ಬರೆಯುತ್ತಾ ಹೋದರೆ ಈ ಪುಸ್ತಕದ ಬಗ್ಗೆಯೇ ಇನ್ನೊಂದು ಪುಸ್ತಕ ಬರೆಯಬಹುದು. ಪುಸ್ತಕದ ಸ್ವಾರಸ್ಯದ ಕೆಲವು ಘಟನೆಗಳನ್ನು ಇಲ್ಲಿ ಉಲ್ಲೇಖಿಸುವುದಾದರೆ,

ಬಿಸಿಬಿನಲ್ಲಿ ಅಂದಿನಿಂದ ಇಂದಿಗೂ ಮೊದಲ ಟೋಕನ್ ಗ್ರಾಹಕ ಒಬ್ಬರೇ! ಅವರ್ಯಾರು?, ಅಡಿಗ ದಂಪತಿಗಳ ಏಕೈಕ ಪುತ್ರಿಗೆ ಕೌಸ್ತುಭಾ ಎಂಬ ಹೆಸರು ಇಟ್ಟಿದ್ದೇಕೆ? ರಾಧಾಕೃಷ್ಣ ದಂಪತಿ ಆರಂಭಿಸಿದ ಹೋಟೆಲ್‌ಗಳ ಸರಣಿ ಯಾವುದು? ಮುಚ್ಚಿದ್ದೆಷ್ಟು, ಕೊಟ್ಟಿದ್ದೆಷ್ಟು, ಈಗಿರುವುದು ಎಷ್ಟು? ಪಾಕಶಾಲಾ ಸರಣಿ ಹೋಟೆಲ್‌ಗಳು ಯಾರದು? ಅವರ ಜೀವನದಲ್ಲಿ ನಡೆದು ಹೋದ ಪವಾಡಗಳು ಯಾವುವು? ಅವರು ವ್ಯವಹಾರ ಚತುರತೆ, ಮಾತುಗಾರಿಕೆಯಿಂದ ಬಗೆಹರಿಸಿದ ಕ್ಲಿಷ್ಟಕರ ಸನ್ನಿವೇಶಗಳು ಯಾವುವು? ರಾಧಾಕೃಷ್ಣರ ಸ್ನೇಹ ಬಳಗದಲ್ಲಿ ಇದ್ದ, ಇರುವ, ಚಿತ್ರ ನಟರು, ಪತ್ರಕರ್ತರು, ರಾಜಕಾರಣಿಗಳು, ಕ್ರಿಕೆಟ್ ಪಟುಗಳು ಯಾರ್ಯಾರು? ಬ್ರಾಹ್ಮಣರ ಕಾಫಿ ಬಾರ್‌ನ ಈಗಿರುವ ಜಾಗವನ್ನು ಖರೀದಿಸಿ, ಈಗಿನ ರೂಪು ಕೊಟ್ಟಿದ್ದು ಯಾವಾಗ? ರಾಧಾಕೃಷ್ಣರು ತಮ್ಮ ಹೋಟೆಲ್ ಸಿಬ್ಬಂದಿಯನ್ನು ನಡೆಸಿಕೊಳ್ಳುವ ಪರಿ ಹೇಗೆ?

ಈ ಎಲ್ಲವನ್ನೂ ಅತ್ಯಂತ ಸ್ವಾರಸ್ಯವಾಗಿ, ಸರಳವಾಗಿ ನಾಯಕ ಭಟ್ ತದ್ದಲಸೆಯವರು ವಿವರಿಸಿ ಬರೆದಿದ್ದಾರೆ. ಬೇಳೂರು ಸುದರ್ಶನರು 'ಬಿಸಿಬಿ ಯಶಸ್ಸಿನ ಏಳು ಸೂತ್ರಗಳು' ಎಂದು ಸುಂದರ ಮುನ್ನುಡಿಯನ್ನು ಬರೆದಿದ್ದಾರೆ. ಅಡಿಗರ ಸ್ನೇಹದ ರಸಗುಲ್ಲ ಸವಿದ ಹಲವಾರು ಗಣ್ಯರ ಆತ್ಮೀಯ ನುಡಿಗಳಿವೆ. ಒಟ್ಟಿನಲ್ಲಿ ಇದೊಂದು ಕನ್ನಡದಲ್ಲಿ ಬಂದಿರುವ ವಿಶಿಷ್ಟ ವ್ಯಕ್ತಿ ಚಿತ್ರಣ.

ಶೀಘ್ರದಲ್ಲಿ ಅಮೆರಿಕ-ಇರಾನ್ ಶಾಂತಿ ಸಭೆ

ಪಾಕಿಸ್ತಾನಕ್ಕೆ ಇರಾನ್ ವಿದೇಶಾಂಗ ಸಚಿವ



ಇಸ್ಲಾಮಾಬಾದ್: ಅಮೆರಿಕ-ಇರಾನ್ ನಡುವಿನ ದ್ವಿತೀಯ ಹಂತದ ಶಾಂತಿ ಸಭೆಗೆ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ನೇತೃತ್ವದ ನಿಯೋಗವೊಂದು ಶುಕ್ರವಾರ ಪಾಕಿಸ್ತಾನಕ್ಕೆ ತೆರಳಿದೆ. ದ್ವಿಪಕ್ಷೀಯ ಮಾತುಕತೆ ಮತ್ತು ಪ್ರಾದೇಶಿಕ ಬೆಳವಣಿಗೆಗಳ ಕುರಿತು ಚರ್ಚಿಸಲು ಅರಾಘ್ಚಿ ಪಾಕ್‌ಗೆ ತೆರಳಿದ್ದಾರೆ ಎಂದು ಇರಾನ್ ಸರ್ಕಾರಿ ಸ್ವಾಮ್ಯದ ಐಆರ್‌ಎನ್‌ಎ ವರದಿ ಮಾಡಿದೆ.

ವಿದೇಶಾಂಗ ಸಚಿವ ಅರಾಘ್ಚಿ ಅವರು ಪಾಕ್ ಮಾತ್ರವಲ್ಲದೆ ಒಮನ್ ಮತ್ತು ರಷ್ಯಾ ಪ್ರವಾಸವನ್ನೂ ಮಾಡಲಿದ್ದಾರೆಂದು ಅದು ವರದಿ ಮಾಡಿದೆ. ಹಾರ್ಮುಜ್ ಬಂದ್ ಆಗಿರುವ ಕಾರಣದಿಂದ ಜಾಗತಿಕ ತೈಲ ಮತ್ತು ಅನಿಲ ಪೂರೈಕೆ ವ್ಯತ್ಯಯವಾಗಿರುವ, ಜಾಗತಿಕ ಆರ್ಥಿಕ ವ್ಯವಸ್ಥೆಯಲ್ಲಿ ಅಸಮತೋಲನ ಉಂಟಾದ ಸಮಯದಲ್ಲಿ ಇರಾನ್ ವಿದೇಶಾಂಗ ಸಚಿವರ ಪ್ರವಾಸ ಬಹಳ ಮಹತ್ವ ಪಡೆದುಕೊಂಡಿದೆ. ಇದಲ್ಲದೆ ಇರಾನ್ ಮೇಲಿನ ಯುದ್ಧದಿಂದ ಸಾವಿರಾರು ಜನರು ಮೃತಪಟ್ಟಿದ್ದಾರೆ.



ಸಣ್ಣದೊಂದು ನಿಯೋಗದೊಂದಿಗೆ ಇರಾನ್ ವಿದೇಶಾಂಗ ಸಚಿವರು ಪಾಕಿಸ್ತಾನಕ್ಕೆ ಬರುತ್ತಿದ್ದಾರೆಂದು ಇಬ್ಬರು ಪಾಕ್ ಅಧಿಕಾರಿಗಳು ಅಮೆರಿಕದ ಅಸೋಸಿಯೇಟೆಡ್ ಪ್ರೆಸ್‌ಗೆ ಮಾಹಿತಿ ಕೊಟ್ಟಿದ್ದಾರೆ. ಅರಾಘ್ಚಿ ಅವರ ಪಾಕ್ ಪ್ರವಾಸದ ಬಗ್ಗೆ ಅಮೆರಿಕದ ಶ್ವೇತಭವನ ಸದ್ಯ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಶಾಂತಿ ಸಭೆಗೆ ಪಾಕ್ ಪ್ರೋತ್ಸಾಹ?: ಶುಕ್ರವಾರ ಪಾಕಿಸ್ತಾನಿ ವಿದೇಶಾಂಗ ಸಚಿವ ಇಶಾಕ್ ದಾರ್ ಅವರಿಗೆ ಅರಾಘ್ಚಿ ದೂರವಾಣಿ ಕರೆ ಮಾಡಿದ್ದು, ಪ್ರಾದೇಶಿಕ ಅಭಿವೃದ್ಧಿ ಮತ್ತು ಕದನ ವಿರಾಮದ ಕುರಿತು ಮಾತುಕತೆ ನಡೆಸಿದ್ದಾರೆ ಎಂದು ಅರಾಘ್ಚಿ ಹೇಳಿದ್ದಾರೆ. ಇದಲ್ಲದೆ ಇಸ್ಲಾಮಾಬಾದ್‌ನಲ್ಲಿ ಅಮೆರಿಕ-ಇರಾನ್ ಶಾಂತಿ ಮಾತುಕತೆಗೆ ಬೇಕಾದ ರಾಜತಾಂತ್ರಿಕ ಪ್ರಯತ್ನಗಳ ಬಗ್ಗೆ ಚರ್ಚಿಸಿದ್ದಾಗಿ ಅರಾಘ್ಚಿ ಹೇಳಿದ್ದಾರೆ.

ಅರಾಘ್ಚಿ ಅವರೊಂದಿಗಿನ ಸಂಭಾಷಣೆ ವೇಳೆ, ಪ್ರಾದೇಶಿಕ ಶಾಂತಿ ಮತ್ತು ಸ್ಥಿರತೆ ಪುನಃಸ್ಥಾಪನೆ ಮತ್ತು ಅಮೆರಿಕದೊಂದಿಗಿನ ಮಾತುಕತೆಯ ಪ್ರಾಮುಖ್ಯತೆಯನ್ನು ಇಶಾಕ್ ದಾರ್ ಒತ್ತಿಹೇಳಿದ್ದಾರೆ ಎಂದು ಇರಾನ್ ವಿದೇಶಾಂಗ ಸಚಿವಾಲಯ ತಿಳಿಸಿದೆ.

ಯುದ್ಧದಲ್ಲಿ 5000ಕ್ಕೂ ಹೆಚ್ಚು ಸಾವು: ಮಧ್ಯಪ್ರಾಚ್ಯ ಯುದ್ಧದಿಂದ ಇರಾನ್‌ನಲ್ಲಿ 3,375 ಮತ್ತು ಲೆಬನಾನ್‌ನಲ್ಲಿ 2,290 ಜನರು ಪ್ರಾಣ ಕಳೆದುಕೊಂಡಿದ್ದಾರೆ. ಇದಲ್ಲದೆ, ಇಸ್ರೇಲ್‌ನಲ್ಲಿ 23 ಜನ ಮತ್ತು ಗಲ್ಫ್ ರಾಷ್ಟ್ರಗಳಲ್ಲಿ ಡಜನ್‌ನಷ್ಟು ಜನರು ಮೃತಪಟ್ಟಿದ್ದಾರೆ. ಲೆಬನಾನ್‌ನಲ್ಲಿ 15 ಇಸ್ರೇಲಿ ಸೈನಿಕರು ಮತ್ತು ಒಟ್ಟಾರೆ ಯುದ್ಧದಲ್ಲಿ 13 ಅಮೆರಿಕ ಸೈನಿಕರು ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ.

ಪನಾಮ ಕಾಲುವೆ ದಾಟಲು 4 ದಶಲಕ್ಷ ಡಾಲರ್ ಶುಲ್ಕ!: ಹಾರ್ಮುಜ್ ಜಲಸಂಧಿ ಮುಚ್ಚಿರುವುದರಿಂದ ತೈಲ ವ್ಯಾಪಾರ ಸಂಸ್ಥೆಗಳು ತಮ್ಮ ಹಡಗುಗಳನ್ನು ಪನಾಮ ಕಾಲುವೆ ದಾಟಿಸಲು ಸುಮಾರು 4 ದಶಲಕ್ಷ ಡಾಲರ್ ಹಣ ವ್ಯಯಿಸುತ್ತಿವೆ ಎಂದು ಪನಾಮ ಕಾಲುವೆ ಆಡಳಿತವು ಹೇಳಿದೆ. ಅಲ್ಲದೆ, ಪನಾಮ ಕಾಲುವೆಯಲ್ಲಿ ಹಾದುಹೋಗುವ ಹಡಗುಗಳ ಸಂಖ್ಯೆಯೂ ಹೆಚ್ಚುತ್ತಿದೆ ಎಂದು ಅದು ತಿಳಿಸಿದೆ.

ಪ್ರೋಸ್ಟೇಟ್ ಕ್ಯಾನ್ಸರ್‌ನಿಂದ ನೆತನ್ಯಾಹು ಗುಣಮುಖ: ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು 2024ರ ಡಿ.24ರಂದು ಪ್ರೋಸ್ಟೇಟ್ ಕ್ಯಾನ್ಸರ್ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರೆಂದು ಏ.20ರಂದು ಬಿಡುಗಡೆಗೊಳಿಸಲಾದ ವಾರ್ಷಿಕ ಆರೋಗ್ಯ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಆದರೆ ಶಸ್ತ್ರಚಿಕಿತ್ಸೆಯ ಬಳಿಕ ನೆತನ್ಯಾಹು ಮೂತ್ರದ ಸೋಂಕಿನಿಂದ ಬಳಲುತ್ತಿದ್ದರು. ಅಲ್ಲದೆ, ಹೃದಯ ಸಮಸ್ಯೆ ಇದ್ದಿದ್ದರಿಂದ ಪೇಸ್‌ಮೇಕರ್ ಅಳವಡಿಸಲಾಗಿದೆ. ನೆತನ್ಯಾಹು ಚೇತರಿಸುತ್ತಿದ್ದಾರೆ ಎಂದು ತಿಳಿದುಬಂದಿದೆ.

ಜೋನ್ಸ್ ಕಾಯ್ದೆ ವಿನಾಯಿತಿ 90 ದಿನಗಳ ವಿಸ್ತರಣೆ

ಅಮೆರಿಕದ ಬಂದರುಗಳಲ್ಲಿ ವಿದೇಶಿ ತೈಲ ಮತ್ತು ಅನಿಲ ಹಡಗುಗಳ ಮೇಲೆ ನಿಷೇಧ ಹೇರಿದ್ದ ಜೋನ್ಸ್ ಕಾಯ್ದೆಯ ವಿನಾಯಿತಿಯನ್ನು 90 ದಿನಗಳವರೆಗೆ ವಿಸ್ತರಿಸಿದ್ದಾಗಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶುಕ್ರವಾರ ಘೋಷಿಸಿದ್ದಾರೆ. ಜಾಗತಿಕ ತೈಲ ಬೆಲೆಯನ್ನು ಸಮತೋಲನಕ್ಕೆ ತರಬೇಕೆಂಬ ನಿಟ್ಟಿನಲ್ಲಿ ಟ್ರಂಪ್ ಮಾರ್ಚ್ ತಿಂಗಳಾರ್ಧ 60 ದಿನಗಳ ಜೋನ್ಸ್ ಕಾಯ್ದೆ ವಿನಾಯಿತಿ ಘೋಷಿಸಿದ್ದರು. ಇದರಿಂದ ಜಾಗತಿಕ ತೈಲ ಬೆಲೆ ಪ್ರತಿ ಬ್ಯಾರೆಲ್‌ಗೆ 3 ಡಾಲರ್‌ನಷ್ಟು ಕುಸಿದಿದ್ದು, 104 ಡಾಲರ್ ತಲುಪಿದೆ.

ಯುಎಸ್ ಹಸಿರು ನಿಶಾನೆ ತೋರಿಸಿದರೆ ಸರ್ವನಾಶ

ಅಮೆರಿಕ ಹಸಿರು ನಿಶಾನೆ ತೋರಿಸಿದರೆ ಇರಾನ್ ಮೇಲಿನ ಯುದ್ಧ ಪುನರಾರಂಭ ಮಾಡಲು ನಾವು ಸಿದ್ಧರಿದ್ದೇವೆ ಎಂದು ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲ್ ಕಟ್ಜ್ ಹೇಳಿದ್ದಾರೆ. ಅಮೆರಿಕ ಹಸಿರು ನಿಶಾನೆ ತೋರಿಸಿದರೆ ಖಮೇನಿ ಸಾಮ್ರಾಜ್ಯವನ್ನು ಸರ್ವನಾಶ ಮಾಡುವುದಾಗಿ ಹೇಳಿದ್ದಾರೆ.



ಸುದ್ದಿ ಸಮಗ್ರ

ಇ100 ಸ್ವಾವಲಂಬಿ ಭಾರತದ ಇಂಧನ

ಇ100 ಬಳಕೆಯಿಂದ ಪೆಟ್ರೋಲ್ ಅವಲಂಬನೆ ಇಳಿಕೆ

ಇ100 ಜಾರಿಗೊಳಿಸಿದರೆ ಕಚ್ಚಾ ತೈಲ ಆಮದು ಇಳಿಕೆ

ಶೇ.100 ಎಥೆನಾಲ್ + ಶೇ.0 ಪೆಟ್ರೋಲ್ = ಇ100

ಮಧ್ಯಪ್ರಾಚ್ಯ ಸಂಘರ್ಷ ಹಿನ್ನೆಲೆ ಇಂಧನ ಕ್ಷೇತ್ರದ ಮೇಲೆ ಸಂಪೂರ್ಣ ಗಮನವಿರುವ ಕಾರಣದಿಂದ ಭಾರತದ ವ್ಯವಹಾರ ಕ್ಷೇತ್ರದ ಮೇಲೆ ಯಾವುದೇ ದೊಡ್ಡ ಪರಿಣಾಮ ಬೀರಿಲ್ಲ. ಯಾಕೆಂದರೆ ಭಾರತ ಈಗಾಗಲೇ ಇ20 ಪೆಟ್ರೋಲ್ ಅನ್ನು ಸದ್ದಿಲ್ಲದೆ ಚಾಲ್ತಿಗೆ ತಂದಿದ್ದು, ಮುಂದಿನ ದಿನಗಳಲ್ಲಿ ಭಾರತ ಶೇ.100ರಷ್ಟು ಎಥೆನಾಲ್ ಮಿಶ್ರಿತ ಇಂಧನ ಬಳಕೆಯನ್ನು ಮಾಡಲಿದೆ. ಇದು ಪೆಟ್ರೋಲ್ ಮೇಲಿನ ಅವಲಂಬನೆ ಕಡಿಮೆಗೊಳಿಸಿ ದೇಶವನ್ನು ಇಂಧನ ಕ್ಷೇತ್ರದಲ್ಲಿ ಸ್ವಾವಲಂಬಿಯನ್ನಾಗಿ ಮಾಡಲಿದೆ. ಶೀಘ್ರದಲ್ಲಿ ಭಾರತ ಶೇ.100 ಎಥೆನಾಲ್ ಮಿಶ್ರಣದ ಇಂಧನವನ್ನು ಸಾಧಿಸಲಿದೆ ಎಂದು ಕೇಂದ್ರ ಇಂಧನ, ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ. ಭಾರತದ ಭವಿಷ್ಯದ ಇಂಧನ ಕುರಿತಾದ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

ಶೀಘ್ರದಲ್ಲಿ ಶೇ.100 ಎಥೆನಾಲ್ ಮಿಶ್ರಣ

ಪಶ್ಚಿಮ ಏಷ್ಯಾ ಸಂಘರ್ಷದ ಹಿನ್ನೆಲೆ ನಾವು ಇಂದಿನ ದಿನ ಇಂಧನ ವ್ಯತ್ಯಯ ಅನುಭವಿಸುತ್ತಿದ್ದೇವೆ. ಹೀಗಾಗಿ ಇಂಧನ ಕ್ಷೇತ್ರದಲ್ಲಿ ನಾವು ಸ್ವಾವಲಂಬಿಯಾಗುವ ಅಗತ್ಯವಿದೆ. ಅತಿ ಶೀಘ್ರದಲ್ಲಿ ಭಾರತ ಶೇ.100 ಎಥೆನಾಲ್ ಮಿಶ್ರಣ ಸಾಧಿಸಲಿದೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಇತ್ತೀಚೆಗೆ ನಡೆದ ಭಾರತೀಯ ಹಸಿರು ಇಂಧನ ಸಮಾವೇಶದಲ್ಲಿ ಹೇಳಿದ್ದರು.

- ಇ25, ಇ27, ಇ30, ಇ85, ಇ100 - ಇ20ನ ಮುಂದಿನ ಶ್ರೇಣಿಗಳು
- 1.21 ಲಕ್ಷ ಕೋಟಿ ರೂ. - ಮೋದಿ ಆಡಳಿತದ ಕಳೆದ 11 ವರ್ಷಗಳಿಂದ ಎಥೆನಾಲ್ ಸಂಗ್ರಹದಿಂದ ಕೃಷಿಕರಿಗಾದ ಆದಾಯ



ಬ್ರೆಜಿಲ್ ಮಾದರಿ?

1970ರಿಂದಲೇ ಬ್ರೆಜಿಲ್ ಸರ್ಕಾರ ಎಥೆನಾಲ್ ಮಿಶ್ರಿತ ಇಂಧನ ಬಳಕೆಯನ್ನು ಜಾರಿಗೆ ತಂದಿದ್ದು, ಫ್ಲೆಕ್ಸ್-ಫ್ಯುಯೆಲ್ ತಂತ್ರಜ್ಞಾನ ಹೊಂದಿರುವ ವಾಹನಗಳನ್ನೇ ತಯಾರಿಸಲು ಆಟೋಮೊಬೈಲ್ ಕಂಪನಿಗಳಿಗೆ ಉತ್ತೇಜನ ನೀಡಿತ್ತು. ಬ್ರೆಜಿಲ್‌ನ ಶೇ.90ರಷ್ಟು ವಾಹನಗಳು ಫ್ಲೆಕ್ಸ್-ಫ್ಯುಯೆಲ್ ತಂತ್ರಜ್ಞಾನ ಹೊಂದಿವೆ. ಫ್ಲೆಕ್ಸ್-ಫ್ಯುಯೆಲ್ ತಂತ್ರಜ್ಞಾನ ಹೊಂದಿರುವ ವಾಹನಗಳು ಹೈಡ್ರೇಟೆಡ್ ಎಥೆನಾಲ್, ಶುದ್ಧ ಪೆಟ್ರೋಲ್ ಅಥವಾ ಇವೆರಡರ ಮಿಶ್ರಣ ಬಳಸುವ ಸಾಮರ್ಥ್ಯ ಹೊಂದಿವೆ. ಆದರೆ ಸದ್ಯ ಬ್ರೆಜಿಲ್‌ನ ಎಥೆನಾಲ್-ಪೆಟ್ರೋಲ್ ಮಿಶ್ರಣ ಶೇ.25ರಿಂದ 27ರಷ್ಟು ಮಾತ್ರ ಎಥೆನಾಲ್ ಹೊಂದಿದೆ. ಹೀಗಾಗಿ ಎಥೆನಾಲ್ ಇಂಧನ ವಿಚಾರದಲ್ಲಿ ಬ್ರೆಜಿಲ್ ಅನುಭವ ಬಳಸಿಕೊಳ್ಳಲಿದ್ದು, ಬ್ರೆಜಿಲ್ ಕಾರ್ಯತಂತ್ರಗಳನ್ನು ಅನುಸರಿಸಲಿದೆ.



ಇ20 ಪೆಟ್ರೋಲ್ ಈಗಾಗಲೇ ಜಾರಿ

ದೇಶದೆಲ್ಲೆಡೆ ಇ20 ಪೆಟ್ರೋಲ್ ಪೂರೈಕೆಯನ್ನು ಕೇಂದ್ರ ಸರ್ಕಾರ ಕಡ್ಡಾಯವಾಗಿ ಜಾರಿಗೊಳಿಸಿದೆ. ಶೇ.80 ಪೆಟ್ರೋಲ್ ಮತ್ತು ಶೇ.20 ಎಥೆನಾಲ್ ಮಿಶ್ರಣವೇ ಇ20 ಪೆಟ್ರೋಲ್. ಎಥನಾಲ್, ಕಬ್ಬು ಅಥವಾ ಜೋಳ ಇತ್ಯಾದಿ ಸಸ್ಯಗಳಿಂದ ಸಂಗ್ರಹಿಸಲ್ಪಟ್ಟ ಇಂಧನ ಇದಾಗಿದೆ. ಎಥೆನಾಲ್ ಮಿಶ್ರಿತ ಪೆಟ್ರೋಲ್, ಕಾರ್ಬನ್ ಹೊರಸೂಸುವಿಕೆ ಪ್ರಮಾಣ ಮತ್ತು ಶುದ್ಧ ಪೆಟ್ರೋಲ್ ಅವಲಂಬನೆ ಕಡಿಮೆಗೊಳಿಸುತ್ತದೆ.

ದೇಶದಲ್ಲಿ ಫ್ಲೆಕ್ಸ್-ಫ್ಯುಯೆಲ್ ಕಾರುಗಳು ಸಿದ್ಧವಿವೆಯಾ?

ಪರಿಸರ ಹಿತಾಸಕ್ತಿಯಿಂದ ಎಥೆನಾಲ್-ಮಿಶ್ರಿತ ಇಂಧನವನ್ನು ಜಾರಿಗೊಳಿಸುವುದು ಉತ್ತಮ ನಿರ್ಧಾರವಾಗಿದೆ. ಆದರೆ ಸಂಪೂರ್ಣ ಎಥೆನಾಲ್ ಮಿಶ್ರಿತ ಇಂಧನವನ್ನು ಅನುಷ್ಠಾನಗೊಳಿಸುವುದು ಸವಾಲಿನ ಸಂಗತಿಯಾಗಿದೆ. ಇಂಡೋ-ರಷ್ಯಾ ಇಂಧನ ಕಂಪನಿ ನಯಾರ ಎನರ್ಜಿ ಪ್ರಕಾರ, ಇ20 ಪೆಟ್ರೋಲ್‌ನಲ್ಲಿ ಶೇ.20 ಎಥೆನಾಲ್ ಮತ್ತು ಶೇ.80 ಪೆಟ್ರೋಲ್ ಇದೆ. ಇದನ್ನು 2023ರಿಂದ ಅನುಷ್ಠಾನಕ್ಕೆ ತರಲಾಗಿದೆ. 2001ರ ನಂತರದ ವಾಹನಗಳು ಇ10 ಪೆಟ್ರೋಲ್ ಹೆಚ್ಚು ಬಳಸುತ್ತಿವೆ. ಇ20 ಪೆಟ್ರೋಲನ್ನು ಬಳಸುವುದರಿಂದ ಹಳೆಯ ವಾಹನಗಳ ಮೈಲೇಜ್ ಶೇ.5ರಿಂದ 15ರಷ್ಟು ಕಡಿಮೆ ಆಗುತ್ತವೆ. ಇನ್ನೊಂದೆಡೆ ಇ100 ಅನುಷ್ಠಾನಕ್ಕೆ ತರಲು ಭಾರತದಲ್ಲಿ ಫ್ಲೆಕ್ಸ್-ಫ್ಯುಯೆಲ್ ತಂತ್ರಜ್ಞಾನ ಅಳವಡಿಸಲ್ಪಟ್ಟ ಕಾರುಗಳು ಸದ್ಯ ಮಾರುಕಟ್ಟೆಯಲ್ಲಿ ಲಭ್ಯವಿಲ್ಲ. ಸದ್ಯ ಮಾರುಕಟ್ಟೆಯಲ್ಲಿ ಲಭ್ಯವಿರುವ ವಾಹನಗಳು ಶೇ.100 ಎಥೆನಾಲ್ ನಿರ್ವಹಿಸಲು ವಿನ್ಯಾಸಗೊಂಡಿಲ್ಲ. ಇ100 ಎಥೆನಾಲ್ ಬಳಕೆಗೆ ಭಾರತೀಯ ಕಾರು ಮಾರುಕಟ್ಟೆ ಇನ್ನೂ ಸಿದ್ಧವಾಗಿಲ್ಲ. ಪ್ರೀಮಿಯಂ ಕಾರುಗಳ ಉತ್ಪಾದನೆಗೆ ಹೆಸರುವಾಸಿ ಆಗಿರುವ ಟೊಯೊಟೊ ಅವರ ಇನೋವ ಹೈಕ್ರಾಸ್ ಫ್ಲೆಕ್ಸ್-ಫ್ಯುಯೆಲ್ ಹೈಬ್ರಿಡ್ ಮಾರುಕಟ್ಟೆಯಲ್ಲಿ ಲಭ್ಯವಿದ್ದು, ಶೇ.85 ಎಥೆನಾಲ್ ಮತ್ತು ಪೆಟ್ರೋಲ್ ನಿರ್ವಹಣಾ ಸಾಮರ್ಥ್ಯದೊಂದಿಗೆ ವಿನ್ಯಾಸಗೊಂಡಿದೆ. ಆದರೂ ಈ ಕಾರಿನ ಬೆಲೆ 18.7ರಿಂದ 31.84 ಲಕ್ಷ ರೂ. ಆಗಿದ್ದು, ಸಾಮಾನ್ಯ ಜನತೆಗೆ ಕೈಗೆಟಕುವ ಬೆಲೆಯಲ್ಲ. 2025ರಲ್ಲಿ ಕೇವಲ 8 ಫ್ಲೆಕ್ಸ್-ಫ್ಯುಯೆಲ್ ಕಾರುಗಳಷ್ಟೇ ದೇಶೀಯ ಕಾರು ಮಾರುಕಟ್ಟೆಯಲ್ಲಿ ಮಾರಾಟವಾಗಿವೆ. ಈ ತಂತ್ರಜ್ಞಾನ ದೇಶದಲ್ಲಿನ್ನೂ ಜನಪ್ರಿಯತೆ ಪಡೆದಿಲ್ಲ. ಟೊಯೊಟೊ ಬಿಟ್ಟರೆ ದೇಸಿ ಮಾರುಕಟ್ಟೆಯಲ್ಲಿ ಟಾಟಾ ಮೋಟರ್ಸ್, ಮಾರುತಿ ಸುಜುಕಿ ಮತ್ತು ಮಹೀಂದ್ರಾ ಕಂಪನಿಗಳು ಫ್ಲೆಕ್ಸ್-ಫ್ಯುಯೆಲ್ ತಂತ್ರಜ್ಞಾನದೊಂದಿಗೆ ವಿನ್ಯಾಸ ಮಾಡಲಾದ ಕಾರುಗಳನ್ನು ಪರಿಚಯಿಸಿವೆ. ಇವುಗಳ ಬೆಲೆ 5.65 ಲಕ್ಷದಿಂದ 10.6 ಲಕ್ಷ ರೂ. ಇವೆ.

ಆಮದು ಇಳಿಸಲು ಟರ್ಬೈನ್ ಮಿಶ್ರಣ?

ಕಚ್ಚಾ ತೈಲ ಆಮದು ಮಾಡುವುದನ್ನು ಕಡಿಮೆಗೊಳಿಸಲು ಇ100 ಇಂಧನ ಜಾರಿಗೆ ತರುವುದು, ಫ್ಲೆಕ್ಸ್-ಫ್ಯುಯೆಲ್ ತಂತ್ರಜ್ಞಾನದ ವಾಹನಗಳ ಬಳಕೆಗೆ ಉತ್ತೇಜನವನ್ನು ನೀಡುವುದಲ್ಲದೆ ಕೇಂದ್ರ ಸರ್ಕಾರ, ವಿಮಾನ (ಟರ್ಬೈನ್) ಇಂಧನವನ್ನು ಮಿಶ್ರಣ ಮಾಡುವ ಆಯ್ಕೆಯನ್ನೂ ಪರಿಗಣಿಸಿದೆ.

ಭಾರತದ ಎಥೆನಾಲ್ ಪಯಣ ತಡೆರಹಿತ

2014ರಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಅಧಿಕಾರ ಸ್ವೀಕರಿಸಿದ ಬಳಿಕ ಎಥೆನಾಲ್ ಮಿಶ್ರಿತ ಪೆಟ್ರೋಲ್ (ಇಬಿಪಿ) ಯೋಜನೆಗೆ ಹೆಚ್ಚಿನ ಉತ್ತೇಜನ ನೀಡಲಾಗಿದೆ. 2014ರಲ್ಲಿ ಶೇ.1.53 ಇದ್ದ ಎಥೆನಾಲ್ ಮಿಶ್ರಣ, 2022ರ ವೇಳೆಗೆ ಎಥೆನಾಲ್ ಮಿಶ್ರಣ ಶೇ.10 ತಲುಪಿತ್ತು. 2030ರ ವೇಳೆಗೆ ಶೇ.20 ಎಥೆನಾಲ್ ಮಿಶ್ರಣ ಗುರಿ ಇಟ್ಟಿದ್ದ ಕೇಂದ್ರ ಸರ್ಕಾರ 2027ರೊಳಗೆ ಗುರಿ ಸಾಧಿಸುವ ಪ್ರಯತ್ನದಲ್ಲಿದೆ. ಇ20 ಜಾರಿಗೆ ತಂದಿರುವುದರಿಂದ ಹಸಿರುಮನೆ ಅನಿಲ ಹೊರಸೂಸುವಿಕೆ ಇಳಿಕೆ, ವಾಯು ಗುಣಮಟ್ಟ ಸುಧಾರಣೆ, ಇಂಜಿನ್ ಕಾರ್ಯಕ್ಷಮತೆ ವಿಸ್ತರಣೆ ಇತ್ಯಾದಿ ಧನಾತ್ಮಕ ಪರಿಣಾಮಗಳನ್ನು ಬೀರಲಿದೆ. ವಿದೇಶಿ ವಿನಿಮಯ ಉಳಿತಾಯವು 1.4 ಲಕ್ಷ ಕೋಟಿ ರೂ. ದಾಟಿದೆ.

ಕಿರುಸುದ್ದಿ

ಪೇಟಿಎಂ ಬ್ಯಾಂಕ್ ಪರವಾನಗಿ ರದ್ದು

ಹೊಸದಿಲ್ಲಿ: ಮಾನದಂಡಗಳನ್ನು ಪಾಲಿಸದ ಕಾರಣ ಪೇಟಿಎಂ ಪೇಮೆಂಟ್ಸ್ ಬ್ಯಾಂಕ್‌ಗೆ ನೀಡಲಾದ ಬ್ಯಾಂಕಿಂಗ್ ಪರವಾನಗಿಯನ್ನು ರದ್ದುಗೊಳಿಸುವುದಾಗಿ ಆರ್‌ಬಿಐ ಶುಕ್ರವಾರ ಘೋಷಿಸಿದೆ. ಬ್ಯಾಂಕಿನ ವ್ಯವಹಾರಗಳನ್ನು ಅದರ ಠೇವಣಿದಾರರ ಹಿತಾಸಕ್ತಿಗೆ ಹಾನಿಕರ ರೀತಿಯಲ್ಲಿ ನಡೆಸಲಾಗಿದೆ ಎಂದು ಹೇಳಿದೆ. ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಈ ಬ್ಯಾಂಕ್ ಅನ್ನು ಮುಚ್ಚಲು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಿದೆ.

ಸಿಇಸಿ ಪದಚ್ಯುತಿಗೆ ಪ್ರತಿಪಕ್ಷಗಳ ನೋಟಿಸ್

ಹೊಸದಿಲ್ಲಿ: ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಪದಚ್ಯುತಿಗೊಳಿಸಲು ಪ್ರತಿಪಕ್ಷಗಳು ರಾಜ್ಯಸಭೆಯಲ್ಲಿ ಹೊಸ ನೋಟಿಸ್ ಸಲ್ಲಿಸಿವೆ. ಪಶ್ಚಿಮ ಬಂಗಾಳ ಮತ್ತು ತಮಿಳುನಾಡಿನ ವಿಧಾನಸಭಾ ಚುನಾವಣೆಗಳಿಗೆ ಮುಂಚಿತವಾಗಿ ಪ್ರಧಾನಿ ನರೇಂದ್ರ ಮೋದಿಯವರ ರಾಷ್ಟ್ರವನ್ನು ಉದ್ದೇಶಿಸಿ ಮಾಡಿದ ಭಾಷಣದ ವಿರುದ್ಧದ ದೂರುಗಳ ಮೇಲೆ ಚುನಾವಣಾ ಆಯೋಗವು ಕ್ರಮ ಕೈಗೊಳ್ಳುತ್ತಿಲ್ಲ ಎಂದು ಪ್ರತಿಪಕ್ಷಗಳು ಆರೋಪಿಸಿವೆ.

ಅಂಗ, ಬಂಗ, ಕಳಿಂಗದಲ್ಲಿ ಬಿಜೆಪಿ ಆಡಳಿತ: ಅಮಿತ್

ಕೋಲ್ಕತ್ತಾ: ಇಂದಿನ ಪೂರ್ವ ಭಾರತವನ್ನು ಆಳಿದ ಪ್ರಾಚೀನ ರಾಜ್ಯಗಳಾದ ಅಂಗ, ಬಂಗ ಮತ್ತು ಕಳಿಂಗ ಮುಂದಿನ ತಿಂಗಳು ಬಿಜೆಪಿ ಸರ್ಕಾರಗಳನ್ನು ಹೊಂದಿರುತ್ತವೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯ ಮೊದಲ ಹಂತದಲ್ಲಿ ಜನರು ಉತ್ಸಾಹದಿಂದ ಮತ ಚಲಾಯಿಸಿದ್ದಾರೆ ಎಂದು ಅಮಿತ್ ಶಾ ಸಂತಸ ವ್ಯಕ್ತಪಡಿಸಿದ್ದಾರೆ. ಕೋಲ್ಕತ್ತಾದಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಶಾ, ಗುರುವಾರ ಮೊದಲ ಹಂತದ ಚುನಾವಣೆಯಲ್ಲಿ 152 ಸ್ಥಾನಗಳಲ್ಲಿ ಬಿಜೆಪಿ 110ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲಲಿದೆ ಎಂದು ಹೇಳಿದರು. ಬಂಗಾಳದ ಜನರು ಮೊದಲ ಹಂತದಲ್ಲಿ ಎಲ್ಲಾ ದಾಖಲೆಗಳನ್ನು ಮುರಿದಿದ್ದಾರೆ. ಬದಲಾವಣೆಗೆ ಉತ್ಸಾಹದಿಂದ ಮತ ಚಲಾಯಿಸಿದ್ದಾರೆ. ಮೊದಲ ಹಂತದ ಚುನಾವಣೆಯಲ್ಲಿ ಯಾವುದೇ ಸಾವು ಸಂಭವಿಸದಂತೆ ನೋಡಿಕೊಂಡಿದ್ದಕ್ಕಾಗಿ ನಾನು ಚುನಾವಣಾ ಆಯೋಗ ಮತ್ತು ಭದ್ರತಾ ಪಡೆಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ ಎಂದಿದ್ದಾರೆ. 2016ರ ವಿಧಾನಸಭಾ ಚುನಾವಣೆಯಲ್ಲಿ 1,278 ಜನರು ಮತ್ತು 2021ರಲ್ಲಿ 1,681 ಜನರು ಗಾಯಗೊಂಡಿದ್ದಾರೆ ಎಂದು ಹೇಳಿದರು. ಟಿಎಂಸಿಯ ನಿರ್ಗಮನ ಸನ್ನಿಹಿತವಾಗಿದೆ ಎಂದು ಹೇಳಿಕೊಂಡ ಶಾ, ರಾಜ್ಯದಲ್ಲಿ ಬಿಜೆಪಿ ಸಂಪೂರ್ಣ ಬಹುಮತದೊಂದಿಗೆ ಸರ್ಕಾರ ರಚಿಸುತ್ತದೆ ಎಂದು ಹೇಳಿದರು. ನಾನು ಈ ಬಾರಿ ಸುನಾಮಿಯನ್ನು ನೋಡುತ್ತಿದ್ದೇನೆ, ಸ್ಥಾನಗಳ ಸಂಖ್ಯೆ ಮತ್ತು ಗೆಲುವಿನ ಅಂತರವು ತುಂಬಾ ಹೆಚ್ಚಾಗಿರುತ್ತದೆ ಎಂದು ನಾನು ಭಾವಿಸುತ್ತೇನೆ ಎಂದು ಹೇಳಿದರು.




ಹಾಲ್ ಆಫ್ ಫೇಮ್‌ಗೆ ಜ.ದ್ವಿವೇದಿ ಸೇರ್ಪಡೆ

ಹೊಸದಿಲ್ಲಿ: ಸೇನಾ ಮುಖ್ಯಸ್ಥ (ಸಿಒಎಎಸ್) ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿಯನ್ನು ಪೆನ್ಸಿಲ್ವೇನಿಯಾದಲ್ಲಿರುವ ಯುಎಸ್ ಆರ್ಮಿ ವಾರ್ ಕಾಲೇಜಿನ ಇಂಟರ್‌ನ್ಯಾಷನಲ್ ಹಾಲ್ ಆಫ್ ಫೇಮ್‌ಗೆ ಸೇರ್ಪಡೆ ಮಾಡಿಕೊಳ್ಳಲಾಗಿದೆ ಎಂದು ಭಾರತೀಯ ಸೇನೆ ಶುಕ್ರವಾರ ತಿಳಿಸಿದೆ. ಇದರೊಂದಿಗೆ, ಜನರಲ್ ವಿ. ಕೆ. ಸಿಂಗ್ ಮತ್ತು ಜನರಲ್ ಬಿಕ್ರಮ್ ಸಿಂಗ್ ನಂತರ ಈ ಗೌರವವನ್ನು ಪಡೆದ ಮೂರನೇ ಸಿಒಎಎಸ್ ಆಗಿದ್ದಾರೆ. ಅಮೆರಿಕಕ್ಕೆ ಭೇಟಿ ನೀಡಿದ ಜನರಲ್ ದ್ವಿವೇದಿ ಅವರು ಕಾರ್ಲಿಸ್ಲೆ ಬ್ಯಾರಕ್ಸ್‌ನಲ್ಲಿರುವ ಆರ್ಮಿ ವಾರ್ ಕಾಲೇಜಿನಲ್ಲಿ (ಎಡಬ್ಲ್ಯೂಸಿ) ಈ ಗೌರವವನ್ನು ಪಡೆದ ನಂತರ ನಾಯಕತ್ವ, ವೃತ್ತಿಪರ ಮಿಲಿಟರಿ ಶಿಕ್ಷಣ ಮತ್ತು ಭದ್ರತಾ ಡೈನಾಮಿಕ್ಸ್ ಅನ್ನು ಅಭಿವೃದ್ಧಿಪಡಿಸುವ ಕುರಿತು ಸಭೆಯನ್ನುದ್ದೇಶಿಸಿ ಮಾತನಾಡಿದರು ಎಂದು ಎಕ್ಸ್‌ನಲ್ಲಿನ ಪೋಸ್ಟ್‌ನಲ್ಲಿ ಭಾರತೀಯ ಸೇನೆಯು ಹೇಳಿದೆ. ಯುಎಸ್ ಎಡಬ್ಲ್ಯೂಸಿ ಡಿಸ್ಟಿಂಗ್ವಿಶ್ಡ್ ಫೆಲೋ, ಪ್ರತಿಷ್ಠಿತ ಕಾಲೇಜಿನ ಹಳೆಯ ವಿದ್ಯಾರ್ಥಿಯಾಗಿದ್ದು, ಪ್ರಮುಖ ಸೌಲಭ್ಯಗಳಿಗೆ ಭೇಟಿ ನೀಡಿ, ಪ್ಯಾನೆಲ್ ಚರ್ಚೆಗಳು, ವಿದ್ವಾಂಸರ ಕಾರ್ಯಕ್ರಮದ ಮುಂದುವರಿದ ಅಧ್ಯಯನ ಯೋಜನೆಗಳನ್ನು ಪರಿಶೀಲಿಸುವುದು ಮತ್ತು ಸಂಸ್ಥೆಯ ಪ್ರತಿಷ್ಠಿತ ಸದಸ್ಯರೊಂದಿಗೆ ಸಂವಾದ ನಡೆಸುವುದು ಸೇರಿದಂತೆ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ ಎಂದು ಸೇನೆ ಪೋಸ್ಟ್ ಮಾಡಿದೆ.



ಟಿಸಿಎಸ್: ಆಕರ್ಷಕವಾಗಿ ಕಾಣಲು ಜಿಮ್‌ಗೆ ಹೋಗು

ನಾಸಿಕ್ : ಟಾಟಾ ಕನ್ಸಲ್ಟೆನ್ಸಿಯ ನಾಸಿಕ್ ಘಟಕದಲ್ಲಿ ಬಲವಂತದ ಮತಾಂತರ ಪ್ರಕರಣದ ತನಿಖೆ ನಡೆದಿರುವಂತೆಯೇ ಇದೇ ತೆರನಾದ ಇನ್ನೊಂದು ಪ್ರಕರಣ ಬಯಲಾಗಿದೆ. ಈಗಾಗಲೆ ಬಂಧಿತ ಆರೋಪಿಗಳ ಪೈಕಿ ಶಾರುಖ್ ಖುರೇಶಿ ಮತ್ತು ರಝಾ ಮೆಮನ್ ತನಗೆ ಲೈಂಗಿಕ ಕಿರುಕುಳ, ಮಾನಸಿಕ ಚಿತ್ರಹಿಂಸೆ ನೀಡಿದ್ದಾರೆಂದು ಮಹಿಳಾ ಉದ್ಯೋಗಿಯೋರ್ವರು ತಮ್ಮ ದೂರಿನಲ್ಲಿ ಆರೋಪಿಸಿದ್ದಾರೆ. ಈ ವರ್ಷ ಜನವರಿಯಲ್ಲಿ ಖುರೇಶಿ ನನ್ನನ್ನು ಆತನ ಡೆಸ್ಕ್‌ಗೆ ಕರೆಸಿಕೊಂಡು ನನ್ನ ವೈಯಕ್ತಿಕ ಬದುಕಿನ ಬಗ್ಗೆ ವಿಚಾರಿಸಿದ್ದ. ನಿನಗೆ ಬಾಯ್‌ಫ್ರೆಂಡ್ ಇದ್ದಾನಾ ಅಥವಾ ಮಾಜಿ ಬಾಯ್ ಫ್ರೆಂಡ್ ಇದ್ದಾರೋ ಎಂದು ದುರುಗುಟ್ಟಿಕೊಂಡು ಪ್ರಶ್ನಿಸಿದ್ದ. ಆತನ ಪ್ರಶ್ನೆಯಿಂದ ತನಗೆ ಮಾನಸಿಕವಾಗಿ ತೀರಾ ಹಿಂಸೆಯಾಗಿತ್ತು. ನಂತರ ಒಂದು ವಾರದ ಬಳಿಕ ಆರೋಪಿಗಳಾದ ಖುರೇಶಿ ಮತ್ತು ಮೆಮನ್ ಇಬ್ಬರೂ ಕೆಲಸದ ನೆಪದಲ್ಲಿ ನನ್ನನ್ನು ಬರಹೇಳಿ, ತನ್ನ ಸ್ವರೂಪ ಬಗ್ಗೆ ಅಸಂಬದ್ಧವಾಗಿ ಕಮೆಂಟ್ ಮಾಡಿದ್ದರು. ನೀನು ಜಿಮ್‌ಗೆ ಹೋದಲ್ಲಿ ಆಕರ್ಷಕವಾಗುತ್ತಿ ಎಂದು ಅಸಹ್ಯವಾಗಿ ಸಲಹೆ ನೀಡಿದ್ದರೆಂದು ಮಹಿಳೆ ದೂರಿನಲ್ಲಿ ಆರೋಪಿಸಿದ್ದಾರೆ.



ನೀನು ತೀರಾ ತೆಳ್ಳಗಿದ್ದಿ. ಜಿಮ್‌ಗೆ ಹೋದಲ್ಲಿ ಶಾರೀರಿಕವಾಗಿ ಆಕರ್ಷಕಳಾಗುತ್ತಿ ಎಂದು ಮೆಮನ್ ತನಗೆ ಸಲಹೆ ಮಾಡಿದ್ದ. ತನ್ನ ಸಂಬಂಧಗಳ ಬಗ್ಗೆ ವಿಚಾರಿಸಿ, ಇಲಾಖೆಯಲ್ಲಿ ಯಾರಾದರು ನಿನ್ನನ್ನು ಇಷ್ಟಪಟ್ಟಿದ್ದಾರೋ ಎಂದು ಕೂಡ ಕೇಳಿದ್ದ. ಹಬ್ಬದ ದಿನ ಹೊಸ ಉಡುಗೆ ಧರಿಸಿ ಹೋದಾಗ ಆತನ ವರ್ತನೆ ಮತ್ತೂ ವಿಚಿತ್ರವಾಗಿತ್ತು ಎಂದು ಆರೋಪಿಸಿದ್ದಾರೆ.

ಭಾರತ-ನ್ಯೂಜಿಲೆಂಡ್ ಶೀಘ್ರ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ

ಹೊಸದಿಲ್ಲಿ: ಭಾರತ ಮತ್ತು ನ್ಯೂಜಿಲೆಂಡ್ ಮುಂದಿನ ಸೋಮವಾರ (ಏ.27ರಂದು) ಮುಕ್ತ ವ್ಯಾಪಾರ ಒಪ್ಪಂದಕ್ಕೆ (ಎಫ್‌ಟಿಎ) ಸಹಿ ಹಾಕುತ್ತವೆ ಎಂದು ಪ್ರಧಾನಿ ಕ್ರಿಸ್ಟೋಫರ್ ಲಕ್ಸನ್ ಶುಕ್ರವಾರ ಖಚಿತಪಡಿಸಿದ್ದಾರೆ. ಈ ಒಪ್ಪಂದವು ದೇಶೀಯ ರಫ್ತುದಾರರ ಸರಕುಗಳಿಗೆ ದ್ವೀಪ ರಾಷ್ಟ್ರದ ಮಾರುಕಟ್ಟೆಗೆ ಸುಂಕ ರಹಿತ ಪ್ರವೇಶವನ್ನು ಒದಗಿಸುವ ಗುರಿಯನ್ನು ಹೊಂದಿದೆ. ಮುಂದಿನ 15 ವರ್ಷಗಳಲ್ಲಿ 20 ಶತಕೋಟಿ ಡಾಲರ್ ಹೂಡಿಕೆಯನ್ನು ತರುತ್ತದೆ. ನಾವು ಸೋಮವಾರ ಭಾರತದೊಂದಿಗೆ ನಮ್ಮ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕುತ್ತೇವೆ ಎಂದು ಲಕ್ಸನ್ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಮುಂದಿನ ಐದು ವರ್ಷಗಳಲ್ಲಿ ದ್ವಿಪಕ್ಷೀಯ ವ್ಯಾಪಾರವನ್ನು 5 ಶತಕೋಟಿ ಡಾಲರ್‌ಗೆ ದ್ವಿಗುಣಗೊಳಿಸುವ ಗುರಿ ಹೊಂದಿರುವ ವ್ಯಾಪಾರ ಒಪ್ಪಂದದ ಮಾತುಕತೆಗಳ ಮುಕ್ತಾಯವನ್ನು ಉಭಯ ದೇಶಗಳು ಕಳೆದ ವರ್ಷ ಡಿಸೆಂಬರ್‌ನಲ್ಲಿ ಘೋಷಿಸಿದವು.

ಪವಿತ್ರ ಜಲ ಸಮಗ್ರ ನಾಗರೀಕತೆಯ ಕಾಲಾತೀತ ಸ್ಫೂರ್ತಿಯಿಂದ ಸಂಪನ್ನ

ಹೂಗ್ಲಿ ನದಿಯಲ್ಲಿ ಮೋದಿ ದೋಣಿ ವಿಹಾರ

ಕೋಲ್ಕತ್ತಾ : ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಇಲ್ಲಿನ ಹೂಗ್ಲಿ ನದಿಯಲ್ಲಿ ದೋಣಿ ವಿಹಾರ ನಡೆಸಿದರು. ಹೂಗ್ಲಿ ನದಿಯ ಪವಿತ್ರ ಜಲವು ಸಮಗ್ರ ನಾಗರೀಕತೆಯ ಕಾಲಾತೀತ ಸ್ಫೂರ್ತಿಯಿಂದ ಸಂಪನ್ನಗೊಂಡಿದೆ ಎಂದು ಪ್ರಧಾನಿ ಹೇಳಿದ್ದಾರೆ. ಪಶ್ಚಿಮ ಬಂಗಾಳದ ಅಭಿವೃದ್ಧಿ ಮತ್ತು ಶ್ರೇಷ್ಠ ಬಂಗಾಳಿಯರ ಸಂಪನ್ನತೆಗೆ ತಾನು ಕಟಿಬದ್ಧನಿರುವುದಾಗಿ ಭರವಸೆ ನೀಡಿದ್ದಾರೆ.

ಹೂಗ್ಲಿ ನದಿಯಲ್ಲಿ ತಮ್ಮ ದೋಣಿ ವಿಹಾರದ ಕೆಲವು ಫೋಟೋಗಳನ್ನು ಪ್ರಧಾನಿ ಮೋದಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾರೆ. ಫೋಟೋದಲ್ಲಿ ಪ್ರಧಾನಿಯವರು ಕ್ಯಾಮರಾವನ್ನು ಕೈಯ್ಯಲ್ಲಿ ಹಿಡಿದುಕೊಂಡು ಮರದ ದೋಣಿಯಲ್ಲಿ ಕುಳಿತಿರುವ ದೃಶ್ಯವಿದೆ. ದಂತಕಥೆ ಹೌರಾ ಸೇತುವೆ ಮತ್ತು ವಿದ್ಯಾಸಾಗರ ಸೇತುಗಳು ಹಿನ್ನೆಲೆಯಲ್ಲಿವೆ. ಈ ಮಹಾನ್ ನದಿಯ ಫೋಟೋ ತೆಗೆಯಲು ಶ್ರಮಿಸಿದೆ, ಏಕಕಾಲಕ್ಕೆ ವಿದ್ಯಾಸಾಗರ ಸೇತು ಮತ್ತು ಹೌರಾ ಸೇತುವೆಗಳ ಚಿತ್ತಾಕರ್ಷಕ ದೃಶ್ಯವನ್ನೂ ಸೆರೆಹಿಡಿದಿರುವೆ ಎಂದು ಪ್ರಧಾನಿ ಮೋದಿ ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.



ಪ್ರತೀ ಬಂಗಾಳಿಗಳ ಪಾಲಿಗೆ ಗಂಗಾ ನದಿ ಅತ್ಯಂತ ಪವಿತ್ರ ಮತ್ತು ವಿಶೇಷವಾದುದು ಎಂದು ಪ್ರಧಾನಿ ಹೇಳಿದ್ದಾರೆ. ಗಂಗೆಯು ಬಂಗಾಳದ ಆತ್ಮದಿಂದಾಗಿ ಹರಿಯುತ್ತೆ ಎಂದು ಜನರು ಹೇಳಬಹುದು. ಗಂಗೆಯ ಪವಿತ್ರ ಜಲವು ಇಡೀ ನಾಗರೀಕತೆಯ ಕಾಲಾತೀತ ಸ್ಫೂರ್ತಿಯನ್ನು ಒಳಗೊಂಡಿದೆ. ಶುಕ್ರವಾರ ಮುಂಜಾನೆ ಕೋಲ್ಕತ್ತಾದಲ್ಲಿ ಹೂಗ್ಲೀ ನದೀ ತೀರದಲ್ಲಿ ತಾನು ಕೆಲ ಹೊತ್ತು ಕಳೆದೆ. ಗಂಗಾಮಾತೆಗೆ ನನ್ನ ಕೃತಜ್ಞತೆ ಸಲ್ಲಿಸಲು ಇದೊಂದು ಅಪೂರ್ವ ಅವಕಾಶವಾಯಿತು. ನಾವಿಕರನ್ನು ಭೇಟಿಯಾಗಲು ತನಗೆ ಸದವಕಾಶ ದೊರೆಯಿತು. ಅವರ ಕಠಿಣ ಪರಿಶ್ರಮ ಪ್ರಶಂಸಾರ್ಹ. ಜತೆಗೆ ಮುಂಜಾನೆಯ ವಾಕರ್‌ಗಳೂ ಪ್ರವಾಸ ಸಂದರ್ಭ ಕಾಣಸಿಕ್ಕರು.

ಗುರುವಾರ ಮುಂಜಾನೆ ಹೌರಾದಿಂದ ಕೋಲ್ಕತ್ತಾವರೆಗೆ ರೋಡ್‌ಶೋ ನಡೆಸಿದ ನಂತರದಲ್ಲಿ ರಾತ್ರಿ ಇಲ್ಲಿನ ಲೋಕಭವನದಲ್ಲಿ ಪ್ರಧಾನಿ ಮೋದಿ ವಾಸ್ತವ್ಯ ಹೂಡಿದರೆಂದು ಬಿಜೆಪಿ ಮೂಲಗಳು ತಿಳಿಸಿವೆ. ಶುಕ್ರವಾರ ಮುಂಜಾನೆ ದೋಣಿ ವಿಹಾರಕ್ಕಾಗಿ ನೇರ ಪ್ರಿನ್ಸೆಪ್ ಘಾಟ್‌ಗೆ ಪ್ರಧಾನಿ ಮೋದಿ ತೆರಳಿದ್ದರು. ಗುರುವಾರ ಸಂಜೆ ಹೌರಾದಿಂದ ಕೋಲ್ಕತ್ತಾವರೆಗಿನ ಸುದೀರ್ಘ ರೋಡ್‌ಶೋ ಸಂದರ್ಭ ತಾನು ಹೌರಾ ಸೇತುವೆಯಲ್ಲಿದ್ದೆ. ಆದರೆ ಇಂದು ಮುಂಜಾನೆ ತಾನು ಹೂಗ್ಲಿ ನದಿಯಿಂದ ಈ ಸೇತುವೆಯನ್ನು ವೀಕ್ಷಿಸಿದೆ. ಪ.ಬಂಗಾಳದ ಸಂಪನ್ನತೆ ಮತ್ತು ಬಂಗಾಳಿ ಜನರ ಕಲ್ಯಾಣಕ್ಕಾಗಿಗಿ ಪರಿಶ್ರಮಿಸುವ ಸಂಕಲ್ಪವನ್ನು ಹೂಗ್ಲಿ ನದಿಯಲ್ಲಿ ವಿಹಾರದಲ್ಲಿರುವಾಗಲೆ ನಾವು ಪುನರುಚ್ಚರಿಸಿದೆವು ಎಂದು ಮೋದಿ ಪೋಸ್ಟ್‌ನಲ್ಲಿ ಬಣ್ಣಿಸಿದ್ದಾರೆ.

ಸೌಹಾರ್ದಯುತವಾಗಿ ಒಟ್ಟಿಗೆ ಬದುಕಬೇಕು ಎಂದ ಮೋದಿ

ದೋಣಿ ಮಾಲೀಕ ಇಫ್ತಿಖರ್ ಸಂತಸ

ದೋಣಿ ಮಾಲೀಕರಲ್ಲಿ ಒಬ್ಬರಾದ ಮೊಹಮ್ಮದ್ ಇಫ್ತಿಖರ್ ಅಹ್ಮದ್ ಅವರು ಮೋದಿಯೊಂದಿಗೆ ಪ್ರಯಾಣಿಸಿ ಸಂತಸ ಹಂಚಿಕೊಂಡಿದ್ದಾರೆ. ತಮ್ಮ ಪ್ರಯಾಣದ ವೇಳೆ ಮೋದಿಯವರು ನಾವೆಲ್ಲರೂ ಸೌಹಾರ್ದಯುತವಾಗಿ ಒಟ್ಟಿಗೆ ಬದುಕಬೇಕು ಎಂದು ಹೇಳಿದ್ದಾರೆ ಎಂದು ಮಾಧ್ಯಮದ ಜತೆ ಇಫ್ತಿಖರ್ ಹಂಚಿಕೊಂಡಿದ್ದಾರೆ. ಮತ್ತೋರ್ವ ದೋಣಿಗಾರ ಗೌರಾಂಗೋ ಬಿಸ್ವಾಸ್ ಕೂಡ ಈ ಭೇಟಿ ಬಗ್ಗೆ ಸಂತಸ ವ್ಯಕ್ತಪಡಿಸಿದ್ದು, ದೋಣಿ ವಿಹಾರ ಮುಗಿದ ಮೇಲೆ, ಪ್ರಧಾನಿ ಮೋದಿಯವರು ತಮ್ಮನ್ನು ಅಪ್ಪಿಕೊಂಡರು ಎಂದು ಬಿಸ್ವಾಸ್ ಹೇಳಿದ್ದಾರೆ. ಈ ಸವಾರಿಗಾಗಿ ಮೋದಿ 1,000 ರೂ.ಗಳನ್ನು ಪಾವತಿಸಿದ್ದಾರೆ ಎಂದು ಅವರು ಉಲ್ಲೇಖಿಸಿದ್ದಾರೆ.

ವಿಜಯ ಪತಾಕೆ ಅರಳಿಸಬೇಕೆಂದು ಪ್ರಧಾನಿ ಮೋದಿ ಕರೆ

ಜಂಗಲ್‌ರಾಜ್ ಅಂತ್ಯದ ಆರಂಭ

ಕೋಲ್ಕತ್ತಾ: ಮೊದಲ ಹಂತದ ಚುನಾವಣೆ ದಾಖಲಿಸಿದ ಮತದಾನ ಪ್ರಮಾಣ ಬದಲಾವಣೆಯ ಅಲೆಗಳಿಗೆ ಮೊಹರು ಹಾಕಿದೆ. ಟಿಎಂಸಿಯ ಮಹಾ ಜಂಗಲ್‌ರಾಜ್ ಅಂತ್ಯದ ಆರಂಭವನ್ನು ಸಾಂಕೇತಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಆತ್ಮವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಟಿಎಂಸಿಯ ನಿರಂಕುಶಪ್ರಭುತ್ವದ ಅಂತ್ಯಗೊಳಿಸಿ ರಾಜ್ಯದ ಆಡಳಿತ ವ್ಯವಸ್ಥೆಯಲ್ಲಿ ಬದಲಾವಣೆ ತರುವಂತೆ ಬಿಜೆಪಿ ನೀಡಿದ ಕರೆಗೆ ಸ್ಪಂದನೆ ರೂಪದಲ್ಲಿ, ರಾಜ್ಯದಲ್ಲಿ ಅತ್ಯಧಿಕ ಮತದಾನ ದಾಖಲಾಗಿದೆ ಎಂದು ಪ್ರಧಾನಿ ಮೋದಿ ಖುಷಿ ವ್ಯಕ್ತಪಡಿಸಿದರು. ಉತ್ತರ 24ಪರಗಣ ಜಿಲ್ಲೆಯ ಡಮ್ ಡಮ್ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಪಾಣಿಹತಿಯಲ್ಲಿ ಚುನಾವಣಾ ರ‍್ಯಾಲಿ ಉದ್ದೇಶಿಸಿ ಪ್ರಧಾನಿ ಮೋದಿ ಮಾತನಾಡಿದರು. ರಾಜ್ಯದ 3.60ಕೋಟಿ ಮತದಾರರ ಪೈಕಿ ಶೇ.93ರಷ್ಟು ಮತದಾರರು ಗುರುವಾರ ನಡೆದ ಮೊದಲ ಹಂತದ ಚುನಾವಣೆಯಲ್ಲಿ ಮತದಾನ ಮಾಡಿದ್ದಾರೆ. ಗುರುವಾರದ ಮತದಾನ ಸಂದರ್ಭ ಮತದಾರರು ಬಿಜೆಪಿ ಪರ ವ್ಯಕ್ತಪಡಿಸಿದ ಬೆಂಬಲವು ಪಕ್ಷದ ವಿಜಯಕ್ಕೆ ಶಂಖನಾದವಾಗಿದೆ ಎಂದು ಪ್ರಧಾನಿ ಬಣ್ಣಿಸಿದರು. ಆಳುವ ಟಿಎಂಸಿಯು ಪುಡಿಗಟ್ಟಿದ್ದ ಪ್ರಜಾಸತ್ತೆಯ ಮಂದಿರವನ್ನು ಮೊದಲ ಹಂತದ ಚುನಾವಣೆಯಲ್ಲಿ ಮತದಾರರು ಪುನರ್ ನಿರ್ಮಿಸಿದ್ದಾರೆ. ಇನ್ನೀಗ ದ್ವಿತೀಯ ಹಂತದ ಮತದಾನದಲ್ಲಿ ಪ್ರಜಾಸತ್ತೆಯ ಈ ದೇಗುಲದ ಮೇಲೆ ನೀವು ವಿಜಯ ಪತಾಕೆಯನ್ನು ಅರಳಿಸಬೇಕೆಂದು ಮತದಾರರಿಗೆ ಪ್ರಧಾನಿ ಮೋದಿ ಕರೆಯಿತ್ತರು. ಗುರುವಾರದ ಮತದಾನ ಕಂಡು ಟಿಎಂಸಿಗೆ ಗರ ಬಡಿದಿದೆ. ಹಾಗಾಗೆ ಆಳುವ ಪಕ್ಷ ಮತದಾರರು ಮತ್ತು ಬಿಜೆಪಿ ಕಾರ್ಯಕರ್ತರನ್ನು ಬೆದರಿಸಿ ಬಗ್ಗುಬಡಿಯಲು ತನ್ನ ಗೂಂಡಾಗಳನ್ನು ಛೂ ಬಿಟ್ಟಿದೆ.

ಗೂಂಡಾಗಳ ರಕ್ಷಿಸೋರೇ ಇಲ್ಲ: ಆಳುವ ಸರಕಾರ ಬಿದ್ದೇ ಹೋಗಲಿದೆ ಎಂಬುದನ್ನು ಮೊದಲ ಹಂತದ ಮತದಾನ ಪ್ರಮಾಣವೇ ಸಾಬೀತುಪಡಿಸಿದೆ ಎಂದು ಪ್ರಧಾನಿ ಮೋದಿ ಟಿಎಂಸಿಯನ್ನು ಕಟುವಾಗಿ ತರಾಟೆಗೆತ್ತಿಕೊಂಡರು. ಮೇ 4ರಂದು ಫಲಿತಾಂಶ ಪ್ರಕಟವಾದ ನಂತರ ಟಿಎಂಸಿ ಗೂಂಡಾಗಳು ಎಲ್ಲೂ ಅಡಗಿಕೂರುವಂತಿಲ್ಲ, ಯಾರೂ ಅವರನ್ನು ರಕ್ಷಿಸಲಾರರು. ಬದಲಾವಣೆ ಅಗತ್ಯ, ಬಿಜೆಪಿ ಸರಕಾರ ನಮಗೆ ಬೇಕೆಂದು ಇಡೀ ಬಂಗಾಳಕ್ಕೆ ಬಂಗಾಳ ಕೂಗಿ ಹೇಳುತ್ತಿದೆ ಎಂದು ಮೋದಿ ಹೇಳಿದರು.

ಹತ್ತಾರು ಹಳ್ಳಿಗೆ ಆಸರೆ ಹುಲಿಯಾಪುರ ಕೆರೆ



ಕುಷ್ಟಗಿ: ತಾಲೂಕಿನ ಹುಲಿಯಾಪೂರು ಗ್ರಾಮದ ಕೆರೆಯಲ್ಲಿ ಸಂಪೂರ್ಣ ನೀರು ಸಂಗ್ರಹವಾಗಿದ್ದು, ಗ್ರಾಮವಲ್ಲದೇ ಸುತ್ತಲಿನ ಹತ್ತಾರು ಗ್ರಾಮಗಳಿಗೆ ಈ ಕೆರೆಯು ವರವಾಗಿದೆ.

ತಾಲೂಕು ಕೇಂದ್ರದಿಂದ ಪೂರ್ವಭಾಗಕ್ಕೆ ಹೊಂದಿರುವ ಹುಲಿಯಾಪೂರು ಗ್ರಾಮದ ಕೆರೆಯು ಅಂದಾಜು 340 ಎಕರೆ ಜಮೀನಲ್ಲಿ ನಿರ್ಮಾಣವಾದ ಕೆರೆ ಬಹಳ ವಿಸ್ತೀರ್ಣತೆಯಿಂದ ಕೂಡಿದೆ. ಮಳೆ ನೀರಿನಿಂದ ಸಂಗ್ರಹಿಸಿದ ಕೆರೆ ನೀರು ಜಾನುವಾರಗಳಿಗೆ, ಜನ, ಕೃಷಿ ಚಟುವಟಿಕೆಗಳ ಹಾಗೂ ಬೇಸಿಗೆಯಲ್ಲಿ ಪ್ರಾಣಿ ಪಕ್ಷಿಗಳಿಗೆ ದಾಹ ಇಂಗಿಸಿಕೊಳ್ಳಲು ಕೆರೆ ಆವರಣದಲ್ಲಿ ಸಂಗ್ರಹವಾದ ಜಲ ಮೂಲದಿಂದ ಈ ಭಾಗದ ರೈತಾಪಿ ವರ್ಗಕ್ಕೆ ಸಹಾಯ ಹಸ್ತ ನೀಡಿದೆ. ಪ್ರತಿನಿತ್ಯವೂ ಈ ಕೆರೆಯಲ್ಲಿ ಕುರಿಗಾಹಿಗಳು, ರೈತಾಪಿ ವರ್ಗ ಈ ಕೆರೆಯನ್ನು ಬಹುತೇಕವಾಗಿ ನೆಚ್ಚಿಕೊಂಡಿರುವುದು ವಾಡಿಕೆ. ಪ್ರತಿವರ್ಷವೂ ಮುಂಗಾರಿನಲ್ಲಿ ಸುರಿಯುತ್ತಿರುವ ಧಾರಕಾರ ಮಳೆಯಿಂದ ಒಮ್ಮೆ ಜಲಾವೃತಗೊಂಡರೆ ನೀರು ಬತ್ತವುದಿಲ್ಲ, ವಿಶಾಲವಾದ ಕೆರೆಯಲ್ಲಿ ಯಾವಾಗಲೂ ನೀರು ಭರ್ತಿಗೊಂಡಿರುತ್ತದೆ. ಸುತ್ತಲೂ ಹತ್ತಾರು ಹಳ್ಳಿಯ ಜನರಿಗೆ ನೀರಿನ ಅನುಕೂಲತೆ ಒದಗಿದೆ.

ವರದಾಯಕ: ಗ್ರಾಮದ ಸುತ್ತಲಿನ ಚಿಕ್ಕತಮ್ಮಿನಾಳ, ಬಚನಾಳ, ಹುಲಿಯಾಪೂರು ತಾಂಡಾ, ಲಿಂಗದಹಳ್ಳಿ, ಮೆಣೇದಾಳ, ಹುಲಿಯಾಪೂರು ತಾಂಡಾ, ಹಡಗಲಿ, ಸಿದ್ದಾಪೂರು, ಕನ್ನಾಳ ನಿರಲೂಟಿ, ಮುಕರ್ತಿಹಾಳ, ಜಿ.ಎಚ್.ಕ್ಯಾಂಪ್ ಸೇರಿದಂತೆ ಸುತ್ತ ಮುತ್ತಗಳ ಗ್ರಾಮಗಳ ರೈತರ ಜಮೀನಲ್ಲಿನ ಕೊಳವೆ ಬಾವಿಯಲ್ಲಿನ ಬೋರವೆಲ್‌ಗಳು ರಿಚಾರ್ಜ್ ಹೊಂದಿರುತ್ತವೆ. ಕೆರೆಯಲ್ಲಿ ನೀರು ಶೇಖರಣೆಯಿಂದಾಗಿ ಅಕ್ಕ-ಪಕ್ಕದ ಗ್ರಾಮಗಳ ರೈತರಿಗೆ ನೆರವಾಗಿದೆ. ವರ್ಷವಿಡಿ ಈ ಭಾಗದಲ್ಲಿ ಬೆಳೆಗಳನ್ನು ಪಡೆಯುತ್ತಿರುವ ಕೃಷಿಕರು, ತೋಟಗಾರಿಕೆ ಹಾಗೂ ವಾಣಿಜ್ಯ,ಆಹಾರ ಪದ್ದತಿ ಬೆಳೆಗಳನ್ನು ಸುಲಭವಾಗಿ ಜಮೀನಲ್ಲಿ ಪಡೆಯಬಹುದು ಎನ್ನುವುದು ರೈತರ ಮನದಾಳು.

ಕೆರೆ ಭರ್ತಿ: ಬೇಸಿಗೆಯಲ್ಲಿ ನೀರಿನ ಕೊರತೆಯಾಗದಂತೆ ನೂರಾರು ಎಕರೆ ಜಮೀನಲ್ಲಿ ನಿರ್ಮಾಣವಾದ ಕೆರೆ ಆವರಣದಲ್ಲಿ ವರ್ಷವಿಡಿ ನೀರು ಸಂಗ್ರಹದಿಂದ ಕುರಿಗಾಹಿಗಳು, ರೈತರಿಗೆ ಹರ್ಷದಾಯಕ ಮೂಡಿದೆ. ಪ್ರತಿ ವರ್ಷವೂ ಮಳೆ ಸುರಿಯುವುದರಿಂದ ಕೆರೆ ಅಂಗಳದಲ್ಲಿ ನೀರು ಬತ್ತಿದ್ದು, ನೋಡಿಲ್ಲ, ಸುಮಾರು ಮನ್ನಾಲ್ಕು ದಶಕಗಳ ಹಿಂದೆ ನಿರ್ಮಿಸಿದ ಕೆರೆಯಿಂದ ಈ ಭಾಗದ ರೈತಾಪಿ ವರ್ಗ ಸೇರಿದಂತೆ ಇನ್ನತರಡೆಗಳಲ್ಲಿ ಸಂತಸ ಮೂಡಿಸಿದೆ.

> **ಹುಲಿಯಾಪೂರು ಗ್ರಾಮದ ಕೆರೆಯಲ್ಲಿ ಸದಾ ನೀರು ಸಂಗ್ರಹಿಸಿ ಭಾಗದ ರೈತಾಪಿ ವರ್ಗ ಜನ ಜಾನುವಾರಗಳಿಗೆ ವರವಾಗಿದೆ. ಬೇಸಿಗೆಯಲ್ಲಿ ನೀರಿನ ದಾಹ ನೀಗಿಸಲು ಪ್ರಾಣಿ ಪಕ್ಷಿಗಳು, ಜಾನುವಾರಗಳಿಗೆ ಅನುಕೂಲವಾಗಿದೆ. ಕೆರೆ ನೀರು ಸಂಗ್ರಹದಿಂದಾಗಿ ಅಂತರ್ಜಾಲ ಮಟ್ಟ ಹೆಚ್ಚಿಸಿದೆ.**
> ■ ಮಲ್ಲಿಕಾರ್ಜುನ ಅಗಸಿಮುಂದೀನ, ನೀರಲೂಟಿ ರೈತ

> **ಕುಷ್ಟಗಿ ತಾಲೂಕಿನ ಹುಲಿಯಾಪೂರು ಗ್ರಾಮದ ಕೆರೆ ನೂರಾರು ಎಕರೆಯಲ್ಲಿ ನಿರ್ಮಾಣವಾದ ಕೆರೆಯಲ್ಲಿ ಮಳೆಯಿಂದಾಗಿ ನೀರು ಸಂಗ್ರಹಿಸಿದೆ. ಬೇಸಿಗೆ ಮಳೆಗಾಲ ಸೇರಿದಂತೆ ಕೆರೆ ಅಂಗಳದಲ್ಲಿ ನೀರು ಬತ್ತವುದಿಲ್ಲ.ಮುಂದಿನ ತಿಂಗಳಲ್ಲಿ ಕೆರೆಗಳಲ್ಲಿ ಜಂಗಲ್ ಕಟಿಂಗ್ ಕಾರ್ಯಗಳಿಗೆ ಟೆಂಡರ್ ಕರೆದು ಕಾಮಗಾರಿ ಕೈಗೊಳ್ಳಲಾಗುವುದು.**
> ■ ದೇವೇಂದ್ರಪ್ಪ ಇಟ್ಟಂಗಿ, ಎಇಇ, ಸಣ್ಣ ನೀರಾವರಿ ಇಲಾಖೆ

ನಾಗರಗಾಳಿ ಗ್ರಾಪಂಗೆ ಗಾಂಧೀ ಗ್ರಾಮ ಪುರಸ್ಕಾರ



ಖಾನಾಪುರ: ಸಂವಿಧಾನದ 73ನೇ ತಿದ್ದುಪಡಿಯಲ್ಲಿ ಉಲ್ಲೇಖವಾದ ಅಂಶ ಪಾಲಿಸಿ ಗ್ರಾಮ ಸ್ವರಾಜ್ಯ ಕನಸನ್ನು ನನಸು ಮಾಡಿರುವ ತಾಲೂಕಿನ ನಾಗರಗಾಳಿ ಗ್ರಾಮ ಪಂಚಾಯಿತಿ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ನೀಡುವ 2025ರ ಗಾಂಧಿ ಗ್ರಾಮ ಪುರಸ್ಕಾರಕ್ಕೆ ಆಯ್ಕೆಯಾಗಿದೆ. ನೂರಕ್ಕೆ ನೂರರಷ್ಟು ಕರ ವಸೂಲಿ, ಗ್ರಾಪಂ ವ್ಯಾಪ್ತಿಯ ನಾಗರಿಕರಿಗೆ ಅಗತ್ಯ ಮೂಲ ಸೌಲಭ್ಯಗಳನ್ನು ಒದಗಿಸುವುದು, ನಿಯಮಿತ ಕಸ ವಿಲೇವಾರಿ, ಸ್ವಚ್ಛತೆ, ಪಾರದರ್ಶಕ ಆಡಳಿತ ಹಾಗೂ ಹಸಿರು ಗ್ರಾಮ ನಿರ್ವಹಣೆಯಲ್ಲಿ ಉತ್ತಮ ಸಾಧನೆ ಮಾಡಿರುವ ಹಿನ್ನೆಲೆಯಲ್ಲಿ ನಾಗರಗಾಳಿ ಮುಂದಿನ ದಿನಗಳಲ್ಲಿ ಗಾಂಧಿ ಗ್ರಾಮ ಪುರಸ್ಕಾರ ಪ್ರಾಪ್ತ ಗ್ರಾಮ ಪಂಚಾಯತಿ ಎಂಬ ಮನ್ನಣೆಗೆ ಒಳಗಾಗಲಿದೆ.

ನಾಗರಗಾಳಿ ಗ್ರಾಮ ಪಂಚಾಯತಿ ಧಾರವಾಡ-ರಾಮನಗರ ರಾಜ್ಯ ಹೆದ್ದಾರಿ ಮೇಲಿದೆ. ಈ ಗ್ರಾಪಂನ ಎಲ್ಲ ಗ್ರಾಮಗಳಲ್ಲಿ ಸ್ವಚ್ಛತೆಗೆ ಪ್ರಥಮ ಪ್ರಾಶಸ್ತ್ಯ ನೀಡಲಾಗುತ್ತಿದೆ.

ನಾಗರಗಾಳಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯ ಒಟ್ಟು 10 ಅಂಗನವಾಡಿಗಳಿಗೆ ಸುಸಜ್ಜಿತ ಹಾಗೂ ಹೈಟೆಕ್ ಶೌಚಾಲಯಗಳನ್ನು ನಿರ್ಮಿಸಿ ಕೊಡಲಾಗಿದೆ. 11 ಸರಕಾರಿ ಪ್ರಾಥಮಿಕ ಶಾಲೆಗಳಿಗೆ ಹೈಟೆಕ್ ಶೌಚಾಲಯಗಳು ಹಾಗೂ ಪ್ರತಿ ಶಾಲೆಗೆ ಅಡುಗೆ ಕೋಣೆ ನಿರ್ಮಿಸಲಾಗಿದೆ.

> **ನಾಗರಗಾಳಿ ಗ್ರಾಪಂ ವ್ಯಾಪ್ತಿಯಲ್ಲಿ ಒಟ್ಟು ಎಂಟು ಕಂದಾಯ ಗ್ರಾಮಗಳು ಹಾಗೂ ಐದು ಮಜರೆಗಳಿವೆ. 2011ರ ಜನಗಣತಿಯ ಪ್ರಕಾರ 2701 ಜನಸಂಖ್ಯೆ ಹೊಂದಿರುವ ಎಲ್ಲ ಗ್ರಾಮಗಳ ಸರಕಾರಿ ಶಾಲೆ ಮತ್ತು ಅಂಗನವಾಡಿ ಕೇಂದ್ರಗಳಿಗೆ ಮೂಲ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಗ್ರಾಪಂ ವ್ಯಾಪ್ತಿಯಲ್ಲಿ ಒಟ್ಟು 668 ಕೂಲಿಕಾರರು ಇದ್ದು, 2024-25 ಆರ್ಥಿಕ ವರ್ಷದಲ್ಲಿ ಒಟ್ಟು 21,479 ಮಾನವ ದಿನಗಳ ಸೃಜಿಸಲಾಗಿದೆ. ಗ್ರಾಪಂನಿಂದ ಡಿಜಿಟಲ್ ಲೈಬ್ರರಿ ಆರಂಭಿಸಲಾಗಿದೆ.**
> ■ ಬಾಲರಾಜ್ ಭಜಂತ್ರಿ, ಪಿಡಿಒ, ನಾಗರಗಾಳಿ ಗ್ರಾಪಂ.

> **ಖಾನಾಪುರ ತಾಲೂಕಿನ ನಾಗರಗಾಳಿ ಗ್ರಾಮ ಪಂಚಾಯತಿಗೆ 2024-25ರ ಗ್ರಾಂಧಿ ಗ್ರಾಮ ಪುರಸ್ಕಾರ ಲಭಿಸಿದೆ. ಈ ಗ್ರಾಮ ಪಂಚಾಯತಿ ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ಅಂದಾಜು 20 ಲಕ್ಷ ಮೊತ್ತದಲ್ಲಿ ಸುಸಜ್ಜಿತವಾದ ಘನ ತ್ಯಾಜ್ಯ ಘಟಕವನ್ನು ನಿರ್ಮಿಸಿಕೊಂಡ ತಾಲೂಕಿನ ಮೊದಲ ಗ್ರಾಮ ಪಂಚಾಯತಿ.**
> ■ ರಮೇಶ ಮೇತ್ರಿ. ತಾ.ಪಂ ಇಒ. ಖಾನಾಪುರ.

> **ನಾಗರಗಾಳಿ ಗ್ರಾಪಂ ವ್ಯಾಪ್ತಿಯ ಪರಿಶಿಷ್ಟ ಜಾತಿ ಹಾಗೂ ಪಂಗಡದ ನಾಗರಿಕರು ಮೃತಪಟ್ಟ ಸಂದರ್ಭದಲ್ಲಿ ಅವರ ಅಂತ್ಯಸಂಸ್ಕಾರಕ್ಕೆ ಗ್ರಾಮ ಪಂಚಾಯಿತಿಯ ಸ್ವಂತ ನಿಧಿಯಿಂದ ರೂ.5 ಸಾವಿರ ಸಹಾಯಧನ ನೀಡಲಾಗುತ್ತದೆ. ಇದು ಆರ್ಥಿಕವಾಗಿ ಹಿಂದುಳಿದ ದುರ್ಬಲ ವರ್ಗದವರಿಗೆ ಗ್ರಾಮ ಪಂಚಾಯತಿ ಮಾಡುತ್ತಿರುವ ಬಹುದೊಡ್ಡ ಸಹಾಯ.**
> ■ ಡಾ.ಮನೋಹರ ದಾದ್ಮಿ, ಆಡಳಿತಾಧಿಕಾರಿ, ನಾಗರಗಾಳಿ ಗ್ರಾಪಂ.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಅಲಸಂದೆ ಕಾಳು	1502	1502
ಕಡಲೆಕಾಳು	2311	5645
ಉದ್ದಿನಕಾಳು	6111	6211
ಧನಿಯಾ	9802	9802
ಹೆಸರುಕಾಳು	4900	5089
ನೆಲಗಡಲೆ (ಶೇಂಗಾ)	5230	7210
ಜೋಳ	1705	3900
ಮೆಕ್ಕೆಜೋಳ	1386	1851
ಈರುಳ್ಳಿ	500	2100
ಆಲೂಗಡ್ಡೆ	1400	1900
ಕುಸುಬೆ	5359	5616
ಸೋಯಾಬಿನ್	5196	5836
ಸೂರ್ಯ ಕಾಂತಿ	5566	5766
ತೊಗರಿ	4270	4270
ಗೋಧಿ	2010	5470

ಮೊಬೈಲ್ ಗೀಳು, ಪೋಷಕರು ಬೈದಿದ್ದಕ್ಕೆ ಯುವಕ ಆತ್ಮಹತ್ಯೆ

ಹುಬ್ಬಳ್ಳಿ: ಮೊಬೈಲ್‌ನಲ್ಲಿ ಆನ್‌ಲೈನ್ ಗೇಮ್ ಗೀಳಿನ ಸಲುವಾಗಿ ಪೋಷಕರು ಬೈದಿದ್ದಕ್ಕೆ ಓರ್ವ ಅಪ್ರಾಪ್ತ ಬಾಲಕ ಆತ್ಮಹತ್ಯೆ ಮಾಡಿಕೊಂಡು ಮೃತಪಟ್ಟಿರುವ ಘಟನೆ ಗುರುವಾರ ರಾತ್ರಿ ಉದಯನಗರದಲ್ಲಿ ನಡೆದಿದೆ.

ಸಮರ್ಥ ಪಟಿಕೆ(14) ಮೃತ ಪಟ್ಟಿರುವ ಬಾಲಕ. ಇತ ಹೆಚ್ಚಾಗಿ ಮೊಬೈಲ್‌ನಲ್ಲಿ ವಿಡಿಯೋ ಗೇಮ್ ಆಡುತ್ತಿದ್ದ. ಇದರಿಂದ ವಿದ್ಯಾಭ್ಯಾಸ ಹಾಳಾಗುತ್ತದೆ ಎಂದು ಪಾಲಕರು ಬುದ್ಧಿ ಹೇಳಿದ್ದರೂ. ಆಷ್ಟಾದರೂ ಬಿಟ್ಟಿರಲಿಲ್ಲ, ಗುರುವಾರ ರಾತ್ರಿ 9.30 ಕ್ಕೆ ಮೊಬೈಲ್ ನಲ್ಲಿ ಗೇಮ್ ಆಡುತ್ತಿದ್ದಾಗ ಆತನ ತಾಯಿ ಬೈದು ಮೊಬೈಲ್ ಕಸಿದುಕೊಂಡಿದ್ದಾರೆ. ಇದೇ ವಿಚಾರಕ್ಕೆ ಮನನೊಂದು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದ ಬಾಲಕ ತಂದೆ ದೂರಿನಲ್ಲಿ ತಿಳಿಸಿದ್ದಾರೆ. ಕೇಶ್ವಾಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಡ್ಯುಯಲ್ ಪೇಸಮೇಕರ್ ಯಶಸ್ವಿ ಅಳವಡಿಕೆ

ಧಾರವಾಡ: ಸತ್ತೂರಿನ ಎಸ್‌ಡಿಎಂ ನಾರಾಯಣ ಹೃದಯಾಲಯವು ಉತ್ತರ ಕರ್ನಾಟಕದಲ್ಲಿಯೇ ಮೊದಲ ಲೀಡಲೆಸ್ ಡ್ಯುಯಲ್-ಚೇಂಬರ್ ಪೇಸಮೇಕರ್ ಯಶಸ್ವಿಯಾಗಿ ಅಳವಡಿಸಿದೆ ಎಂದು ಖ್ಯಾತ ಹೃದ್ರೋಗ ತಜ್ಞ ಡಾ. ರಘುಪ್ರಸಾದ ಹೇಳಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಈಚೇಗೆ ವೈದ್ಯಕೀಯ ಕ್ಷೇತ್ರಕ್ಕೆ ಪರಿಚಿತವಾದ ಅತ್ಯಾಧುನಿಕ ತಂತಿ ಮುಕ್ತ ಪೇಸಮೇಕರ್ ಇದಾಗಿದೆ. 68 ವರ್ಷದ ವ್ಯಕ್ತಿಯೊಬ್ಬರಿಗೆ ಈ ಚಿಕಿತ್ಸೆ ಮಾಡಿದ್ದು, ಸಂಪೂರ್ಣ ಯಶಸ್ವಿಯಾಗಿದೆ ಎಂದರು. ಹೃದಯ ಬಡಿತ ಅಸಹಜವಾಗಿ ಕಡಿಮೆಯಾದಾಗ ಪೇಸಮೇಕರ ಅಳವಡಿಸಲಿದೆ. ಎದೆ ಸೀಳಿ, ತಂತಿಗಳನ್ನು ಅಳವಡಿಸುವ ಸಾಂಪ್ರದಾಯಿಕ ಪೇಸ್‌ಮೇಕರ್‌ಗಿಂತ ಭಿನ್ನವಾಗಿದೆ. ಜೊತೆಗೆ ಸಂಪೂರ್ಣ ವೈಯರ್‌ಲೆಸ್ ಆಗಿದೆ ಎಂದು ಮಾಹಿತಿ ನೀಡಿದರು.



ಒಂದು ಗಂಟೆ ನಡೆಸಲಾದ ಈ ಪ್ರಕ್ರಿಯೆಯಲ್ಲಿ, ತೊಡೆಯ ಭಾಗದ ರಕ್ತನಾಳದ ಮೂಲಕ ಕ್ಯಾತಿಟರ್ ಸಹಾಯದಿಂದ ಸಣ್ಣ ಪೇಸ್ಮೇಕರ್ ಕ್ಯಾಪ್ಸುಲ್‌ಗಳನ್ನು ನೇರ ಹೃದಯದ ಮೇಲಿನ ಮತ್ತು ಕೆಳಗಿನ ಬಲ ಕೋಣೆಗಳಲ್ಲಿ ಅಳವಡಿಸಲಾಗುತ್ತದೆ ಎಂದರು.

ಇಲ್ಲಿ ಯಾವುದೇ ತಂತಿ ಅಥವಾ ಶಸ್ತ್ರ ಚಿಕಿತ್ಸೆಯ ಪಾಕೆಟ್‌ಗಳಾಗಲಿ ಇಲ್ಲ, ಹೀಗಾಗಿ ರೋಗಿಯ ದೇಹದ ಮೇಲೆ ಯಾವುದೇ ಕಲೆಗಳಾಗೋದಿಲ್ಲ, ರಕ್ತಸ್ರಾವ ಕನಿಷ್ಠವಿದ್ದು, ಸೋಂಕು ಅಥವಾ ತಂತಿ-ಸಂಬಂಧಿತ ತೊಡಕುಗಳ ಅಪಾಯ ಇರೋದಿಲ್ಲ ಎಂದರು. ವೈದ್ಯಕೀಯ ನಿರ್ದೇಶಕ ಶಶಿಕುಮಾರ್ ಪಟ್ಟಣಶೆಟ್ಟಿ, ಹೃದ್ರೋಗ ತಂತ್ರಜ್ಞಾನದಲ್ಲಿ ಆಗುತ್ತಿರುವ ಕ್ಷಿಪ್ರ ಬೆಳವಣಿಗೆಯನ್ನು ಎಸ್‌ಡಿಎಂ ನಾರಾಯಣ ಹೃದಯಾಲಯ ಅಳವಡಿಸುತ್ತಿದೆ. ಡಾ. ರಘುಪ್ರಸಾದ ಅಂತಹ ಖ್ಯಾತ ಹೃದ್ರೋಗ ತಜ್ಞರು ಆಸ್ಪತ್ರೆಯಲ್ಲಿ ಎಲ್ಲ ರೀತಿಯ ಹೃದಯ ಸಂಬಂಧಿತ ರೋಗಕ್ಕೆ ಪರಿಹಾರ ಒದಗಿಸುತ್ತಿದ್ದಾರೆ. ಉತ್ತರ ಕರ್ನಾಟಕದ ರೋಗಿಗಳು ಇನ್ಮುಂದೆ ಸುಧಾರಿತ, ಜೀವ ಉಳಿಸುವ ಹೃದಯ ಸಂಬಂಧಿ ಚಿಕಿತ್ಸೆಗಳಿಗಾಗಿ ದೊಡ್ಡ ನಗರಗಳಿಗೆ ಅಲೆದಾಡುವ ಅಗತ್ಯವಿಲ್ಲ ಎಂದರು. ಸುದ್ದಿಗೋಷ್ಠಿಯಲ್ಲಿ ಹೃದಯಾಲಯದ ಸೋಮನಾಥ ರಾಯಕೋಡಿ, ದುಂಡೇಶ್ ತಡಕೋಡ ಇದ್ದರು.

1.60 ಕೋಟಿ ಮೌಲ್ಯದ ವಸ್ತು ಜಪ್ತಿ: ಎಸ್ಪಿ

ವಿಜಯಪುರ: ನಗರ ವ್ಯಾಪ್ತಿಯಲ್ಲಿ ನಡೆದ ವಿವಿಧ ಕಳ್ಳತನ ಪ್ರಕರಣಗಳಿಗೆಸಂಬಂಧಿಸಿದಂತೆಕಳೆದ ಎರಡು ವರ್ಷಗಳ ಅವಧಿಯಲ್ಲಿ ಹಲವು ಪ್ರಕರಣಗಳನ್ನು ಭೇದಿಸಿದ ಪ್ರಕರಣಗಳಿಗೆ ಸಂಬಂಧಿಸಿದಂತೆ 28 ಆರೋಪಿಗಳನ್ನು ಬಂಧಿಸಿ 1,60,32,000 ರೂ. ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದು ಎಸ್ಪಿ ಲಕ್ಷ್ಮಣ ನಿಂಬರಗಿ ಹೇಳಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ವರ್ಷ 17 ಪ್ರಕರಣಗಳಿಗೆ ಸಂಬಂಧಿಸಿದಂತೆ 28 ಆರೋಪಿಗಳನ್ನು ಹಾಗೂ ಪ್ರಸಕ್ತ ವರ್ಷ 13 ಪ್ರಕರಣಗಳಿಗೆ ಸಂಬಂಧಿಸಿದಂತೆ 15 ಜನ ಆರೋಪಿಗಳನ್ನು ಬಂಧಿಸಲಾಗಿದೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ನಂ.49, "ಪರಿಸರ ಭವನ", 1 ರಿಂದ 5ನೇ ಅಂತಸ್ತು, ಚರ್ಚ್ ಸ್ಟ್ರೀಟ್, ಬೆಂಗಳೂರು-560 001. ಕರ್ನಾಟಕ ರಾಜ್ಯ, ಭಾರತ.
ಫೋನ್: 25581383, 25589112, 25589113, ಫ್ಯಾಕ್ಸ್: 080-25586321
ಈ-ಮೇಲ್: ho@kspcb.gov.in ವೆಬ್‌ಸೈಟ್: https://kspcb.karnataka.gov.in

ಸಂಖ್ಯೆ: ಮಾನಿಮಂ/144/17ನೇ ಪ್ರವರ್ಗ/ಹೆಚ್‌ಪಿಐ/ಇ.ಪಿ.ಎಚ್/2025/2026/293 ದಿನಾಂಕ:24/04/2026

ಪರಿಸರ ಸಾರ್ವಜನಿಕ ಸಭೆಗಾಗಿ ಅಧಿಸೂಚನೆ

ಮೆ॥ ಎಸಿಸಿ ಲಿಮಿಟೆಡ್, ಇವರು ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು, ತೊಂಡೆಭಾವಿ ಗ್ರಾಮದ ಸರ್ವೇ ನಂ. 124/5, 124/6, 124/7, 124/8, 124/12, 124/14, 126, 144/1, 144/2, 144/3, 144/4, 145/1, 145/2, 146/1, 146/2, 146/3, 146/4, 146/5, 146/6, 146/7, 146/8, 146/9, 146/10, 146/11, 146/12, 146/13, 146/14, 146/15, 147/1, 147/2, 147/3, 147/4, 147/5, 147/6, 148, 149, 151, 152/1, 152/2, 152/3, 152/4, 152/5, 152/6, 152/7, 159,160, 161, 162/1, 162/2, 162/3, 162/4, 164/1, 164/2, 164/3, 165 & 167/4 ರಲ್ಲಿ ಹಾಲಿ ಇರುವ ಸಿಮೆಂಟ್ ಗ್ರೈಡಿಂಗ್ ಘಟಕದಲ್ಲಿ ಹೊಸದಾಗಿ ವಾರ್ಷಿಕ 3.0 ಮಿಲಿಯನ್ ಮೆಟ್ರಿಕ್ ಟನ್ ಸಾಮರ್ಥ್ಯದ ಎರಡು ಲೈನ್‌ಗಳನ್ನು ಅವಳಡಿಸಿ, ಸಿಮೆಂಟ್ ಗ್ರೈಡಿಂಗ್ (ಓಪಿಸಿ/ಪಿಪಿಸಿ/ಪಿಎಸ್‌ಸಿ/ಪಿಸಿಸಿ) ಉತ್ಪಾದನಾ ಸಾಮರ್ಥ್ಯವನ್ನು ವಾರ್ಷಿಕ 2.0 ಮಿಲಿಯನ್ ಮೆಟ್ರಿಕ್‌ಟನ್ ನಿಂದ 8.0 ಮಿಲಿಯನ್ ಮೆಟ್ರಿಕ್ ಟನ್‌ಗೆ ಹೆಚ್ಚಿಸಲು ಉದ್ದೇಶಿಸಿದ್ದು, ಈ ಬಗ್ಗೆ ಪರಿಸರ ಸಾರ್ವಜನಿಕ ಸಭೆ ನಡೆಸಲು ಉದ್ದೇಶಿಸಿರುತ್ತಾರೆ.

ಸದರಿ ಯೋಜನೆಯ ಪ್ರವರ್ತಕರು ಪರಿಸರಅಘಾತ ಅಧ್ಯಯನದ ಅಧಿಸೂಚನೆ ದಿನಾಂಕ: 14.09.2006ರ (ತಿದ್ದುಪಡಿ ದಿನಾಂಕ: 09.05.2022) ಪ್ರಕಾರ ಪರಿಸರ, ಅರಣ್ಯ ಮಂತ್ರಾಲಯ ಮತ್ತು ಹವಾಮಾನ ಬದಲಾವಣೆ, ಭಾರತ ಸರ್ಕಾರ, ಇವರಿಂದ ಪೂರ್ವ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಮತ್ತು ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಬೇಕಾಗಿರುತ್ತದೆ. ಪರಿಸರ, ಅರಣ್ಯ ಮಂತ್ರಾಲಯ ಮತ್ತು ಹವಾಮಾನ ಬದಲಾವಣೆ, ಭಾರತ ಸರ್ಕಾರ, ಇವರ Terms of Reference ಪತ್ರ ಸಂಖ್ಯೆ: MoEF& CC, GoI, vide file No. J-11011/132/2007-IA-II (IND-I) dated:04.01.2025ರಂತೆ ಹಾಗೂ ಉದ್ದಿಮೆ ನಿವೇದನೆ ಪತ್ರ ಮಂಡಳಿಯಲ್ಲಿ ಸ್ವೀಕೃತಿ ದಿನಾಂಕ: 10.03.2025 ರ ಪ್ರಕಾರ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ನಡೆಸಲಾಗುತ್ತಿದೆ.

ಯೋಜನೆಯ ವಿವರಗಳು ಕೆಳಕಂಡಂತಿವೆ.

1. **ಕಂಪನಿಯ ಹೆಸರು ಮತ್ತು ವಿಳಾಸ:** ಮೆ॥ ಎಸಿಸಿ ಲಿಮಿಟೆಡ್, ತೊಂಡೆಭಾವಿ ಗ್ರಾಮ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ-561213.
2. **ಉದ್ದೇಶಿತ ಯೋಜನೆಯ ಸ್ಥಳ :** ಸರ್ವೇ ನಂ. 124/5, 124/6, 124/7, 124/8, 124/12, 124/14, 126, 144/1, 144/2, 144/3, 144/4, 145/1, 145/2, 146/1, 146/2, 146/3, 146/4, 146/5, 146/6, 146/7, 146/8, 146/9, 146/10, 146/11, 146/12, 146/13, 146/14, 146/15, 147/1, 147/2, 147/3, 147/4, 147/5, 147/6, 148, 149, 151, 152/1, 152/2, 152/3, 152/4, 152/5, 152/6, 152/7, 159,160, 161, 162/1, 162/2, 162/3, 162/4, 164/1, 164/2, 164/3, 165 & 167/4, ತೊಂಡೆಭಾವಿ ಗ್ರಾಮ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ.
3. **ಉದ್ದೇಶಿತ ಕಾರ್ಖಾನೆಯ ಯೋಜನೆ:** ಹಾಲಿ ಇರುವ ಸಿಮೆಂಟ್ ಗ್ರೈಡಿಂಗ್ ಘಟಕದಲ್ಲಿ ಹೊಸದಾಗಿ ವಾರ್ಷಿಕ 3.0 ಮಿಲಿಯನ್ ಮೆಟ್ರಿಕ್ ಟನ್ ಸಾಮರ್ಥ್ಯದ ಎರಡು ಲೈನ್‌ಗಳನ್ನು ಅವಳಡಿಸಿ, ಸಿಮೆಂಟ್ ಗ್ರೈಡಿಂಗ್ (ಓಪಿಸಿ/ಪಿಪಿಸಿ/ಪಿಎಸ್‌ಸಿ/ಪಿಸಿಸಿ) ಉತ್ಪಾದನಾ ಸಾಮರ್ಥ್ಯವನ್ನು ವಾರ್ಷಿಕ 2.0 ಮಿಲಿಯನ್ ಮೆಟ್ರಿಕ್‌ಟನ್ ನಿಂದ 8.0 ಮಿಲಿಯನ್ ಮೆಟ್ರಿಕ್‌ಟನ್‌ಗೆ ಹೆಚ್ಚಿಸುವುದು.
4. **ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ: ದಿನಾಂಕ: 27.05.2026 (ಬುಧವಾರ) ಸಮಯ: ಬೆಳಿಗ್ಗೆ 11.00 ಗಂಟೆ. ಸ್ಥಳ: ಯೋಜನಾ ಸ್ಥಳ, ಮೆ॥ ಎಸಿಸಿ ಲಿಮಿಟೆಡ್, ತೊಂಡೆಭಾವಿ ಗ್ರಾಮ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ.**
5. **ಪರಿಸರ ಸಾರ್ವಜನಿಕಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಲಭ್ಯವಿರುವ ಸ್ಥಳ:** ಅ. ಜಿಲ್ಲಾಧಿಕಾರಿಗಳ ಕಛೇರಿ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ. ಆ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ. ಇ. ಜಿಲ್ಲಾ ಕೈಗಾರಿಕಾ ಕೇಂದ್ರ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ. ಈ. ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಮನೆ ನಂ.708/62, 4ನೇ ಡಿವಿಜನ್, ಹೆಚ್.ಎಸ್.ಗಾರ್ಡನ್, ಸರ್ ಎಂ.ವಿ.ಸ್ಟೇಡಿಯಂ ಹತ್ತಿರ, ಚಿಕ್ಕಬಳ್ಳಾಪುರ-562101. ಉ. ತೊಂಡೆಭಾವಿ ಗ್ರಾಮ ಪಂಚಾಯತ್, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ. ಊ. ಕೇಂದ್ರ ಅರಣ್ಯ, ಪರಿಸರ ಹಾಗೂ ಹವಾಗುಣ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, ನಂ.ಇ-3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್ಸ್, 17ನೇ ಮುಖ್ಯರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-560034. **ಎ. ಸಹಾಯ ಕೇಂದ್ರ,** ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, "ಪರಿಸರ ಭವನ", ನೆಲ ಅಂತಸ್ತು, ನಂ.49, ಚರ್ಚ್ ಸ್ಟ್ರೀಟ್, ಬೆಂಗಳೂರು-560001.

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ-ಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಇ-ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. **ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್: kspcb.karnataka.gov.in** ನಲ್ಲಿ ಪಡೆಯಬಹುದು.

ಸಹಿ/-
ಸದಸ್ಯ ಕಾರ್ಯದರ್ಶಿ

ನಮ್ಮೆಲ್ಲರ ಚಿತ್ತ, ನೈಸರ್ಗಿಕ ಸಂಪನ್ಮೂಲಗಳ ಮಿತ ಬಳಕೆಯತ್ತ: ತ್ಯಾಜ್ಯ ಉತ್ಪಾದನೆಯನ್ನು ತಗ್ಗಿಸಿ.

O.S No.1060/2025

ಮಾನ್ಯ 1ನೇಯ ಹೆಚ್ಚುವರಿ ಕಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ. ಎಮ್.ಎಫ್.ಸಿ. ನ್ಯಾಯಾಲಯ ಹುಬ್ಬಳ್ಳಿ, ಇವರ ನ್ಯಾಯಾಲಯದಲ್ಲಿ

ವಾದಿಯರು : ಶ್ರೀಮತಿ ಗಂಗವ್ವ ಕೋಂ ಗೌಡಪ್ಪಗೌಡ ಪಾಟೀಲ ಮತ್ತು ಇತರರು.

ವಿರುದ್ಧ

ಪ್ರತಿವಾದಿಯರು: ಗ್ರಾಮಲೆಕ್ಕಾಧಿಕಾರಿಗಳು, ಉಣಕಲ್ಲ ಮತ್ತು ಇನ್ನೊಬ್ಬರು.

ಆದೇಶ 5 ನಿಯಮ 20 ಸಿ.ಪಿ.ಸಿ. ಕೆಳಗೆ ನೋಟಿಸು

ವಾದಿಯರು ಪೋತಿಯಾದ 1) ಬೀಮಪ್ಪ ತಂದೆ ಚಂದ್ರಪ್ಪ ಮಾಯಕಾರ,2) ಗೌರವ್ವ ಕೋಂ ಬೀಮಪ್ಪ ಮಾಯಕಾರ, ಮತ್ತು 3) ಶಾಂತಾ ಕೋಂ ಬೀಮಪ್ಪ ಮಾಯಕಾರ ಇವರುಗಳ ಜೀವಂತ ಕುಟುಂಬದ ಸದಸ್ಯರು ಇರುತ್ತೇವೆ ವ ನೇರ ವ ಸಮೀಪ ವ ಸರಳ ವಾರಸಾದಾರರು ಇರುತ್ತೇವೆ ಅಂತಾ ಹೇಳಿ ಮಾನ್ಯ ನ್ಯಾಯಾಲಯದಿಂದ ಘೋಷಣಾತ್ಮಕ ಹುಕುಂ ಮತ್ತು ನಿರ್ದೇಶನ ಪಡೆದುಕೊಳ್ಳುವುದಕ್ಕೋಸ್ಕರ ಪ್ರತಿವಾದಿಯರ ವಿರುದ್ಧ ದಾವೆಯನ್ನು ಮಾಡಿದ್ದು ಇರುತ್ತದೆ.

ಸದರ ಪ್ರಕರಣದಲ್ಲಿ ಪ್ರತಿವಾದಿಯರನ್ನು ಹೊರತು ಪಡಿಸಿ ವಾದಿಯರಿಗೆ ವಾರಸಾ ಪ್ರಮಾಣ ಪತ್ರವನ್ನು ನೀಡುವುದಕ್ಕೆ ಬೇರೆ ಯಾರುದಾದರೂ ಆಕ್ಷೇಪಣೆ ವ ತಕರಾರು ಇದ್ದರೇ ಸದರಿ ಆಕ್ಷೇಪಣೆ ವ ತಕರಾರು ಸಲ್ಲಿಸಲು ನಿಮ್ಮ ಹಾಜರಾತಿಗೆ ಅಂತಾ ಮಾನ್ಯ ನ್ಯಾಯಾಲಯದವರು ದಿನಾಂಕ 03/06/2026 ರಂದು ಮುಂಜಾನೆ 10.30 ಘಂಟೆಗೆ ಮುದ್ದತ್ತು ನೇಮಿಸಿದ್ದು ಇರುತ್ತದೆ. ಕಾರಣ ಅಂದಿನ ದಿವಸ ನೀವು ಅಥವಾ ನಿಮ್ಮ ತರ್ಫೆ ಅಧಿಕಾರ ಪಡೆದುಕೊಂಡವರಾಗಲೀ ಅಥವಾ ನಿಮ್ಮ ಪರ ವಕೀಲರಾಗಲೀ ಹಾಜರಾಗಬೇಕು. ಒಂದು ವೇಳೆ ಹಾಜರಾಗದೇ ಇದ್ದರೆ, ಮಾನ್ಯ ನ್ಯಾಯಾಲಯದವರು ನಿಮ್ಮ ವಿರುದ್ಧ ಏಕತರ್ಫಿ ಆದೇಶ ಮಾಡಿ ಸದರ ಪ್ರಕರಣದ ಮುಂದಿನ ವಿಚಾರಣೆಯನ್ನು ಕೈಗೊಳ್ಳುವವರು ಇರುತ್ತಾರೆ.

ಈ ಹೊತ್ತು ದಿ: 15-04-2026ರಂದು ನಮ್ಮ ಸಹಿಯೊಂದಿಗೆ ಕೋರ್ಟಿನ ಮೊಹರು ಮಾಡಿ ಕೊಡಲ್ಪಟ್ಟಿತು. ಕೋರ್ಟಿನ ಆಜ್ಞೆಯ ಮೇರೆಗೆ

ಸಹಿ/- ಶಿರಸ್ತೇದಾರರು
ಹುಬ್ಬಳ್ಳಿ 15-04-2026
1ನೇ ಅಧಿಕ ಕಿರಿಯ ದಿವಾಣಿ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಹುಬ್ಬಳ್ಳಿ
ಸಹಿ/- (ಎಮ್.ಯು. ಮಾಯಕಾರ) ವಾದಿಯ ಪರ ವಕೀಲರು, ಹುಬ್ಬಳ್ಳಿ

ಕ್ರಿಮಿನಲ್ ಮಿಸಲೆನಿಯಸ್ ನಂ : 280/2026
ಮಾನ್ಯ ಜೆ.ಎಂ.ಎಫ್.ಸಿ ಸವಣೂರ ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು : ಸುರೇಶಗೌಡ ತಂದೆ ಚನಬಸಪ್ಪ@ ಚನಬಸನಗೌಡ ಪಾಟೀಲ ವಯಾ: 63 ವರ್ಷ, ಉದ್ಯೋಗ: ಒಕ್ಕಲುತನ, ಸಾ: ತೊಂಡೂರ ತಾ॥ ಸವಣೂರ ಜಿ॥ ಹಾವೇರಿ

ವಿರುದ್ಧ

ಎದುರುಗಾರರು : ಜನನ ಮರಣಗಳ ನೋಂದಣಿ ಅಧಿಕಾರಿಗಳು, ಇವರ ಪರವಾಗಿ ತಹಶೀಲ್ದಾರರು ಸವಣೂರ. ತಾ: ಸವಣೂರ ಜಿ: ಹಾವೇರಿ

ಇಸ್ತಿಯಾರ

ಈ ಮೇಲ್ಕಾಣಿಸಿದ ಪ್ರಕರಣದಲ್ಲಿ ಕೊಡುವ ನೋಟೀಸು ಏನೆಂದರೆ,

ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರರ ತಂದೆಯಾದ ಚನಬಸನಗೌಡ ತಂದೆ ದುಂಡಪ್ಪಗೌಡ ಪಾಟೀಲ ಇವರು ದಿನಾಂಕ: 09-12-1968 ರಂದು ತೊಂಡೂರಿನಲ್ಲಿ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿದ್ದು ಸದರಿಯವರ ಮರಣ ಪ್ರಮಾಣ ಪತ್ರ ಪಡೆಯುವ ಕುರಿತು ಮೇಲ್ಕಂಡ ನ್ಯಾಯಾಲಯದಲ್ಲಿ ಆದೇಶ ಪಡೆದು ಎದುರುಗಾರರ ಜನನ ಮರಣ ನೊಂದಣಾಧಿಕಾರಿಗಳಲ್ಲಿ ಹೆಸರು ಮತ್ತು ದಿನಾಂಕವನ್ನು ನಮೋದ ಮಾಡಿಕೊಳ್ಳುವವರು ಇರುತ್ತಾರೆ. ಅದರ ಬಗ್ಗೆ ಸಾರ್ವಜನಿಕರು ಯಾರದಾದರೂ ತಂಟೆ ವ, ತಕರಾರು ಇದ್ದಲ್ಲಿ ಖುದ್ದಾಗಿ ಅಥವಾ ವಕೀಲರ ಮೂಲಕ ದಿನಾಂಕ : 29-05-2026 ರಂದು ಮಾನ್ಯ ನ್ಯಾಯಾಲಯಕ್ಕೆ ಬೆಳಿಗ್ಗೆ 11-00 ಘಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲಿ ಖುದ್ದಾಗಿ ಇಲ್ಲವೇ ನಿಮ್ಮ ಪರವಾಗಿ ನ್ಯಾಯವಾದಿಗಳ ಮುಖಾಂತರ ಹಾಜರಾಗಿ ತಮ್ಮ ಹೇಳಿಕೆ ಸಲ್ಲಿಸಬೇಕು. ಇದಕ್ಕೆ ತಪ್ಪಿದಲ್ಲಿ ನಿಮ್ಮ ಗೈರ್ ಹಾಜರಾತಿಯಲ್ಲಿ ಅರ್ಜಿಯನ್ನು ನಿಖಾಲಿ ಮಾಡಲಾಗುವುದು ಅಂತಾ ಕೊರ್ಟಿನ ನೋಟೀಸು. ಇಂದು ದಿನಾಂಕ : 24-04-2026 ರಂದು ನಮ್ಮ ಸಹಿ ಮಾಡಿ ಕೋರ್ಟಿನ ಮೊಹರು ಹಾಕಿ ಕೊಡಲ್ಪಟ್ಟಿತು.

ಸ್ಥಳ : ಸವಣೂರ
ದಿನಾಂಕ : 24-04-2026
ಸಹಿ/- ಶಿರಸ್ತೇದಾರರು
ಸಿವ್ಹಿಲ್ ಜಡ್ಜ್ ನ್ಯಾಯಾಲಯ, ಸವಣೂರ.
ಸಹಿ/- ಎಮ್.ಎಸ್. ಮುದಗಲ್
ಅರ್ಜಿದಾರರ ಪರ ವಕೀಲರು, ಸವಣೂರ

IN THE COURT OF THE HON'BLE IV ADDITIONAL CIVIL JUDGE, CUM J.M.F.C. AT BALLARI
Cri. M.C. NO. 29/2026

Between :
BIBEE and Others .....Petitioners
And
The Tahasildar cum Register of Births and Deaths, Taluk Office, Ballari .....Respondent

NOTICE
TO WHOM SO EVER IT MAY CONCERNED

To
Respondent :
The Tahasildar cum Register of Births and Deaths, Taluk Office, Ballari

WHEREAS, the above named petitioner has filed the above petition against you under section 13 (2) of Births and Deaths Act. 1969, for seeking the death certificate of petitioners father death certificate by name P. DASTAGIRI SAB S/o Late. HUSSAIN SAB who died on 15-05-2023 at JOLADARASI VILLAGE, BALLARI TALUK AND DISTRICT.

You are here by directed to appear in this court in person or by a pleader duly instructed on 30/06/2026 at about 11.00 am in the before this court to show cause against the above petitions filling wherein the petition will be heard and determined ex-parte.

Given under my hand and seal of the court on this day of 23rd day of April-2026.

By order of the court.
Sd/- Chief Ministerial officer
Hon'ble IV.A.C.J & J.M.F.C. Court Ballari.
Sd/- Laliya Naik, Advocate, Ballari

IN THE COURT OF THE ADLL SMALL CAUSES JUDGE & M.A.C.T. AT MYSURU.
M.V.C. No.2510/2023.
BETWEEN: MAADHURYA. PETITIONERS
AND
SARANAPPA AND ANOTHER. RESPONDENTS
RESPONDENT NO.: 1. Saranappa S/o Malleshappa Aged about 59 years, R/at No. Kandkur (V) Kusthagi (Tq), Koppal - 583277.

NOTICE TO R-1

Whereas, take notice that the above petitioner has filed an application against you claiming compensation of **Rs.5,00,000/- (Rupees Five lakhs only)**, towards the injury, in road accident, involving your **Tractor No:KA-37-TA-6782.** The hearing of the said petition is posted to be **on 25 May 2026.** You are hereby directed to appear on that day, before the Court at 11.00 a.m. in person or through your advocate, failing which, the matter will be heard and decided ex-parte.

Given under my hand and seal of the Court, this 06th day of. April 2026.

By Order of the Court
ADLL SMALL CAUSES JUDGE & M.A.C.T. AT MYSURU.
Advocate For Petitioner :



ಶ್ರೀ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಕಾರಟಗಿ
ಆರ್ ಜಿ ರೋಡ್, ಕಾರಟಗಿ-583229 ಸಂಖ್ಯೆ: ಸಂ.14 / ವಿ-6 / ಸೌಕಾ / 1885 / 2012-13

15ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸು

ಸನ್ಮಾನ್ಯ ಸದಸ್ಯ ಬಂಧುಗಳೇ,
ಸಹಕಾರಿಯ ಸನ್ 2025-26ನೇ ಸಾಲಿನ ಶ್ರೀ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಕಾರಟಗಿ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ: 15.05.2026 ಶುಕ್ರವಾರ ಬೆಳಿಗ್ಗೆ 10:00 ಗಂಟೆಗೆ ಕಾರಟಗಿಯ ಸಹಕಾರಿಯ ಕಛೇರಿಯಲ್ಲಿ ಜರುಗಿಸಲಾಗುವುದು. ನೋಟೀಸಿನ ವಿವರಗಳನ್ನು ತಮಗೆ ಮುದ್ದಾಂ /ಅಂಚೆಯ ಮೂಲಕ ತಲುಪಿಸಲಾಗಿದ್ದು ಕಾರಣ ಸರ್ವ ಸದಸ್ಯರು ಸಭೆಗೆ, ಸಮಯಕ್ಕೆ ಸರಿಯಾಗಿ ಆಗಮಿಸಿ ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ. ಹೆಚ್ಚಿನ ವಿವರಗಳಿಗೆ ಕಛೇರಿಯನ್ನು ಸಂಪರ್ಕಿಸಬಹುದು.

ಆಡಳಿತ ಮಂಡಳಿ ಅನುಮತಿ ಮೇರೆಗೆ
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
(www.kpwd.gov.in)

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋ.ಇ ವಿಶೇಷ ವಿಭಾಗ, ಶಿವಮೊಗ್ಗ
ದೂರವಾಣಿ ಸಂಖ್ಯೆ: 08182-222943 Email ID: spdivision@gmail.com

ಆಸಕ್ತಿ ವ್ಯಕ್ತಪಡಿಸುವಿಕೆಗೆ ಆಹ್ವಾನ

No. EE/PWD, Special Division, Shimoga IFT No. 07/2026-27 Dtd. 22-04-2026

1. ಕಾರ್ಯನಿರ್ವಾಹಕ ಎಂಜಿನಿಯರ್, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ ಇವರು ಶಿವಮೊಗ್ಗ, ದಾವಣಗೆರೆ ಮತ್ತು ಪುತ್ತೂರುನಲ್ಲಿರುವ ಭೂ ಪ್ರದೇಶಗಳನ್ನು ಪಿಪಿಪಿ ಮಾದರಿಯಲ್ಲಿ PWD/2025-26/SE0329/Call-3 ಅಭಿವೃದ್ಧಿಗೊಳಿಸಲು (3 ಆಸ್ತಿಗಳು) ವಹಿವಾಟು ಸಲಹಾ ಸೇವೆಗಳನ್ನು (Transaction Advisory Services) ಒದಗಿಸಲು ಸಲಹೆಗಾರರನ್ನು ಆಯ್ಕೆ ಮಾಡಲು ಆಸಕ್ತಿ ವ್ಯಕ್ತಪಡಿಸುವಿಕೆಗೆ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸರಕಾರದ ಕೆಪಿಪಿ ಪೋರ್ಟಲ್ ಮೂಲಕ ಆಹ್ವಾನಿಸಿದ್ದಾರೆ. (https://kppp.karnataka.gov.in)
2. ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರಕಾರದ ಕೆಪಿಪಿ ಪೋರ್ಟಲ್ ಮೂಲಕ ದಿನಾಂಕ: 22.04.2026 ರಿಂದ 21.05.2026ರವರೆಗೆ ಡೌನ್‌ಲೋಡ್ ಮಾಡಬಹುದು.
3. ಟೆಂಡರ್ ಗಳನ್ನು ಆನ್‌ಲೈನ್‌ನಲ್ಲಿ ಕೆಪಿಪಿ ಪೋರ್ಟಲ್ ಮೂಲಕ ದಿನಾಂಕ 21.05.2026ರ ಸಾಯಂಕಾಲ 5.30 ಗಂಟೆಯೊಳಗೆ ಸಲ್ಲಿಸಬೇಕು. ಕೆಪಿಪಿ ಪೋರ್ಟಲ್ ಮಾರ್ಗಸೂಚಿಯಂತೆ ಟೆಂಡರ್‌ಗಳನ್ನು ತೆರೆಯಲಾಗುವುದು.
4. ಪ್ರಿ-ಬಿಡ್ ಸಭೆಯು ದಿನಾಂಕ 18.05.2026 ರಂದು ಬೆಳಿಗ್ಗೆ 11.30 ಕ್ಕೆ ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ ಇಲ್ಲಿ ನಡೆಯಲಿರುವುದು.
5. ಕೆಟಿಟಿಪಿ ಕಾಯ್ದೆಯಡಿಯಲ್ಲಿ ಟೆಂಡರ್ ತಿರಸ್ಕರಿಸಿದ ಬಿಡ್ಡರ್‌ಗಳು ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಮೇಲ್ಮನವಿ ಸಲ್ಲಿಸಬಹುದು. ಲಿಖಿತ ಮನವಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಸಹಿ/-
ವಾ.ಸಾ.ಸಂ.ಇ./ಶಿ/ನಂ.115-04/ ಝೇಂಕಾರ್/2026-27
ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ

ಪತ್ರಿಕಾ ಪ್ರಕಟಣೆಗಾಗಿ
ಮಾನ್ಯ ಗೌರವಾನ್ವಿತ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗಂಗಾವತಿ ಇವರ ಸಮಕ್ಷಮದಲ್ಲಿ
ಕ್ರಿಮಿನಲ್ ಮಿಸಲೇನಿಯಸ್ ಸಂಖ್ಯೆ: 578 / 2026

ಅರ್ಜಿದಾರರು:1) ಶ್ರೀಮತಿ ಹನಮವ್ವ ಗಂಡ ದಿ: ಹನುಮಂತಪ್ಪ ವಯಸ್ಸು: 60 ವರ್ಷ, ಉದ್ಯೋಗ: ಮನೆಗೆಲಸ,
2) ಶ್ರೀಮತಿ ದೇವಕ್ಕ ಎಸ್ ಪೂಜಾರಿ ಗಂಡ ದಿ: ನಾಗರಾಜ, ವಯಸ್ಸು: 41 ವರ್ಷ, ಉದ್ಯೋಗ: ಮನೆಗೆಲಸ,
3) ಶ್ರೀಮತಿ ಹುಲಿಗೆವ್ವ ಗಂಡ ಮುದಕಪ್ಪ ಬಡ್ಡಿ (ತಂದೆ ದಿ: ಹನುಮಂತಪ್ಪ) ವಯಸ್ಸು: 37 ವರ್ಷ, ಉದ್ಯೋಗ: ಮನೆಗೆಲಸ,
4) ಗೋಪಾಲ ಹೆಚ್ ಪೂಜಾರ ತಂದೆ ದಿ: ಹನುಮಂತಪ್ಪ ವಯಸ್ಸು: 42 ವರ್ಷ, ಉದ್ಯೋಗ: ವ್ಯವಸಾಯ
5)ಪ್ರಾಣೇಶ ತಂದೆ ದಿ: ಹನುಮಂತಪ್ಪ ವಯಸ್ಸು: 38 ವರ್ಷ, ಉದ್ಯೋಗ: ವ್ಯಾಪಾರ,
6)ಶ್ರೀಮತಿ ಶರಾವತಿ ಗಂಡ ಮಂಜುನಾಥ (ತಂದೆ: ದಿ: ಹನುಮಂತಪ್ಪ) ವಯಸ್ಸು: 35 ವರ್ಷ, ಉದ್ಯೋಗ: ಮನೆಗೆಲಸ,
7) ವೆಂಕಟೇಶ ತಂದೆ ದಿ: ಹನುಮಂತಪ್ಪ ಮೇಲಸಕ್ರಿ, ವಯಸ್ಸು: 33 ವರ್ಷ, ಉದ್ಯೋಗ: ಖಾಸಗಿ ಉದ್ಯೋಗಿ, ಎಲ್ಲರೂ ಸಾ: ವಾರ್ಡ.ನಂ.13, ಹಳೇ ಪೋಸ್ಟ್ ಆಫೀಸ್ ಹತ್ತಿರ, ಕನಕಗಿರಿ, ತಾ: ಕನಕಗಿರಿ ಜಿ: ಕೊಪ್ಪಳ,

-ವಿರುದ್ಧ

ಎದುರುದಾರರು: 1.ಜನನ ಮರಣ ನೋಂದಣಾಧಿಕಾರಿಗಳು, ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯತ ಕಾರ್ಯಾಲಯ, ಕನಕಗಿರಿ
2. ಸಂಬಂಧಪಟ್ಟವರು

ಈ ಮೇಲೆ ತಿಳಿಸಿದ ಅರ್ಜಿದಾರರು ಕರ್ನಾಟಕ ಜನನ ಮರಣ ನೋಂದಣಿ ಕಾಯ್ದೆ 1969, ಕಲಂ 13(3) ನಿಯಮ 9 (3) ಮತ್ತು ಕೆ.ಆರ್.ಬಿ & ಡಿ. ನಿಯಮಗಳು 1999 ಅಡಿಯಲ್ಲಿ ಅರ್ಜಿದಾರರು ನಂ.01ರಿಂದ07 ರವರ ಮೃತರಾದ ದಿ॥ ಹನಮಂತಪ್ಪ ತಂದೆ ಬಾಲಪ್ಪ ಉಪ್ಪಾರ ಇವರ ಮರಣ ನೋಂದಣಿಗಾಗಿ ಕೋರಿ ಅರ್ಜಿ ಸಲ್ಲಿಸಿದ್ದು, ಅರ್ಜಿದಾರರು ನಂ.01ರವರು ಮೃತರಿಗೆ ಎರಡನೇ ಪತ್ನಿಯಾಗಿದ್ದು, ಅರ್ಜಿದಾರರು ನಂ.02ರವರು ಮೃತರಿಗೆ ಸೊಸೆಯಾಗಿದ್ದು, ಅರ್ಜಿದಾರರು ನಂ.03ರಿಂದ07 ರವರು ಮೃತರ ಎರಡನೇ ಹೆಂಡತಿಯ ಮಕ್ಕಳಾಗಿದ್ದು, ಸದರಿ ಮೃತರ ಮೊದಲನೇ ಪತ್ನಿಯು ಈಗಾಗಲೇ ಮೃತ ಹೊಂದಿದ್ದು, ಮೊದಲನೇ ಪತ್ನಿಯ ಮಗನು ಸಹ ಮರಣ ಹೊಂದಿದ್ದು, ಅವರ ಹೆಂಡತಿಯಾದ ಅಂದ-ರೆ ಸೊಸೆ ಇವರು ಸದರಿ ಪ್ರಕರಣದಲ್ಲಿ ಅರ್ಜಿದಾರರು ನಂ.02 ರವರಾಗಿರುತ್ತಾರೆ. ಮೃತರು ದಿ॥ ಹನುಮಂತಪ್ಪ ತಂದೆ ಬಾಲಪ್ಪ ಉಪ್ಪಾರ ಇವರ ಮರಣ ದಿನಾಂಕ: 09-12-2025 ರಂದು ಕೊಪ್ಪಳ ಜಿಲ್ಲೆಯ ಕನಕಗಿರಿ ತಾಲ್ಲೂಕಿನ ಕನಕಗಿರಿ ಪಟ್ಟಣದ ವಾರ್ಡ.ನಂ.13 ರಲ್ಲಿರುವ ತಮ್ಮ ಸ್ವಗೃಹದಲ್ಲಿ ಮರಣ ಹೊಂದಿದ್ದು, ಸದರಿ ಅವರ ಮರಣ ನೋಂದಣಿ ಮಾಡಲು ಹಾಗೂ ಮರಣ ಪ್ರಮಾಣ ಪತ್ರ ವಿತರಿಸುವ ಸಂಬಂಧ ಎದುರುದಾರರ ಕಾರ್ಯಾಲಯಕ್ಕೆ ಆದೇಶವನ್ನು ಜಾರಿ ಮಾಡಬೇಕೆಂದು ಕೋರಿ ಮಾನ್ಯ ಗೌರವಾನ್ವಿತ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,ಗಂಗಾವತಿಯಲ್ಲಿ ಕ್ರಿ.ಮಿ.ನಂ.578/2026ಯನ್ನುವ ದಾವೆ ಹೂಡಿದ್ದು, ಅರ್ಜಿದಾರರು ನಂ.01ರಿಂದ07 ಇವರು ಈ ದಾವೆಯನ್ನು ದಾಖಲು ಮಾಡಿದ್ದಾರೆ. ಈ ಪ್ರಕರಣವು ದಿನಾಂಕ: 20-05-2026 ರಂದು ಮಾನ್ಯ ಗೌರವಾನ್ವಿತ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗಂಗಾವತಿಯಲ್ಲಿ ಬೆಳಿಗ್ಗೆ 8-00 ಗಂಟೆಗೆ ವಿಚಾರಣೆ ನಿಗದಿಗೊಳಿಸಿದ್ದು, ಪ್ರಯುಕ್ತ ಸಂಬಂಧಪಟ್ಟ ಯಾರಾದರೂ ತಕರಾರು ಸಲ್ಲಿಸುವುದಿದ್ದರೆ ಈ ಮೇಲೆ ತಿಳಿಸಿದ ಮುದ್ದತ್ತಿನ ದಿನಾಂಕದಂದು ಮಾನ್ಯ ನ್ಯಾಯಾಲಯಕ್ಕೆ ಹಾಜರಾಗಿ ತಕರಾರನ್ನು ಸಲ್ಲಿಸತಕ್ಕದ್ದು. ಒಂದು ವೇಳೆ ಯಾರಿಂದಲೂ ತಕರಾರು ಬಾರದಿದ್ದ ಪಕ್ಷದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣದ ವಿಚಾರಣೆ ಅಂತಿಮ ಎಂದು ಪರಿಗಣಿಸಿ ಅರ್ಜಿದಾರರ ಪರ ಏಕ ಪಕ್ಷೀಯ ಆದೇಶ ಹೊರಡಿಸಲಿದೆ ಎಂದು ತಿಳಿಯತಕ್ಕದ್ದು.

ಸ್ಥಳ : ಗಂಗಾವತಿ
ದಿನಾಂಕ:23-04-2026
ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/-ಮುಖ್ಯ ಲಿಪಿಕಾಧಿಕಾರಿ,
ಮಾನ್ಯ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ ನ್ಯಾಯಾಲಯ ಗಂಗಾವತಿ.
ಮುಖಾಂತರ : ಸಹಿ/-ಜಿ.ವಿಜಯಲಕ್ಷ್ಮಿ
ವಕೀಲರು, ಗಂಗಾವತಿ

ಪತ್ರಿಕಾ ಪ್ರಕಟಣೆಗಾಗಿ
ಮಾನ್ಯ ಗೌರವಾನ್ವಿತ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗಂಗಾವತಿ ಇವರ ಸಮಕ್ಷಮದಲ್ಲಿ
ಕ್ರಿಮಿನಲ್ ಮಿಸಲೇನಿಯಸ್ ಸಂಖ್ಯೆ: 35/2026

ಅರ್ಜಿದಾರರು :1) ಶ್ರೀ ಭೀಮರಾಜ ತಂದೆ ದಿ: ಮಹಾಂತೇಶ ವಯಸ್ಸು: 25 ವರ್ಷ, ಉದ್ಯೋಗ: ಕೂಲಿ, 2) ಶ್ರೀ ಕೊಮಾರಪ್ಪ ತಂದೆ ಹಿರೇ ಕೇಶಪ್ಪ, ವಯಸ್ಸು: 45 ವರ್ಷ, ಉದ್ಯೋಗ: ಕೂಲಿ. ಎಲ್ಲರೂ ಸಾ: ಚಿರ್ಚನಗುಡ್ಡ ತಾಂಡಾ, ತಾ: ಕನಕಗಿರಿ, ಜಿ: ಕೊಪ್ಪಳ,

-ವಿರುದ್ಧ-

ಎದುರುದಾರರು :ಜನನ ಮರಣ ನೋಂದಣಾಧಿಕಾರಿಗಳು, ತಹಶೀಲ್ದಾರರು, ತಹಶೀಲ್ ಕಛೇರಿ, ಕನಕಗಿರಿ.

ಈ ಮೇಲೆ ತಿಳಿಸಿದ ಅರ್ಜಿದಾರರು ಕರ್ನಾಟಕ ಜನನ ಮರಣ ನೋಂದಣಿ ಕಾಯ್ದೆ 1969ರ ಕಲಂ13(3) ನಿಯಮ 9(3) ಮತ್ತು ಕೆ.ಆರ್.ಬಿ&ಡಿ ನಿಯಮಗಳು 1999ರ ಅಡಿಯಲ್ಲಿ ಅರ್ಜಿದಾರ ನಂ.01 ಮತ್ತು 02 ರವರ ಮೃತರಾದ ದಿ॥ ರುಕ್ಮಿಣಿ ಗಂಡ ದಿ: ಹಿರೇ ಕೇಶಪ್ಪ ಇವರ ಮರಣ ನೋಂದಣಿಗಾಗಿ ಕೋರಿ ಅರ್ಜಿ ಸಲ್ಲಿಸಿದ್ದು, ಅರ್ಜಿದಾರ ನಂ.01 ರವರು ಮೃತರಿಗೆ ಮೊಮ್ಮಗನಾಗಿದ್ದು, ಹಾಗೂ ಅರ್ಜಿದಾರ ನಂ.02ರವರು ಮೃತರಿಗೆ ಮಗನಾಗಿದ್ದು, ಅರ್ಜಿದಾರರ ಮೃತರಾದ ದಿ॥ ರುಕ್ಮಿಣಿ ಗಂಡ ದಿ: ಹಿರೇ ಕೇಶಪ್ಪ ಇವರ ಮರಣ ದಿನಾಂಕ: 23/08/2023 ರಂದು ಕೊಪ್ಪಳ ಜಿಲ್ಲೆಯ ಕನಕಗಿರಿ ತಾಲ್ಲೂಕಿನ ಚಿರ್ಚನಗುಡ್ಡ ತಾಂಡದ ತಮ್ಮ ಸ್ವಗೃಹದಲ್ಲಿ ಮರಣ ಹೊಂದಿದ್ದು, ಸದರಿ ಅವರ ಮರಣ ನೋಂದಣಿ ಮಾಡಲು ಹಾಗೂ ಮರಣ ಪ್ರಮಾಣ ಪತ್ರ ವಿತರಿಸುವ ಸಂಬಂಧ ಎದುರುದಾರರ ಕಾರ್ಯಾಲಯಕ್ಕೆ ಆದೇಶವನ್ನು ಜಾರಿ ಮಾಡಬೇಕೆಂದು ಕೋರಿ ಅರ್ಜಿದಾರರು ನಂ.01 ಮತ್ತು 02 ಇವರು ಈ ಅರ್ಜಿಯನ್ನು ದಾಖಲು ಮಾಡಿದ್ದಾರೆ. ಈ ಪ್ರಕರಣವು ದಿನಾಂಕ:29/05/2026 ರಂದು ಮಾನ್ಯ ಗೌರವಾನ್ವಿತ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗಂಗಾವತಿಯಲ್ಲಿ ಬೆಳಿಗ್ಗೆ 8-00ಗಂಟೆಗೆ ವಿಚಾರಣೆ ಇದ್ದ ಪ್ರಯುಕ್ತ ಯಾರಾದರೂ ತಕರಾರು ಸಲ್ಲಿಸುವುದಿದ್ದರೆ ಈ ಮೇಲೆ ತಿಳಿಸಿದ ಮುದ್ದತ್ತಿನ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರಾಗಿ ತಕರಾರನ್ನು ಸಲ್ಲಿಸತಕ್ಕದ್ದು. ಒಂದು ವೇಳೆ ಯಾರಿಂದಲೂ ತಕರಾರು ಬಾರದಿದ್ದ ಪಕ್ಷದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣದ ವಿಚಾರಣೆ ಅಂತಿಮ ಎಂದು ಪರಿಗಣಿಸಿ. ಅರ್ಜಿದಾರರ ಪರವಕ ಪಕ್ಷೀಯ ಆದೇಶ ಹೊರಡಿಸಲಿದೆ ಎಂದು ತಿಳಿಯತಕ್ಕದ್ದು.

ಸ್ಥಳ : ಗಂಗಾವತಿ
ದಿ:22/4/2026
ನ್ಯಾಯಾಲಯದ ಆದೇಶದ ಮೇರೆಗೆ
ಮುಖ್ಯ ಲಿಪಿಕಾಧಿಕಾರಿ
ಮಾನ್ಯ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ, ನ್ಯಾಯಾಲಯ, ಗಂಗಾವತಿ,
ಮುಖಾಂತರ : (ಎನ್.ಎಮ್.ಯತ್ನಟ್ಟಿ)
ಅರ್ಜಿದಾರರ ಪರ ವಕೀಲರು, ಗಂಗಾವತಿ

ಕ್ರಿಮಿನಲ್ ಮಿಸಲೆನಿಯಸ್ ನಂ : 281/2026
ಮಾನ್ಯ ಜೆ.ಎಂ.ಎಫ್.ಸಿ ಸವಣೂರ ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು : ಸುರೇಶಗೌಡ ತಂದೆ ಚನಬಸಪ್ಪ@ ಚನಬಸನಗೌಡ ಪಾಟೀಲ ವಯಾ: 63 ವರ್ಷ, ಉದ್ಯೋಗ: ಒಕ್ಕಲುತನ, ಸಾ: ತೊಂಡೂರ ತಾ॥ಸವಣೂರ ಜಿ॥ಹಾವೇರಿ

ವಿರುದ್ಧ

ಎದುರುಗಾರರು : ಜನನ ಮರಣಗಳ ನೋಂದಣಿ ಅಧಿಕಾರಿಗಳು, ಇವರ ಪರವಾಗಿ ತಹಶೀಲ್ದಾರರು ಸವಣೂರ. ತಾ: ಸವಣೂರ ಜಿ: ಹಾವೇರಿ

ಇಸ್ತಿಯಾರ

ಈ ಮೇಲ್ಕಾಣಿಸಿದ ಪ್ರಕರಣದಲ್ಲಿ ಕೊಡುವ ನೋಟೀಸು ಏನೆಂದರೆ,

ಈ ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರರ ತಾಯಿಯಾದ ರೇವಣೆವ್ವ @ ರೇಣವ್ವ ಕೋಂ ಚನಬಸನಗೌಡ ಪಾಟೀಲ ಇವರು ದಿನಾಂಕ: 01-08-2002 ರಂದು ತೊಂಡೂರಿನಲ್ಲಿ ಅರ್ಜಿದಾರರ ಮನೆಯಲ್ಲಿ ಮರಣ ಹೊಂದಿದ್ದು ಸದರಿಯವರ ಮರಣ ಪ್ರಮಾಣ ಪತ್ರ ಪಡೆಯುವ ಕುರಿತು ಮೇಲ್ಕಂಡ ನ್ಯಾಯಾಲಯದಲ್ಲಿ ಆದೇಶ ಪಡೆದು ಎದುರುಗಾರರ ಜನನ ಮರಣ ನೊಂದಣಾಧಿಕಾರಿಗಳಲ್ಲಿ ಹೆಸರು ಮತ್ತು ದಿನಾಂಕವನ್ನು ನಮೋದ ಮಾಡಿಕೊಳ್ಳುವವರು ಇರುತ್ತಾರೆ. ಅದರ ಬಗ್ಗೆ ಸಾರ್ವಜನಿಕರು ಯಾರದಾದರೂ ತಂಟೆ ವ, ತಕರಾರು ಇದ್ದಲ್ಲಿ ಖುದ್ದಾಗಿ ಅಥವಾ ವಕೀಲರ ಮೂಲಕ ದಿನಾಂಕ : 29-05-2026 ರಂದು ಮಾನ್ಯ ನ್ಯಾಯಾಲಯಕ್ಕೆ ಬೆಳಿಗ್ಗೆ 11-00 ಘಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲಿ ಖುದ್ದಾಗಿ ಇಲ್ಲವೇ ನಿಮ್ಮ ಪರವಾಗಿ ನ್ಯಾಯವಾದಿಗಳ ಮುಖಾಂತರ ಹಾಜರಾಗಿ ತಮ್ಮ ಹೇಳಿಕೆ ಸಲ್ಲಿಸಬೇಕು. ಇದಕ್ಕೆ ತಪ್ಪಿದಲ್ಲಿ ನಿಮ್ಮ ಗೈರ್ ಹಾಜರಾತಿಯಲ್ಲಿ ಅರ್ಜಿಯನ್ನು ನಿಖಾಲಿ ಮಾಡಲಾಗುವುದು ಅಂತಾ ಕೊರ್ಟಿನ ನೋಟೀಸು. ಇಂದು ದಿನಾಂಕ : 24-04-2026 ರಂದು ನಮ್ಮ ಸಹಿ ಮಾಡಿ ಕೋರ್ಟಿನ ಮೊಹರು ಹಾಕಿ ಕೊಡಲ್ಪಟ್ಟಿತು.

ಸ್ಥಳ : ಸವಣೂರ
ದಿನಾಂಕ : 24-04-2026
ಸಹಿ/- ಶಿರಸ್ತೇದಾರರು
ಸಿವ್ಹಿಲ್ ಜಡ್ಜ್ ನ್ಯಾಯಾಲಯ, ಸವಣೂರ.
ಸಹಿ/- ಎಮ್.ಎಸ್. ಮುದಗಲ್
ಅರ್ಜಿದಾರರ ಪರ ವಕೀಲರು, ಸವಣೂರ

ಪತ್ರಿಕಾ ಪ್ರಕಟಣೆಗಾಗಿ
ಮಾನ್ಯ ಗೌರವಾನ್ವಿತ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗಂಗಾವತಿ ಇವರ ಸಮಕ್ಷಮದಲ್ಲಿ
ಕ್ರಿಮಿನಲ್ ಮಿಸಲೇನಿಯಸ್ ಸಂಖ್ಯೆ: 33/2026

ಅರ್ಜಿದಾರರು:-1) ಶ್ರೀ ಭೀಮರಾಜ ತಂದೆ ದಿ: ಮಹಾಂತೇಶ ವಯಸ್ಸು: 25 ವರ್ಷ, ಉದ್ಯೋಗ: ಕೂಲಿ.
2) ಶ್ರೀ ಕೊಮಾರಪ್ಪ ತಂದೆ ಹಿರೇ ಕೇಶಪ್ಪ, ವಯಸ್ಸು: 45 ವರ್ಷ, ಉದ್ಯೋಗ: ಕೂಲಿ. ಎಲ್ಲರೂ ಸಾ: ಚಿರ್ಚನಗುಡ್ಡ ತಾಂಡಾ, ತಾ ಕನಕಗಿರಿ, ಜಿ: ಕೊಪ್ಪಳ.

-ವಿರುದ್ಧ-

ಎದುರುದಾರರು : ಜನನ ಮರಣ ನೋಂದಣಾಧಿಕಾರಿಗಳು, ತಹಶೀಲ್ದಾರರು, ತಹಶೀಲ್ ಕಛೇರಿ, ಕನಕಗಿರಿ.

ಈ ಮೇಲೆ ತಿಳಿಸಿದ ಅರ್ಜಿದಾರರು ಕರ್ನಾಟಕ ಜನನ ಮರಣ ನೋಂದಣಿ ಕಾಯ್ದೆ 1969ರ ಕಲಂ 13(3) ನಿಯಮ 9(3) ಮತ್ತು ಕೆ.ಆರ್.ಬಿ & ಡಿ ನಿಯಮಗಳು 1999 ರ ಅಡಿಯಲ್ಲಿ ಅರ್ಜಿದಾರ ನಂ.01 ಮತ್ತು 02 ರವರ ಮೃತರಾದ ದಿ॥ ಹಿರೇ ಕೇಶಪ್ಪ ತಂದೆ ಲಚಮಪ್ಪ ಇವರ ಮರಣ ನೋಂದಣಿಗಾಗಿ ಕೋರಿ ಅರ್ಜಿ ಸಲ್ಲಿಸಿದ್ದು, ಅರ್ಜಿದಾರ ನಂ.01 ರವರು ಮೃತರಿಗೆ ಮೊಮ್ಮಗನಾಗಿದ್ದು, ಹಾಗೂ ಅರ್ಜಿದಾರ ನಂ.02 ರವರು ಮೃತರಿಗೆ ಮಗನಾಗಿದ್ದು, ಅರ್ಜಿದಾರರ ಮೃತರಾದ ದಿ॥ ಹಿರೇ ಕೇಶಪ್ಪ ತಂದೆ ಲಚಮಪ್ಪ ಇವರ ಮರಣ ದಿನಾಂಕ: 24/01/2023 ರಂದು ಕೊಪ್ಪಳ ಜಿಲ್ಲೆಯ ಕನಕಗಿರಿ ತಾಲ್ಲೂಕಿನ ಚಿರ್ಚನಗುಡ್ಡ ತಾಂಡದ ತಮ್ಮ ಸ್ವಗೃಹದಲ್ಲಿ ಮರಣ ಹೊಂದಿದ್ದು, ಸದರಿ ಅವರ ಮರಣ ನೋಂದಣಿ ಮಾಡಲು ಹಾಗೂ ಮರಣ ಪ್ರಮಾಣ ಪತ್ರ ವಿತರಿಸುವ ಸಂಬಂಧ ಎದುರುದಾರರ ಕಾರ್ಯಾಲಯಕ್ಕೆ ಆದೇಶವನ್ನು ಜಾರಿ ಮಾಡಬೇಕೆಂದು ಕೋರಿ ಅರ್ಜಿದಾರರು ನಂ.01 ಮತ್ತು 02 ಇವರು ಈ ಅರ್ಜಿಯನ್ನು ದಾಖಲು ಮಾಡಿದ್ದಾರೆ. ಈ ಪ್ರಕರಣವು ದಿನಾಂಕ: 20/05/2026ರಂದು ಮಾನ್ಯ ಗೌರವಾನ್ವಿತ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗಂಗಾವತಿಯಲ್ಲಿ ಬೆಳಿಗ್ಗೆ 8-00 ಗಂಟೆಗೆ ವಿಚಾರಣೆ ಇದ್ದ ಪ್ರಯುಕ್ತ ಯಾರಾದರೂ ತಕರಾರು ಸಲ್ಲಿಸುವುದಿದ್ದರೆ ಈ ಮುದ್ದತಿನ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರಾಗಿ ತಕರಾರನ್ನು ಸಲ್ಲಿಸತಕ್ಕದ್ದು. ಒಂದು ವೇಳೆ ಯಾರಿಂದಲೂ ಯಾರಿಂದಲೂ ತಕರಾರು ಬಾರದಿದ್ದ ಪಕ್ಷದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣದ ವಿಚಾರಣೆ ಅಂತಿಮ ಎಂದು ಪರಿಗಣಿಸಿ ಅರ್ಜಿದಾರರ ಪರ ಏಕಪಕ್ಷೀಯ ಆದೇಶ ಹೊರಡಿಸಲಿದೆ ಎಂದು ತಿಳಿಯತಕ್ಕದ್ದು.

ಸ್ಥಳ: ಗಂಗಾವತಿ
ದಿ:22/4/2026
ನ್ಯಾಯಾಲಯದ ಆದೇಶದ ಮೇರೆಗೆ
ಮುಖ್ಯ ಲಿಪಿಕಾಧಿಕಾರಿ
ಮಾನ್ಯ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ, ನ್ಯಾಯಾಲಯ, ಗಂಗಾವತಿ,
ಮುಖಾಂತರ : (ಎನ್.ಎಮ್.ಯತ್ನಟ್ಟಿ)
ಅರ್ಜಿದಾರರ ಪರ ವಕೀಲರು, ಗಂಗಾವತಿ

ಪತ್ರಿಕಾ ಪ್ರಕಟಣೆಗಾಗಿ
ಮಾನ್ಯ ಹೆಚ್ಚುವರಿ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಗಂಗಾವತಿ (ಸಂಚಾರಿ ಪೀಠ ಕಾರಟಗಿ)
ಕ್ರಿಮಿನಲ್ ಮಿಸಲೇನಿಯಸ್ ಸಂಖ್ಯೆ:316/2026

ಅರ್ಜಿದಾರ : ಶ್ರೀಮತಿ ಹುಲಿಗೆಮ್ಮ ಗಂಡ ಈರಪ್ಪ ವ: 62ವರ್ಷ, ಉದ್ಯೋಗ: ಒಕ್ಕಲುತನ ಸಾ: ವಾರ್ಡ ನಂ.20, ಚಲುವಾದಿ ಓಣಿ, ಗಂಗಾವತಿ, ಜಿ: ಕೊಪ್ಪಳ

ವಿರುದ್ಧ:

ಎದುರುದಾರರು : ಮಾನ್ಯ ತಹಶೀಲ್ದಾರರು ತಹಶೀಲ್ ಕಾರ್ಯಾಲಯ, ಕಾರಟಗಿ

ಕುರಿತಂತೆ ಯಾರಾದರೂ ಈ ಪ್ರಕರಣದಲ್ಲಿ ಅರ್ಜಿದಾರ ಕರ್ನಾಟಕ ಜನನ ಮತ್ತು ಮರಣ ನೋಂದಣಿ ಕಾಯಿದೆ 1969 ಅಧಿನಿಯಮ ಕಲಂ 13(3)ರಡಿಯಲ್ಲಿ ಈ ನ್ಯಾಯಾಲಯಕ್ಕೆ ಅರ್ಜಿದಾರರ ಅಣ್ಣನಾದ ದಿ॥ಅಯ್ಯಪ್ಪ ತಂದೆ ತಿಮ್ಮಣ್ಣ ಇವರು ದಿನಾಂಕ: 16-01-2002 ರಂದು ಕೊಪ್ಪಳ ಜಿಲ್ಲೆ ಕಾರಟಗಿ ತಾಲೂಕಿನ ಬೂದಗುಂಪ ಗ್ರಾಮದಲ್ಲಿ ಮರಣ ಹೊಂದಿದ ಕುರಿತಂತೆ ಮರಣ ನೋಂದಣಿ ಮತ್ತು ಮರಣ ಪ್ರಮಾಣ ಪತ್ರ ಕೊಡಿಸುವಂತೆ ಕೋರಿ ಎದುರುದಾರ ಕಛೇರಿ ಅಧಿಕಾರಿಯ ವಿರುದ್ಧ ಅರ್ಜಿಯನ್ನು ಸಲ್ಲಿಸಿದ ಪ್ರಯುಕ್ತ, ಅರ್ಜಿದಾರನ ತಕರಾರು/ಆಕ್ಷೇಪಣೆಗಳನ್ನು ಸಲ್ಲಿಸಬೇಕಾದಲ್ಲಿ ದಿನಾಂಕ: 21-5-2026ರ ಬೆಳಗ್ಗೆ 8.00ಗಂಟೆ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು, ಹಾಗೊಂದು ವೇಳೆ ಯಾರಿಂದಲೂ ಯಾವುದೇ ರೀತಿಯ ತಕರಾರು/ಆಕ್ಷೇಪಣೆಗಳು ಈ ಮೇಲೆ ತಿಳಿಸಿದ ದಿನಾಂಕ ಮತ್ತು ಸಮಯದೊಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸದೇ ಇದ್ದ ಪಕ್ಷದಲ್ಲಿ, ಯಾವುದೇ ತಕರಾರು/ಆಕ್ಷೇಪಣೆಗಳು ಇಲ್ಲವೆಂದು ಭಾವಿಸಿ ಈ ನ್ಯಾಯಾಲಯ ಕೊನೆಯ ತೀರ್ಮಾನ ಕೈಗೊಂಡು ಏಕಪಕ್ಷೀಯ ಆದೇಶವನ್ನು ಜಾರಿ ಮಾಡುತ್ತದೆ. ಈ ದಿವಸ ದಿನಾಂಕ: 23-4 2026 ರಂದು ಸಹಿ ಮಾಡಿ ಈ ನ್ಯಾಯಾಲಯದ ಶೀಲು/ ಮುದ್ರೆಯೊಂದಿಗೆ ಕೊಡಲಾಗಿದೆ.

ಸ್ಥಳ: ಗಂಗಾವತಿ
ದಿ:23-4-2026
ನ್ಯಾಯಾಲಯದ ಆದೇಶ ಅನುಸಾರ
ಮಾನ್ಯ ಹೆಚ್ಚುವರಿ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಕ ದಂಡಾಧಿಕಾರಿಗಳ ನ್ಯಾಯಾಲಯ ಗಂಗಾವತಿ (ಸಂಚಾರಿ ಪೀಠ ಕಾರಟಗಿ)
ಮುಖಾಂತರ : (ಎಸ್.ವಿ.ಕೆ)
ಅರ್ಜಿದಾರರ ಪರ ವಕೀಲರು, ಗಂಗಾವತಿ

ಕರ್ನಾಟಕ ಸರ್ಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ,
ಖಾನಾಪೂರ ಉಪ ವಿಭಾಗ, ಖಾನಾಪೂರ
ಕಚೇರಿ ದೂರವಾಣಿ ಸಂಖ್ಯೆ :9481992104 E-Mail ID : acfkhanapur2@gmail.com

ಸಂಖ್ಯೆ: ಸಅಸಂ/ಖಾಉವಿ/ಇ-ಟೆಂಡರ್/ಪ್ರಕಟಣೆ/2026–27/72 ದಿನಾಂಕ: 23-4-2026

ಖಾನಾಪೂರ ಉಪ ವಿಭಾಗದಲ್ಲಿ 2026–27 ನೇ ಸಾಲಿನಲ್ಲಿ ವಿವಿಧ ಯೋಜನೆಯಡಿ ಕಾಮಗಾರಿಗಳಿಗೆ ಟೆಂಡರ್ ದಿನಾಂಕ: 23–04–2026 ರಂದು ಇ–ಪ್ರೋಕ್ಯೂರಮೆಂಟ್ ಪೋರ್ಟಲ್ ಮುಖಾಂತರ KFD/2026-27/OW/WORK_INDENT38068 (OTHERS), KFD/2026-27/OW/WORK_INDENT38069 (OTHERS), KFD/2026-27/OW/WORK_INDENT38054 (OTHERS), KFD/2026-27/OW/WORK_INDENT38055 (OTHERS), KFD/2026-27/OW/WORK_INDENT38056 (OTHERS), KFD/2026-27/OW/WORK_INDENT38057 (OTHERS),KFD/2026-27/OW/WORK_INDENT38061 (OTHERS),KFD/2026-27/OW/WORK_INDENT38062 (OTHERS),KFD/2026-27/OW/WORK_INDENT38063 (OTHERS),KFD/2026-27/OW/WORK_INDENT38064 (OTHERS),KFD/2026-27/OW/WORK_INDENT38058 (OTHERS),KFD/2026-27/OW/WORK_INDENT38059 (OTHERS), KFD/2026-27/OW/WORK_INDENT38060 (OTHERS),KFD/2026-27/OW/WORK_INDENT38065 (OTHERS), KFD/2026-27/OW/WORK_INDENT38066 (OTHERS),KFD/2026-27/OW/WORK_INDENT38067 (OTHERS),KFD/2026-27/OW/WORK_INDENT38036 (ST), KFD/2026-27/OW/WORK_INDENT38037 (CAT-IIA), KFD/2026-27/OW/WORK_INDENT38038 (OTHERS), KFD/2026-27/OW/WORK_INDENT38039 (OTHERS), KFD/2026-27/OW/WORK_INDENT38040 (SC), KFD/2026-27/OW/WORK_INDENT38041 (SC), KFD/2026-27/OW/WORK_INDENT38042 (CAT-IIA), KFD/2026-27/OW/WORK_INDENT38043 (OTHERS), KFD/2026-27/OW/WORK_INDENT3804468 (SC), KFD/2026-27/OW/WORK_INDENT38045 (CAT-I), KFD/2026-27/OW/WORK_INDENT38046 (CAT-IIA), KFD/2026-27/OW/WORK_INDENT38047 (OTHERS), KFD/2026-27/OW/WORK_INDENT38048 (OTHERS), KFD/2026-27/OW/WORK_INDENT38049 (OTHERS), KFD/2026-27/OW/WORK_INDENT38050 (OTHERS), KFD/2026-27/OW/WORK_INDENT38051 (OTHERS), KFD/2026-27/OW/WORK_INDENT38052 (OTHERS), KFD/2026-27/OW/WORK_INDENT38053 (OTHERS), ಟೆಂಡರ್‌ನ್ನು ಕರೆಯಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳ ಸಹಿದಾರರ ಕಛೇರಿಗೆ ರಜಾ ದಿನಗಳನ್ನು ಹೊರತುಪಡಿಸಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಸಹಿ/–ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
DIPR/BGM/RO-NO-155/KSMCA/2026-27 ಖಾನಾಪೂರ ಉಪ ವಿಭಾಗ, ಖಾನಾಪೂರ

ಜೆ ಆಂಡ್ ಡಬ್ಲ್ಯೂ ನಂ. 11/2026
ಮಾನ್ಯ ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಕುಂದಗೋಳ, ಇವರ ನ್ಯಾಯಾಲಯದಲ್ಲಿ.
ಅರ್ಜಿದಾರ : 1. ತಾಂಜಿಲಾ ಕೋಂ ಮೊಹ್ಮದ ಜಾಫರ ಪಟವೇಗಾರ ಸಾ|| ಗಾರ್ಡನಪೇಟೆ, ಹುಬ್ಬಳ್ಳಿ ಹಾಗೂ ಇತರರು
ವಿರುದ್ಧ
ಎದುರುಗಾರರು : ಯಾರೂ ಇಲ್ಲ.
ಸಾರ್ವಜನಿಕ ನೋಟೀಸ್
ಈ ಮೂಲಕ ಸಾರ್ವಜನಿಕರಿಗೆ ತಿಳಿಸುವದೇನೆಂದರೆ, ಈ ಪ್ರಕರಣದ ಅರ್ಜಿದಾರ ನಂ. 1 ನೇದವರಾದ ಶ್ರೀಮತಿ ತಾಂಜಿಲಾ ಕೋಂ ಮೊಹ್ಮದ ಜಾಫರ ಪಟವೇಗಾರ ಇವರು ಮಾನ್ಯ ನ್ಯಾಯಾಲಯಕ್ಕೆ ತನ್ನ ಅಲ್ಪವಯಿ ಮಕ್ಕಳಾದ 1) ಮೊಹ್ಮದ ಉಜ್ಜೈರ್ ರಾಜಾ ತಂದೆ ಮೊಹ್ಮದ ಜಾಫರ ಪಟವೇಗಾರ, 2) ಮೊಹ್ಮದ ಜಿದಾನ್ ತಂದೆ ಮೊಹ್ಮದ ಜಾಫರ ಪಟವೇಗಾರ, 3) ಮೊಹ್ಮದ ಯುಸುಫ ತಂದೆ ಮೊಹ್ಮದ ಜಾಫರ ಪಟವೇಗಾರ ಇವರ ಜಂಟಿ ಖಾತೆಯಲ್ಲಿರುವ ಆಸ್ತಿಯಾದ ಕುಂದಗೋಳ ತಾಲೂಕ ಗೌಡಗೇರಿ ಗ್ರಾಮದ ಹದ್ದಿನ ರಿ.ಸ.ನಂ. 181/2, ಕ್ಷೇತ್ರ 5 ಎಕರೆ 07 ಗುಂಟೆ ಜಮೀನನ್ನು ಮಾರಾಟ ಮಾಡಲು ಪರವಾನಿಗೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ.
ಸದರಿ ಪ್ರಕರಣದ ಮುದ್ದತನ್ನು ದಿನಾಂಕ: 03–06–2026 ರಂದು ಮಾನ್ಯ ನ್ಯಾಯಾಲಯವು ನೇಮಿಸಿದ್ದು, ಕಾರಣ, ಹಿತಾಸಕ್ತಿ ಇದ್ದವರು ಆ ದಿನ ಬೆಳಿಗ್ಗೆ 11:00 ಗಂಟೆಗೆ ನ್ಯಾಯಾಲಯದ ಮುಂದೆ ನೀವಾಗಲಿ ಅಥವಾ ನಿಮ್ಮ ಪರ ವಕೀಲರ ಮೂಲಕವಾಗಲಿ ಹಾಜರಾಗಿ ನಿಮ್ಮ ಲಿಖಿತ ತಕರಾರು ಸಲ್ಲಿಸತಕ್ಕದ್ದು. ಒಂದು ವೇಳೆ ಹಾಜರಾಗದೆ ಉಳಿದಲ್ಲಿ ಮಾನ್ಯ ನ್ಯಾಯಾಲಯವು ಮುಂದಿನ ಆದೇಶ ಮಾಡುವುದು ಅಂತಾ ಕೊಟ್ಟ ನೋಟೀಸು.
ನ್ಯಾಯಾಲಯದ ಆದೇಶದ ಮೇರೆಗೆ ಹಾಗೂ ನ್ಯಾಯಾಲಯದ ಮೊಹರಿನೊಂದಿಗೆ.
ಸ್ಥಳ : ಕುಂದಗೋಳ
ದಿನಾಂಕ : 23–04–2026
ಸಹಿ/– ಶಿರಸ್ತೆದಾರರು,
ಹಿರಿಯ ದಿವಾಣಿ ನ್ಯಾಯಾಲಯ ಕುಂದಗೋಳ
ಸಹಿ/– (ಎಸ್. ಸಿ. ಶಿರಗುಪ್ಪಿ)
ಅರ್ಜಿದಾರ ಪರ ವಕೀಲರು

IN THE COURT OF THE HON'BLE VI ADDL. PRI. JUDGE FAMILY COURT AT BENGALURU
M.C. No. 4006/2024
Between: Smt. Priyanka ... Petitioner
AND:
Sri. Vinodha HUKKERI ... Respondent
NOTICE/SUMMONS TO THE RESPONDENT
Sri. Vinodha HUKKERI S/o Sri. Sadashiva, Aged about 37 Years. R/at No.2805/11, Rolson Villas, 2nd Stage, Near 7th Day School, Bhavaninagar, Huballi Dharwad-580023. **... Respondent**
Whereas, the Petitioner has filed the above petition against you for the dissolution of marriage under section 13 (1) (i-a) and (i-b) of HM Act 1955 and other consequential reliefs. You are hereby summoned to appear in this court in person or by pleader on **23-06-2026, at 11:00 A.M.** to answer the same, failing which the petition will be disposed of ex-parte. Given under my hand and seal of the court, this 7th day of April 2026.
By Order of the Court Senior Sheristedar Family Court, Bengaluru.
NAME AND ADDRESS OF THE ADVOCATE
Sri. S.D.Keshav Babhu, Advocate, Office at No.27/2, Hema Nilaya, 1st Cross Road, Malleshwaram, Bengaluru-560003. Mobile No: 9844459621.

CHANGE OF NAME
I, **Hanamantappa Kanti Gonnanavar (Old Name)** have changed my name and hereafter be known and called as **HANUMANTHAPPA VEERAPPA KANTIGONNAVAR (New Name)** for all purposes. Occ:Govt. Employee, R/o Ambakki Plot, Kalmeshwar Nagar, Lakkundi, Gadag -582115, State: Karnataka. Submitted an affidavit dtd: 22.04.2026, through M.M. Hiremath, Notary, Gadag.

CHANGE OF NAME
I, **SOUJANYA KALLURI (Old Name)** have changed my name and hereafter be known and called as **YADDALA SOUJANYA (New Name)** for all purposes, R/o Plot No.60, Herkal Layout, Neaaar Lions School, Kalyan Nagar, Gadag, State: Karnataka. Submitted an affidavit dtd: 23.04.2026, through M.M. Hiremath, Notary, Gadag.

ಕರ್ನಾಟಕ ಸರ್ಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ,
ನಾಗರಗಾಳಿ ಉಪ ವಿಭಾಗ, ನಾಗರಗಾಳಿ
E-Mail ID : acfnagargali@gmail.com
ಸಂಖ್ಯೆ: ಸಅಸಂ/ನಾಉವಿ/ಇ-ಟೆಂಡರ್/ಪ್ರಕಟಣೆ/2026–27/ ದಿನಾಂಕ: –04–2026

ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಪ್ರಕಟಣೆ Call-2

ನಾಗರಗಾಳಿ (ಪ್ರಾದೇಶಿಕ) ಉಪ ವಿಭಾಗದಲ್ಲಿ 2026–27ನೇ ಸಾಲಿನಲ್ಲಿ ವಿವಿಧ ಯೋಜನೆಯಡಿ ವಿವಿಧ ಕಾಮಗಾರಿಗಳಿಗೆ ಟೆಂಡರ್ ದಿನಾಂಕ:15–05–2026 ರಂದು ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ KFD/2025-26/OW/WORK_INDENT35213/Call-2,(Reserved for CAT-II(A)), 35214/Call-2 (Others), 35215/Call-2 ((Reserved for CAT-II(A)), 35216/Call-2 (Reserved for SC), 35218/Call-2 (Reserved for SC), 35219/Call-2 (Others), 35220/Call-2 (Others), 35221/Call-2 (Reserved for ST), 35231/Call-2 (Reserved for CAT-II(A)), 35232/Call-2 (Others), 35234/Call-2 (Reserved for SC), 35235/Call-2 (Others), 35236/Call-2 (Others), 35238/Call-2 (Others), 35242/Call-2 (Others), ಟೆಂಡರ್‌ನ್ನು ಕರೆಯಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳ ಸಹಿದಾರರ ಕಛೇರಿಗೆ ರಜಾ ದಿನಗಳನ್ನು ಹೊರತುಪಡಿಸಿ ಸಂಪರ್ಕಿಸಿ ಪಡೆಯಬಹುದಾಗಿದೆ

ಸಹಿ/–ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
DIPR/BGM/RO-NO-150/KSMCA/2026-27 ನಾಗರಗಾಳಿ ಉಪ ವಿಭಾಗ, ನಾಗರಗಾಳಿ

IN THE COURT OF HON'BLE III ADDITIONAL CIVIL JUDGE & JMFC AT BALLARI
Crl. M.C. No. 258 OF 2026
BETWEEN :
Taslim Basha and others .....Petitioners
And
The Tahsildar cum Registrar of Births and Deaths, Taluk office, Ballari .....Respondent
NOTICE
Whereas the above named petitioners have filed application against the respondent seeking death certificate of petitioners FATHER HUSSAIN SAB S/O. PEERA SAB WHO DIED ON 24-10-2021 AT HALAKUNDI VILLAGE OF BALLARI TALUK AND DISTRICT.
You are hereby summoned to appear in this court in person or by an Advocate duly instructed and able to answer all material questions relating to the claim or who shall be accompanied by some person able to answer all such questions on the day 25-05-2026 at 11-00 'O' Clock in the forenoon, to answer the claim And further you are hereby directed to file on that day a Counter of your defense and to produce on the said day all documents in your possession or Power upon which you base. Your defense, where you rely on any other document whether in your possession or power or not, as evidence in support of your defense you shall enter such documents in a list to be annexed to the counter.
Take notice that, in default of your appearance on the day before mentioned, the suit will be heard and determined in your absence.
Given under my hand and seal of the court on this 24th day April-2026
By Order of the court.
Sd/- Chief Administrative Officer,
Hon'ble III Addl Civil Judge and JMFC Ballari
Sd/- JADEPPA. K
Advocate for the petitioner

IN THE COURT OF HON'BLE III ADDITIONAL CIVIL JUDGE & JMFC AT BALLARI
Crl. M.C. No. 259 OF 2026
BETWEEN :
Taslim Basha and others .....Petitioners
And
The Tahsildar cum Registrar of Births and Deaths, Taluk office, Ballari .....Respondent
NOTICE
Whereas the above named petitioners have filed application against the respondent seeking death certificate of petitioners GRANDFATHER / HUSBAND / FATHER HUSSAIN SAB JALIBENCHI S/O. LUKMAN SAB, WHO DIED ON 08-04-2018 AT MINCHERI VILLAGE, BALLARI TALUK AND DISTRICT.
You are hereby summoned to appear in this court in person or by an Advocate duly instructed and able to answer all material questions relating to the claim or who shall be accompanied by some person able to answer all such questions on the day 25-05-2026 at 11-00 'O' Clock in the forenoon, to answer the claim And further you are hereby directed to file on that day a Counter of your defense and to produce on the said day all documents in your possession or Power upon which you base. Your defense, where you rely on any other document whether in your possession or power or not, as evidence in support of your defense you shall enter such documents in a list to be annexed to the counter.
Take notice that, in default of your appearance on the day before mentioned, the suit will be heard and determined in your absence.
Given under my hand and seal of the court on this 24th day April-2026
By Order of the court.
Sd/- Chief Administrative Officer,
Hon'ble III Addl Civil Judge and JMFC Ballari
Sd/- JADEPPA. K
Advocate for the petitioner

ಸಾರ್ವಜನಿಕ ನೋಟಿಸು

ನಾನು ಎಸ್. ಕೆ ಮುಲ್ಲಾ, ನ್ಯಾಯವಾದಿ, ನನ್ನ ಕಕ್ಷಿಗಾರರು ನೀಡಿದ ಮಾಹಿತಿ ವ ಅಧಿಕಾರದ ಅಡಿಯಲ್ಲಿ ನೀಡುವ ನೋಟಿಸು ಏನೆಂದರೆ,
ಧಾರವಾಡ ಕಲಘಟಗಿ ಜಿಲ್ಲಾ ತಾಲೂಕ ಸಬ್-ರಜಿಸ್ಟಾರ ಹದಿಯ ಪೈಕಿ ಬೋಗೇನಾಗರಕೊಪ್ಪದಲ್ಲಿರುವ ಶೇತ್ಕಿ ಜಮೀನುಗಳು ಇದರ ವಿವರ (1) ಸರ್ವೆ ನಂ. 96, ಕ್ಷೇತ್ರ 2 ಎಕರೆ 27 ಗುಂಟೆ ರೂ. 2.06 ಪೈಸೆ, (2) ಸರ್ವೆ ನಂ. 2/3ಬ, ಕ್ಷೇತ್ರ 3 ಎಕರೆ 17 ಗುಂಟೆ ರೂ. 1.36 ಪೈಸೆ ಮತ್ತು (3) ಸರ್ವೆ ನಂ. 2/15, ಕ್ಷೇತ್ರ 3 ಎಕರೆ 12 ಗುಂಟೆ, 08 ಆಣೆ, ರೂ. 0.77 ಪೈಸೆ ಇರುತ್ತದೆ. ಸದರಿ ಆಸ್ತಿಗಳು ನನ್ನ ಕಕ್ಷಿಗಾರರ ಒಟ್ಟು (ಅವಿಭಕ್ತ) ಕುಟುಂಬದ ಸಾಮೂಹಿಕ ಮಾಲ್ಕೀ ವ ವಹಿವಾಟಿಯ ಸ್ವತ್ತುಗಳು ಇದ್ದು ನನ್ನ ಕಕ್ಷಿಗಾರರದು ಇವುಗಳಲ್ಲಿ ಅವಿಭಾಜ್ಯ ಹಿಸ್ಸೆ ಇರುತ್ತದೆ. ನನ್ನ ಕಕ್ಷಿಗಾರರು ಹಿರಿಯ ದಿವಾಣಿ ನ್ಯಾಯಾಲಯ ಕಲಘಟಗಿ ಇವರ ನ್ಯಾಯಾಲಯದಲ್ಲಿ ತಮ್ಮ ಕಾನೂನುಬದ್ಧ ಹಿಸೆಯನ್ನು ಪಡೆದುಕೊಳ್ಳುವ ಸಲುವಾಗಿ ಅಸಲ ದಾವಾ ನಂ. 04 ಸನ್ 202505 ಪ್ರಕರಣವನ್ನು ಸಲ್ಲಿಸಿದ್ದು, ಅದು ಚಾಲ್ತಿಯಲ್ಲಿರುತ್ತದೆ. ವಿಷಯ ಹೀಗಿದ್ದರೂ ಸಹ ಮೇಲ್ಕಂಡ ಆಸ್ತಿಗಳ ಉತಾರದಲ್ಲಿ ಪ್ರತಿವಾದಿಯರ ಹೆಸರಗಳು ಮಾತ್ರ ಇರುವದರ ದುರುಪಯೋಗ ಪಡೆದುಕೊಂಡು ಸದರಿ ಮೇಲ್ಕಂಡ ಆಸ್ತಿಗಳ ಮಾರಾಟ ಮಾಡುವ ತರಾತುರಿಯಲ್ಲಿ ಇರುತ್ತಾರೆ. ನನ್ನ ಕಕ್ಷಿಗಾರರು ಅಂತಹ ವ್ಯವಹಾರಕ್ಕೆ ತೀವ್ರ ಆಕ್ಷೇಪಣೆ ಇರುತ್ತದೆ.
ಆದ್ದರಿಂದ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವದೇನೆಂದರೆ ಮೇಲ್ಕಂಡ ಆಸ್ತಿಗಳ ಮೇಲೆ ಯಾವುದೇ ಖರೀದಿ ಮಾಡಿಕೊಳ್ಳವಾರದು. ಒಂದು ವೇಳೆ ಖರೀದಿ ಮಾಡಿಕೊಂಡಲ್ಲಿ ಅದು ನನ್ನ ಕಕ್ಷಿಗಾರರ ಮೇಲಾಗಲೀ ಅಥವಾ ಆಸ್ತಿಗಳ ಮೇಲಾಗಲೀ ಬಾಂಧಾಯಿಸಲಾರದು ಅಂತಾ ನೀಡಿದ ಸಾರ್ವಜನಿಕ ನೋಟಿಸು.
ಎಸ್. ಕೆ. ಮುಲ್ಲಾ, ನ್ಯಾಯವಾದಿ
ಹಜರತ ಸೈಯದ ಪತೇಶಾ ದರ್ಗಾ ಕಾಂಪ್ಲೆಕ್ಸ, ಕಲಘಟಗಿ ಬಸ ನಿಲ್ದಾಣ ಎದುರುಗಡೆ,
ಹುಬ್ಬಳ್ಳಿ ಕಾರವಾರ ರಸ್ತೆ, ಹಳೇ ಹುಬ್ಬಳ್ಳಿ,
24.04.2026 ಹುಬ್ಬಳ್ಳಿ–24 ಮೋ: 9448805044.

IN THE COURT OF THE CIVIL JUDGE & J.M.F.C AT SANDUR
O.S No: 137/2022.
Between:
Plaintiffs : Smt. Yallamma since dead by her LRs Smt. Anjinamma and another
And
Defendants : Unthakal Bosamma and others.
TO WHOMESEVER IT MAY CONCERN
NOTICE
To,
Defendant No. 13 Smt. Jayalakshmi.K.N @ Girijamma.K, W/o K. Nagaraja, aged about 38 years, Hindu Agriculturist, R/o House No: 93, Ontikuri Oni, 2nd Ward, Vaddu Village, Vaddu Post, Sandur Taluk, Ballari District, Karnataka, Mobile and Whats App number No: 9731690145.
Whereas above named plaintiffs have filed the above suit against defendants for partition and separate possession.
Defendant No. 13 or any person interested to her are hereby summoned to appear before this Court in person or by a pleader duly instructed and able to answer all material question relating to the O.S. No: 137/2022 on 01.06.2026 at 11:00 AM before this Court. In the default of your appearance on the date/day of the above will be heard and determined as ex-parte.
Given under my hand and seal of the court of this 23rd day of April 2026.
//By order of this Court//
Sd/- Sheristedar
Civil Judge & JMFC Court Sandur
Sd/- Mallikarjunagouda
Adovcate for Plaintiffs

ಕರ್ನಾಟಕ ಸರ್ಕಾರ
(ಮೀನುಗಾರಿಕೆ ಇಲಾಖೆ)
ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಾರ್ಯಾಲಯ,
ಬಾಪೂಜಿನಗರ, ಕೂಡ್ಲಿಗಿತಾ|| ವಿಜಯನಗರ ಜಿ||–583135
E-mail ID:adfkugligi@gmail.com
ಸಂಖ್ಯೆ:ವಾ.ಹೊ.ಗು/01/2026–27 ದಿನಾಂಕ:21/04/2026

ಅಲ್ಪಾವಧಿಟೆಂಡರ್ ಪ್ರಕಟಣೆ

ಮೀನುಗಾರಿಕೆ ಸಹಾಯಕ ನಿರ್ದೇಶಕರು, ಕೂಡ್ಲಿಗಿ ತಾಲ್ಲೂಕು ಕಛೇರಿಯ ಉಪಯೋಗಕ್ಕಾಗಿ 2026–27ನೇ ಸಾಲಿನ ಅವಧಿಗೆ ದಿನಾಂಕ:01/04/2026 ರಿಂದದಿನಾಂಕ: 31/03/2027 ರವರೆಗೆ ಒಂದು ಸುಸಜ್ಜಿತವಾದ ಹಾಗೂ ಉತ್ತಮ ಸ್ಥಿತಿಯಲ್ಲಿರುವ ಮಹೇಂದ್ರ ಬೋಲೆರೋ ಅಥವಾ ಟಾಟಾ ಬೋಲ್ಟ್/ಇಂಡಿಗೋ/ಟಯೋಟೋ ಇಟಿಯೋಸ್/ಮಾರುತಿ ಶಿಫ್ಟ್ ಡಿಸೈರ್‌ಕಾರನ್ನು ನುರಿತ ಚಾಲಕನೊಂದಿಗೆ ಹೊರಗುತ್ತಿಗೆ ಆಧಾರದ ಮೇಲೆ ಒದಗಿಸಲು ಅಲ್ಪಾವಧಿ ಟೆಂಡರ್ ಕರೆಯಲಾಗಿದೆ.
ಟೆಂಡರ್ ವಿವರ ಈ ಕೆಳಗಿನಂತಿದೆ
1.ವಾಹನ ಬಾಡಿಗೆ ಟೆಂಡರ್‌ನ ಗರಿಷ್ಟ ಮೊತ್ತರೂ. (ದಿನಾಂಕ: 01/04/2026 ರಿಂದ 31/03/2027ರವರೆಗೆ): **ಮಾಸಿಕ ಗರಿಷ್ಟ : 40,000/– + ಜಿ.ಎಸ್.ಟಿ (ಎ.ಸಿ. ಸಹಿತ ವಾಹನ).** 2.ಟೆಂಡರ್ ಫಾರಂಕೊಡುವ ದಿನಾಂಕ: **ದಿನಾಂಕ:21/04/2026** ರಿಂದ **ದಿನಾಂಕ:29/04/2026** ವರೆಗೆರಜಾ ದಿನಗಳನ್ನು ಹೊರತುಪಡಿಸಿ ಬೆಳಿಗ್ಗೆ **8.30** ರಿಂದ **ಮಧ್ಯಾಹ್ನ 1.00 ಗಂಟೆಯವರೆಗೆ.** 3.ಟೆಂಡರ್ ಫಾರಂನ್ನು ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸಲು ಕೊನೆಯ ದಿನಾಂಕ: **ದಿನಾಂಕ: 29/04/2026 ಮಧ್ಯಾಹ್ನ1.00 ಗಂಟೆಯ** ವರೆಗೆ. 4.ಟೆಂಡರ್ ತೆರೆಯುವ ದಿನಾಂಕ: **ದಿನಾಂಕ:29/04/2026** ರಂದು **ಮಧ್ಯಾಹ್ನ 1.30 ಗಂಟೆಗೆ (ಮೀನುಗಾರಿಕೆ ಉಪ ನಿರ್ದೇಶಕರು, ವಿಜಯನಗರರವರ ಸಮ್ಮುಖದಲ್ಲಿ ತೆರೆಯಲಾಗುವುದು).** 5.ಇ.ಎಂ.ಡಿ (ಮುಂಗಡಠೇವಣಿ): **ರೂ. 10,000/– ಮೊತ್ತದ ರಾಷ್ಟ್ರೀಕೃತ ಬ್ಯಾಂಕಿನಿಂದ ಡಿ.ಡಿ.ಅನ್ನು ಮೀನುಗಾರಿಕೆ ಸಹಾಯಕ ನಿರ್ದೇಶಕರು, ಕೂಡ್ಲಿಗಿ ಇವರ ಹೆಸರಿಗೆ ಪಡೆದು ಸಲ್ಲಿಸತಕ್ಕದ್ದು.**
ಸೂಚನೆ: ಟೆಂಡರ್ ಅಧಿಸೂಚನೆಯ ಮಾಹಿತಿಯ ವಿವರ ಮತ್ತು ಇತರೆ ನಿಯಮಗಳ ಬಗ್ಗೆ ಈ ಕಛೇರಿಗೆ ಸಂಪರ್ಕಿಸಿ ಮಾಹಿತಿಯನ್ನು ಪಡೆದುಕೊಳ್ಳಬಹುದು.
ಸಹಿ/–ಮೀನುಗಾರಿಕೆ ಸಹಾಯಕ ನಿರ್ದೇಶಕರು ಕೂಡ್ಲಿಗಿ.
ವಾ.ಸಾ.ಸಂ.ಇ/ವಿಜಯನಗರ/20256–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/42

ಕ್ರಿಮಿನಲ್ ಮಿಸ್ಲೇನಿಯಸ್. ನಂ. 94/2026
ಮಾನ್ಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ ಮುಂಡರಗಿ ಇವರಲ್ಲಿ
ಅರ್ಜಿದಾರರು :
1) ಶ್ರೀಮತಿ ಮಹಬೂಬಿ ಕೋಂ ಮಹಮ್ಮದಸಾಬ ಮಾಳೇಕೊಪ್ಪ,ವಯಾ: 51 ವರ್ಷ, ಉದ್ಯೋಗ:– ಶೇತ್ಕಿ ಸಾ|| ಬರದೂರ ತಾ|| ಮುಂಡರಗಿ ಜಿ|| ಗದಗ
ವಿರುದ್ಧ
ಎದುರುಗಾರರು :
ಮೇ|| ಉಪತಹಶೀಲ್ದಾರ ಕಾರ್ಯಾಲಯ ಡಂಬಳ (ಜನನ–ಮರಣ ದಾಖಲಾತಿ ವಿಭಾಗ) ಸಾ|| ಡಂಬಳ ತಾ|| ಮುಂಡರಗಿ ಜಿ|| ಗದಗ
ಸಾರ್ವಜನಿಕ ಪತ್ರಿಕಾ ಪ್ರಕಟನೆಗಾಗಿ
ಇದರಲ್ಲಿ ಮೇಲ್ಕಂಡ 1 ನೇ ಅರ್ಜಿದಾರರ ತಮ್ಮ ಹಾಗೂ 2 ನೇ ಅರ್ಜಿದಾರರ ಮೈದುನನಾದ ದಿವಂಗತ ಮೌಲಾಸಾಬ ತಂದೆ ಸರದಾರಸಾಬ ಮಾಳೇಕೊಪ್ಪ ಆವರು ದಿನಾಂಕ : 01–10–1990 ರಂದು ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಬರದೂರ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ. ಮೇ|| ಉಪ ತಹಶೀಲ್ದಾರ ನಾಡ ಕಾರ್ಯಾಲಯ ಜನನ ಮರಣ ದಾಖಲೆ ವಿಭಾಗ ಡಂಬಳ ಇವರ ವಿರುದ್ಧ ಜನನ ಮತ್ತು ಮರಣ ದಾಖಲೆಯಲ್ಲಿ ಅರ್ಜಿದಾರರ ಪೋತಿ ಹೆಸರನ್ನು ಮರಣ ದಾಖಲೆಯಲ್ಲಿ ದಾಖಲು ಮಾಡಲು ಪ್ರಕರಣ ದಾಖಲಿಸಿದ್ದು, ಅದು ದಿನಾಂಕ: 12–06–2026 ರಂದು ಮುದ್ದತ್ತು ನಿಗದಿಪಡಿಸಿದ್ದು ಇರುತ್ತದೆ. ಆ ದಿವಸ ಯಾರಾದರೂ ತಕರಾರು ಸಲ್ಲಿಸುವವರು ಇದ್ದಲ್ಲಿ ತಾವಾಗಲಿ ಅಥವಾ ವಕೀಲರ ಮುಖಾಂತರವಾಗಲಿ ಹಾಜರಾಗಿ ತಕರಾರು ಸಲ್ಲಿಸಬೇಕು ಇಲ್ಲವಾದಲ್ಲಿ ಯಾರದೂ ತಕರಾರು ಇಲ್ಲಾ ಅಂತಾ ಪರಿಗಣಿಸಿ ಪ್ರಕರಣ ನಿಕಾಲಿ ಮಾಡಲಾಗುವುದು.
ಈ ದಿವಸ ದಿನಾಂಕ : 18–04–2026 ರಂದು ನಮ್ಮ ಸಹಿ, ಮೊಹರಿನೊಂದಿಗೆ ಕೊಡಲ್ಪಟ್ಟಿತು.
ಸ್ಥಳ : ಮುಂಡರಗಿ
ದಿನಾಂಕ: 18–04–2026
ಸಹಿ/– ಶಿರಸ್ತೇದಾರರು
ಮಾನ್ಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ ಮುಂಡರಗಿ.
ಅರ್ಜಿದಾರರ ಪರ ವಕೀಲರು
ಸಹಿ/– ಶ್ರೀ ಬಿ.ಹೆಚ್. ರಾಟಿ ವಕೀಲರು, ಮುಂಡರಗಿ

ಕರ್ನಾಟಕ ಸರಕಾರ
ಪಟ್ಟಣ ಪಂಚಾಯತ ಕಾರ್ಯಾಲಯ ಯಲಬುರ್ಗಾ
TOWN PANCHAYATH YELABURGA
Tq: Yelburga, Dist: Koppal, Ph No:08534-230845
Email ID : itstaff_ulb_yelaburga@yahoo.com
ಕ್ರ.ಸಂ:ಪ.ಪಂ.ಯ/ಕಾ.ವಿ/2026–27/30 ದಿನಾಂಕ : 23–04–2026

ಕೆ.ಪಿ.ಪಿ.ಪಿ ಅಲ್ಪಾವಧಿ ಟೆಂಡರ್ ಪ್ರಕಟಣೆ
(ಸ್ಟ್ಯಾಂಡರ್ಡ್ ಟೆಂಡರ್ ಪ್ರೊಕ್ಯೂರ್‌ಮೆಂಟ್ ಕೆ.ಡಬ್ಲೂ–1 ನಿಬಂಧನೆಗಳಿಗೆ ಒಳಪಟ್ಟು ಟೆಂಡರ್ ಆಹ್ವಾನಿಸಲಾಗಿದೆ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಮತ್ತು ಪಾರದರ್ಶಕತೆ ಅಧಿನಿಯಮ 2000 ರ ಪ್ರಕಾರ ಯಲಬುರ್ಗಾ ಪಟ್ಟಣ ಪಂಚಾಯತ ವ್ಯಾಪ್ತಿಯ ಪ.ಪಂ ನಿಧಿ 2026–27 ಯೋಜನೆಗಳ ಅನುದಾನದ ಅಡಿಯಲ್ಲಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ ಲಕೋಟೆ ಪದ್ಧತಿಯಲ್ಲಿ ಈ ಕೆಳಗೆ ನಮೂದಿಸಿದ ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಕೆ.ಪಿ.ಪಿ.ಪಿ ಟೆಂಡರ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ **http://kppp.karnataka.gov.in** ರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು. ಟೆಂಡರ್ ಫಾರಂಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು ವೆಬ್‌ಸೈಟ್ ಮುಖಾಂತರ ಮಾತ್ರ, ಈ ಕಚೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
ಈ ಕೆಳಕಂಡ ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ ಪೋರ್ಟಲ್ ಪ್ರಕಾರ ಅರ್ಜಿ ಸಲ್ಲಿಸುವ ಕೊನೆಯ **ದಿನಾಂಕ: 02–05–2026 ರ ಸಾಯಂಕಾಲ 5:30 ಗಂಟೆಗೆ** ಮತ್ತು ಟೆಂಡರ್ ತೆರೆಯುವ **ದಿನಾಂಕ: 04–05–2026 ರ ಬೆಳಿಗ್ಗೆ 11:00 ಗಂಟೆಗೆ** ಅಥವಾ ನಂತರದ ದಿನಗಳಲ್ಲಿ ಮತ್ತು ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ: 07–05–2026** ಅಥವಾ ನಂತರದ ದಿನಗಳಲ್ಲಿ ತೆರೆಯಲಾಗುವುದು.
1) DMA/2026-27/BD/WORK_INDENT57573 ಟೆಂಡರ್‌ಗಿಟ್ಟ ಮೊತ್ತ ರೂ: **0.265 ಲಕ್ಷಗಳು** ಇ.ಎಂ.ಡಿ ಮೊತ್ತ ರೂ: **663.00**
ಷರತ್ತುಗಳು: ಟೆಂಡರ್‌ನ್ನು ಮಂಜೂರು ಮಾಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿದ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.

ಸಹಿ/–	ಸಹಿ/–
ತಹಶೀಲ್ದಾರರು/ಆಡಳಿತಾಧಿಕಾರಿಗಳು	ಮುಖ್ಯಾಧಿಕಾರಿಗಳು,
ಪಟ್ಟಣ ಪಂಚಾಯತ ಯಲಬುರ್ಗಾ	ಪಟ್ಟಣ ಪಂಚಾಯತ ಯಲಬುರ್ಗಾ

ವಾ.ಸಾ.ಸಂ.ಇ/ಕೊಪ್ಪಳ/48/ದೇಶಪಾಂಡೆಪಬ್ಲಿಸಿಟಿ/2026–27

IN THE COURT OF HON'BLE PRINCIPAL CIVIL JUDGE & JMFC AT BALLARI
Crl. M.C. No. 358 OF 2026
BETWEEN :
Basavaraj and others .....Petitioners
AND
The Registrar of Birth and Death, City Corporation, Ballari .....Respondent
NOTICE
To, The Registrar of Birth and Death, City Corporation, Ballari.
Whereas the above named petitioners have filed application against the respondent seeking death certificate of petitioner FATHER HULUGAPPA S/O. BASAPPA , DIED ON 29-03-1999 AT BALLARI.
You are hereby summoned to appear in this court in person or by an Advocate duly instructed and able to answer all material questions relating to the claim or who shall be accompanied by some person able to answer all such questions on the day 15-05-2026 at 11-00 'O' Clock in the forenoon, to answer the claim And further you are hereby directed to file on that day a Counter of your defense and to produce on the said day all documents in your possession or Power upon which you base. Your defense, where you rely on any other document whether in your possession or power or not, as evidence in support of your defense you shall enter such documents in a list to be annexed to the counter.
Take notice that, in default of your appearance on the day before mentioned, the suit will be heard and determined in your absence.
Given under my hand and seal of the court on this 24th day April-2026.
By Order of the court.
Sd/- Chief Administrative Officer,
Hon'ble Prl Civil Judge and JMFC Ballari
Sd/- Mallikarjuna D.
Advocate for the petitioner

IN THE COURT OF HON'BLE PRINCIPAL CIVIL JUDGE & JMFC AT BALLARI
Crl. M.C. No. 359 OF 2026
BETWEEN :
Basavaraj and others .....Petitioners
AND
The Registrar of Birth and Death, City Corporation, Ballari .....Respondent
NOTICE
To, The Registrar of Birth and Death, City Corporation, Ballari.
Whereas the above named petitioners have filed application against the respondent seeking death certificate of petitioner MOTHER SMT. GANGAMMA W/O. HULUGAPPA WAS DIED ON 04-05-1999 AT BALLARI.
You are hereby summoned to appear in this court in person or by an Advocate duly instructed and able to answer all material questions relating to the claim or who shall be accompanied by some person able to answer all such questions on the day 15-05-2026 at 11-00 'O' Clock in the forenoon, to answer the claim And further you are hereby directed to file on that day a Counter of your defense and to produce on the said day all documents in your possession or Power upon which you base. Your defense, where you rely on any other document whether in your possession or power or not, as evidence in support of your defense you shall enter such documents in a list to be annexed to the counter.
Take notice that, in default of your appearance on the day before mentioned, the suit will be heard and determined in your absence.
Given under my hand and seal of the court on this 24th day April-2026.
By Order of the court.
Sd/- Chief Administrative Officer,
Hon'ble Prl Civil Judge and JMFC Ballari
Sd/- Mallikarjuna D.
Advocate for the petitioner

IN THE COURT OF THE SENIOR CIVIL JUDGE AT SIRUGUPPA
O.S . No 38/2020
Between:-
Mohammed Rasool .....Plaintiff
V/S
Hussain Bee & OTHERS .....Defendants
NOTICE
To,
Address of the Defendants
1) Hussain Bee W/O Late Ballari Basha Rtd Signalman (D/O Late Imam Sab) aged about 68 years R/O Railway Quarter Beside-Railway Quarter New Maseed Station Road, Raichur city, taluk and Raichur dist.
3) Hussain Peera S/O Late Shaik Abdul Rahiman 13/-397A, Beedi Colony Kamalapur 516289, YSR Kadapa dist.
6) Mahaboob Bee W/O Driver Mabu Nali (D/O Late Abdul Razak) aged about 45 years R/O Opp-Lakshmi Ranga Talkies Veedi Tadapatri, Anantapur dist, A.P.
17) V. Mudukappa S/O Late Huluhappa, aged about 48 years, Agriculturist R/O Agasanur Village, Siruguppa Taluk, Ballari Dist.
24) Savitramma W/O Venkata Ramana aged about 50 years, Agriculturist R/O Agasanuru Village, Siruguppa taluk, Ballari dist.
25) Lakshmamma W/O Bandri Nagappa aged about 65 years, Agriculturist, R/O Agasanuru Village, Siruguppa taluk, Ballari dist.
Whereas Mohammed Rasool S/O Late Shaik Abdul Razak aged about 50 years, gas welding work, resident of Door No-7-1-283, ward No-20, Rani Vanam, Yeraguntla, YSR Kadapa District, A.P. State has filed above suit for partition and separate possession Against the above Defendants No-1,3,6,17,24,25, hereby take notice and to appear in this Court in person or with your pleader on 17-07-2026 day of JULY 2026 at 11' o clock in the forenoon to answer the claim, and you are directed to produce on that day all the documents upon which you intend to really in support of your defense.
Take notice that, in default of your appearance on the day before mentioned the petition will be heard and determined in your absence.
Given under my hand and the seal of the Court this 24th day of April 2026.
B.O.C.
Sd/- Chief Ministerial Officer
Senior Civil Judge Court, SIRUGUPPA
Advocate for the Petitioner
Sd/- N. Abdul Saheb Raravi

IN THE COURT OF THE 3rd ADDITIONAL CIVIL JUDGE & JMFC AT BALLARI
Crl. M.C. No. 36/2026
Between:-
1) SIDDAMMA W/O LATE. THIMMAPPA, aged about 68 years, paramenent residing at Janekunte village, Ballari taluk and District presently resding at ward No.32, Bijapura colony, Cowl Bazaar, Ballari.
2) A.GANGANNA S/O A.GOVINDAPPA, aged about 70 years, R/o Janekunte village, Ballari taluk and District
3) PAKEERAPPA S/O LATE.GOVINDAPPA, aged about 60 years, R/o MIG-588, ward No.30, 3rd cross, Kuvempu Nagar, Ballari. .....Petitioners
And
RESPONDENT:
The Thasildhar, cum Register of Births & Death's, Taluk office, Ballari .....Respondent
NOTICE
WHEREAS, the above named petitioner has filed the above petition under section 13(2) of Birth and Deaths Act, 1969 against the respondent for the purpose of seeking date of death of Petitioner's father-in-law by name CHAKALI GOVINDAPPA S/O LATE. THIMMAPPA was died on 18-07-2002 at Janekunte village, Ballari taluk and District in the above mentioned address.
Therefore, If any persons are interested you are hereby directed to appear in this court in person or by a pleader duly instructed on 07-05-2026 at about 11.00 a.m to show cause against the above suit, failing which the suit will be heard and determined ex-parte against you.
Given under my hand and seal of the court on this 24th day April 2026.
By Order of the court.
Sd/- Shirestedar,
3rd Addl Civil Judge and JMFC Ballari.
Sd/- G. Ramalingappa
Advocate for the petitioner

IN THE COURT OF THE 3rd ADDITIONAL CIVIL JUDGE & JMFC AT BALLARI
Crl. M.C. No. 38/2026
Between:-
1) SIDDAMMA W/O LATE. THIMMAPPA, aged about 68 years, paramenent residing at Janekunte village, Ballari taluk and District presently resding at ward No.32, Bijapura colony, Cowl Bazaar, Ballari.
2) VENKATESH.A S/O THIMMAPPA, aged about 52 years, R/o,ward No.32, Bijapura colony, Cowl Bazaar, Ballari
3) NARAYANA S/O LATE.THIMMAPPA, aged about 50 years, R/o, ward No.29, Ramanjineya Nagar, Belagal road, Ballari .....Petitioners
And
RESPONDENT:
The Thasildhar, cum Register of Births & Death's, Taluk office, Ballari .....Respondent
NOTICE
WHEREAS, the above named petitioner has filed the above petition under section 13(2) of Birth and Deaths Act, 1969 against the respondent for the purpose of seeking date of death of Petitioner's No.1 husband by name THIMMAPPA S/O LATE CHAKALI GOVINDAPPA was died on 14-09-2014 at Janekunte village, Ballari taluk and District in the above mentioned address.
Therefore, If any persons are interested you are hereby directed to appear in this court in person or by a pleader duly instructed on 07-05-2026 at about 11.00 a.m to show cause against the above suit, failing which the suit will be heard and determined ex-parte against you.
Given under my hand and seal of the court on this 24th day April 2026.
By Order of the court.
Sd/- Shirestedar,
3rd Addl Civil Judge and JMFC Ballari.
Sd/- G. Ramalingappa
Advocate for the petitioner

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ,ಅಥಣಿ
ಸಂ:ಕೃಉಮಾಸ(ಅ)/ಅಧಿಕೆ/59/2025–26 ದಿನಾಂಕ:21/04/2026

ಸಂಕ್ಷಿಪ್ತ ಇ–ಟೆಂಡರ್ ಪ್ರಕಟಣೆ

ಅಥಣಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಸನ್ 2025–26 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆ ಯಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ https:// kppp.karnataka.gov.in ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ–07–05–2026 ಸಾಯಂಕಾಲ–5–00 ಗಂಟೆಯವರೆಗೆ

ಕ್ರ. ಸಂ	ಟೆಂಡರ್ ಪ್ರಕಟಣೆ ಸಂಖ್ಯೆ/ದಿನಾಂಕ	ಇಂಡೆಂಟ್ ಸಂಖ್ಯೆ	ಮೀಸಲಾತಿ	ಟೆಂಡರಿಗಿಟ್ಟ ಅಂದಾಜು ಮೊತ್ತ (ಜಿ.ಎಸ್.ಟಿ ಹೊರತು ಪಡಿಸಿ (ರೂ ಗಳಲ್ಲಿ)
1	ಕೃಉಮಾಸ(ಅ)/ಅಭಿಕೆ/ವಾಕ್ರಿಯೋ/56/2026–27 ದಿನಾಂಕ–21–04–2026	APMC/2025-26/OW/WORK _INDENT 863	ಸಾಮಾನ್ಯ ವರ್ಗ	1,11,64,663–00
2	ಕೃಉಮಾಸ(ಅ)/ಅಭಿಕೆ/ವಾಕ್ರಿಯೋ/57/2026–27 ದಿನಾಂಕ–21–04–2026	APMC/2025-26/OW/WORK_INDENT 862	ಸಾಮಾನ್ಯ ವರ್ಗ	45,04,230–00

ಟೆಂಡರನ ಷರತ್ತು ಮತ್ತು ನಿಬಂಧನೆಗಳಿಗಾಗಿ ಹಾಗೂ ಹೆಚ್ಚಿನ ಮಾಹಿತಿಗಾಗಿ https://kppp. karnataka. gov.in ವೆಬ್‌ಸೈಟ್‌ನಲ್ಲಿ ಹಾಗೂ ಪೋರ್ಟಲ್ ಸಹಾಯವಾಣಿ +91 8046010000, +91 8068948777 ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅಥಣಿಯಲ್ಲಿ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಸಹಿ/–ಕಾರ್ಯದರ್ಶಿ	ಸಹಿ/–ಆಡಳಿತಾಧಿಕಾರಿಗಳು
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅಥಣಿ.	ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅಥಣಿ.

DIPR/BGM/RO-NO-146/KSMCA/2026-27

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ
ಕ್ರ.ಸಂ: ಕಾನಿಇಂ/ಸನೀ&ಅಂಅವಿ/ವಿ/ತಾಶಾ/2026–27/251 ದಿನಾಂಕ :23.04.2026

ತಿದ್ದುಪಡಿ ಅಲ್ಪಾವಧಿ ಟೆಂಡರ್ ಪ್ರಕಟಣೆ(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಉಲ್ಲೇಖ: ಈ ಕಛೇರಿ ಅಲ್ಪಾವಧಿ ಟೆಂಡರ ಪ್ರಕಟಣೆ ಸಂಖ್ಯೆ: 167 ದಿನಾಂಕ: 17.04.2026
ಮೇಲಿನ ಉಲ್ಲೇಖದಲ್ಲಿ ಪ್ರಕಟಗೊಂಡ ಟೆಂಡರನಲ್ಲಿರುವ ಕಾಮಗಾರಿಗಳ ಈ ಕೆಳಗಿನಂತೆ ಮಾರ್ಪಾಡಿಸಿ ತಿದ್ದುಪಡಿ ಟೆಂಡರ ಪ್ರಕಟಣೆಯನ್ನು ಹೊರಡಿಸಲಾಗಿದೆ.

ಮೂಲ ಟೆಂಡರ್ ಪ್ರಕಟಣೆ	ತಿದ್ದುಪಡಿ
ಗುತ್ತಿಗೆದಾರರು ಡೌನಲೋಡ್ ಮಾಡಿಕೊಳ್ಳುವ ದಿನಾಂಕ: 18.04.2026	ಗುತ್ತಿಗೆದಾರರು ಡೌನಲೋಡ್ ಮಾಡಿಕೊಳ್ಳುವ ದಿನಾಂಕ: 22.04.2026
ಗುತ್ತಿಗೆದಾರರು ದಾಖಲಾತಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 27.04.2026	ಗುತ್ತಿಗೆದಾರರು ದಾಖಲಾತಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 02.05.2026
ಪ್ರಿ ಬಿಡ್ ನಿಗದಿಪಡಿಸಿದ ದಿನಾಂಕ 22.04.2026	ಪ್ರಿ ಬಿಡ್ ನಿಗದಿಪಡಿಸಿದ ದಿನಾಂಕ 27.04.2026

ಮೇಲಿನ ಟೆಂಡರ ಅಧಿಸೂಚನೆಯ ಎಲ್ಲಾ ನಿಯಮಗಳು ಮತ್ತು ಷರತ್ತುಗಳು ಬದಲಾವಣೆಯಾಗಿರುವುದಿಲ್ಲ.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ವಾಸಾಸಂಇ/ವಿಜಯಪುರ/57/ಕೆಎಸ್‌ಎಂಸಿಎ/2026–27 ಸ.ನೀ. ಮತ್ತು ಅಂ.ಅ.ಇಲಾಖೆ, ವಿಭಾಗ ವಿಜಯಪುರ

ಪುರಸಭಾ ಕಾರ್ಯಾಲಯ, ಚನ್ನರಾಯಪಟ್ಟಣ, ಹಾಸನ ಜಿಲ್ಲೆ.
Email:itstaff_ulb_channarayapatna@yahoo.co.in, Phone:08176-255411
ನಂ:ಪು.ಸ.ಚ./ಪಅ/ಟೆಂಡರ್/01/2026–27 ದಿನಾಂಕ: 23–04–2026

“ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ”

ಚನ್ನರಾಯಪಟ್ಟಣ ಪುರಸಭೆ ವ್ಯಾಪ್ತಿಯ ಪುರಸಭಾ ಅನುದಾನದ ಕೆಳಕಂಡ ಕಾಮಗಾರಿಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ 1999 ಮತ್ತು 2000 ನಿಯಮದಂತೆ, ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ, ಮತ್ತು ಇ–ಪ್ರೊಕೊರ್‌ಮೆಂಟ್ ಸೆಲ್, ಬೆಂಗಳೂರು ರವರಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರುಗಳಿಂದ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ತಮ್ಮ ದರ ನಮೂದಿಸಿದ ಟೆಂಡರ್‌ಗಳನ್ನು ಇ–ಪ್ರೊಕೊರ್‌ಮೆಂಟ್ (Visit:https://kppp.karnataka.gov.in/) ಪೊರ್‌ಟೆಲ್ ಮೂಲಕ ಈ ಕೆಳಗೆ ನಿಗಧಿಪಡಿಸಿದ ದಿನಾಂಕಗಳಂದು ಆನ್‌ಲೈನ್‌ನಲ್ಲಿ ಸಲ್ಲಿಸತಕ್ಕದ್ದು. ಕಾಮಗಾರಿಗಳ ವಿವರ ಹಾಗೂ ಟೆಂಡರ್ ಪ್ರಕಟಣೆ ವಿವರಗಳನ್ನು ವೆಬ್ ಸೈಟ್ www.channarayapatnatown.mrc.gov.in ನಲ್ಲಿ ವೀಕ್ಷಿಸಬಹುದು. ಇ–ಪ್ರೂಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ : 23-04-2026 to 08-05-2026 up to 17.30 hrs ಅಫ್‌ಲೋಡ್ ಮಾಡಲು ಕೊನೆಯ ದಿನಾಂಕ 1)ಟೆಂಡರ್‌ಗಳನ್ನು ತೆರೆಯುವ ದಿನಾಂಕ : 11-05-2026 at 11.00 hrs 2)ಟೆಂಡರ್ ಫಾರಂ ಬೆಲೆ: ಇ–ಪೋರ್ಟಲ್‌ನಲ್ಲಿರುವಂತೆ ಕ್ರಸಂ ಇ–ಪೋರ್ಟಲ್‌ನಲ್ಲಿನ ಟೆಂಡರ್ ಇಂಡೆಂಟ್ 1)DMA/2026-27/IND6195 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)8.00 ಇಎಂಡಿ ಮೊತ್ತ (ರೂ ಗಳಲ್ಲಿ)20000/– 2)DMA/2026-27/IND6194 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)8.00 ಇಎಂಡಿ ಮೊತ್ತ (ರೂ ಗಳಲ್ಲಿ)20000/– 3)DMA/2026-27/SE7720 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)4.71 ಇಎಂಡಿ ಮೊತ್ತ (ರೂ ಗಳಲ್ಲಿ)11270/– 4)DMA/2026-27/EL/WORK_INDENT57380 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)26.00 ಇಎಂಡಿ ಮೊತ್ತ (ರೂ ಗಳಲ್ಲಿ)50000/– 5)DMA/2026-27/EL/WORK_INDENT57388 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)26.00 ಇಎಂಡಿ ಮೊತ್ತ (ರೂ ಗಳಲ್ಲಿ)50000/–

ಸಹಿ/–ಶ್ರೀ ಜಗದೀಶ ಗಂಗಣ್ಣನವರ್, ಕೆ.ಎ.ಎಸ್	ಸಹಿ/–ಶ್ರೀ ಆರ್.ಯತೀಶ್
ಉಪವಿಭಾಗಾಧಿಕಾರಿಗಳು ಹಾಸನ, ಹಾಗೂ	ಕುಮಾರ್ K.M.A.S ಮುಖ್ಯಾಧಿಕಾರಿ
ಆಡಳಿತಾಧಿಕಾರಿಗಳು, ಪುರಸಭೆ ಚನ್ನರಾಯಪಟ್ಟಣ	ಪುರಸಭೆ, ಚನ್ನರಾಯಪಟ್ಟಣ


ವಾಸಾಸಂಇ/ಹಿಸನಿ/ಹಾಸನ/63/ಕೆಎಸ್‌ಎಂಸಿಎ/2026–27

PUBLIC NOTICE

This Notice is hereby given to the general public at large, under instructions and authority of my client **Shri Yogesh Bapusaheb Desai**, Mobile No. 8857893017, R/o T-21, Atharva Sankul, New Shahupuri, Kolhapur, I, **Shri S.D. Killedar**, Advocate, Chikodi, issue this public notice as under:
1) My client is the absolute owner in lawful possession and enjoyment of agricultural land bearing **R.S. No. 538/1, situated at Kusugal Village, Taluka Hubballi, District Dharwad, measuring 6 Acres 13 Guntas 11 Annas**, which stands recorded in his name in the revenue records.
2) My client has **not decided to sell, transfer, or alienate** the above property and has **not executed any Agreement of Sale or any other document** in favour of any person.
3) It has recently come to the notice of my client that **some unknown person is falsely impersonating him** and representing himself as Yogesh Bapusaheb Desai and attempting to deal with the said property.
4) On enquiry, it is revealed that the said person is using **fake identity details,** namely: Name: **Yogesh Bapusaheb Desai,** Address: **Mastmardi, Taluka Hukkeri, District Belagavi**
5) It is further found that the said impersonator **has created forged and fabricated documents** and has even executed a **false Agreement of Sale dated 12/03/2026,** which is **illegal, void, and not binding** on my client in any manner.
6) Therefore, **all members of the public, intending purchasers, agents, developers, banks, and financial institutions are hereby strictly cautioned:** Not to enter into any transaction or deal concerning the above property and Not to pay any money to any person claiming to be my client and Not to rely upon any documents shown by such impersonator.
7) If any person deals with such person or enters into any transaction regarding the said property, **the same shall be entirely at their own risk,** and my client shall **not be responsible for any loss or consequences** arising therefrom.
8) My client has already **informed the concerned authorities and departments,** and **appropriate legal action is being initiated** against the persons involved in such fraudulent acts.
9) Any person having any claim, interest, or having entered into any transaction in respect of the said property is hereby called upon to **get cancel the same ithin 10 days from publication of this notice and,** if not, same, shall be treated as **waived and not binding,** on my client.
Place: Date: 24/04/2026
Sd/- **Yogesh Bapusaheb Desai**
Mobile No: 8857893017
Sd/- **(Shri S.D. Killedar)** Advocate,
Shri 'S' Mangalmurti Nivas, Indira Nagar (East), Vithal Damodar Nagar, Chikodi-591201.
Mobile No. 9986407029

ಐಪಿಎಲ್ ಹವಾ 19

ಚುಟುಕು ಕ್ರಿಕೆಟ್ ಹಬ್ಬ



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	6	5	0	1	11	+1.420
ಆರ್‌ಸಿಬಿ	7	5	2	0	10	+1.101
ರಾಜಸ್ಥಾನ	7	5	2	0	10	+0.790
ಹೈದರಾಬಾದ್	7	4	3	0	8	+0.820
ಚೆನ್ನೈ	7	3	4	0	6	+0.118
ದಿಲ್ಲಿ	6	3	3	0	6	-0.130
ಗುಜರಾತ್	7	3	4	0	6	-0.790
ಮುಂಬೈ	7	2	5	0	4	-0.736
ಲಖನೌ	7	2	5	0	4	-1.177
ಕೆಕೆಆರ್	7	1	5	1	3	-0.879

ಆರ್‌ಸಿಬಿಗೆ ಐದು ವಿಕೆಟ್ ಭರ್ಜರಿ ಗೆಲುವು | ಪಡಿಕ್ಕಲ್ ಅಬ್ಬರ | ಸಾಯಿ ಸುದರ್ಶನ್ ಹೋರಾಟ ವ್ಯರ್ಥ

ಕಿಂಗ್ ಕೊಹ್ಲಿ ಅಬ್ಬರಕ್ಕೆ ನಲುಗಿದ ಗುಜರಾತ್

ಬೆಂಗಳೂರು: ಆರ್‌ಸಿಬಿ ತಂಡದ ಪ್ರಮುಖ ಬ್ಯಾಟರ್ ವಿರಾಟ್ ಕೊಹ್ಲಿ, ತಮಗಿರುವ ಚೇಸ್ ಮಾಸ್ಟರ್ ಹೆಗ್ಗಳಿಕೆ ತಕ್ಕಂತೆ ಬ್ಯಾಟಿಂಗ್ ಮಾಡಿದ್ದು, ಗುಜರಾತ್ ಟೈಟಾನ್ಸ್ ವಿರುದ್ಧದ ಪಂದ್ಯದಲ್ಲಿ ಆರ್‌ಸಿಬಿ 5 ವಿಕೆಟ್‌ಗಳಿಂದ ಜಯಿಸಿತು.

ಬೆಂಗಳೂರಲ್ಲಿ ನಡೆದ ಪಂದ್ಯದಲ್ಲಿ ಬ್ಯಾಟಿಂಗ್ ಗಿಳಿದ ಗುಜರಾತ್ 20 ಓವರ್‌ಗಳಲ್ಲಿ 205 ರನ್ ಗಳಿಸಿತು. ಸಾಯಿ ಸುದರ್ಶನ್ 100 ರನ್ ಬಾರಿಸಿದರು. ಗುರಿ ಬೆನ್ನತ್ತಿದ ಆರ್‌ಸಿಬಿ 18.5 ಓವರ್‌ಗಳಲ್ಲಿ 206 ರನ್‌ಗಳಿಸಿ ಗುರಿ ಪೇರಿಸಿತು. ಕೊಹ್ಲಿ(81), ಪಡಿಕ್ಕಲ್ (55) ಅಬ್ಬರಿಸಿದರು. ಕೃಣಾಲ್ ಜಯದ ಹಾದಿ ತೋರಿಸಿದರು.

ಸಾಯಿ ಸುದರ್ಶನ್ ಆಡಿದ್ದೇ ಆಟ: ಟಾಸ್ ಸೋತು ಬ್ಯಾಟಿಂಗ್ ಗಿಳಿದ ಗುಜರಾತ್ ಟೈಟಾನ್ಸ್ ಸಾಯಿ ಸುದರ್ಶನ್ ಅವರ ಆಟದ ಆಸರೆ ಪಡೆಯಿತು. ಕಳೆದ ಪಂದ್ಯಗಳಲ್ಲಿ ಬೇಗನೇ ವಿಕೆಟ್ ಕೊಟ್ಟಿದ್ದ ಅವರು, ಈ ಬಾರಿ ಸ್ವಷ್ಟ ಬ್ಯಾಟಿಂಗ್ ಮಾಡಿದರು. ಮೊದಲಿನ ಓವರ್‌ಗಳಲ್ಲೇ ತಮ್ಮ ಕರಾರುವಾಕ್ ಹೊಡೆತಗಳ ಮೂಲಕ ಆರ್‌ಸಿಬಿಯ ಬಲಿಷ್ಠ ಬೌಲಿಂಗ್ ಪಡೆಯನ್ನು ದಂಡಿಸಿದರು. ಅತ್ತ ಶುಭಮನ್ ಗಿಲ್ ಸಿಂಗಲ್‌ಗಳೊಂದಿಗೆ ಸುದರ್ಶನ್‌ಗೆ ಸಾಥ್ ಕೊಟ್ಟರು. ಪವರ್‌ಪ್ಲೇನಲ್ಲಿ ಪ್ರಮುಖ ಆಟಗಾರರನ್ನು ದಂಡಿಸಿದ ಗುಜರಾತ್ ಪವರ್‌ಪ್ಲೇನಲ್ಲಿ ಯಾವುದೇ ವಿಕೆಟ್ ಕಳೆದುಕೊಳ್ಳದೆ 57 ರನ್‌ಗಳಿಸಿತು. ಅದರಲ್ಲಿ ಸುದರ್ಶನ್ 40 ರನ್ ಗಳಿಸಿದ್ದರು.

ಸೆಟ್ ಆದ ಸುದರ್ಶನ್ ಮಧ್ಯಮ ಓವರ್‌ಗಳಲ್ಲಿ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. 33 ಬಾಲ್‌ಗಳಲ್ಲಿ ಅರ್ಧ ಶತಕ ಬಾರಿಸಿದ ನಂತರ ಅವರ ಆಟ ಇನ್ನಷ್ಟು ತೀವ್ರತೆ ಪಡೆಯಿತು. ಇತ್ತ ಗಿಲ್ ಕೂಡ ಆಕರ್ಷಕ ಸಿಕ್ಸರ್‌ಗಳನ್ನು ಬಾರಿಸಿದರು. ಗಿಲ್ ಹಾಗೂ ಸುದರ್ಶನ್ 128 ರನ್‌ಗಳ ಜೊತೆಯಾಟ ನಿರ್ಮಿಸಿದರು. ಇದರಲ್ಲಿ 80 ರನ್ ಸುದರ್ಶನ್ ಅವರದ್ದೇ ಇತ್ತು. ಗಿಲ್ 24 ಬಾಲ್‌ಗಳಲ್ಲಿ 32 ರನ್ ಗಳಿಸಿ ವಿಕೆಟ್ ಒಪ್ಪಿಸಿದರು.

ಸುದರ್ಶನ್ ಶತಕ: ಸಾಯಿ ಸುದರ್ಶನ್ 57 ಬಾಲ್‌ಗಳಲ್ಲಿ ಶತಕ ಪೂರೈಸಿಕೊಂಡರು. ಇದು ಅವರ ನಾಲ್ಕನೇ ಶತಕವಾಗಿದೆ. 11 ಸ್ಫೋಟಕ ಬೌಂಡರಿಗಳನ್ನು ಬಾರಿಸಿದ ಅವರು, 5 ಬಾನೆತ್ತರದ ಸಿಕ್ಸರ್‌ಗಳನ್ನು ಬಾರಿಸಿದರು. ಇತ್ತ ಬರುತ್ತಲೇ ಬಟ್ಲರ್ ಅಬ್ಬರದ ಬ್ಯಾಟಿಂಗ್ ಮಾಡಿದರು. 26 ರನ್‌ಗೆ ಅವರು ವಿಕೆಟ್ ಒಪ್ಪಿಸಿದರು. 100 ರನ್ ಮಾಡಿದ್ದ ಸುದರ್ಶನ್ ಕೂಡ ಕ್ಯಾಚ್ ಆದರು. ಮಧ್ಯಮ ಓವರ್‌ಗಳಲ್ಲಿ ಗುಜರಾತ್ 113 ರನ್ ಗಳಿಸಿತು.

ಡೆತ್ ಓವರ್‌ನಲ್ಲಿ ಕಡಿವಾಣ: ಬೆಂಗಳೂರು ಅಂತಿಮ ಓವರ್‌ಗಳಲ್ಲಿ ಕಡಿವಾಣ ಹಾಕಿತು. ವಿಕೆಟ್ ಪಡೆಯದಿದ್ದರೂ ರನ್ ವೇಗಕ್ಕೆ ತಡೆಯೊಡ್ಡಿತು. ಹ್ಯಾಜೆಲ್ವುಡ್, ಭುವನೇಶ್ವರ್ ಮತ್ತು ರಸಿಖ್ ಈ ಓವರ್‌ಗಳಲ್ಲಿ ಹೆಚ್ಚಿನ ರನ್ ಬಿಟ್ಟುಕೊಟ್ಟರಲಿಲ್ಲ, ಆದರೆ ಅಂತಿಮ ಓವರ್‌ನಲ್ಲಿ ಹೋಲ್ಡರ್ ಸ್ಫೋಟಕ ಸಿಕ್ಸರ್‌ಗಳನ್ನು ಬಾರಿಸಿದರು. ಕೃಣಾಲ್ ಪಾಂಡ್ಯ ಮಾಡಿದ ಕೊನೆಯ ಓವರ್‌ನಲ್ಲಿ 2 ಸಿಕ್ಸರ್ ಹಾಗೂ ಬೌಂಡರಿ ಬಾರಿಸಿದ ಹೋಲ್ಡರ್ ತಂಡದ ಸ್ಕೋರ್ ಅನ್ನು 205 ಕ್ಕೆ ಕೊಂಡೊಯ್ದರು.

ಚಿತ್ರ: ಮೋಹನ್ ಕುಮಾರ್ ಬಿ.ಎನ್



ಸಂಕ್ಷಿಪ್ತ ಸ್ಕೋರ್

ಗುಜರಾತ್ ಟೈಟಾನ್ಸ್ 205/3(20): ಸುದರ್ಶನ್ 100(58), ಗಿಲ್ 32(24), ಬಟ್ಲರ್ 25(16), ಹೋಲ್ಡರ್ 23(10)★, ಸುಂದರ್ 19(12) ಭುವಿ 31ಕ್ಕೆ 1, ಹ್ಯಾಜೆಲ್ವುಡ್ 40ಕ್ಕೆ 1, ಸುಯಷ್ 36ಕ್ಕೆ 1.

ಆರ್‌ಸಿಬಿ 206/5(18.5): ಕೊಹ್ಲಿ 81(44), ಪಡಿಕ್ಕಲ್ 55(27), ಕೃಣಾಲ್ 23(12)★, ಡೇವಿಡ್ 10(9)★ ರಶೀದ್ 49ಕ್ಕೆ 2, ಮಾನವ್ 19ಕ್ಕೆ 1, ಸಿರಾಜ್ 25ಕ್ಕೆ 1, ಹೋಲ್ಡರ್ 35ಕ್ಕೆ 1.

ಕೊಹ್ಲಿ ಆರ್ಭಟ

ಗುರಿ ಬೆನ್ನತ್ತಿದ ಆರ್‌ಸಿಬಿಗೆ ಕೊಹ್ಲಿ ಆಸರೆ ಸಿಕ್ಕಿತು. ಗಾಯಾಳು ಸಾಲ್ಟ್ ಬದಲಿಗೆ ಬ್ಯಾಟಿಂಗ್‌ಗಿಳಿದ ಜಾಕೋಬ್ ಬ್ಯಾಥಲ್ 14 ರನ್ ಗಳಿಸಿ ಕ್ಯಾಚಿತ್ತರು. ಮೂರನೇ ಕ್ರಮಾಂಕದಲ್ಲಿ ಬಂದ ಪಡಿಕ್ಕಲ್ ಬರುತ್ತಿದ್ದಂತೆ ಆಕ್ರಮಣಕಾರಿ ಬ್ಯಾಟಿಂಗ್ ಶುರು ಮಾಡಿದರು. ಇತ್ತ ಕಿಂಗ್ ಕೊಹ್ಲಿ ಕೂಡ ಸೊಗಸಾದ ಬೌಂಡರಿ ಮತ್ತು ಅಬ್ಬರದ ಸಿಕ್ಸರ್‌ಗಳೊಂದಿಗೆ ಮಿಂಚಿದರು. ಪವರ್‌ಪ್ಲೇ ಮುಗಿಸುವಷ್ಟರಲ್ಲಿ ಪಡಿಕ್ಕಲ್ ಆಕ್ರಮಣಕಾರಿ ಬ್ಯಾಟಿಂಗ್‌ನೊಂದಿಗೆ ಪಂದ್ಯದ ಗತಿ ಬದಲಾಯಿಸಿದರು. 6 ಓವರ್‌ಗಳಲ್ಲಿ ಆರ್‌ಸಿಬಿ 58 ರನ್‌ಗಳಿಸಿದರು. ಸೆಟ್ ಆಗುವ ಔಪಚಾರಿಕತೆ ಮುಗಿಸಿಕೊಂಡ ಕೊಹ್ಲಿ ಕೂಡ ಗುಜರಾತ್ ಪಡೆಯನ್ನು ದಂಡಿಸಲಾರಂಭಿಸಿದರು. 20 ಬಾಲ್‌ಗಳಲ್ಲಿ ಪಡಿಕ್ಕಲ್, 30 ಬಾಲ್‌ಗಳಲ್ಲಿ ಕೊಹ್ಲಿ ಅರ್ಧ ಶತಕ ಬಾರಿಸಿದರು. ಈಗ ಆರ್‌ಸಿಬಿಗೆ ಮುನ್ನಡೆ. 13ನೇ ಓವರ್‌ವರೆಗೂ ಅಬ್ಬರದ ಬ್ಯಾಟಿಂಗ್ ಮಾಡಿದ ಪಡಿಕ್ಕಲ್ 27 ಬಾಲ್‌ಗಳಲ್ಲಿ 55 ರನ್ ಬಾರಿಸಿ ವಿಕೆಟ್ ಒಪ್ಪಿಸಿದರು. ಇತ್ತ ಪಡಿಕ್ಕಲ್ ವಿಕೆಟ್ ಬಿದ್ದ ನಂತರ ಕೊಹ್ಲಿ ಇನ್ನಷ್ಟು ಆಕ್ರಮಣಕಾರಿ ಬ್ಯಾಟಿಂಗ್ ಮಾಡಿದರು. ಹೋಲ್ಡರ್ ಬಾಲಿಗೆ ಸತತ ಎರಡು ಸಿಕ್ಸರ್ ಬಾರಿಸಿದ ಅವರು, ಮುಂದಿನ ಬಾಲ್‌ನಲ್ಲಿ ಬೋಲ್ಡ್ ಆದರು. ಕೊಹ್ಲಿ 44 ಬಾಲ್‌ಗಳಲ್ಲಿ 81 ರನ್ ಗಳಿಸಿದರು. ಆರ್‌ಸಿಬಿಯತ್ತ ಸಾಗುತ್ತಿದ್ದ ಪಂದ್ಯ ಕೊಹ್ಲಿ ವಿಕೆಟ್ ಬಿದ್ದ ನಂತರ ತಿರುವು ಪಡೆಯಿತು. ಆದರೆ ನಾಯಕ ಪಾಟಿದಾರ್ ಹಾಗೂ ಜಿತೇಶ್ ಶರ್ಮಾ ಬರುತ್ತಿದ್ದಂತೆ ಯಾವುದೇ ಮುಲಾಜಿಗೆ ಬೀಳದೆ ಸಿಕ್ಸರ್‌ಗಳೊಂದಿಗೆ ಡೀಲ್ ಮಾಡತೊಡಗಿದರು. ಆದರೆ ಜಿತೇಶ್ ಔಟಾದರು. ಅವರ ಹಿಂದೆ ಪಾಟಿದಾರ್ ಕೂಡ ಔಟಾದರು. ಬೇಕಾದ ರನ್‌ಗಳನ್ನು ಕೃಣಾಲ್(23*) ಮತ್ತು ಡೇವಿಡ್ ಬಾರಿಸಿ ಗೆಲ್ಲಿಸಿದರು.

ಕಿರುಸುದ್ದಿ

ಇಂಡಿಯನ್ ಸೂಪರ್ ಲೀಗ್: ಬೆಂಗಳೂರು-ಮುಂಬೈ ಪಂದ್ಯ

ಬೆಂಗಳೂರು: ಇಂಡಿಯನ್ ಸೂಪರ್ ಲೀಗ್ ಈಗ 10ನೇ ವಾರಕ್ಕೆ ಕಾಲಿಟ್ಟಿದ್ದು, ಬೆಂಗಳೂರು ಎಫ್‌ಸಿ ತಂಡವು ಈ ಸೀಸನ್‌ನ ತನ್ನ ಕೊನೆಯ ತವರಿನ ಪಂದ್ಯಕ್ಕೆ ಸಜ್ಜಾಗಿದೆ. ಶನಿವಾರ ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿರುವ ಈ ಪಂದ್ಯದಲ್ಲಿ ಪ್ರಬಲ ಮುಂಬೈ ಸಿಟಿ ಎಫ್‌ಸಿ ತಂಡವನ್ನು 'ಬ್ಲೂಸ್' ಎದುರಿಸಲಿದೆ. ಕಳೆದ ವಾರ ಕೋಲ್ಕತ್ತಾದಲ್ಲಿ ಈಸ್ಟ್ ಬೆಂಗಾಲ್ ವಿರುದ್ಧ ನಡೆದ ರೋಚಕ ಪಂದ್ಯದಲ್ಲಿ ಅಂಟನ್ ಸೋಚ್‌ಬರ್ಗ್ ಬಾರಿಸಿದ ಕೊನೆಯ ಕ್ಷಣದ ಗೋಲಿನಿಂದಾಗಿ ಬೆಂಗಳೂರು ತಂಡ 3-3 ಅಂತರದ ಡ್ರಾ ಸಾಧಿಸಿತ್ತು. ಇತ್ತ ಮುಂಬೈ ಸಿಟಿ ತಂಡದ ಎಂಟು ಪಂದ್ಯಗಳ ಅಜೇಯ ಓಟಕ್ಕೆ ಎಫ್‌ಸಿ ಗೋವಾ ಬ್ರೇಕ್ ಹಾಕಿದ್ದು, ಕಳೆದ ಪಂದ್ಯದಲ್ಲಿ ಮುಂಬೈ 0-2 ಅಂತರದ ಸೋಲು ಕಂಡಿದೆ. ಬೆಂಗಳೂರು ತಂಡದ ಹೊಸ ಕೋಚ್ ಪೆಪ್ ಮುನೋಜ್ ಅವರಿಗೆ ಐಎಸ್‌ಎಲ್ ಆರಂಭವು ಅಂದುಕೊಂಡಷ್ಟು ಸುಲಭವಾಗಿಲ್ಲ. ಉಸ್ತುವಾರಿ ವಹಿಸಿದ ಎರಡು ಪಂದ್ಯಗಳಲ್ಲಿ ಒಂದು ಡ್ರಾ ಮತ್ತು ಒಂದು ಸೋಲು ಕಂಡಿರುವ ಅವರು, ಶನಿವಾರ ಪೀಟರ್ ಕ್ರಾಟ್ಕೆ ಅವರ ತಂಡದ ವಿರುದ್ಧ ಪೂರ್ಣ ಅಂಕಗಳನ್ನು ಗಳಿಸುವ ಗುರಿ ಹೊಂದಿದ್ದಾರೆ.



ನಾವು ಅಂಕಪಟ್ಟಿಯಲ್ಲಿ ನಮಗಿಂತ ಮೇಲಿರುವ ತಂಡದ ವಿರುದ್ಧ ಆಡುತ್ತಿದ್ದೇವೆ, ಹೀಗಾಗಿ ನಾಳೆಯ ಪಂದ್ಯ ಎರಡೂ ತಂಡಗಳಿಗೆ ಅತ್ಯಂತ ನಿರ್ಣಾಯಕವಾಗಿದೆ. ಶ್ರದ್ಧೆಯಿಂದ ಅಭ್ಯಾಸ ಮಾಡುತ್ತಿರುವ ನಮ್ಮ ಯುವ ಆಟಗಾರರು ತಮ್ಮ ಸಾಮರ್ಥ್ಯವನ್ನು ಮೈದಾನದಲ್ಲಿ ಪ್ರದರ್ಶಿಸುವುದನ್ನು ನೋಡಲು ನಾನು ಬಯಸುತ್ತೇನೆ, ಎಂದು ಮುನೋಜ್ ಹೇಳಿದ್ದಾರೆ. ಶನಿವಾರದ ಪಂದ್ಯದಲ್ಲಿ ಬೆಂಗಳೂರು ತಂಡ ಜಯಗಳಿಸಿದರೆ ಮತ್ತು ಇತರ ಫಲಿತಾಂಶಗಳು ಪೂರಕವಾಗಿದ್ದರೆ, ತಂಡವು ಅಂಕಪಟ್ಟಿಯಲ್ಲಿ ನೇರವಾಗಿ ಎರಡನೇ ಸ್ಥಾನಕ್ಕೆ ಏರಲಿದೆ.

ಸಾರಾ-ಹಾರ್ಬರ್ಟ್‌ಗೆ ಪ್ರಶಸ್ತಿ ವಿಶ್ವಾಸ

ಬೆಂಗಳೂರು: ಕಳೆದ ವರ್ಷಕ್ಕೆ ಹೋಲಿಸಿದರೆ ಸದೃಢನಾಗಿದ್ದೇನೆ. ಬೆನ್ನು ನೋವಿನ ಹೊರತಾಗಿಯೂ ನಾನು 10-ಕೆ ಬೆಂಗಳೂರು ಓಪನ್ ಗೆದ್ದಿದ್ದೇನೆ. ನಾನು ವೇಗವಾಗಿ ಚೇತರಿಸಿಕೊಂಡಿದ್ದೇನೆ ಮತ್ತು ನನ್ನ ಪ್ರಶಸ್ತಿಯನ್ನು ಉಳಿಸಿಕೊಳ್ಳಲು ಉತ್ತಮ ಸಮಯದಲ್ಲಿ ಪೂರ್ಣಗೊಳಿಸಲು ಸಿದ್ಧನಾಗಿದ್ದೇನೆ ಎಂದು ಹಾಲಿ ಚಾಂಪಿಯನ್ ಸಾರಾ ಚೆಲಂಗಟ್ ಸಾಂಪ್ರದಾಯಿಕ ಪೂರ್ವ-ರೇಸ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ವಿಶ್ವ ಅಥ್ಲೆಟಿಕ್ಸ್ ಗೋಲ್ಡ್ ಲೇಬಲ್ ರೋಡ್ ರೇಸ್ ಟಿಸಿಎಸ್ ವರ್ಲ್ಡ್ 10 ಕೆ ಯ ಮುಂಬರುವ ಆವೃತ್ತಿಯಲ್ಲಿ ಹಾಲಿ ಚಾಂಪಿಯನ್ ಸಾರಾ ಚೆಲಂಗಟ್ ಮತ್ತು ಅವರ ತಂಡದ ಸಹ ಓಟಗಾರ್ತಿ ಹಾರ್ಬರ್ಟ್ ಕಿಬೆಟ್ ಅವರು ಭಾನುವಾರ (ಏಪ್ರಿಲ್ 26) ಉಗಾಂಡಾದ ಡಬಲ್ ಪೋಡಿಯಂ ಸ್ಥಾನ ಪಡೆಯುವ ಬಗ್ಗೆ ಆಶಾವಾದಿಯಾಗಿದ್ದಾರೆ. ಹಾರ್ಬರ್ಟ್ ಕಿಬೆಟ್ ವರ್ಷದ ಆರಂಭದಲ್ಲಿ, ಕಿಬೆಟ್ ಸ್ಪ್ಯಾನಿಷ್ ಪಟ್ಟಣವಾದ ಕ್ಯಾಸ್ಟೆಲ್ಲನ್‌ನಲ್ಲಿ 26:39 ಸೆಕೆಂಡುಗಳಲ್ಲಿ 10ಕೆ ಕೂಟವನ್ನು ಜಯಿಸಿದ್ದಾರೆ. ಇದು ಪುರುಷರ ಬೆಂಗಳೂರು ವಿಶ್ವ 10 ಕೆ ಕೂಟದ ದಾಖಲೆಗಿಂತ ಸುಮಾರು ಒಂದು ನಿಮಿಷ ವೇಗವಾಗಿದೆ. ಕಿಬೆಟ್ ಈಗಾಗಲೇ ಲಿಮಾದಲ್ಲಿ ನಡೆದ 2024 ರ ವಿಶ್ವ ಅಂಡರ್ 20 ಚಾಂಪಿಯನ್ ಷಿಪ್ ಮತ್ತು ಕಳೆದ ವರ್ಷ ಟೋಕಿಯೊದಲ್ಲಿ ನಡೆದ ವಿಶ್ವ ಚಾಂಪಿಯನ್ ಷಿಪ್ ನಲ್ಲಿ ತಮ್ಮ ದೇಶವನ್ನು ಪ್ರತಿನಿಧಿಸಿದ್ದಾರೆ. ಇಂದಿನಿಂದ ಎರಡು ವರ್ಷಗಳ ನಂತರ ಈ ವರ್ಷದ ಕಾಮನ್ವೆಲ್ತ್ ಗೇಮ್ಸ್ ಮತ್ತು ಎಲ್ ಎ ಒಲಿಂಪಿಕ್ಸ್‌ನಲ್ಲಿ ಮತ್ತೊಮ್ಮೆ ಉಗಾಂಡಾ ತಂಡವನ್ನು ಸೇರಿಸಲು ಅವರು ಉತ್ಸುಕರಾಗಿದ್ದಾರೆ. ಬೆಂಗಳೂರಿನಲ್ಲಿ ತನ್ನ ನೆರೆಯ ದೇಶಗಳಿಂದ ಹೆಚ್ಚು ಅನುಭವಿ ಓಟಗಾರರನ್ನು ಎದುರಿಸಲು ಯುವ ಉಗಾಂಡಾದ ಆಟಗಾರ ಸಜ್ಜಾಗಿದ್ದಾರೆ. ನಾನು ಉತ್ತಮ ಸ್ಥಿತಿಯಲ್ಲಿದ್ದೇನೆ ಮತ್ತು ಭಾನುವಾರ ರೇಸ್ ಗೆಲ್ಲಲು ಕುತೂಹಲದಿಂದ ಎದುರು ನೋಡುತ್ತಿದ್ದೇನೆ ಎಂದು ಕಿಬೆಟ್ ಹೇಳಿದರು.

ಮುಂಬೈ ತವರಲ್ಲಿ ಚೆನ್ನೈ ಜಯ

ಮುಂಬೈ: ಮುಂಬೈ ತಂಡವನ್ನು ಬರೋಬ್ಬರಿ 103 ರನ್‌ಗಳಿಂದ ಸೋಲಿಸಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಗೆಲುವನ್ನು ವೇಗಿ ಮುಕೇಶ್ ಚೌಧರಿ ತಾಯಿಗೆ ಸಮರ್ಪಿಸಿತು.

ಲಯ ಕಂಡುಕೊಳ್ಳುವಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡ ಯಶಸ್ವಿಯಾಗಿದ್ದು ಸಂಜು ಸ್ಯಾಮ್ಸನ್ ಅವರ ಶತಕದ ನಂತರ ಅಕೀಲ್ ಹುಸೇನ್ ಅವರ ಮಾರಕ ಬೌಲಿಂಗ್ ದಾಳಿಗೆ ತತ್ತರಿಸಿದ ಮುಂಬೈ ಇಂಡಿಯನ್ಸ್ ತನ್ನ ಕ್ರಿಕೆಟ್ ಇತಿಹಾಸದಲ್ಲಿ ಅತಿ ದೊಡ್ಡ ಸೋಲನುಭವಿಸಿತು. ಶುಕ್ರವಾರದ ಎಲ್ ಕ್ಲಾಸಿಕೋ ಪಂದ್ಯದಲ್ಲಿ ಬ್ಯಾಟಿಂಗ್ ಮಾಡಿದ ಚೆನ್ನೈ 207 ರನ್ ಮಾಡಿತು. ಸಂಜು ಸ್ಯಾಮ್ಸನ್ (101★, 54ಎ, 10 ಬೌ, 6ಸಿ) ಮಿಂಚಿದರು. ಮುಂಬೈ ಪರ ಫುಜನ್‌ಫರ್ ಹಾಗೂ ಅಶ್ವಿನಿ ಕುಮಾರ್ ತಲಾ 2 ವಿಕೆಟ್ ಪಡೆದರು. ಗುರಿ ಬೆನ್ನತ್ತಿದ ಮುಂಬೈ 103 ರನ್‌ಗಳಿಗೆ ಪತನಗೊಂಡಿತು. ತಿಲಕ್ ವರ್ಮಾ(37, 29ಎ, 5ಬೌ) ಹೋರಾಡಿದರು. ಇನ್ನುಳಿದ ಯಾವುದೇ ಬ್ಯಾಟರ್‌ಗಳು ಹೇಳುವ ಕೊಡುಗೆ ನೀಡಲಿಲ್ಲ, ಚೆನ್ನೈ ಪರ ಅಕೀಲ್ ಹುಸೇನ್ (4-1-17-4) ಮಿಂಚಿದರು.

12 ವರ್ಷಗಳಲ್ಲಿ ರಾಜಸ್ಥಾನ ಪರ ಎರಡೇ ಶತಕ ಬಾರಿಸಿದ ಸಂಜು, ಚೆನ್ನೈ ತಂಡಕ್ಕೆ ಬಂದ ಸೀಸನಿನಲ್ಲೇ ಎರಡನೇ ಶತಕ ಬಾರಿಸಿಬಿಟ್ಟರು. ಬೇಕಾದಾಗ ಬೌಂಡರಿ ಬಾರಿಸುತ್ತಾ, ವಿಕೆಟ್ ಉಳಿಸಬೇಕಾದಾಗ ಚಾಣಾಕ್ಷ ಬ್ಯಾಟಿಂಗ್ ಮಾಡಿದ ಅವರು, ಪಂದ್ಯಶ್ರೇಷ್ಠ ಪ್ರಶಸ್ತಿ ಗೆದ್ದುಕೊಂಡರು. ಗೋ ಗ್ರೀನ್ ಡಾಟ್‌ಬಾಲ್ ಪ್ರಶಸ್ತಿ ಗೆದ್ದುಕೊಂಡ ಅಕೀಲ್ ಹುಸೇನ್ ಗೆಲುವಿನಲ್ಲಿ ಮಿಂಚಿದರು. ಮುಂದಿನ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಗುಜರಾತ್‌ನೊಂದಿಗೆ ಭಾನುವಾರದಂದು ಆಡಲಿದೆ.

ಚೆನ್ನೈ ಮೇಲುಗೈ: ಎರಡನೇ ಇನ್ನಿಂಗ್ಸ್‌ನಲ್ಲಿ ಸೂಪರ್ ಕಿಂಗ್ಸ್ ತಂಡದ್ದೇ ಮೇಲುಗೈ. ಮೊದಲು ಬ್ಯಾಟಿಂಗ್ ಮಾಡಿದಾಗ ಭರ್ಜರಿ ಪ್ರದರ್ಶನ ನೀಡಿದ್ದ ಚೆನ್ನೈ, ಆರಂಭದಲ್ಲೇ ಮುಂಬೈ ತಂಡಕ್ಕೆ ಕಡಿವಾಣ ಹಾಕಿತು. ಮೊದಲ ಓವರ್‌ನ ಮೊದಲ ಬಾಲ್‌ನಲ್ಲೇ ಅಕೀಲ್ ಹೊಸ ಬ್ಯಾಟರ್ ಡ್ಯಾನಿಶ್ ವಿಕೆಟ್ ಪಡೆದರು. ಮುಂದಿನ ಓವರ್‌ನಲ್ಲಿ ಮುಕೇಶ್ ಚೌಧರಿ ಡಿಕಾಕ್ ವಿಕೆಟ್ ಪಡೆದರು. ಅಷ್ಟಕ್ಕೆ ನಿಲ್ಲದ ಚೆನ್ನೈ ನಮನ್‌ಗೂ ಪೆವಿಲಿಯನ್ ದಾರಿ ತೋರಿಸಿ ಅಟ್ಟಹಾಸ ಮೆರೆಯಿತು. ಪವರ್‌ಪ್ಲೇ ಮುಕ್ತಾಯಕ್ಕೆ ಮುಂಬೈ 29/3. ಮಧ್ಯಮ ಓವರ್‌ಗಳಲ್ಲಿ ಸ್ಪಿನ್ನರ್‌ಗಳದ್ದೇ ಕಾರುಬಾರು. ಅಕೀಲ್ ಲಯ ಹಿಡಿದರು. ಒಂದು ಓವರ್ ಮೇಡನ್ ಕೂಡ ಮಾಡಿದ ಅವರು, ಪ್ರಮುಖ ಬ್ಯಾಟರ್‌ಗಳಿಗೆ ಪೆವಿಲಿಯನ್ ದಾರಿ ತೋರಿಸಿದರು. ಇತ್ತ ಅವರಿಗೆ ನೂರ್ ಅಹ್ಮದ್ ಅವರ ಸಾಥ್ ಸಿಕ್ಕಿತು. ಮಧ್ಯಮ ಓವರ್ ಮುಕ್ತಾಯಕ್ಕೆ ಚೆನ್ನೈ ಪಂದ್ಯವನ್ನು ಭಾಗಶಃ ಗೆದ್ದಿತು. ತಿಲಕ್ 37, ಸೂರ್ಯ 36 ರನ್‌ಗಳ ಬ್ಯಾಟಿಂಗ್ ಮುಕ್ತಾಯಗೊಂಡ ನಂತರ ಚೆನ್ನೈ ಗೆಲುವು ಖಾತರಿ ಮಾಡಿಕೊಂಡಿತು. ಮಧ್ಯಮ ಓವರ್ ಮುಕ್ತಾಯಕ್ಕೆ ಮುಂಬೈ 70 ರನ್ ಗಳಿಸಿತು, ಚೆನ್ನೈ ಅಲ್ಲೂ 4 ವಿಕೆಟ್ ಪಡೆಯಿತು. ಡೆತ್ ಓವರ್‌ನಲ್ಲಿ ಬಂದ ಚೆನ್ನೈ ವೇಗಿಗಳು 5 ರನ್ ಬಿಟ್ಟುಕೊಡುವಷ್ಟರಲ್ಲಿ ಪಂದ್ಯವನ್ನು ಮುಗಿಸಿದರು. ಕೊನೆಯಲ್ಲಿ ಮುಂಬೈ 104 ರನ್‌ಗಳಿಗೆ ಆಲೌಟ್ ಆಯಿತು.



ಸಂಕ್ಷಿಪ್ತ ಸ್ಕೋರ್

ಚೆನ್ನೈ 20 ಓವರ್‌ಗಳಲ್ಲಿ 207/6: ಸಂಜು 101★, ಗಾಯಕ್ವಾಡ್ 22; ಫುಜನ್‌ಫರ್ 25/2

ಮುಂಬೈ 19 ಓವರ್‌ಗಳಲ್ಲಿ 104/10: ತಿಲಕ್ 37, ಸೂರ್ಯ 36; ಅಕೀಲ್ 17/4

24ನೇ ರಾಷ್ಟ್ರೀಯ ಕಿರಿಯರ ಅಥ್ಲೆಟಿಕ್ಸ್

ಅಭಯ್ ಸಿಂಗ್, ನಿಪಮ್‌ಗೆ ಚಿನ್ನದ ಪದಕ

ತುಮಕೂರು: ಉದಯೋನ್ಮುಖ ತಾರೆಗಳಾದ ಅಭಯ್ ಸಿಂಗ್ ಮತ್ತು ನಿಪಮ್ 24ನೇ ರಾಷ್ಟ್ರೀಯ ಕಿರಿಯರ (20 ವಯೋಮಿತಿ) ಅಥ್ಲೆಟಿಕ್ಸ್ ಕ್ರೀಡಾಕೂಟದ ಪುರುಷ ಹಾಗೂ ಮಹಿಳೆಯ 100 ಮೀಟರ್ ವಿಭಾಗದಲ್ಲಿ ಸ್ವರ್ಣ ಪದಕ ಗೆದ್ದುಕೊಂಡಿದ್ದಾರೆ. ತುಮಕೂರು ಜಿಲ್ಲಾಡಳಿತ ಮತ್ತು ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆ ಹಾಗೂ ತುಮಕೂರು ಜಿಲ್ಲಾ ಅಥ್ಲೆಟಿಕ್ಸ್ ಸಂಸ್ಥೆ ಸಹಯೋಗದೊಂದಿಗೆ ಮಹಾತ್ಮಗಾಂಧಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕ್ರೀಡಾಕೂಟದಲ್ಲಿ ಶುಕ್ರವಾರ ಜೂನಿಯರ್ ಪುರುಷರ 100 ಮೀಟರ್ ವಿಭಾಗದಲ್ಲಿ 10.41 ಸೆಕೆಂಡ್‌ನಲ್ಲಿ ಕ್ರಮಿಸಿದ ಅಭಯ್ ಸಿಂಗ್ ಚಿನ್ನದ ಪದಕಕ್ಕೆ ಕೊರಳೊಡ್ಡಿದರು. ಯುವರಾಜ್ ಸಿಂಗ್ ಚಿಬ್ ಮತ್ತು ಅನ್ಸ ರಜಾಕ್ ಕ್ರಮವಾಗಿ ಬೆಳ್ಳಿ ಹಾಗೂ ಕಂಚಿನ ಪದಕ ಪಡೆದರು. ಜೂನಿಯರ್ ಮಹಿಳೆಯರ 100 ಮೀಟರ್ ವಿಭಾಗದಲ್ಲಿ ಉತ್ತರ ಪ್ರದೇಶದ ನಿಪಮ್ 11.53 ಸೆಕೆಂಡ್‌ನಲ್ಲಿ ಕ್ರಮಿಸಿ ಸ್ವರ್ಣ ಪದಕ ಗೆದ್ದುಕೊಂಡರು. ತಮಿಳುನಾಡಿನ ಭಾವನ ಮತ್ತು ಗುಜರಾತ್ನ ಕಾಜಲ್ ಹೀರಾಭಾಯ್ ವಾಜಾ ಕ್ರಮವಾಗಿ ಬೆಳ್ಳಿ ಹಾಗೂ ಕಂಚಿನ ಪದಕಕ್ಕೆ ಕೊರಳೊಡ್ಡಿದರು. ಮಹಿಳೆಯರ ಪೋಲ್ ವಾಲ್ಟ್ ನಲ್ಲಿ 3.60 ಮೀ. ಜಿಗಿದ ತಮಿಳುನಾಡಿನ ಬಿ.ಸೌಂದರ್ಯ ಏಷ್ಯನ್ ಗೇಮ್ಸ್ ಮತ್ತು ವಿಶ್ವ ಚಾಂಪಿಯನ್ ಶಿಪ್ ಗೆ ಅರ್ಹತೆ ಪಡೆದರು. ಮೊದಲ ದಿನ 6 ವಿಭಾಗದಲ್ಲಿ ಅಥ್ಲೀಟ್‌ಗಳು ಪದಕಗಳ ಬೇಟೆಯಾಡಿದರು.

ಇಂದು 2 ಪಂದ್ಯ: ಹೈದರಾಬಾದ್-ರಾಜಸ್ಥಾನ ಸೆಣಸು

ದಿಲ್ಲಿಗೆ ಇಂದು ಪಂಜಾಬ್ ಸವಾಲು

ಹೊಸದಿಲ್ಲಿ: ಗೆಲುವಿನ ಹಾದಿಯಲ್ಲಿ ನಾಗಾಲೋಟ ನಡೆಸುತ್ತಿರುವ ಪಂಜಾಬ್ ಕಿಂಗ್ಸ್ ದಿಲ್ಲಿ ಆವರಣದಲ್ಲಿ ಮಿಂಚಲು ಸಜ್ಜಾಗಿದೆ. ಶನಿವಾರದ ವೀಕೆಂಡ್ ರೈವಲ್ರಿಯ ಮೊದಲ ಪಂದ್ಯದಲ್ಲಿ ದಿಲ್ಲಿ ತಂಡವನ್ನು ಎದುರಿಸಲಿರುವ ಪಂಜಾಬ್ ತನ್ನ ಅಗ್ರಸ್ಥಾನ ಇನ್ನಷ್ಟು ಗಟ್ಟಿಗೊಳಿಸಲು ಸಜ್ಜಾಗಿದೆ. ಆರ್‌ಸಿಬಿ ವಿರುದ್ಧ ಗೆದ್ದಿದ್ದರೂ ಹೈದರಾಬಾದ್ ವಿರುದ್ಧ ಸೋತ ದಿಲ್ಲಿ ಕ್ಯಾಪಿಟಲ್ಸ್ ಸೋಲಿನಿಂದ ಹೊರಬರಲು ತವರಲ್ಲಿ ಅಣಿಯಾಗುತ್ತಿದೆ.

ಪಂಜಾಬ್ ಸಿದ್ಧ: ಹಾಲಿ ರನ್ನರ್-ಅಪ್ ಪಟ್ಟ ಕಟ್ಟಿಕೊಂಡಿರುವ ಪಂಜಾಬ್ ಅಸಲಿಗೆ ಚಾಂಪಿಯನ್ ತಂಡದಂತೆ ಆಡುತ್ತಿದೆ. ಒಂದೂ ಪಂದ್ಯದಲ್ಲಿ ಪರಾಭವ ಅನುಭವಿಸಿಲ್ಲ. ಸೋಲುವಂಥ ಪ್ರದರ್ಶನ ಯಾರೂ ಕೂಡ ನೀಡಿಲ್ಲ. ಶ್ರೇಯಸ್ ಅಯ್ಯರ್ ನಾಯಕರಾದ ಮೇಲೆ ತಂಡದ ದಿಕ್ಕೇ ಬದಲಾಗಿದೆ. ಈ ಆವೃತ್ತಿಯಲ್ಲಿ ಪಂಜಾಬ್ ಯಾವುದೇ ಪಂದ್ಯದಲ್ಲಿ ಸೋತಿಲ್ಲ, ಬಂದ ತಂಡಗಳನ್ನೆಲ್ಲಾ ಸೋಲಿಸುತ್ತಲೇ ಬಂದಿದೆ. ಯುವ ಬ್ಯಾಟರ್ಸ್ ಪ್ರಭಸಿಮ್ರನ್, ಪ್ರಿಯಾಂಶ್ ಅವರ ಬ್ಯಾಟಿಂಗ್ ಲಯ ತಂಡಕ್ಕೆ ದೊಡ್ಡ ಆರಂಭ ನೀಡುತ್ತದೆ. ಮೂರನೇ ಕ್ರಮಾಂಕದಲ್ಲಿ ಬರುವ ಕೂಪರ್ ಪಂದ್ಯಾವಳಿಯಲ್ಲಿ ಭರ್ಜರಿ ಬ್ಯಾಟಿಂಗ್‌ನೊಂದಿಗೆ ಮಿಂಚಿದ್ದಾರೆ. ಇನ್ನು ಚೇಸಿಂಗ್ ವಿಚಾರದಲ್ಲಿ ಮಿಂಚಿರುವ ಶ್ರೇಯಸ್ ಅಯ್ಯರ್ ಕೂಡ ಅತ್ಯುತ್ತಮ ಪ್ರದರ್ಶನ ನೀಡುತ್ತಿದ್ದಾರೆ. ಪ್ರತಿ ಪಂದ್ಯದಲ್ಲೂ ತಮ್ಮ ಆಕ್ರಮಣಕಾರಿ ಬ್ಯಾಟಿಂಗ್‌ನೊಂದಿಗೆ ಎದುರಾಳಿಗಳ ಮೇಲ ಒತ್ತಡ ಹೇರಿದ್ದಾರೆ. ಇನ್ನು ಬೌಲಿಂಗ್ ವಿಚಾರಕ್ಕೆ ಬಂದರೆ, ಅರ್ಷದೀಪ್, ಬಾರ್ಟ್‌ಲೆಟ್ ಸೇರಿದಂತೆ ಪ್ರಮುಖರು ಲಯದಲ್ಲಿ ಕಾಣಿಸಿಕೊಂಡಿದ್ದಾರೆ.

ದಿಲ್ಲಿಗೆ ಗೆಲುವಿನ ಹಂಬಲ: ಇತ್ತ ದಿಲ್ಲಿ ಕ್ಯಾಪಿಟಲ್ಸ್ ಬ್ಯಾಟಿಂಗ್ ಉತ್ತಮ ಮಾಡುತ್ತಿದ್ದರೂ, ಬೌಲಿಂಗ್ ವಿಚಾರದಲ್ಲಿ ಭಾರೀ ಹಿನ್ನಡೆ ಅನುಭವಿಸಿದೆ. ರಾಹುಲ್ ಲಯದಲ್ಲಿದ್ದಾರೆ. ಆದರೆ ಮತ್ತೋರ್ವ ಆರಂಭಿಕ ನಿಸ್ಸಂಕಾ ಹೇಳಿಕೊಳ್ಳುವ ಪ್ರದರ್ಶನ ನೀಡಿಲ್ಲ, ರಿಜ್ವಿ ಮಿಂಚುತ್ತಿದ್ದಾರೆ. ಆದರೆ ಮಧ್ಯಮ ಕ್ರಮಾಂಕದಲ್ಲಿ ತಂಡ ಭಾರೀ ಹಿನ್ನಡೆ ಅನುಭವಿಸುತ್ತಿದೆ. ಅಕ್ಷರ್ ಪಟೇಲ್, ಕರುಣ್ ನಾಯರ್ ಸೇರಿದಂತೆ ವಿವಿಧ ಬ್ಯಾಟರ್‌ಗಳು ಲಯದಲ್ಲಿಲ್ಲ. ಬೌಲಿಂಗ್‌ನಲ್ಲಿ ನಟರಾಜನ್ ಮತ್ತು ಲುಂಗಿ ಉತ್ತಮ ಪ್ರದರ್ಶನ ನೀಡಿದ್ದರೂ ಉಳಿದ ವೇಗಿಗಳು ದುಬಾರಿಯಾಗಿದ್ದಾರೆ.



ರಾಜಸ್ಥಾನ-ಹೈದರಾಬಾದ್

ಎರಡನೇ ಪಂದ್ಯದಲ್ಲೂ ಭರಪೂರ ಪೈಪೋಟಿಯಿದ್ದು, ರಾಜಸ್ಥಾನ ಹಾಗೂ ಹೈದರಾಬಾದ್ ತಂಡಗಳು ಮುಖಾಮುಖಿಯಾಗುತ್ತಿವೆ. 2 ತಂಡಗಳೂ ಲಯದಲ್ಲಿರುವುದು ಪಂದ್ಯಕ್ಕೆ ಹೆಚ್ಚಿನ ರೋಚಕತೆ ಹುಟ್ಟುಹಾಕಿದೆ. ಹಿಂದಿನ ಪಂದ್ಯಗಳಲ್ಲಿ ಉಭಯ ತಂಡಗಳು ಮಿಂಚಿವೆ. ಲಖನೌ ವಿರುದ್ಧ ರಾಜಸ್ಥಾನ, ದಿಲ್ಲಿ ವಿರುದ್ಧ ಹೈದರಾಬಾದ್ ಗೆಲುವು ಸಾಧಿಸಿವೆ. ರಾಜಸ್ಥಾನದ ತವರು ಜೈಪುರದಲ್ಲಿ ಈ ಪಂದ್ಯ ನಡೆಯಲಿದೆ.

ಪ್ಯಾಟ್ ಕಮ್ಮಿನ್ಸ್ ಬಲ

ಹೈದರಾಬಾದ್ ತಂಡಕ್ಕೆ ಪ್ಯಾಟ್ ಕಮ್ಮಿನ್ಸ್ ಸೇರಿಕೊಂಡಿದ್ದು ಬಲ ತಂದಿದೆ. ಇದರೊಂದಿಗೆ ಅವರು ನಾಯಕರಾಗಿ ಕಾಣಿಸಿಕೊಳ್ಳುವ ಸಾಧ್ಯತೆ ಇದೆ. ಮತ್ತೆ ಅಸಲು ಲಯಕ್ಕೆ ಬಂದಿರುವ ಸನ್ ರೈಸರ್ಸ್ ಹೈದರಾಬಾದ್ ತಂಡವು ಆಡಿರುವ ಪಂದ್ಯಗಳಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದೆ. ಅಭಿಷೇಕ್ ಶರ್ಮಾ ಲಯಕ್ಕೆ ಮರಳಿರುವುದು ತಂಡದಲ್ಲಿ ಆನೆ ಬಲ ತಂದಿದೆ. ಇತ್ತ ಹೆಡ್ ಕೂಡ ರನ್ ಮಾಡುತ್ತಿದ್ದಾರೆ. ಇಶಾನ್ ಕಿಶನ್ ಲಯಕ್ಕೆ ಬರಬೇಕಿದೆ. ಮುಖ್ಯವಾಗಿ ತಂಡದ ಹೆನ್ರಿಕ್ ಕ್ಲಾಸೆನ್ ಭರ್ಜರಿ ಲಯದಲ್ಲಿದ್ದು ವಿಶ್ವಾಸ ಹಿಗ್ಗಿಸಿದ್ದಾರೆ. ಬೌಲಿಂಗ್ ವಿಚಾರಕ್ಕೆ ಬಂದರೆ ಯುವಕರ ದರ್ಬಾರ್. ಪ್ರಫುಲ್ ಹಿಂಗೆ, ಹುಸೈನ್ ಉತ್ತಮ ಬೌಲಿಂಗ್ ಮಾಡಿದರೆ, ಸ್ಪಿನ್ನರ್ ಹರ್ಷ ದುಬೆ ಕೂಡ ಕರಾರುವಾಕ್ ದಾಳಿ ಸಂಘಟಿಸಿದ್ದಾರೆ.

ಸವಾಲಿಗೆ ರಾಜಸ್ಥಾನ ಸಿದ್ಧ

ಸೋಲುಗಳನ್ನು ಕಂಡರೂ ಕಳೆದ ಪಂದ್ಯದಲ್ಲಿ ಲಖನೌ ಸವಾರಿ ಮಾಡುವುದರೊಂದಿಗೆ ಕಂಬ್ಯಾಕ್ ಮಾಡಿರುವ ರಾಜಸ್ಥಾನ ರಾಯಲ್ಸ್ ಎರಡು ಪಂದ್ಯಗಳ ಹಿನ್ನಡೆಯ ನಂತರ ಮತ್ತೆ ಉತ್ತಮ ಸ್ಥಿತಿಯಲ್ಲಿ ಕಾಣಿಸಿಕೊಂಡಿದೆ. ಆರಂಭಿಕರಾದ ಜೈಸ್ವಾಲ್ ಮತ್ತು ವೈಭವ್ ಬೇಗನೇ ವಿಕೆಟ್ ಕೊಡುತ್ತಿದ್ದಾರೆ. ಜುರೇಲ್ ಕಳೆದ 2 ಪಂದ್ಯಗಳಲ್ಲಿ ಭಾರೀ ಹಿನ್ನಡೆ ಅನುಭವಿಸಿದ್ದಾರೆ. ಇತ್ತ ಮಧ್ಯಮ ಕ್ರಮಾಂಕದಲ್ಲಿ ಜಡೇಜಾ ಬಿಟ್ಟರೆ ಇನ್ನುಳಿದ ಯಾವುದೇ ಬ್ಯಾಟಿಗರೂ ರನ್ ಮಾಡುತ್ತಿಲ್ಲ. ಆದರೆ ಬೌಲಿಂಗ್ ವಿಚಾರಕ್ಕೆ ಬಂದರೆ ತಂಡ ಮೆಲುಗೈ ಸಾಧಿಸಿದೆ. ಬ್ರಿಜೇಶ್ ಶರ್ಮಾ, ಆರ್ಚರ್ ಮತ್ತು ನಾಂದ್ರೆ, ಕರಾರುವಾಕ್ ದಾಳಿಯೊಂದಿಗೆ ಗಮನ ಸೆಳೆದಿದ್ದಾರೆ. ಸ್ಪಿನ್ ವಿಭಾಗದಲ್ಲಿ ಬಿಷ್ಣೋಯ್ ಹಾಗೂ ಜಡೇಜಾ ಮಿಂಚಿದ್ದಾರೆ.

ಪಂದ್ಯಗಳ ವಿವರ

ದಿಲ್ಲಿ-ಪಂಜಾಬ್	ಹೈದರಾಬಾದ್-ರಾಜಸ್ಥಾನ
ಯಾವಾಗ: ಶನಿವಾರ	ಯಾವಾಗ: ಶನಿವಾರ
ಎಲ್ಲಿ: ಹೊಸದಿಲ್ಲಿ	ಎಲ್ಲಿ: ಜೈಪುರ
ಸಮಯ: ಮಧ್ಯಾಹ್ನ 3:30	ಸಮಯ: ಸಂಜೆ 7:30ಕ್ಕೆ

ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಐಎಸ್‌ಎಸ್‌ಎಫ್ ಶೂಟಿಂಗ್: ಭಾರತ ಶೂಟರ್‌ಗಳ ಮೇಲುಗೈ

ಜೂನಿಯರ್ ವಿಶ್ವಕಪ್: ಪ್ರಾಚಿಗೆ ಚಿನ್ನ

ಹೊಸದಿಲ್ಲಿ: ಈಜಿಪ್ಟ್‌ನ ಕೈರೋನಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವಕಪ್‌ನಲ್ಲಿ ಭಾರತದ ಶೂಟರ್‌ಗಳು ಪಾರುಪತ್ಯ ಮುಂದುವರಿಸಿದ್ದಾರೆ.

ಪ್ರಾಚಿ ಗೈಕ್ವಾಡ್ ಜೂನಿಯರ್ ಮಹಿಳೆಯರ 50 ಮೀ ರೈಫಲ್ 3 ಪೊಷಿಷನ್ (3ಪಿ) ಸ್ಪರ್ಧೆಯಲ್ಲಿ 354.6 ಅಂಕಗಳೊಂದಿಗೆ ಚಿನ್ನದ ಪದಕ ಗೆದ್ದರು. ಅವರು ಎಐಎನ್ ಆಟಗಾರ್ತಿ ದರಿಯಾ ಚುಪ್ರಿಸ್ (354.4) ಅವರನ್ನು ಕೇವಲ 0.2 ಅಂಕಗಳಿಂದ ಸೋಲಿಸಿ ಜಯ ಸಾಧಿಸಿದರು. ಮತ್ತೊಬ್ಬ ಎಐಎನ್ ಆಟಗಾರ್ತಿ ಎಲೆನಾ ಕ್ರೆಟಿನಿನಾ 343.3 ಅಂಕಗಳೊಂದಿಗೆ ಕಂಚು ಪಡೆದರು. ಪುರುಷರ ವಿಭಾಗದಲ್ಲಿ ನಾರೇನ್ ಪ್ರಣವ್ 10 ಮೀ ಏರ್ ರೈಫಲ್‌ನಲ್ಲಿ 229.5 ಅಂಕಗಳೊಂದಿಗೆ ಕಂಚಿನ ಪದಕ ಗೆದ್ದರು.

ಭಾರತಕ್ಕೆ ಮತ್ತೊಂದು ಚಿನ್ನ ವಂಶಿಕಾ ಚೌಧರಿ ಮೂಲಕ ಲಭಿಸಿತು. ಅವರು ಜೂನಿಯರ್ ಮಹಿಳೆಯರ 10 ಮೀ ಏರ್ ಪಿಸ್ತೂಲ್‌ನಲ್ಲಿ 241.3 ಅಂಕಗಳೊಂದಿಗೆ ಚಿನ್ನ ಪಡೆದರು. ಅವರ ಸಹ ಆಟಗಾರ್ತಿ ಸೇಜಲ್ ಕಾಂಬಳೆ 239.6 ಅಂಕಗಳೊಂದಿಗೆ ಬೆಳ್ಳಿ ಪದಕ ಜಯಿಸಿದರು. ಚೈನೀಸ್ ತೈಪೆಯ ಲಿಯಾವೊ ಕೆ ರೋಂಗ್ ಕಂಚು ಪಡೆದರು.



ಭಾರತೀಯರ ಪದಕ ಮತ್ತು ಸ್ಪರ್ಧೆ


- ಪ್ರಾಚಿ ಗೈಕ್ವಾಡ್: 50 ಮೀ 3ಪಿ ಚಿನ್ನ
- ವಂಶಿಕಾ ಚೌಧರಿ: 10 ಮೀ ಪಿಸ್ತೂಲ್ ಚಿನ್ನ
- ಸೇಜಲ್ ಕಾಂಬಳೆ: 10 ಮೀ ಪಿಸ್ತೂಲ್ ಬೆಳ್ಳಿ
- ನಾರೇನ್ ಪ್ರಣವ್: 10 ಮೀ ರೈಫಲ್ ಕಂಚು

ಭಾರತದ ಪದಕಪಟ್ಟಿ (ಇಲ್ಲಿಯವರೆಗೆ)

ಚಿನ್ನ	ಬೆಳ್ಳಿ	ಕಂಚು
3	4	3

ಪದಬಂಧ 5964

ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ
1. ಪ್ರಜ್ವಲಿಸು-ಪ್ರಕಾಶಿಸುವಿಕೆ (5)
3. ಕಾಣದಂತೆ ಅವಿತುಕೊಳ್ಳುವಿಕೆ (3)
5. ಅಂತರಂಗ-ಚಿತ್ತವಿದು (2)
7. ಈ ತರ ಕಳವು ಮಾಡಿದ ಚೋರ (3)
8. ಈ ಸಮಯವನ್ನು ಆಳಿಯೋರು ಯಾರೂ ಇಲ್ಲ (2)
9. ರಾಮಸುತನಿಗೆ ಕಂಡ ಜಾನುವಾರು (2)
10. ಸಾವಕಾಶದ ಸಮಾನಪದ (3)
12. ಅಂಧಕಾರ-ಕತ್ತಲೆಯಿದು (2)
14. ಕಠಿಣ ತಪಸ್ಸು ಮಾಡುವ ಸಾಧಕ ತಿರುಗಿದ್ದಾನೆ (3)
15. ಹದಗೆಡು-ಕೆಟ್ಟುಹೋಗು ಎಂಬರ್ಥದ ಶಬ್ದ (5)

ಮೇಲಿನಿಂದ ಕೆಳಕ್ಕೆ
1. ಲಾಭರಹಿತ ಉದ್ದೇಶಕ್ಕಾಗಿ ರಚಿಸಿದ ಸಂಸ್ಥೆ (3)
2. ಸುತನ ನಡುವೆ ಸರಳವಾದುದಿದೆ (4)
3. ಅಕಾರ ಒಳಗೊಂಡ ಮದ (4)
4. ಸಿಟ್ಟಿನಿಂದ ತೀವ್ರವಾಗಿ ನೋಡುವುದು (5)
6. ಮಾದ್ರಿಯ ಮಗನಾದ ಪಾಂಡವ (3)
8. ಒಂದು ಕ್ರಿಯೆ,ಮತ್ತೊಂದು ಕ್ರಿಯೆಗೆ ನಿಮಿತ್ತವಾಗುವುದು (5)
9. ರಾಧಾಳು ಅಂತ್ಯದಲ್ಲಿ ಮಾಡಿದ ರಂಪ (3)
10. ಹಣೆಗಣ್ಣ-ಶಿವನೀತ (4)
11. ಮನಬಿಚ್ಚಿ ಮಾತನಾಡದಿರುವಿಕೆ ತಲೆಕೆಳಗಾಗಿದೆ (4)
13. ಸೋಲಿಸು-ಬಗ್ಗುಬಡಿಯು (3)

5963 ಉತ್ತರ

ಎಡದಿಂದ ಬಲಕ್ಕೆ:
1. ನಾಯಿಬಾಳು
2. ನಾಮಾಂತರ 4. ಗಳಿಸು
6. ಚಂದ್ರಾತಪ 7. ಗಡಿಬಿಡಿ
8. ಮರುಕ 9. ಲೋಚನ
10. ಸತ್ಯಾಗ್ರಹಿ
11. ಕಾಮಗಾರಿ 12. ತರಂಗ
14. ಲಗಾಯಿಸು
15. ಮಾಟಗಾತಿ

ಮೇಲಿನಿಂದ ಕೆಳಕ್ಕೆ:
1. ನಾರಂಗ 3. ರಕ್ತಚಂದನ
5. ಸುಗಮ 6. ಪಡಿ
8. ಕನಕಾಚಲ 9. ಲೋಹಿತ
10. ಸರಿ 13. ಗಣತಿ

ಕಿರುಸುದ್ದಿ

ಉತ್ತಮ ಸಾಧನೆ

◆ **ಗಜೇಂದ್ರಗಡ:** ತಾಲೂಕಿನ ಗುರು ಮಹಾಂತೇಶ ಪ್ರೌಢಶಾಲೆ ಸೂಡಿ ವಿದ್ಯಾರ್ಥಿಗಳು 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದಿದ್ದಾರೆ ಎಂದು ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ವಿ.ಎಫ್. ಗೌಡರ ತಿಳಿಸಿದರು. ವಿದ್ಯಾರ್ಥಿನಿಯರಾದ ಅನುಸೂಯಾ ಉಮೇಶ ಪಟ್ಟಣಶೆಟ್ಟರ ಶೇ.91.52 ಅಂಕಗಳೊಂದಿಗೆ ಶಾಲೆಗೆ ಪ್ರಥಮ, ವಿಜಯಲಕ್ಷ್ಮಿ ಅಂದಪ್ಪ ಸೂಡಿ ಶೇ.88.80 ದ್ವಿತೀಯ ಹಾಗೂ ಸಂಜನಾ ಬಸಪ್ಪ ಮಾದರ ಶೇ.82.40 ಅಂಕ ಪಡೆದು ತೃತೀಯ ಸ್ಥಾನ ಗಳಿಸಿದ್ದಾರೆ, ಶಾಲೆಯ ಒಟ್ಟು ಫಲಿತಾಂಶ ಶೇ.89.2 ಪ್ರಾಪ್ತಿಗಿದೆ. 82 ವಿದ್ಯಾರ್ಥಿಗಳಲ್ಲಿ 73 ವಿದ್ಯಾರ್ಥಿಗಳು ಪಾಸಾಗಿದ್ದಾರೆ. ಅದರಲ್ಲಿ ಕನ್ನಡ ಶೇ.90.24, ಇಂಗ್ಲಿಷ್ ಶೇ.95.12, ಹಿಂದಿ ಶೇ.100, ಗಣಿತ ಶೇ.97.56, ವಿಜ್ಞಾನ ಶೇ.93.90, ಸಮಾಜವಿಜ್ಞಾನ ಶೇ.97.56ರಷ್ಟು ಅಂಕ ಗಳಿಸಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಸಮಿತಿಯ ಅಧ್ಯಕ್ಷ ವಿಜಯ ಮಹಾಂತ ಸ್ವಾಮೀಜಿ, ಉಪಾಧ್ಯಕ್ಷ ಎಸ್.ಎ. ಸೊಟಗಿನ, ಕಾರ್ಯದರ್ಶಿಗಳಾದ ವಿ.ಜಿ. ಶೆಟ್ಟರ, ಎಸ್. ಎಸ್. ಬೆಲ್ಲದ ಹಾಗೂ ಆಡಳಿತ ಮಂಡಳಿಯ ಸದಸ್ಯರು ಮತ್ತು ಶಾಲೆಯ ಸಿಬ್ಬಂದಿ ಹರ್ಷವ್ಯಕ್ತಪಡಿಸಿದ್ದಾರೆ.





ಶೇ. 91.48ರಷ್ಟು ಫಲಿತಾಂಶ

◆ **ರೋಣ:** 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮಾರನಬಸರಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡಿದ್ದು, ಒಟ್ಟು ಶೇ. 91.48 ರಷ್ಟು ಫಲಿತಾಂಶ ಗಳಿಸಿದೆ. ಶಾಲೆಯ ವಿದ್ಯಾರ್ಥಿಗಳಾದ ರೇಣುಕಾ ತಳವಾರ ಶೇ.91.48 ಹಾಗೂ ಮಿನಾಜ ಕಳಕಾಪೂರ ಶೇ.86.56 ರಷ್ಟು ಅಂಕಗಳನ್ನು ಗಳಿಸಿದ್ದಾರೆ ಎಂದು ಎಸ್‌ಡಿಎಂಸಿ ಅಧ್ಯಕ್ಷರು, ಮುಖ್ಯೋಪಾಧ್ಯಾಯರು, ಶಿಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




ಶೇ.94ರಷ್ಟು ಫಲಿತಾಂಶ

◆ **ಗಜೇಂದ್ರಗಡ:** ನಗರದ ಪಿ.ಟಿ.ರಾಯಬಾಗಿ ಆಂಗ್ಲ ಮಾಧ್ಯಮ ಪ್ರೌಢಶಾಲೆಯ 2025-26 ನೇ ಸಾಲಿನಲ್ಲಿ ಜರುಗಿದ ಎಸ್‌ಎಸ್‌ಎಲ್ ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆದಿದೆ. ಶಾಲೆಯ ವಿದ್ಯಾರ್ಥಿಗಳಾದ ಸೌಮ್ಯಾ ಓ ಸಾರಂಗಮಠ ಪ್ರಥಮ (98.88%), ಅನುಶಾ ಉ ಶೀಲವಂತರ (95.68%) ದ್ವಿತೀಯ, ಕೋಯಲ ಆ ಚವಡಿಮನಿ (94.88%) ತೃತೀಯ ಸ್ಥಾನ ಪಡೆದಿದ್ದಾರೆ. 10 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 16 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ, 12 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಮತ್ತು 3 ವಿದ್ಯಾರ್ಥಿಗಳು ತೃತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಒಟ್ಟಾರೆಯಾಗಿ ಶಾಲೆಯ ಫಲಿತಾಂಶವು ಶೇ.94ರಷ್ಟಾಗಿದೆ. ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಅಧ್ಯಕ್ಷ ಗಣಪತ ಸಾ.ರಂಗ್ರೇಜ, ಕಾರ್ಯದರ್ಶಿ ಗುರುನಾಥ ರಾಯಬಾಗಿ, ಸಹಕಾರ್ಯದರ್ಶಿ ಭಾಸ್ಕರ ರಾಯಬಾಗಿ, ಸುರೇಂದ್ರಸಾ ರಾಯಬಾಗಿ, ಶಂಕರಸಾ ರಾಯಬಾಗಿ, ಆಡಳಿತಾಧಿಕಾರಿ ಗೋವಿಂದ ದಂಡೀನ ಹಾಗೂ ಆಡಳಿತ ಮಂಡಳಿಯ ಎಲ್ಲ ಸದಸ್ಯರು, ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕ, ಶಿಕ್ಷಕಿಯರು ಹಾಗೂ ಸಿಬ್ಬಂದಿ ಹರ್ಷವ್ಯಕ್ತಪಡಿಸಿದ್ದಾರೆ.





ಗಾಂಜಾ ಸೇವನೆ: ಇಬ್ಬರು ವಶಕ್ಕೆ

◆ **ಲಕ್ಷ್ಮೇಶ್ವರ:** ದೊಡ್ಡೂರ ರಸ್ತೆಗೆ ಇರುವ ಪೂಜಾರ ಅವರ ಪ್ಲಾಟನಲ್ಲಿರುವ ಸಿದ್ದೇಶ್ವರ ದೇವಸ್ಥಾನದ ಮುಂದೆ ಸಾರ್ವಜನಿಕವಾಗಿ ಗಾಂಜಾ ಮಾದಕ ಪದಾರ್ಥವನ್ನು ಸಿಗರೇಟ್‌ದಲ್ಲಿ ತುಂಬಿಕೊಂಡು ಸೇವನೆ ಮಾಡುತ್ತಿದ್ದವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಪೊಲೀಸ್ ಠಾಣೆಯ ಪಿಎಸ್‌ಐ ನಾಗರಾಜ ಗಡದ ಅವರ ಪೊಲೀಸ್ ತಂಡ ದಾಳಿ ಮಾಡಿ ಯಲ್ಲಪ್ಪ ಹೊಂಬಳ, ತುರಾಫಷಾ ಮುಳಗುಂದ ಇವರನ್ನು ವಶಪಡಿಸಿಕೊಂಡು, ಬಿ.ಎನ್.ಎಸ್. ಎಸ್.ನೋಟಿಸ್ ಜಾರಿ ಮಾಡಿದ್ದಾರೆ. ಅಪರಾದ ವಿಭಾಗದ ಪಿಎಸ್‌ಐ ಟಿ.ಕೆ. ರಾಠೋಡ ಮುಂದಿನ ತನಿಖೆ ಕೈಗೊಂಡಿದ್ದಾರೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಕಡಲೆಕಾಳು	2177-5512
ಅಲಸಂದೆ	3765-6069
ಹೆಸರುಕಾಳು	1517-8288
ಶೇಂಗಾ	2644-6391
ಹುರಳಿಕಾಳು	2844-4257
ಜೋಳ	1419-4225
ಮೆಕ್ಕೆಜೋಳ	1669-1736
ಕುಸುಬೆ	5209-5777
ಸೂರ್ಯಕಾಂತಿ	6086-6282
ತೊಗರಿ	4544-5802
ಗೋಧಿ	1544-5021



ಗದಗ: ಶಾಲಾ ಶಿಕ್ಷಣ ಇಲಾಖೆ ಹಾಗೂ ಭಾರತೀಯ ವೈದ್ಯಕೀಯ ಸಂಸ್ಥೆ (ಐಎಂಎ) ಸಂಯುಕ್ತ ಆಶ್ರಯದಲ್ಲಿ ನಡೆಯುತ್ತಿರುವ ಖಗೋಳ ವಿಸ್ಮಯ ಬೇಸಿಗೆ ಶಿಬಿರ ಜರುಗಿತು. ಡಾ.ಎಸ್.ಬಿ.ಶೆಟ್ಟರ್ ಮಾತನಾಡಿದರು. ಶಿವಕುಮಾರ ಪಾಟೀಲ, ರವಿಪ್ರಕಾಶ್ ರೆಡ್ಡಿ ಎಸ್.ಹೆಚ್ ಬಂಡಿವಡ್ಡರ, ಎಂ.ಎಚ್.ಸವದತ್ತಿ, ಎಂ.ಎ.ಯರಗುಡಿ, ಶಾಮ್ ಲಾಂಡೆ ಹಾಗೂ ಬಸವರಾಜ್ ಇದ್ದರು.

ಕ್ರೀಡೆಯಿಂದ ಉತ್ತಮ ಅರೋಗ್ಯ

◆ **ಲಕ್ಷ್ಮೇಶ್ವರ:** ಕ್ರೀಡೆಯಿಂದ ಅರೋಗ್ಯ ವೃದ್ಧಿಯಾಗುತ್ತದೆ. ಓದಿನ ಜೊತೆಗೆ ಕ್ರೀಡೆಯಲ್ಲಿ ಭಾಗವಹಿಸುವುದರಿಂದ ಜೀವನದಲ್ಲಿ ಶಿಸ್ತು ಮೂಡುತ್ತದೆ ಎಂದು ವಿಟಿಯು ಬೆಳಗಾವಿ ವಿಭಾಗದ ಕ್ರೀಡಾ ನಿರ್ದೇಶಕ ಮಂಜುನಾಥ ಹೇಳಿದರು.

ಅವರು ಪಟ್ಟಣದ ಶ್ರೀಮತಿ ಕಮಲಾ ಮತ್ತು ಶ್ರೀ ವೆಂಕಪ್ಪ ಎಂ ಅಗಡಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ ವಿಟಿಯು ಬೆಳಗಾವಿ ವಿಭಾಗ ಮಟ್ಟದ ಮಹಿಳಾ ವಾಲಿಬಾಲ್ ಪಂದ್ಯಾವಳಿ ಉದ್ಘಾಟಿಸಿ ಮಾತನಾಡಿ, ಕಾಲೇಜು ದಿನಗಳಲ್ಲಿ ವಿದ್ಯಾರ್ಥಿಗಳು ಕ್ರೀಡೆಯಲ್ಲಿ ಪಾಲ್ಗೊಂಡು ಪ್ರತಿಭೆ ಅನಾವರಣ ಗೊಳ್ಳಲು ಸಹಾಯಕವಾಗುತ್ತದೆ ಎಂದರು.

ಧಾರವಾಡದ ಎಸ್‌ಡಿಎಂ ಇಂಜಿನಿಯರಿಂಗ್ ಕಾಲೇಜ್ ಲಕ್ಷ್ಮೇಶ್ವರದ ಅಗಡಿ ಇಂಜಿನಿಯರಿಂಗ್ ಕಾಲೇಜ್ ಜೊತೆಗೆ ಜರುಗಿದ ಫೈನಲ್ ಪಂದ್ಯಾವಳಿಯಲ್ಲಿ ಜಯಶಾಲಿಯಾಯಿತು. ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಪರಶುರಾಮ ಬಾರಕಿ, ಪ್ರೊ. ವಿಕ್ರಂ ಶಿರೋಳ, ಡಾ. ಸುಭಾಷ್ ಮೇಟಿ, ಡಾ. ಆರ್.ಎಂ. ಪಾಟೀಲ, ಪ್ರೊ. ಸೋಮಶೇಖರ ಕೆಂಚ್ಚಿ, ಮಹಾಂತೇಶ್ ಉಳ್ಳಿ, ರಾಜು ನಾಯಕ, ಎಂ.ಎಚ್. ಅಂಗಡಿ ಎಂ.ಐ . ಕಣಕೆ, ಡಾ. ಸಂತೋಷ ಬುಜರಿ, ಸೋಮಶೇಖರ ಕೆರಿಮನಿ,ಗಿರೀಶ್ ಯತ್ನಳ್ಳಿ, ರಮೇಶ ಕೊಟ್ಟದ, ಪ್ರಜ್ವಲ ಜಿ. ರವಿ ಸದ್ದಾಪುರ, ಎಸ್.ಎನ್. ಗೊಂದಕರ, ಕಿರಣ್ ರೆಡ್ಡಿ ಲಕ್ಷ್ಮಣ್ ಪಾಟೀಲ, ಗೀತಾ ಬ್ಯಾಟಿ ಹೀನ ಕೌಸರ್ ಸೇರಿದಂತೆ ಮಹಾವಿದ್ಯಾಲಯದ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಲಕ್ಷ್ಮೇಶ್ವರ: ಪಟ್ಟಣದ ಶ್ರೀಮತಿ ಕಮಲಾ ಮತ್ತು ಶ್ರೀ ವೆಂಕಪ್ಪ ಎಂ ಅಗಡಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ ವಿಟಿಯು ಬೆಳಗಾವಿ ವಿಭಾಗ ಮಟ್ಟದ ಮಹಿಳಾ ವಾಲಿಬಾಲ್ ಪಂದ್ಯಾವಳಿಯನ್ನು ವಿಟಿಯು ಬೆಳಗಾವಿ ವಿಭಾಗದ ಕ್ರೀಡಾ ನಿರ್ದೇಶಕ ಮಂಜುನಾಥ ಉದ್ಘಾಟಿಸಿದರು.

ಮುಂಗಾರು ಹಂಗಾಮಿನ ಸಿದ್ಧತೆ | ಪ್ರಗತಿ ಪರಿಶೀಲನಾ ಸಭೆ | ಡಿಸಿ ಸೂಚನೆ

ರಸಗೊಬ್ಬರ ಪೂರೈಕೆ ಪಾರದರ್ಶಕವಾಗಿರಲಿ

◆ **ಗದಗ:** ಮುಂಬರುವ ಮುಂಗಾರು ಹಂಗಾಮಿಗೆ ಜಿಲ್ಲೆಯ ರೈತರಿಗೆ ಯಾವುದೇ ತೊಂದರೆಯಾಗದಂತೆ ಮುನ್ನೆಚ್ಚರಿಕೆ ವಹಿಸಲು ಮತ್ತು ರಸಗೊಬ್ಬರ ಪೂರೈಕೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಬೇಕೆಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ಹೇಳಿದರು.

ನಗರದಜಿಲ್ಲಾಧಿಕಾರಿಗಳಕಚೇರಿಸಭಾಂಗಣದಲ್ಲಿ ಜರುಗಿದ ಪ್ರಸಕ್ತ ಸಾಲಿನ ಜಿಲ್ಲಾ ಮಟ್ಟದ ಕೃಷಿ ಪರಿಕರಗಳ ಉಸ್ತುವಾರಿ ಸಮಿತಿ ಮತ್ತು ಜಾಗೃತಿ ಸಮಿತಿ ಸಭೆ ಹಾಗೂ ಮುಂಗಾರು ಹಂಗಾಮಿನ ಸಿದ್ಧತೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ತುರ್ತು ಸಂದರ್ಭಗಳಿಗಾಗಿ ಜಿಲ್ಲೆಯಲ್ಲಿ ಅಗತ್ಯ ಪ್ರಮಾಣದ ರಸಗೊಬ್ಬರವನ್ನು ಬಫರ್ ಸ್ಟಾಕ್ ಆಗಿ ಕಾಯ್ದಿರಿಸಲು ಮತ್ತು ಅದರ ಸಕಾಲಿಕ ವಿತರಣೆಗೆ ಕ್ರಮ ಕೈಗೊಳ್ಳಬೇಕು. ರೈತರಿಗೆ ಸಕಾಲದಲ್ಲಿ ಗೊಬ್ಬರ ಸಿಗುವಂತೆ ವ್ಯವಸ್ಥೆ ಮಾಡಬೇಕೆಂದರು.

ಜಿಲ್ಲೆಗೆ ಸರಬರಾಜಾಗುವ ರಸಗೊಬ್ಬರವನ್ನು ಕಂಪನಿಗಳು ಡೀಲರ್‌ಗಳಿಗೆ ಹಂಚಿಕೆ ಮಾಡುವಾಗ ಪಾರದರ್ಶಕತೆ ಕಾಯ್ದುಕೊಳ್ಳಬೇಕು. ಯಾವ ಡೀಲರ್‌ಗೆ ಎಷ್ಟು ಪ್ರಮಾಣದ ಗೊಬ್ಬರ ಹಂಚಿಕೆಯಾಗಿದೆ ಎಂಬ ಮಾಹಿತಿಯನ್ನು ಕೃಷಿ ಇಲಾಖೆಗೆ ಮುಂಚಿತವಾಗಿ ಸಲ್ಲಿಸಬೇಕು. ಕೆಲವು ಡೀಲರ್‌ಗಳು ಅಥವಾ ಮಧ್ಯವರ್ತಿಗಳು ರಸಗೊಬ್ಬರವನ್ನು ದಾಸ್ತಾನು ಮಾಡಿ ಕೃತಕ ಅಭಾವ ಸೃಷ್ಟಿಸುವುದನ್ನು ತಡೆಗಟ್ಟಲು ಕೃಷಿ ಇಲಾಖೆ ಅಧಿಕಾರಿಗಳುನಿರಂತರನಿಗಾವಹಿಸಬೇಕುಎಂದರು. ಕೇವಲ ಯುರಿಯಾ ಅಥವಾ ಡಿಎಪಿ ಗೊಬ್ಬರಗಳ ಮೇಲೆ ಅವಲಂಬಿತವಾಗದೆ, ಮಣ್ಣಿನ ಗುಣಮಟ್ಟಕ್ಕೆ ಅನುಗುಣವಾಗಿ ಕಾಂಪ್ಲೆಕ್ಸ್ ಗೊಬ್ಬರಗಳನ್ನು ಬಳಸುವಂತೆ ರೈತರಲ್ಲಿ ಜಾಗೃತಿ ಮೂಡಿಸಬೇಕು. ಫೀಲ್ಡ್ ಮಟ್ಟದಲ್ಲಿ ಕೆಲಸ ಮಾಡುವ ಅಧಿಕಾರಿಗಳು ಕೇವಲ ಅಂಕಿ-ಅಂಶಗಳನ್ನು ನೀಡದೆ, ವಾಸ್ತವದಲ್ಲಿ ರೈತರಿಗೆ ತಲುಪಿರುವ ಸೌಲಭ್ಯಗಳ ಬಗ್ಗೆ ನಿಗಾ ವಹಿಸಬೇಕು. ಯಾವುದೇ ಹಂತದಲ್ಲಿ ಭ್ರಷ್ಟಾಚಾರ ಅಥವಾ ನಿರ್ಲಕ್ಷ್ಯ ಕಂಡುಬಂದಲ್ಲಿ ಕಟ್ಟುನಿಟ್ಟಿನ ಕ್ರಮ ಅನಿವಾರ್ಯ ಎಂದು ಎಚ್ಚರಿಕೆ ನೀಡಿದರು.

ಜಂಟಿ ಕೃಷಿ ನಿರ್ದೇಶಕಿ ಚೇತನಾ ಪಾಟೀಲ ಮಾತನಾಡಿ, ಜಿಲ್ಲೆಯ ರೈತರು ಯಾರೊಬ್ಬರ ಅನಗತ್ಯ ವದಂತಿಗೆ ಕಿವಿಗೊಡದೆ ಅಗತ್ಯವಿರುವಷ್ಟು ಖರೀದಿಸಬಹುದು. ಕೆ-ಕಿಸಾನ್ ಆ್ಯಪ್ ಮೂಲಕ ರಸಗೊಬ್ಬರಗಳ ಖರೀದಿಗೆ ಕ್ರಮವಹಿಸಲಾಗಿದ್ದು ಕೃಷಿ ಪರಿಕರ ಮಾರಾಟಗಾರರ ಮಳಿಗೆಗಳ ಮೇಲ್ವಿಚಾರಣೆಗೆ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ರೈತರು ಆಯಾ ಬೆಳೆಗೆ ಶಿಫಾರಸು ಮಾಡಿದ ಪ್ರಮಾಣದೊಂದಿಗೆ, ವೈಜ್ಞಾನಿಕವಾಗಿಯೇ ರಸಾಯನಿಕ ಗೊಬ್ಬರ ಬಳಸುವಂತೆ ಜಿಲ್ಲಾದ್ಯಂತ ಜಾಗೃತಿ ಮೂಡಿಸಲಾಗುತ್ತಿದೆ ಎಂದರು.

ಯೂರಿಯಾ ವಿತರಣೆಗೆ ಕೆ-ಕಿಸಾನ್ ತಂತ್ರಾಂಶ ಜಿಲ್ಲೆಯ ರೈತರು ಯೂರಿಯಾ ರಸಗೊಬ್ಬರಗಳನ್ನು ಖರೀದಿಸಲು ಎಫ್.ಐ.ಡಿ ಹೊಂದಿರುವುದು ಕಡ್ಡಾಯವಾಗಿದೆ. ಮುಂಗಾರು ಹಂಗಾಮಿನಿಂದ ಹೊಸ ನಿಯಮ ಜಾರಿಗೆ ಬರಲಿದೆ. ರೈತರ ಜಮೀನಿನ ವಿಸ್ತೀರ್ಣ ಬೆಳೆದ ಬೆಳೆಯ ಅನುಗುಣವಾಗಿ ರಸಗೊಬ್ಬರದ ಅಗತ್ಯತೆಗೆ ಅನುಗುಣವಾಗಿ ಮಾತ್ರ ಕೆ-ಕಿಸಾನ್ ತಂತ್ರಾಂಶದ ಮೂಲಕ ಮಾತ್ರ ರಸಗೊಬ್ಬರಗಳನ್ನು ವಿತರಿಸಲಾಗುತ್ತದೆ ಎಂದು ತಿಳಿಸಿದ್ದಾರೆ. ಡಿವೈಎಸ್‌ಪಿ ಮಹಾಂತೇಶ್ ಸಜ್ಜನ, ಉಪವಿಭಾಗಾಧಿಕಾರಿ ಗಂಗಪ್ಪ ಎಂ., ವಿವಿಧ ರಸಗೊಬ್ಬರ ಕಂಪನಿಗಳ ಜಿಲ್ಲಾ ಪ್ರತಿನಿಧಿಗಳು ಹಾಗೂ ತಾಲೂಕು ಮಟ್ಟದ ಕೃಷಿ ಅಧಿಕಾರಿಗಳು ಉಪಸ್ಥಿತರಿದ್ದರು.



- ಗದಗ ಜಿಲ್ಲೆಯ ರೈತರಿಗೆ ರಸಗೊಬ್ಬರ ವಿತರಣೆಯಲ್ಲಿ ಯಾವುದೇ ಲೋಪವಾಗದಂತೆ ನೋಡಿಕೊಳ್ಳಿ
- ಸಹಕಾರಿ ಸಂಘಗಳ (PACS) ಮೂಲಕ ರಸಗೊಬ್ಬರ ಮಾರಾಟ ಚುರುಕುಗೊಳಿಸಿ
- ರಸಗೊಬ್ಬರ ಪೂರೈಕೆಯ ಸರಪಳಿಯಲ್ಲಿ ಯಾವುದೇ ವಿಳಂಬವಾಗದಿರಲಿ
- ಕಂಪನಿಗಳಿಂದ ರಸಗೊಬ್ಬರ ಬಿಡುಗಡೆಯಾದ ತಕ್ಷಣ, ಅದು ಪಾಯಿಂಟ್ ಆಫ್ ಸೇಲ್ ಯಂತ್ರಗಳಲ್ಲಿ ಸರಿಯಾಗಿ ದಾಖಲಾಗುತ್ತಿದೆಯೇ ಎಂಬುದನ್ನು ಕಟ್ಟುನಿಟ್ಟಾಗಿ ಮೇಲ್ವಿಚಾರಣೆ ಮಾಡಬೇಕು ಎಂದು ಸೂಚಿಸಿದ ಜಿಲ್ಲಾಧಿಕಾರಿ

67,536 ಮೆಟ್ರಿಕ್ ಟನ್ ರಸಗೊಬ್ಬರ ಅಗತ್ಯ

ಜಿಲ್ಲೆಯಲ್ಲಿ ಮುಂಗಾರು ಹಂಗಾಮು ಮುಕ್ತಾಯವಾಗುವ (ಏಪ್ರಿಲ್-ಸಪ್ಟಂಬರ) ವರೆಗೆ ಒಟ್ಟು 67,536 ಮೆಟ್ರಿಕ್ ಟನ್ ರಸಗೊಬ್ಬರಗಳ ಅಗತ್ಯವಿದೆ. ಸುಮಾರು 13842 ಮೆಟ್ರಿಕ್ ಟನ್ ರಸಗೊಬ್ಬರ ದಾಸ್ತಾನು ಮಾಡಲಾಗಿದೆ. ಮುಂಗಾರು ಹಂಗಾಮಿಗೆ ಒಟ್ಟಾರೆಯಾಗಿ ಯೂರಿಯಾ ರಸಗೊಬ್ಬರ-28531 ಮೆಟ್ರಿಕ್ ಟನ್ ಬೇಡಿಕೆ ಇದ್ದು, ಆದರಲ್ಲಿ 4492 ಮೆಟ್ರಿಕ್ ಟನ್ ದಾಸ್ತಾನು ಮಾಡಲಾಗಿದೆ. ಮುಂಗಾರು ಚಟುವಟಿಕೆ ಪ್ರಾರಂಭವಾಗುತ್ತಲೇ ಹಂತ ಹಂತವಾಗಿ ಸಕಾಲಕ್ಕೆ ಯೂರಿಯಾ ರಸಗೊಬ್ಬರಗಳ ಸರಬರಾಜಿಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಜಂಟಿ ಕೃಷಿ ನಿರ್ದೇಶಕಿ ಚೇತನಾ ಪಾಟೀಲ ಹೇಳಿದರು.

ಮೇ 7ರಂದು ಧರ್ಮ ಜಾಗೃತಿ ಸಮಾವೇಶ

◆ **ಲಕ್ಷ್ಮೇಶ್ವರ:** ಪಟ್ಟಣದ ಲಕ್ಷಾಪತಿ ಹಾಲೇವಾಡಿಮಠದಲ್ಲಿನ ಜಗದ್ಗುರು ರೇಣುಕಾಚಾರ್ಯ ಮಂದಿರದ ರಜತ ಮಹೋತ್ಸವ, ರೇಣುಕಾಚಾರ್ಯರ ಯುಗಮಾನೋತ್ಸವ, ಮಠದ ವಂಶಜರ ಸ್ಮರಣೆ, ಗದ್ದುಗೆಗಳ ಅನಾವರಣ ಹಾಗೂ ಧರ್ಮ ಜಾಗೃತಿ ಸಮಾವೇಶ ಮೇ 7ರಂದು ಬಾಳೆಹೊನ್ನೂರಿನ ರಂಭಾಪುರಿ ಜಗದ್ಗುರುಗಳ ಸಾನ್ನಿಧ್ಯದಲ್ಲಿ ನಡೆಯಲಿದೆ ಎಂದು ಮಠದ ಡಾ. ಎಸ್.ಜಿ ಹಾಲೇವಾಡಿಮಠ ತಿಳಿಸಿದರು.

ಅವರು ಲಕ್ಷ್ಮೇಶ್ವರದ ಲಿಂ.ಜ. ವೀರಗಂಗಾಧರ ಕಲ್ಯಾಣ ಮಂಟಪದಲ್ಲಿ ಮಾಜಿಶಾಸಕರಾದಜಿ.ಎಸ್ ಗಡ್ಡದೇವರಮಠ ಮತ್ತು ಜಿ.ಎಂ ಮಹಾಂತಶೆಟ್ಟರ ನೇತೃತ್ವದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾಹಿತಿ ನೀಡಿದರು. ಅಂದು ಬೆಳಗ್ಗೆ 9ಕ್ಕೆ ಬಾಳೆಹೊನ್ನೂರ ಡಾ.ವೀರಸೋಮೇಶ್ವರ ಜಗದ್ಗುರುಗಳ ಸಾನ್ನಿಧ್ಯದಲ್ಲಿ ಇಷ್ಟಲಿಂಗ ಮಹಾಪೂಜೆ ನೇರವೇರಲಿದೆ. ನಂತರ ಬೆಳಗ್ಗೆ 11ಕ್ಕೆ ಜಗದ್ಗುರು ರೇಣುಕಾಚಾರ್ಯರ ಜಯಂತಿ ಯುಗಮಾನೋತ್ಸವ ಹಿನ್ನೆಲೆ ರೇಣುಕರ ಮಂಗಲ ಮಹಾಮೂರ್ತಿ ಮತ್ತು ಜಗಜ್ಯೋತಿ ಬಸವಣ್ಣನವರ ಭಾವಚಿತ್ರದ ಮೆರವಣಿಗೆ ಮೆರವಣಿಗೆ ಹಾಲೇವಾಡಿ ಮಠದಿಂದ ಪಟ್ಟಣದ ಪ್ರಮುಖ ಮಾರ್ಗದಲ್ಲಿ ಸಕಲ ವಾದ್ಯ ಮೇಳದೊಂದಿಗೆ ನೆರವೇರಲಿದೆ. ಸಂಜೆ 4ಕ್ಕೆ ಶ್ರೀ ಸೋಮೇಶ್ವರ ತೇರಿನಮನೆ ಪ್ರಾಂಗಣದಲ್ಲಿ ಧರ್ಮ ಜಾಗೃತಿ ಸಮಾರಂಭ ನಡೆಯಲಿದೆ. ನೇತೃತ್ವವನ್ನು ಮುಕ್ತಿಮಂದಿರದ ವಿಮಲರೇಣುಕ ವೀರಮುಕ್ತಿ ಮುನಿ ಶಿವಾಚಾರ್ಯರು, ಸಮ್ಮುಖವನ್ನು ನೊಣವಿನಕೇರಿಯ ಡಾ.ಕರಿವೃಷಭ ದೇಶಿಕೇಂದ್ರ ಶಿವಯೋಗಿ ಶಿವಾಚಾರ್ಯರು, ಬನ್ನಿಕೊಪ್ಪ, ಗಂಜಿ ಗಟ್ಟಿ, ಸಿದ್ದರಬೆಟ್ಟ, ಕರೇವಾಡಿಮಠ ಸೇರಿ ವಿವಿಧ ಮಠಾಧೀಶರು ಉಪಸ್ಥಿತರಿರುವರು. ಅಧ್ಯಕ್ಷತೆಯನ್ನು ಶಾಸಕ ಡಾ.ಚಂದ್ರು ಲಮಾಣಿ ವಹಿಸುವರು. ಉದ್ಘಾಟನೆಯನ್ನು ಸಂಸದ ಬಸವರಾಜ ಬೊಮ್ಮಾಯಿ ನೆರವೇರಿಸುವರು. ಮಾಜಿ ಶಾಸಕರುಗಳಾದ ಜಿ.ಎಂ ಮಹಾಂತಶೆಟ್ಟರ, ಜಿ.ಎಸ್ ಗಡ್ಡದೇವರಮಠ ಭಾವಚಿತ್ರ ಬಿಡುಗಡೆಗೊಳಿಸುವರು. ಡಾ. ಸಿದ್ದಲಿಂಗೇಶ ಸಜ್ಜನಶೆಟ್ಟರ ಉಪನ್ಯಾಸ ನೀಡುವರು ಎಂದರು.

ಮಾಜಿ ಶಾಸಕ ಜಿ.ಎಸ್ ಗಡ್ಡದೇವರಮಠ ಮಾತನಾಡಿ, ನಡೆದಾಡಿದ ಈ ಪುಣ್ಯ ನೆಲದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿ ಕಾರ್ಯಕ್ರಮ ಯಶಸ್ವಿಗೊಳಿಸೋಣ ಎಂದರು. ಚಂಬಣ್ಣ ಬಾಳಿಕಾಯಿ, ಕುಬೇರಪ್ಪ ಮಹಾಂತಶೆಟ್ಟರ, ಆನಂದ ಮೆಕ್ಕಿ, ಬಂಗಾರೆಪ್ಪ ಮುಳಗುಂದ, ಬಸವರಾಜ ಮೆಣಸಿನಕಾಯಿ, ರುದ್ರಮುನಿ ಘಂಟಾಮಠ, ಅಶೋಕ ಬಿಸೆರೊಟ್ಟಿ, ಶಿವಯೋಗಿ ಅಂಕಲಕೋಟಿ, ಗುರುಶಾಂತಯ್ಯ ಬಾಳೇಹಳ್ಳಿಮಠ, ವೀರಭದ್ರಯ್ಯ ಹಿರೇಮಠ ಅನೇಕರಿದ್ದರು.




ಲಗ್ನಪತ್ರಿಕೆಯಲ್ಲಿ ಗೋ ಮಾತೆಯ ಮಹತ್ವದ ಪುಟ!

◆ **ನರಗುಂದ:** ಪಟ್ಟಣದ ಹಗೇದಕಟ್ಟಿ ಓಣಿಯ ಗೋ ಪ್ರೇಮಿ ಶರಣಪ್ಪ ತಿಪ್ಪಣ್ಣ ಘಾಟಗೆ ಅವರು ಏ.26 ರಂದು ಇರುವ ತಮ್ಮ ವಿವಾಹದ ಲಗ್ನ ಪತ್ರಿಕೆಯಲ್ಲಿನ ಒಂದು ಪುಟವನ್ನು ಸಂಪೂರ್ಣ ಗೋ ಮಾತೆಯ ಮಹತ್ವವನ್ನು ಒಳಗೊಂಡ ಮಾಹಿತಿಯನ್ನೇ ತಿಳಿಸಿದ್ದಾರೆ.

ಮದುವೆ ದಿನದಂದು ಬೆಳಗ್ಗೆ 10.30ಕ್ಕೆ ವಧು ವರರಿಂದ ಗೋಪೂಜೆ ನಡೆಯಲಿದೆ. ನರಗುಂದ ಹಿರೇಮಠದ ಶ್ರೀ ಸಿದ್ದೇಶ್ವರ ಗೋಶಾಲೆಯಲ್ಲಿ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ನೂರಾರು ಗೋವುಗಳೊಂದಿಗೆ ಇರುವ ಚಿತ್ರಣವನ್ನು ಲಗ್ನ ಪತ್ರಿಕೆಯಲ್ಲಿ ಕಾಣುವಂತೆ ಮಾಡಿದ್ದಾರೆ. ದುಂದುವೆಚ್ಚದ ಮೂಲಕ ಆಡಂಬರದ ಮದುವೆಗಳು ನಡೆಯುವ ಕಾಲದಲ್ಲಿ ಬಡ ಯುವಕನೊಬ್ಬ ತನ್ನ ಮದುವೆ ಪತ್ರಿಕೆಯಲ್ಲಿಯೇ ಗೋಮಾತೆಯ ಮೇಲಿನ ಕಾಳಜಿಯನ್ನು ತೋರಿಸಿದ್ದಾನೆ.

ಗೋವಿಗೆ ಮತ್ತು ಕೃಷಿಗೆ ಅವಿನಾಭಾವ ಸಂಭಂದವಿದೆ. ಗೋ ಆಧಾರಿತ ಕೃಷಿಯಿಂದ ಜನರ ಜೀವನಮಟ್ಟ ಆರೋಗ್ಯಕರವಾಗಿತ್ತು. ಆದರೆ ಸದ್ಯದ ಸ್ಥಿತಿಯನ್ನು ಗಮನಿಸಿದಾಗ ಜನರ ಜೀವನಮಟ್ಟ ಆಸ್ಪತ್ರೆಯೊಂದಿಗೆ ಸಂಭಂದವನ್ನು ಹೊಂದಿದೆ. ಗೋ ಆಧಾರಿತ ಮತ್ತು ಸಾವಯವ ಕೃಷಿ ಮಾಯವಾಗಿದೆ. ಎಲ್ಲೆಂದರಲ್ಲಿ ಕಾಣುತ್ತಿರುವ ಆಸ್ಪತ್ರೆಗಳಲ್ಲಿ ರೋಗಗ್ರಸ್ಥ ಜನರ ಸಂಖ್ಯೆ ಹೆಚ್ಚಾಗಿ ಕಂಡುಬರುತ್ತಿದೆ. ಮಾನವ ಜನಾಂಗದ ಬದುಕಿಗೆ ಅತೀ ಅವಶ್ಯ ಬೇಕಾದ ಗೋವು, ರೈತ, ಸೈನಿಕ ಇವರುಗಳ ನೆನಪನ್ನು ಮಾಡಲಾಗಿದೆ. ಆರೋಗ್ಯಕರಸುಂದರವಾದಬದುಕನ್ನುಸಾಗಿಸಲು ಗೋಮಾತೆ ಸನಿಹ ತೆರಳಬೇಕಾಗಿದೆ ಎನ್ನುವ ಉದ್ದೇಶದಿಂದ ಈ ಪ್ರಯತ್ನವನ್ನು ಲಗ್ನಪತ್ರಿಕೆ ಮೂಲಕ ವಧು-ವರರು ಮಾಡುತ್ತಿದ್ದಾರೆ.



> ಹಸು ಸಾಕುವ ಕಾಲದಲ್ಲಿ ಕೃಷಿ ಉತ್ತಮವಾಗಿತ್ತು. ಕಾಲಕ್ರಮೇಣ ಗೋ ಅಧಾರಿತ ಕೃಷಿಯಿಂದ ಜನರು ದೂರವಾದ ಬಳಿಕ ಬದುಕು ರೋಗಗ್ರಸ್ತವಾಗಿದೆ. ಗೋವುಗಳ ಸಂಖ್ಯೆ ಕಡಿಮೆ ಆಗುತ್ತಿದೆ. ದೇಹದ ಆರೋಗ್ಯಕ್ಕಾಗಿ ಗೋಮಾತೆ ಹತ್ತಿರ ನಾವು ಹೋಗಲೇ ಬೇಕಾಗಿದೆ. ಗೋವಿನ ಅವಶ್ಯಕತೆ ಎಷ್ಟಿದೆ ಎಂಬುದನ್ನು ಮದುವೆ ಮಾಡಿಕೊಳ್ಳುವ ಯುವಕ ತನ್ನ ಲಗ್ನ ಪತ್ರಿಕೆ ಮೂಲಕ ಜಾಗೃತಿ ಮೂಡಿಸಿದ್ದಾನೆ. ಇದು ಸಂತಸ ತಂದಿದೆ.
>
> ■ **ಸಿದ್ಧಲಿಂಗ ಸ್ವಾಮೀಜಿ,** ಪಂಚಗೃಹ ಗುಡ್ಡದ ಹಿರೇಮಠ, ನರಗುಂದ

ವರದಕ್ಷಿಣೆ ತಿರಸ್ಕರಿಸುವ ಗುಣ ಬೆಳಸಿಕೊಳ್ಳಿ: ಮುಪ್ಪಿನ ಬಸವಲಿಂಗ ಶ್ರೀ

◆ **ನರೇಗಲ್ಲ:** ಸಾಮೂಹಿಕ ವಿವಾಹಗಳು ದುಂದುವೆಚ್ಚಕ್ಕೆ ಕಡಿವಾಣ ಹಾಕುದುವುದಲ್ಲದೆ, ನೆಮ್ಮದಿ ಜೀವನಕ್ಕೆ ಅಡಿಪಾಯ ಹಾಕುತ್ತದೆ. ಮದುವೆ ಸಮಯದಲ್ಲಿ ವರದಕ್ಷಿಣೆ ತಿರಸ್ಕರಿಸುವ ಗುಣ ಬೆಳಸಿಕೊಳ್ಳಬೇಕು ಎಂದು ಹಾಲಕೆರೆ ಸಂಸ್ಥಾನ ಮಠದ ಮುಪ್ಪಿನ ಬಸವಲಿಂಗ ಶ್ರೀಗಳು ಹೇಳಿದರು.

ಅವರು ಸಮೀಪದ ಅಬ್ಬಿಗೇರಿ ಗ್ರಾಮದ ಅನ್ನದಾನೀಶ್ವರ ಶಾಖಾಮಠದಲ್ಲಿ ಹಮ್ಮಿಕೊಂಡಿದ್ದ ಸಾಮೂಹಿಕ ವಿವಾಹ ಮಹೋತ್ಸವದಲ್ಲಿ ಮಾತನಾಡಿ, ಬಡವರ ಪಾಲಿನ ವರದಾನವಾಗಿರುವ ಸಾಮೂಹಿಕ ವಿವಾಹ ಪರಂಪರೆ ಇಂದಿನಿದಲ್ಲ, ಅದು ಬಸವಾದಿ ಶರಣರು ಹಾಕಿಕೊಟ್ಟ ಸನ್ಮಾರ್ಗ ಎಂದರು. ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ಆಶೀರ್ವಾದವಾಗಿದ್ದು, ಅನಾವಶ್ಯಕ ಖರ್ಚುಗಳನ್ನು ಕಡಿಮೆ ಮಾಡಿ, ಸರಳ ಹಾಗೂ ಸಾರ್ಥಕವಾಗಿ ವಿವಾಹವನ್ನು ನೆರವೇರಿಸಲು ನೆರವಾಗುತ್ತದೆ. ಇದು ನಮ್ಮ ಸಮಾಜಕ್ಕೆ ಉತ್ತಮ ಸಂದೇಶ ನೀಡುತ್ತದೆ ಎಂದರು.

ರೋಣ ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ ಮಿಥುನ್ ಪಾಟೀಲ ಮಾತನಾಡಿ, ವಧು-ವರರು ದಾಂಪತ್ಯ ಜೀವನವನ್ನು ಮಾದರಿಯಾಗಿ ನಡೆಸುವ ಮೂಲಕ ಸಮಾಜಕ್ಕೆ ಮಾದರಿಯಾಗಬೇಕು ಎಂದರು. ರಾಜ್ಯ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಅಕ್ಷಯ ಪಾಟೀಲ ಮಾತನಾಡಿ, ಸಾಮೂಹಿಕ ವಿವಾಹಗಳು ಬಡವರ ಮದುವೆಗಳು ಅಲ್ಲ, ಭಾಗ್ಯವಂತರ ಮದುವೆಗಳು. ಇಂತಹ ವಿವಾಹ ಕಾರ್ಯಕ್ರಮಗಳು ಸಮಾಜಮುಖಿ ಕಾರ್ಯಗಳಾಗಿದ್ದು ದುಂದುವೆಚ್ಚ, ಆಡಂಬರಕ್ಕೆ ಕಡಿವಾಣ ಹಾಕಲು ಸಾಧ್ಯ ಎಂದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಗುಲಗಂಜಿಮಠದ ಗುರುಪಾದ ಸ್ವಾಮೀಜಿ ಮಾತನಾಡಿದರು. ನಿಡಗುಂದಿಕೊಪ್ಪದ ಚನ್ನಬಸವ ಸ್ವಾಮೀಜಿ, ಹಿರೇಮಠದ ಮಲ್ಲಿಕಾರ್ಜುನ ಶಿವಾಚಾರ್ಯರು, ಸಿದ್ದರಬೆಟ್ಟದ ವೀರಭದ್ರ ಶಿವಾಚಾರ್ಯರು, ಬನವಾಸಿಯ ಶಿವಲಿಂಗ ಸ್ವಾಮೀಜಿ ಸೇರಿದಂತೆ ಇತರರಿದ್ದರು. ತಾಲೂಕು ಮಹರ್ಷಿ ವಾಲ್ಮೀಕಿ ಕಾರ್ಯಕ್ರಮವನ್ನು ಸಮಾಜದ ಅಧ್ಯಕ್ಷ ಬಸವರಾಜ ತಳವಾರ ನಿರೂಪಿಸಿ, ವಂದಿಸಿದರು.



ವರನಟ ಡಾ. ರಾಜಕುಮಾರ ಜನ್ಮದಿನಚಾರಣೆ ಕಾರ್ಯಕ್ರಮ ಅದ್ದೂರಿ ಆಚರಣೆ

◆ **ಗದಗ:** ರಾಜಕುಮಾರ ರವರು ಕನ್ನಡ ಚಿತ್ರರಂಗದಲ್ಲಿ ಸಾಧಿಸಿದ ಯಶಸ್ಸಿನ ಜೊತೆಗೆ ಕನ್ನಡ ಭಾಷೆ, ಸಂಸ್ಕೃತಿ ಮತ್ತು ನಾಡಿನ ಮೇಲಿನ ಅಪಾರ ಪ್ರೀತಿ ಎಲ್ಲರಿಗೂ ಪ್ರೇರಣೆಯಾಗಿದೆ. ಡಾ. ರಾಜಕುಮಾರ್ ಅವರಂತಹ ವ್ಯಕ್ತಿತ್ವಗಳು ಸಮಾಜದಲ್ಲಿ ಸದಾ ಸ್ಮರಣೀಯವಾಗಿರುತ್ತವೆ ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ಹೇಳಿದರು.

ನಗರದ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಅಖಿಲ ಕರ್ನಾಟಕ ಡಾ. ರಾಜಕುಮಾರ್ ಅಭಿಮಾನಿ ಸಂಘಗಳ ಒಕ್ಕೂಟದ ಸಹಯೋಗದಲ್ಲಿ ಜಿಲ್ಲಾಡಳಿತ ಭವನದ ಆಡಿಟೋರಿಯಂ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ಡಾ.ರಾಜಕುಮಾರ್ ಜನ್ಮದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಅಖಿಲ ಕರ್ನಾಟಕ ಡಾ. ರಾಜಕುಮಾರ್ ಅಭಿಮಾನಿಗಳ ಸಂಘಗಳ ಒಕ್ಕೂಟದ ಗೌರವಾಧ್ಯಕ್ಷ ಬಸವರಾಜ ಮನಗುಂಡಿ ಮಾತನಾಡಿ, ಡಾ. ರಾಜ ಕುಮಾರ ಅವರ ಬಂಗಾರದ ಮನುಷ್ಯ ಚಲನಚಿತ್ರ ಕೇವಲ ತೆರೆಯ ಮೇಲಷ್ಟೇ ಅಲ್ಲ, ನಿಜ ಜೀವನದಲ್ಲೂ ಆದರ್ಶಗಳನ್ನು ಪಾಲಿಸಿದ ಮಹಾನ್ ಚೇತನ ಡಾ. ರಾಜಕುಮಾರ್ ಅವರ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಅಣ್ಣಾವ್ರ ಜೀವನದ ಸ್ಮರಣೀಯ ಕ್ಷಣಗಳನ್ನು ಮೆಲುಕು ಹಾಕಿದರು. ಕಲಾವಿದ ಗೌಡಪ್ಪ ಬೊಮ್ಮಪ್ಪನವರ ಹಾಗೂ ಕಲಾ ತಂಡದವರಿಂದ ಡಾ.ರಾಜಕುಮಾರ ಚಿತ್ರಗೀತೆಗಳ ಗಾಯನ ಪ್ರಸ್ತುತ ಪಡಿಸಿದರು.



ವೀರಣ್ಣ ಅಂಗಡಿ ಮತ್ತು ಸಂಗಡಿಗರು ನಾಡಗೀತೆ ಪ್ರಸ್ತುತ ಪಡಿಸಿದರು. ಪ್ರೊ. ಬಾಹುಬಲಿ ಜೈನರ ನಿರೂಪಿಸಿದರು. ಅಖಿಲ ಕರ್ನಾಟಕ ಡಾ. ರಾಜಕುಮಾರ ಅಭಿಮಾನಿಗಳ ಸಂಘಗಳ ಒಕ್ಕೂಟ ಹಾಗೂ ಅಭಿಮಾನಿಗಳಿಗೆ ಸನ್ಮಾನಿಸಲಾಯಿತು. ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ್ ಬಬರ್ಚಿ, ಅಪರ ಜಿಲ್ಲಾಧಿಕಾರಿ ಡಾ.ದುರಗೇಶ. ಕೆ.ಆರ್., ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಸಿ.ಆರ್.ಮುಂಡರಗಿ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ಡಾ.ನಂದಾ ಹಣಬರಹಟ್ಟಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕ ವಸಂತ ಮಡ್ಲೂರ, ಡಿಡಿಪಿಐ ಆರ್.ಎಸ್. ಬುರಡಿ, ವಿಜಯ ಕಲ್ಮನಿ, ವಿಠಲ್ ಪರಾಪುರ, ನಾಗರಾಜ ಗುತ್ತಿ, ಮಲ್ಲಿಕಾರ್ಜುನ ಸಂಗಾಪುರ, ವಿನಾಯಕ ಕಜಕೋಶಿ, ಮಲ್ಲೇಶ ಪರಾಪುರ ಇದ್ದರು.

ಸೋಮನಾಥ ಜ್ಯೋತಿರ್ಲಿಂಗ ದರ್ಶನ



◆ **ಗದಗ:** ಭಾರತದ ಪ್ರಪ್ರಥಮ, ಸೌರಾಷ್ಟ್ರದ ಜ್ಯೋತಿರ್ಲಿಂಗ ಖ್ಯಾತಿಯ ಸೋಮನಾಥ ಜ್ಯೋತಿರ್ಲಿಂಗ ದರ್ಶನ ಅವಳಿ ನಗರ ಸೇರಿ ಜಿಲ್ಲೆಯ ಜನರಿಗೆ ಏ.26 ರಂದು ನಗರದಲ್ಲಿ ದರ್ಶನಕ್ಕೆ ಅವಕಾಶವಿದ್ದು, ಇದು ಉಚಿತವಾಗಿದೆ ಎಂದು ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್.ಪಾಟೀಲ ತಿಳಿಸಿದರು.

ನಗರದಪತ್ರಿಕಾಭವನದಲ್ಲಿಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಏ.26 ರಂದು ಸಂಜೆ 4 ರಿಂದ 7ರವರೆಗೆ ಭೀಷ್ಮ ಕೆರೆಯ 'ನಡುಗಡ್ಡೆ'ಯ ಆವರಣದಲ್ಲಿ ಈ ಸೋಮನಾಥ ಜ್ಯೋತಿರ್ಲಿಂಗ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ ಎಂದರು. ಆರ್ಟ್ ಆಫ್ ಲಿವಿಂಗ್‌ನ ಹಿರಿಯ ಶಿಕ್ಷಕಿ ಕೋಮಲಾ ಸುಬ್ಬರಾಜ ಮಾತನಾಡಿ, ಆನಂದೋತ್ಸವದಂತಹ ಶಿಬಿರದಲ್ಲಿ ಭಾಗವಹಿಸಿದರೆ ಒತ್ತಡ ನಿರ್ವಹಣೆ ಕಲೆಯನ್ನು ಕರಗತ ಮಾಡಿಕೊಳ್ಳಬಹುದಾಗಿದೆ. ಹೀಗಾಗಿ ಜನ ಈ ಬಗ್ಗೆ ಗಮನ ಹರಿಸಬೇಕು ಎಂದರು.


ಡಾ.ಗೋವಿಂದಪ್ಪನವರ, ಸಿದ್ದೇಶ್ವರ ನಾಡಗೌಡ್ರ, ಬಲರಾಮ ಬಸವಾ, ಆರ್ಟ್ ಆಫ್ ಲಿವಿಂಗ್ ಟೀಚರ್ ಲೋಹಿತಕುಮಾರ ಕಾಸರ, ಎ.ಎನ್. ನಾಗರಳ್ಳಿ, ಜೆ.ಕೆ. ಆಮಾದಾರ ಇದ್ದರು. ಅಂದು ಸಂಜೆ 5ಕ್ಕೆ ಸ್ವಾಮಿ ಶರಣಾನಂದರ ನೇತೃತ್ವದಲ್ಲಿ ರುದ್ರಪೂಜೆ ಸಹ ನಡೆಯಲಿದ್ದು, ಸತ್ಸಂಗ ನಡೆಯಲಿದೆ.

ಕಟ್ಟಡದ ಜೀರ್ಣೋದ್ಧಾರಕ್ಕೆ ಧನಸಹಾಯ

◆ **ನರಗುಂದ:** ಪಟ್ಟಣದ ಮಾರುತಿ ನಗರ ವಲಯದ ಬೈರನಟ್ಟಿ ಕಾರ್ಯಕ್ಷೇತ್ರದ ಹಾಲು ಉತ್ಪಾದಕರ ಸಹಕಾರಿ ಸಂಘ ಕಟ್ಟಡ ನಿರ್ಮಾಣಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಮುದಾಯ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಕಟ್ಟಡದ ಜೀರ್ಣೋದ್ಧಾರಕ್ಕೆ ಪದ್ಮ ವಿಭೂಷಣ ರಾಜಶ್ರೀ ಡಾ.ವೀರೇಂದ್ರ ಹೆಗ್ಗಡೆ ಅವರು ಕಮಿಟಿಯ ಸಹಾಯ ಧನ ಬೇಡಿಕೆಯಂತೆ 2,00,000 ಮೊತ್ತ ಮಂಜೂರು ಮಾಡಿ ಡಿಡಿ ಕಳಿಸಿದ್ದಾರೆ.

ತಾಲೂಕಿನ ಶಿರೋಳ ಮತ್ತು ಭೈರನಹಟ್ಟಿ ದೊರೆಸ್ವಾಮಿ ವಿರಕ್ತಮಠದ ಶಾಂತಲಿಂಗ ಸ್ವಾಮೀಜಿ ಹಾಗೂ ಯೋಜನೆಯ ಜಿಲ್ಲಾ ನಿರ್ದೇಶಕ ಕೇಶವ ದೇವಾಂಗ ಹಾಗೂ ತಾಲೂಕಿನ ಯೋಜನಾಧಿಕಾರಿ ಮಾಲತಿ ದಿನೇಶ ಅವರು ಸೊಸೈಟಿಯ ಕಮಿಟಿಗೆ 2 ಲಕ್ಷ ರೂ.ನ ಡಿಡಿ ವಿತರಿಸಲಾಯಿತು.

ಈ ಸಂದರ್ಭದಲ್ಲಿ ವಲಯದ ಮೇಲ್ವಿಚಾರಕಿ ಯಾಸ್ಮಿನ್ ಬಾಗವಾನ, ಬಿ.ಬಿ. ಐನಾಪೂರ, ಚಂದ್ರು ದಂಡಿನ, ಮಹಾದೇವಪ್ಪ ಐನಾಪೂರ, ಶರಣಬಸಪ್ಪ, ಹಾಲು ಉತ್ಪಾದಕರ ಸಂಘದ ಅಧ್ಯಕ್ಷೆ ಲಕ್ಷ್ಮವ್ವ, ಉಪಾಧ್ಯಕ್ಷೆ ಮಂಜುಳಾ ಪ್ರವೀಣ ಅಪ್ಪೋಜಿ, ಕಾರ್ಯದರ್ಶಿ, ಒಕ್ಕೂಟದ ಅಧ್ಯಕ್ಷರು, ಗ್ರಾಮಸ್ಥರು ಉಪಸ್ಥಿತರಿದ್ದರು.



ವೀಲ್ ಚೇರ್, ವಾಟರ್ ಬೆಡ್ ವಿತರಣೆ



◆ **ಲಕ್ಷ್ಮೇಶ್ವರ:** ತಾಲೂಕಿನ ಸೂರಣಗಿ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಶಿರಹಟ್ಟಿ ಹಾಗೂ ಲಕ್ಷ್ಮೇಶ್ವರತಾಲೂಕಿನಸೂರಣಗಿ ವಲಯದ ಕ್ಷೇತ್ರದಿಂದ ಜಲಮಂಗಲ ಕಾರ್ಯಕ್ರಮದಡಿಯಲ್ಲಿ ಸಂಘದ ಜಿಲ್ಲಾ ನಿರ್ದೇಶಕ ಕೇಶವ ದೇವಾಂಗ ಫಲಾನುಭವಿಗಳಿಗೆ ವೀಲ್ ಚೇರ್ ಹಾಗೂ ವಾಟರ್ ಬೆಡ್‌ವಿತರಿಸಿದರು.

ಧರ್ಮಸ್ಥಳ ಸಂಘದಿಂದ ಶಾಲೆಗಳಿಗೆ ಡೆಸ್ಕ್ ವಿತರಣೆ, ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣ, ಕೆರೆಗಳ ಅಭಿವೃದ್ಧಿ , ಸಂಘದಿಂದ ಸ್ವಾವಲಂಬನೆ ಜೀವನ ನಡೆಸಲು ಜನರಿಗೆ ಸಹಾಯ ಹಸ್ತ ನೀಡಿದೆ. ಅನಾರೋಗ್ಯದಿಂದ ಬಳಲುವವರಿಗೆ ಸಹಾಯ ಹಸ್ತ, ಹೀಗೆ ಹಲವು ಜನೋಪಯೋಗಿ ಕಾರ್ಯಗಳ ಮೂಲಕ ಸಮಾಜದ ಪ್ರಗತಿಗೆ ಕೊಡುಗೆ ನೀಡುತ್ತಿದೆ. ಮದ್ಯವರ್ಜನ ಶಿಬಿರಗಳಿಂದ ಸಾಕಷ್ಟು ಕುಟುಂಬಗಳು ಇಂದು ನೆಮ್ಮದಿಯ ಜೀವನ ನಡೆಸುತ್ತಿವೆ ಎಂದರು.

ಗ್ರಾಮದ ಯುವ ಮುಖಂಡ ರಮೇಶ ಹಂಗನಕಟ್ಟಿ ಮಾತನಾಡಿದರು .ಗ್ರಾಪಂ ಮಾಜಿ ಅಧ್ಯಕ್ಷ ಶಂಕರಣ್ಣ ಶಿರನಹಳ್ಳಿ ಅಧ್ಯಕ್ಷತೆ ವಹಿಸಿದ್ದರು. ಶಿರಹಟ್ಟಿ, ಲಕ್ಷ್ಮೇಶ್ವರ ತಾಲೂಕಿನ ಯೋಜನಾಧಿಕಾರಿ ಪುನೀತ ಓಲೇಕಾರ, ಕೃಷಿ ಮೇಲ್ವಿಚಾರಕರು, ವಲಯ ಮೇಲ್ವಿಚಾರಕರು, ಸೇವಾಪ್ರತಿನಿಧಿಗಳು, ಫಲಾನುಭವಿಗಳು, ಮಹಿಳೆಯರು ಉಪಸ್ಥಿತರಿದ್ದರು.

ಜಯಂತಿ ಆಚರಣೆ ವ್ಯವಸ್ಥಿತವಾಗಿರಲಿ

◆ **ಗದಗ:** ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಮೇ 10ರಂದು ನಗರದ ಕೆ.ಎಚ್.ಪಾಟೀಲ ಸಭಾಭವನದಲ್ಲಿ ವ್ಯವಸ್ಥಿತವಾಗಿ ಹಾಗೂ ಅಚ್ಚುಕಟ್ಟಾಗಿ ಆಚರಿಸಲು ಕ್ರಮ ವಹಿಸಬೇಕೆಂದು ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್. ಸೂಚಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿ ನಿಮಿತ್ತ ಜರುಗಿದ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ತಾಲೂಕು ಮಟ್ಟದಲ್ಲಿತಹಶೀಲ್ದಾರ್ ಅಧ್ಯಕ್ಷತೆಯಲ್ಲಿ ಜಯಂತಿಯ ಆಚರಣೆಗೆ ಕ್ರಮ ವಹಿಸಬೇಕು. ಜಿಲ್ಲಾ ಮಟ್ಟದ ಅಧಿಕಾರಗಳು ಗ್ರಾಮ ಪಂಚಾಯಿತಿ ಶಾಲಾ ಕಾಲೇಜುಗಳಲ್ಲಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಿಸಬೇಕು. ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಸಮಾಜದ ವಿದ್ಯಾರ್ಥಿಗಳಿಗೆ ಪದವಿಯಲ್ಲಿ ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳಿಗೆ ಹಾಗೂ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಸಮಾಜದ ಹಿರಿಯರಿಗೆ ಸನ್ಮಾನ ಕಾರ್ಯಕ್ರಮವು ಜರುಗಲಿದೆ. ಡಿ.ವೈ.ಎಸ್.ಪಿ ಮಹಾಂತೇಶ್ ಸಜ್ಜನ, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಸಿ.ಆರ್. ಮುಂಡರಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧೀಕ್ಷಕ ರಾಜ ಕುಮಾರ ಸೊಪ್ಪಡ್ಲ, ಎಲ್ಲಾ ಇಲಾಖೆಯ ಅಧಿಕಾರಿಗಳು, ಸಮಾಜದ ಮುಖಂಡರು, ಮಹಿಳೆಯರು ಇದ್ದರು.



ಲಾರಿ ಡ್ರೈವರ್ ಮಗಳ ಸಾಧನೆ

▸ ಶಿವಲಿಂಗಯ್ಯ ಹೊತಗಿಮಠ

ಲಕ್ಷ್ಮೇಶ್ವರ: ಪಟ್ಟಣದ ಶ್ರೀ ವೀರಗಂಗಾಧರ ಜಗದ್ಗುರು ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ರೇಖಾ ಲಕ್ಷ್ಮಣ ಬಾಕಳೆ ಎಸ್‌ಎಸ್‌ಎಲ್‌ಸಿಯಲ್ಲಿ ಪರೀಕ್ಷೆಯಲ್ಲಿ ಶೇ.96.48ರಷ್ಟು ಅಂಕ ಗಳಿಸಿ ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾಳೆ.

ರೇಖಾ ತಂದೆ ಲಕ್ಷ್ಮಣ ಬಾಕಳೆ ಲಾರಿ ಡ್ರೈವರ್ ಆಗಿದ್ದಾರೆ.

ಕನ್ನಡ ಮಾಧ್ಯಮದಲ್ಲಿ ಕನ್ನಡ 124, ಇಂಗ್ಲಿಷ್ 98, ಹಿಂದಿ 97, ಗಣಿತ 93,ವಿಜ್ಞಾನ 91, ಸಮಾಜ ವಿಜ್ಞಾನ 100 ಒಟ್ಟು 603 ಅಂಕಗಳನ್ನು ಗಳಿಸಿ ಶೇ.96.48ರಷ್ಟು ಅಂಕ ಗಳಿಸಿ ತಾಲೂಕಿಗೆ ಪ್ರಥಮ ಸ್ಥಾನ ಪಡೆದಿದ್ದಾಳೆ.

ಬಿಡುವಿನ ಸಮಯದಲ್ಲಿ ಹೆಚ್ಚಿನ ಸಮಯ ಶಾಲೆಯ ಗ್ರಂಥಾಲಯದಲ್ಲಿ ಕಳೆಯುತ್ತಿದ್ದ ರೇಖಾ, ವಾಟ್ಸ್‌ಆಪ್ ಮೂಲಕ ಶಾಲೆಯಿಂದ ಬರುವ ಪಠ್ಯದ ವಿಷಯ ಸಲುವಾಗಿ ಅಷ್ಟೇ ಮೊಬೈಲ್ ಬಳಕೆ ಮಾಡುತ್ತಿದ್ದಳು.

ಸರ್ಕಾರಿ ಶಾಲೆಯಲ್ಲಿ ಉತ್ತಮ ಶಿಕ್ಷಣ ದೊರೆಯುತ್ತದೆ ಎಂದು ಹೇಳುವ ಅವಳು ಸರ್ಕಾರಿ



ಪ್ರತಿಭಾವಂತ ವಿದ್ಯಾರ್ಥಿನಿ

ವಿದ್ಯಾರ್ಥಿಗಳು ಹೆಚ್ಚಿನ ಅಂಕಗಳಿಸಲು ಪರೀಕ್ಷೆ ಹತ್ತಿರವಿದ್ದಾಗ ಶಾಲೆಯಲ್ಲೇ ಸಂಪನ್ಮೂಲ ಶಿಕ್ಷಕರಿಂದ ಕಾರ್ಯಾಗಾರ ನಡೆಸಿದ್ದೇವೆ. ಅವಳು 8ನೇ ತರಗತಿ ಇದ್ದಾಗಲೇ ಎನ್‌ಎಂಎಂಎಸ್ ಪರೀಕ್ಷೆ ಬರೆದು ಪಾಸ್ ಆಗಿ ಸರ್ಕಾರದಿಂದ ತಿಂಗಳ 1000 ಸಾವಿರ ರೂಪಾಯಿ ಶಿಷ್ಯವೇತನ ಪಡೆದುಕೊಳ್ಳುತ್ತಿದ್ದಳು ಎಂದು ಸರ್ಕಾರಿ ಪ್ರೌಢಶಾಲೆ ಮುಖ್ಯೋಪಾಧ್ಯಾಯ ಬಿ.ಸಿ. ಪಟ್ಟೆದ ತಿಳಿಸಿದ್ದಾರೆ.

> ಮಗಳ ಓದಿಗೆ ಸಂಪೂರ್ಣ ಬೆಂಬಲವಿದ್ದು, ಅವಳ ಸಾಧನೆ ಖುಷಿ ಕೊಟ್ಟಿದೆ. ಬಡತನದಲ್ಲಿಯೂ ಓದಿನ ಕಡೆ ಹೆಚ್ಚಿನ ಗಮನ ಕೊಟ್ಟು ಕೀರ್ತಿ ತಂದಿದ್ದಾಳೆ
>
> ■ ಲಕ್ಷ್ಮಣ, ದೀಪಾ (ತಂದೆ, ತಾಯಿ)

> ಶಿಕ್ಷಕರು ಹೇಳಿದ ಪಾಠವನ್ನು ಅಂದೇ ಅಭ್ಯಾಸ ಮಾಡುತ್ತಿದ್ದೆ. ಕೀ ವರ್ಡ್ಸ್ ನೋಟ್ಸ್ ಮಾಡಿಕೊಂಡು ಓದುವ ಹವ್ಯಾಸ ಬೆಳಸಿಕೊಂಡಿದ್ದೆ. ದಿನಕ್ಕೆ 6 ಗಂಟೆ ಓದುವುದುಓದುವ ಮಧ್ಯೆ 45 ನಿಮಿಷಕ್ಕೆ ಒಮ್ಮೆ ಮೆಡಿಟೇಶನ್ ಮಾಡುತ್ತಿದ್ದೆ. ಶಾಲೆಯ ಶಿಕ್ಷಕರು ಉತ್ತಮವಾಗಿ ಬೋಧನೆ ಮಾಡುತ್ತಿದ್ದರು. ಹೆಚ್ಚಿನ ಅಂಕ ಗಳಿಸಲು, ಓದಲು ಯಾವಾಗಲೂ ಧೈರ್ಯ ತುಂಬುತ್ತಿದ್ದರು.
>
> ■ ರೇಖಾ ಬಾಕಳೆ, ವಿದ್ಯಾರ್ಥಿನಿ

ಕಾಲೇಜ್‌ನಲ್ಲಿಯೇ ಉನ್ನತ ಶಿಕ್ಷಣ ಪಡೆಯುವ ಇಚ್ಛೆ ಹೊಂದಿದ್ದಾಳೆ.

ಮನೆ ಮನೆ ಪಾತ್ರೆ ತೊಳೆದ ವಿದ್ಯಾರ್ಥಿನಿ ಫಸ್ಟ್ ಕ್ಲಾಸ್!

▸ ರಾಚಪ್ಪಾ ಜಂಬಗಿ

ಕಲಬುರಗಿ: ಕಡು ಬಡತನ, ಮನೆ ಮನೆಗೆ ತೆರಳಿ ಪಾತ್ರೆ ತೊಳೆದ ಜಿಲ್ಲೆಯ ಆಳಂದ ತಾಲೂಕಿನ ಮಾದನ ಹಿಪ್ಪರಗಾ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ಸುಜಾತಾ ಭೀಮಾಶಂಕರ ಗೊಲ್ಲರ ಪ್ರಸಕ್ತ 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 529 ಅಂಕಗಳು (84.64%) ಗಳಿಸಿ ಫಸ್ಟ್ ಕ್ಲಾಸ್‌ನಲ್ಲಿ ಉತ್ತೀರ್ಣರಾಗಿದ್ದಾಳೆ.

ಅನಕ್ಷರಸ್ಥ ಹಾಗೂ ಕಡು ಬಡತನದ ಕುಟುಂಬದಿಂದ ಬಂದಿರುವ ಸುಜಾತಾ ಸಾಧನೆ ಗಮನಾರ್ಹವಾಗಿದೆ. ಗೊಲ್ಲರ ಸಮಾಜದಲ್ಲಿ ಅರಳಿದ ಈ ಪ್ರತಿಭೆ, ತನ್ನ ಕಠಿಣ ಪರಿಶ್ರಮದಿಂದ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದ್ದಾಳೆ. ಸುಜಾತಾ ಅವರ ದಿನಚರಿ ಸಾಮಾನ್ಯ ವಿದ್ಯಾರ್ಥಿನಿಯಂತಿಲ್ಲ. ಪ್ರತಿದಿನ ಬೆಳಿಗ್ಗೆ ಬೇಗ ಎದ್ದು ಕುಟುಂಬದೊಂದಿಗೆ ಮನೆಮನೆಗೆ ತೆರಳಿ ರೊಟ್ಟಿ ಬೇಡುವುದು, ವಿವಿಧ ಕಾರ್ಯಕ್ರಮಗಳಲ್ಲಿ ಹಾಗೂ ಮನೆ, ಮನೆಗಳಲ್ಲಿ ಪಾತ್ರೆಗಳನ್ನು ತೊಳೆಯುವುದು, ಹಂದಿ ಸಾಕಣೆ, ಗೊಬ್ಬರ ಸಂಗ್ರಹಿಸುವಂತಹ



ಕಷ್ಟಕರ ಕೆಲಸಗಳನ್ನು ನಿರ್ವಹಿಸುತ್ತಾ, ಅದೇ ಸಮಯದಲ್ಲಿ ಕಠಿಣ ವಿದ್ಯಾಭ್ಯಾಸ ಮುಂದುವರಿಸಿ ಸಾಧನೆ ಮಾಡಿದ್ದಾಳೆ.

ಸುಜಾತಾ ಅವರ ತಂದೆ ಭೀಮಾಶಂಕರ ಹಾಗೂ ತಾಯಿ ಸರುಬಾಯಿ ತಮ್ಮ ಮಗಳ ಸಾಧನೆಗೆ ಅಪಾರ ಸಂತೋಷ ವ್ಯಕ್ತಪಡಿಸಿದ್ದಾರೆ. ಬಡತನ ಸಾಧನೆಗೆ ಅಡ್ಡಿಯಾಗುವುದಿಲ್ಲ ಎಂಬುದನ್ನು ತಮ್ಮ ಯಶಸ್ಸಿನ ಮೂಲಕ ತೋರಿಸಿದ ಸುಜಾತಾ,ಇತರೆ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದ್ದಾಳೆ.

> ಮುಂಜಾನೆ ಎದ್ದು ಹಂದಿಗಳಿಗೆ ಮುಸುರಿ ಹಾಕಿ, ಮನೆ ಮನೆಗೆ ರೊಟ್ಟಿ ಬೇಡಿ ನಂತರ ಶಾಲೆಗೆ ಹೋಗುತ್ತಿದ್ದೆ. ಚೆನ್ನಾಗಿ ಅಭ್ಯಾಸ ಮಾಡಿದ್ದೇನೆ. ಶಿಕ್ಷಕರು ಸಹ ಶಾಲೆಯಲ್ಲಿ ಒಳ್ಳೆಯ ಪಾಠ ಮಾಡಿದ್ದರಿಂದ ರಿಸಲ್ಟ್ ಚಲೋ ಬಂದದ ರೀ. ಮುಂದೆ ಐಎಎಸ್ ಓದಬೇಕು ಅಂತ ಆಸೆಯಿದೆ.
>
> ■ ಸುಜಾತಾ ಗೊಲ್ಲರ, ವಿದ್ಯಾರ್ಥಿನಿ

> ಹಂದಿ ಸಾಕುವುದು, ರೊಟ್ಟಿ ಬೇಡುವುದು, ಮನೆ, ಮನೆಗೆ ತೆರಳಿ ಪಾತ್ರೆ ತೊಳೆಯುವ ಕೆಲಸದ ಮಧ್ಯೆ, ಮೇಲಾಗಿ ಅನಕ್ಷರಸ್ಥ ಕುಟುಂಬದಲ್ಲಿ ಬೆಳೆದು ಸುಜಾತಾ ಶೇಕಡಾ 84.64 ಪ್ರತಿಶತ ಅಂಕಗಳೊಂದಿಗೆ ಉತ್ತೀರ್ಣಳಾಗಿದ್ದು ಶಾಲೆಗೆ ಗೌರವದ ಮಾತಾಗಿದೆ. ತಾತ್ಯಾಗೌಡ ಪಾಟೀಲ, ಮುಖ್ಯೋಪಾಧ್ಯಾಯ
>
> ■ ಮಾದನ ಹಿಪ್ಪರಗಿ ಸರ್ಕಾರಿ ಪ್ರೌಢಶಾಲೆ

ಬೆಳಗಾವಿ ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ಏರುತ್ತಿದೆ ಬಿಸಿಲಿನ ಬೇಗೆ

ವನ್ಯಮೃಗಗಳಿಗೆ ಸ್ಪ್ರಿಂಕ್ಲಿಂಗ್, ಐಸ್ ಬಾತ್

▸ ಬಾಳಗೌಡ ಪಾಟೀಲ

ಬೆಳಗಾವಿ: ರಾಜ್ಯದಲ್ಲೇ ಆಹ್ಲಾದಕರ ವಾತಾವರಣಕ್ಕೆ ಹೆಸರಾದ ಬೆಳಗಾವಿ ಈಗ ಬಿಸಿಲಿನ ಬೇಗೆಗೆ ಕಾಯ್ದ ಕೆಂಡವಾಗಿದೆ. ಹಿಂದೆಂದೂ ಕಾಣದ ಬಿಸಿ ವಾತಾವರಣ ಬೆಳಗಾವಿ ನಗರ ಹಾಗೂ ಜಿಲ್ಲೆಯಲ್ಲಿ ದಾಖಲಾಗಿದ್ದು, 40.1ಡಿಗ್ರಿ ಸೆಲ್ಸಿಯಸ್ ಉಷ್ಣತೆ ಜನಜೀವನ ಕಂಗೆಡಿಸಿ ಅನಾರೋಗ್ಯ ಉಂಟು ಮಾಡಿದೆ.

ದಿಗಂತ ವಿಶೇಷ

ಬಿಸಿಲಿನ ತಾಪ ವನ್ಯಪ್ರಾಣಿ ಹಾಗೂ ಜಾನುವಾರುಗಳಿಗೂ ತಟ್ಟಿದ್ದು, ಬೆಳಗಾವಿ ತಾಲೂಕು ವ್ಯಾಪ್ತಿಯಲ್ಲಿರುವ ಭೂತರಾಮನಹಟ್ಟಿ ಕಿತ್ತೂರು ರಾಣಿ ಚನ್ನಮ್ಮ ಕಿರು ಮೃಗಾಲಯದಲ್ಲಿ ಪ್ರಾಣಿಗಳು ಬಿಸಿಲಿನ ಬೇಗೆಗೆ ಪರಿತಪಿಸಿವೆ.

ಹುಲಿ, ಸಿಂಹ, ಚಿರತೆ, ಕರಡಿ, ಹೈನಾ ಸೇರಿ ಕಡವೆ, ಚಿಂಕೆಯಂತಹ ಸಸ್ಯಾಹಾರ ಪ್ರಾಣಿಗಳನ್ನು ಸಹ ಬಿರುಬಿಸಿಲು ತಡವರಿಸುವಂತೆ ಮಾಡಿದೆ. ವನ್ಯ ಆಭರಣಗಳನ್ನು ಒಡಲಲ್ಲಿ ಹೊಂದಿರುವ ಈ 'ಝೂ' ಈಗ ಕರ್ನಾಟಕ-ಮಹಾರಾಷ್ಟ್ರ ಹಾಗೂ ಗೋವಾ ರಾಜ್ಯಗಳ ಪರಿಸರ ಪ್ರಿಯರಿಗೆ ರಮ್ಯ ತಾಣವಾಗಿದೆ.

ಬಿಸಿಲಿನ ಬೇಗೆಗೆ ಬಳಲಿರುವ ಹುಲಿ, ಸಿಂಹ ಮತ್ತು ಚಿರತೆಗಳಿಗೆ ವಾಟರ್ ಸ್ಪ್ರಿಂಕ್ಲಿಂಗ್ ಹಾಗೂ ಮಂಜುಮಿಶ್ರಿತ ನೀರಿನ ಸ್ನಾನದ ವ್ಯವಸ್ಥೆ ಮಾಡಲಾಗಿದೆ. ದೇಹದ ಉಷ್ಣಾಂಶ ಸಮ ಕಾಯ್ದುಕೊಳ್ಳಲು ಎಳೆನೀರು ಹಾಗೂ ಎಲೆಕ್ಟ್ರೋಲಾಯಿಟ್ಸ್ ಆಯ್ದ ಪ್ರಾಣಿಗಳಿಗೆ ನೀಡಲಾಗುತ್ತಿದೆ.

ವನ್ಯವೈದ್ಯರು ಹಾಗೂ ಝೂ ಕ್ಯೂರೇಟರ್ ಅವರ ಮೇಲುಸ್ತುವಾರಿಯಲ್ಲಿ ಪ್ರಾಣಿಗಳ ಚಲನವಲನ ಹಾಗೂ ಆರೋಗ್ಯದ ಬಗ್ಗೆ ನಿಗಾ ಇಡಲಾಗಿದೆ ಎಂದು ಬೆಳಗಾವಿ ಡಿಸಿಎಫ್ ಹಾಗೂ 'ಝೂ' ನಿರ್ದೇಶಕ ಡಾ. ಕ್ರಾಂತಿ ತಿಳಿಸಿದ್ದಾರೆ.



▸▸ ಬಿಸಿಲಿನ ಬೇಗೆಗೆ ಬಳಲಿರುವ ಹುಲಿ, ಸಿಂಹ ಮತ್ತು ಚಿರತೆಗಳ ಕೇಜ್ ಗಳಲ್ಲಿ ವಾಟರ್ ಸ್ಪ್ರಿಂಕ್ಲಿಂಗ್ ಹಾಗೂ ಮಂಜುಮಿಶ್ರಿತ ನೀರಿನ ಸ್ನಾನದ ವ್ಯವಸ್ಥೆ ಮಾಡಲಾಗಿದೆ. ದೇಹದ ಉಷ್ಣಾಂಶ ಸಮ ಕಾಯ್ದುಕೊಳ್ಳಲು ಎಳೆನೀರು ಹಾಗೂ ಎಲೆಕ್ಟ್ರೋಲಾಯಿಟ್ಸ್ ಆಯ್ದ ಪ್ರಾಣಿಗಳಿಗೆ ನೀಡಲಾಗುತ್ತಿದೆ.

> ನಮ್ಮ ಕಿತ್ತೂರು ರಾಣಿ ಚೆನ್ನಮ್ಮ ಕಿರು ಮೃಗಾಲಯದಲ್ಲಿ ಎಲ್ಲ ಪ್ರಾಣಿಗಳು ಕ್ಷೇಮವಾಗಿವೆ. ಬಿಸಿಲಿನ ಬೇಗೆ ತಣಿಸಲು ಆಯ್ದ ಪ್ರಾಣಿಗಳ ಆವರಣದಲ್ಲಿ ವಾಟರ್ ಸ್ಪ್ರಿಂಕ್ಲಿಂಗ್ ಹಾಗೂ ಮಂಜುಮಿಶ್ರಿತ ನೀರಿನ ಸ್ನಾನದ ವ್ಯವಸ್ಥೆ ಹಾಗೂ ಇತರ ವೈದ್ಯಕೀಯ ನೆರವು ನೀಡಲಾಗುತ್ತಿದೆ.
>
> ■ ಡಾ. ಕ್ರಾಂತಿ, ಡಿಸಿಎಫ್ ಹಾಗೂ ನಿರ್ದೇಶಕ ಕಿತ್ತೂರು ರಾಣಿ ಚನ್ನಮ್ಮ ಝೂ, ಬೆಳಗಾವಿ.

ಪ್ರಾಣಿ ಸಂಗ್ರಹಾಲಯದಲ್ಲಿ ವನ್ಯ ಪ್ರಾಣಿಗಳಿಗೆ ಆರೋಗ್ಯದಲ್ಲಿ ತೊಂದರೆಯಾಗಿದೆ ಎಂಬ ವದಂತಿಯನ್ನು ಡಿಸಿಎಫ್ ನಿರಾಕರಿಸಿದ್ದಾರೆ.

ತಂಪೆರೆದ ಮಳೆರಾಯ: ಈ ನಡುವೆ ಗುರುವಾರ ಇಳಿ ಮಧ್ಯಾಹ್ನ ಅರ್ಧ ಗಂಟೆ ಬಿರುಸಿನ ಮಳೆಯಾಗಿ ಬೆಳಗಾವಿಯಲ್ಲಿ ತಂಪೆರೆದಿದೆ. ಮಧ್ಯಾಹ್ನ 3:30ರಿಂದ ಅರ್ಧ ಗಂಟೆ ಸುರಿದ ತುರುಸಿನ ಮಳೆ ಜನಜೀವನಕ್ಕೆ ತುಸು ನೆಮ್ಮದಿ ನೀಡಿದೆ. ಜನ ಜಾನುವಾರು, ಪ್ರಾಣಿ ಪಕ್ಷಿಗಳಿಗೆ ಜೀವಚೈತನ್ಯ ನೀಡಿದೆ.

ಬಡವರ 'ಅನ್ನ'ಕ್ಕೆ ದಂಧೆಕೋರರ ಕನ್ನ: ಬೃಹತ್ ಅಕ್ಕಿ ಮಾಫಿಯಾ ಜಾಲ ಪತ್ತೆ

ಮುನಿರಾಬಾದ್: ಬಡವರಿಗೆ ಸೇರಬೇಕಿದ್ದ ಸಾವಿರಾರು ಮೂಟೆ ಅಕ್ಕಿಯನ್ನು ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ ಬೃಹತ್ ಜಾಲವನ್ನು ಕೊಪ್ಪಳದ ಪೊಲೀಸರು ಮತ್ತು ಆಹಾರ ಇಲಾಖೆಯ ಅಧಿಕಾರಿಗಳು ಜಂಟಿ ಕಾರ್ಯಾಚರಣೆಯ ಮೂಲಕ ಭೇದಿಸಿದ್ದಾರೆ.

ಕೊಪ್ಪಳ ತಾಲೂಕಿನ ಕೂಕನಪಳ್ಳಿ ಹೊರವಲಯದ ರಹಸ್ಯ ಗೋದಾಮಿನ ಮೇಲೆ ದಾಳಿ ನಡೆಸಿದ್ದಾರೆ. ಈ ವೇಳೆ ಸುಮಾರು 150



ಟನ್ ತೂಕದ 2,000ಕ್ಕೂ ಹೆಚ್ಚು ಅಕ್ಕಿ ಮೂಟೆಗಳು ಪತ್ತೆಯಾಗಿದ್ದು, ಅಧಿಕಾರಿಗಳೇ ಬೆಚ್ಚಿಬಿದ್ದಿದ್ದಾರೆ. ಜಪ್ತಿ ಮಾಡಲಾದ ಈ ಅಕ್ಕಿಯ ಮೌಲ್ಯ ಲಕ್ಷಾಂತರ ರೂಪಾಯಿ ಎಂದು ಅಂದಾಜಿಸಲಾಗಿದೆ.

ಸದ್ಯ ಅಕ್ರಮ ದಾಸ್ತಾನನ್ನು ವಶಕ್ಕೆ ಪಡೆದಿರುವ ಅಧಿಕಾರಿಗಳು, ಈ ಬೃಹತ್ ಜಾಲದ ಹಿಂದಿರುವ ಅಸಲಿ ಕಿಂಗ್‌ಪಿನ್ ಯಾರು ಎಂಬ ಬಗ್ಗೆ ತನಿಖೆಯನ್ನು ತೀವ್ರಗೊಳಿಸಿದ್ದಾರೆ. ಸರ್ಕಾರದ ಯೋಜನೆಗಳು ಕೇವಲ ಕಾಗದದ ಮೇಲೆ ಉಳಿಯದೆ ಹಸಿದ ಬಡವರಿಗೆ ತಲುಪಬೇಕಾದರೆ, ಇಂತಹ ಅಕ್ಕಿ ಮಾಫಿಯಾವನ್ನು ಬುಡಸಮೇತ ಕಿತ್ತೆಸೆಯಬೇಕಾದ ಅನಿವಾರ್ಯತೆ ಇದೆ.

ಕಿರುಸುದ್ದಿ

ವಿದ್ಯುತ್ ಕಂಬಕ್ಕೆ ಬಸ್ ಡಿಕ್ಕಿ: ತಪ್ಪಿದ ಭಾರೀ ಅನಾಹುತ



ಗೋಕರ್ಣ: ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಚಾಲಕನ ನಿಯಂತ್ರಣ ತಪ್ಪಿ ರಸ್ತೆಯ ವಿಭಜಕಕ್ಕೆ ಬಡಿದು ವಿದ್ಯುತ್ ಕಂಬಕ್ಕೆ ಡಿಕ್ಕಿಯಾದ ಘಟನೆ ಶುಕ್ರವಾರ ಬೆಳಗಿನ ಜಾವ ರಾಷ್ಟ್ರೀಯ ಹೆದ್ದಾರಿ ಹಿರೇಗುತ್ತಿಯಲ್ಲಿ ನಡೆದಿದೆ. ಗಜೇಂದ್ರಗಡದಿಂದ ಯಲ್ಲಾಪುರ, ಅಂಕೋಲಾ ಮಾರ್ಗವಾಗಿ ಮಂಗಳೂರಿಗೆ ಹೋಗುತ್ತಿದ್ದ ಬಸ್ ಇದಾಗಿದ್ದು, ಅಪಘಾತದ ರಭಸಕ್ಕೆ ಬಸ್ ನುಜ್ಜುಗುಜ್ಜಾಗಿದ್ದು, ಅದೃಷ್ಟವಶಾತ್ ಪ್ರಯಾಣಿಕರು ಜೀವಾಪಾಯದಿಂದ ಪಾರಾಗಿದ್ದಾರೆ. ಒಟ್ಟು 52 ಪ್ರಯಾಣಿಕರು ಇದ್ದರು ಎಂದು ತಿಳಿದು ಬಂದಿದ್ದು, ಇವರಲ್ಲಿ ಮೂವರು ಪ್ರಯಾಣಿಕರಿಗೆ ಗಾಯಗಳಾಗಿವೆ. ಆಸ್ಪತ್ರೆ ಸಾಗಿಸಿ ಚಿಕಿತ್ಸೆ ಕೊಡಿಸಲಾಗಿದೆ. ವಿದ್ಯುತ್ ಕಂಬ ತುಂಡಾಗಿ ಬಸ್ ಮೇಲೆಯೇ ಬಿದ್ದಿದ್ದು, ಆದರೆ ವಿದ್ಯುತ್ ಸರಬರಾಜು ತಕ್ಷಣ ನಿಂತಿದ್ದರಿಂದ ದೊಡ್ಡ ಅನಾಹುತ ತಪ್ಪಿದೆ. ಘಟನಾ ಸ್ಥಳಕ್ಕೆ ಇಲ್ಲಿನ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಎಸ್ಸೆಸ್ಸೆಲ್ಸಿ ಶೇ.95ರಷ್ಟು ಭರ್ಜರಿ ಸಾಧನೆ। ಆಯುಕ್ತ ಡಾ.ಉಳ್ಳಾಗಡ್ಡಿ ಮಾಹಿತಿ

ಕಿತ್ತೂರು ಕರ್ನಾಟಕ ಹೊಸ ಮನ್ವಂತರ

ಧಾರವಾಡ: ಕಳೆದ 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷಾ ಫಲಿತಾಂಶದಲ್ಲಿ ಕಿತ್ತೂರು ಕರ್ನಾಟಕ (ಬೆಳಗಾವಿ ವಿಭಾಗ) ಶೇ.95ರಷ್ಟು ಸಾಧನೆ ಮಾಡುವ ಜತೆ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದು, ಶೈಕ್ಷಣಿಕ ಕ್ಷೇತ್ರದಲ್ಲಿ ಹೊಸ ಮನ್ವಂತರಕ್ಕೆ ನಾಂದಿ ಹಾಡಿದೆ.



ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಶಾಲಾ ಶಿಕ್ಷಣ ಇಲಾಖೆ ಕಿತ್ತೂರು ಕರ್ನಾಟಕದ ಪ್ರಾದೇಶಿಕ ಆಯುಕ್ತ ಡಾ.ಈಶ್ವರ ಉಳ್ಳಾಗಡ್ಡಿ, ಹಲವು ವರ್ಷಗಳಿಂದ ಪರೀಕ್ಷಾ ಸುಧಾರಣೆಗೆ ಮಾಡಿದ ಇದೀಗ ಪ್ರಯತ್ನ ಫಲ ನೀಡಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಕಿತ್ತೂರು ಕರ್ನಾಟಕದ ಜಿಲ್ಲೆಗಳಾದ ಬೆಳಗಾವಿ, ಬಾಗಲಕೋಟೆ, ವಿಜಯಪುರ, ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಫಲಿತಾಂಶದ ಗ್ರಾಫ್ ಗಗನಕ್ಕೆ ಏರಿದೆ. ಈ ಯಶಸ್ಸಿನ ಹಿಂದೆ ಶಿಕ್ಷಣ ಇಲಾಖೆ 29 ಅಂಶಗಳ ಯೋಜನೆಗಳಿವೆ ಎಂದರು.

ಪರೀಕ್ಷೆ ಬರೆದ 2,20,859 ಮಕ್ಕಳ ಪೈಕಿ 2,10,630 ಮಕ್ಕಳು ಪಾಸಾಗಿದ್ದು, 10,630 ಮಕ್ಕಳು ಫೇಲಾಗಿದ್ದು, ಶೇ.95.71ರಷ್ಟು ಫಲಿತಾಂಶ ದಾಖಲಾಗಿದೆ. ಬೆಳಗಾವಿ ವಿಭಾಗದಲ್ಲಿ ಕಾರವಾರ ಪ್ರಥಮ, ಚಿಕ್ಕೋಡಿ ಕೊನೆ ಸ್ಥಾನ ಪಡೆದಿದ್ದಾಗಿ ತಿಳಿಸಿದರು.

ಐತಿಹಾಸಿಕ ದಾಖಲೆ: ಇದು ಕೇವಲ ಅಂಕಿ-ಅಂಶವಲ್ಲ, ಬದಲಿಗೆ ನಮ್ಮ ಶಿಕ್ಷಕರ, ಅಧಿಕಾರಿಗಳ ಕಠಿಣ ಪರಿಶ್ರಮ ಮತ್ತು ವಿದ್ಯಾರ್ಥಿಗಳ ದೃಢ ಸಂಕಲ್ಪದ ಫಲ. ಕಿತ್ತೂರು ಕರ್ನಾಟಕದ ಶೈಕ್ಷಣಿಕ ಇತಿಹಾಸದಲ್ಲಿ ಇದೊಂದು ದಾಖಲೆಯ ಸಾಧನೆ ಎಂದು ಡಾ. ಈಶ್ವರ ಹೇಳಿದರು.

ಮಿಷನ್-40 ಪ್ಲಸ್: ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳ ಮಾರ್ಗದರ್ಶನದ ಮಿಷನ್ ಮಿಷನ್ -40 ಪ್ಲಸ್ ನೀಲನಕ್ಷೆ ಯೋಜನೆ ರೂಪಿಸಿತ್ತು. ಇದು ಕಡಿಮೆ ಅಂಕ ಪಡೆಯುವ ವಿದ್ಯಾರ್ಥಿಗಳು ಗುರುತಿಸಿ ಅವರಿಗೆ ತರಬೇತಿ ನೀಡಿ ಆತ್ಮವಿಶ್ವಾಸ ತುಂಬಿದ್ದಾಗಿ ಹೇಳಿದರು.

ಪರಿಷ್ಕೃತ ಬೋಧನಾ ಕ್ರಮ: ಶಿಕ್ಷಕರಿಗೆ ಮಾದರಿ ಪ್ರಶ್ನೆಪತ್ರಿಕೆಗಳ ನಿರಂತರ ಅಭ್ಯಾಸದ ಜೊತೆಗೆ ಡಿಸೆಂಬರ್ ಅಂತ್ಯದೊಳಗೆ ಪಠ್ಯಕ್ರಮ ಮುಗಿಸಲು ಸೂಚಿಸಿತ್ತು. ಅಲ್ಲದೇ, ವಿದ್ಯಾರ್ಥಿಗಳಲ್ಲಿ ಪರೀಕ್ಷಾ ಭಯ ನಿವಾರಿಸಿದ್ದು, ಕೂಡ ಹೆಚ್ಚಿನ ಫಲಿತಾಂಶ ಬರುವಲ್ಲಿ ನೆರವಾಗಿದೆ ಎಂದರು.

ಸಿಬ್ಬಂದಿಗೆ ಅಭಿನಂದನೆ: ಈ ಬಾರಿಯೂ ಫಲಿತಾಂಶದಲ್ಲಿ ಬಾಲಕಿಯರು ಹಾಗೂ ನಗರ ಪ್ರದೇಶಕ್ಕಿಂತಲೂ ಗ್ರಾಮೀಣ ಭಾಗದ ವಿದ್ಯಾರ್ಥಿಗಳೇ ಮೇಲುಗೈ ಸಾಧಿಸಿರುವುದು ಗಮನಾರ್ಹ. ಈ ಅದ್ಭುತ ಸಾಧನೆಗೆ ಕಾರಣರಾದ ಇಲಾಖೆ ಅಧಿಕಾರಿಗಳು, ಶಿಕ್ಷಕರಿಗೆ ಅಭಿನಂದನೆ ಸಲ್ಲಿಸಿದರು.

ಜಿಲ್ಲೆಗಳು	ಫಲಿತಾಂಶ	100ರಷ್ಟುಸಾಧಕ ಶಾಲೆ
ಕಾರವಾರ	ಶೇ.98.09	134
ಶಿರಸಿ	ಶೇ.97.21	105
ಹಾವೇರಿ	ಶೇ.96.87	49
ಧಾರವಾಡ	ಶೇ.95.59	175
ಬಾಗಲಕೋಟೆ	ಶೇ.95.42	176
ಗದಗ	ಶೇ.95.24	125
ಬೆಳಗಾವಿ	ಶೇ.94.75	159
ವಿಜಯಪುರ	ಶೇ.94.16	220
ಚಿಕ್ಕೋಡಿ	ಶೇ.94.04	180
ಒಟ್ಟು-9	ಶೇ.95.71	1,523

> ಈ ಸಾಧನೆ ಸ್ಫೂರ್ತಿ ಪಡೆದ ಶಿಕ್ಷಣ ಇಲಾಖೆ, ಮುಂದಿನ ವರ್ಷವೂ ಇದೇ ವೇಗ ಕಾಯ್ದುಕೊಳ್ಳುವ ಜೊತೆ ಗುಣಾತ್ಮಕ ಶಿಕ್ಷಣದಲ್ಲಿ ಕಿತ್ತೂರು ಕರ್ನಾಟಕ ರಾಜ್ಯದಲ್ಲಿ ಪ್ರಥಮ ಸ್ಥಾನಕ್ಕೇರಲು ಸನ್ನದ್ಧವಾಗಿದೆ. ಅಲ್ಲದೇ ಈ ಸಾಧನೆಗೈದ ವಿದ್ಯಾರ್ಥಿಗಳಿಗೆ ಅಭಿನಂದನೆಗಳು.
>
> ■ ಡಾ.ಈಶ್ವರ ಉಳ್ಳಾಗಡ್ಡಿ, ಆಯುಕ್ತರು ಶಿಕ್ಷಣ ಇಲಾಖೆ ಬೆಳಗಾವಿ ಪ್ರಾದೇಶಿಕ ಕಚೇರಿ



ಹುಬ್ಬಳ್ಳಿ: ನಗರದಲ್ಲಿ ಶುಕ್ರವಾರ ರಾತ್ರಿ ಸಿಡಿಲು ಹಾಗೂ ಮಿಂಚುಕ ಕಂಡು ಬಂದ ದೃಶ್ಯ

ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ಪ್ರಾರ್ಥನಾಗೆ ಪೋನ್ ಕರೆ

ಶುಭ ಕೋರಿದ ಸಚಿವ ಜಾರಕಿಹೊಳಿ

ಬೆಳಗಾವಿ: ಗ್ರಾಮೀಣ ಭಾಗದ ಸರ್ಕಾರಿ ಶಾಲೆಯಲ್ಲಿ ಓದಿ ಇಡೀ ರಾಜ್ಯವೇ ಮೆಚ್ಚುವಂತಹ ಸಾಧನೆ ಮಾಡಿದ ಪ್ರಾರ್ಥನಾ ಅವರ ಶ್ರಮ, ಪೋಷಕರ ಬೆಂಬಲ ಮತ್ತು ಶಿಕ್ಷಕರ ಮಾರ್ಗದರ್ಶನ ಎಲ್ಲರಿಗೂ ಮಾದರಿ.



ಅವರ ಮುಂದಿನ ಭವಿಷ್ಯ ಉಜ್ವಲವಾಗಿರಲಿ ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಅವರು ಹಾರೈಸಿದ್ದಾರೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 625 ಅಂಕಗಳನ್ನು ಪಡೆಯುವ ಮೂಲಕ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ಪ್ರಾರ್ಥನಾ ನಾಗಪ್ಪ ಬಿರಾದರ ಪಾಟೀಲ್ ಅವರಿಗೆ ದೂರವಾಣಿ ಮೂಲಕ ಕರೆ ಮಾಡಿ ಅಭಿನಂದಿಸಿದ್ದು, ವಿದ್ಯಾರ್ಥಿನಿಯ ಉತ್ಸಾಹವನ್ನು ಇನ್ನಷ್ಟು ಹೆಚ್ಚಿಸಿದೆ.

ಕುಮಾರಿ ಪ್ರಾರ್ಥನಾ ನಾಗಪ್ಪ ಬಿರಾದರ ಪಾಟೀಲ ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ ಕಟಗೇರಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡಿ, ಎಸ್‌ಎಸ್‌ಎಲ್‌ಸಿ (ಖಖಔಇ) ಪರೀಕ್ಷೆಯಲ್ಲಿ 625ಕ್ಕೆ 625 ಅಂಕಗಳನ್ನು ಪಡೆಯುವ ಮೂಲಕ ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸಿರುವುದು ನಿಜಕ್ಕೂ ಅದ್ಭುತ ಸಾಧನೆ. ಈ ಸಾಧನೆ ಇತರೆ ವಿದ್ಯಾರ್ಥಿಗಳಿಗೂ ಸ್ಫೂರ್ತಿಯಾಗಿದೆ ಎಂದು ಹಾರೈಸಿ, ಶುಭ ಕೋರಿದ್ದಾರೆ.

ಸಾಮಾಜಿಕ ನ್ಯಾಯ, ರಾಷ್ಟ್ರೀಯತೆಯ ಅಗತ್ಯತೆ ಪ್ರತಿಪಾದಿಸಿದ್ದ ಡಾ. ಅಂಬೇಡ್ಕರ್

ಅಂಕೋಲಾ :ಸ್ವಾತಂತ್ರ್ಯ ಸೇನಾನಿ ದಿವಂಗತ ಮಾಣಿ ನಾಯಕ ಅವರ ಸ್ಮರಣಾರ್ಥ 19 ನೇ ಜ್ಞಾನಸತ್ರ ಕಾರ್ಯಕ್ರಮ ವಕೀಲ ನಾಗರಾಜ ನಾಯಕ ಅವರ ನೇತೃತ್ವದಲ್ಲಿ ಮಾಣಿ ನಾಯಕರ ಮನೆಯಂಗಳದಲ್ಲಿ ನಡೆಯಿತು.

ಮಾಜಿ ಶಿಕ್ಷಣ ಸಚಿವ ಎನ್.ಮಹೇಶ ಕಾರ್ಯಕ್ರಮ ಉದ್ಘಾಟಿಸಿ ಅಂಬೇಡ್ಕರ್ ಮತ್ತು ರಾಷ್ಟ್ರೀಯತೆ ಕುರಿತಂತೆ ಉಪನ್ಯಾಸ ನೀಡಿದರು.

ಅಂಬೇಡ್ಕರ್ ಅವರು ದನಿ ಇಲ್ಲದವರ ಧ್ವನಿಯಾಗಲು ಮೂಕನಾಯಕ ಪತ್ರಿಕೆ ಆರಂಭಿಸಿ ಅವರ ಕಷ್ಟಗಳನ್ನು ಸರ್ಕಾರದ ಗಮನಸೆಳೆಯುವ ಕಾರ್ಯ ಮಾಡಿದ್ದರು, ನಮ್ಮ ದೇಶದ ಸಾಮಾಜಿಕ ವ್ಯವಸ್ಥೆಯಲ್ಲಿ ಬೇರೆ ಬೇರೆ ರೀತಿಯಲ್ಲಿ ಬಹಿಷ್ಕಾರಕ್ಕೆ ಒಳಗಾದ ಜನರ ಏಳಿಗೆಗೆ ಸತತ ಪ್ರಯತ್ನ ನಡೆಸಿದ ಅವರು ಸಹೋದರತೆ ಸಾಮಾಜಿಕ ನ್ಯಾಯದ ರಾಷ್ಟ್ರೀಯತೆಯ ಅಗತ್ಯತೆಯನ್ನು ಪ್ರತಿಪಾದಿಸಿದ್ದರು ಎಂದರು.

ಸಂಘಟಕ ನಾಗರಾಜ ನಾಯಕ ಮಾತನಾಡಿ, ಬಾಸಗೋಡ ಸುತ್ತ ಮುತ್ತಲಿನ ಪರಿಸರ ಸ್ವಾತಂತ್ರ್ಯ ಹೋರಾಟದ ಪುಣ್ಯಭೂಮಿಯಾಗಿದ್ದು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿ ಸರ್ವಸ್ವ ತ್ಯಾಗ ಮಾಡಿದ ವೀರ ಯೋಧರಿಗೆ ಗೌರವ ಸಲ್ಲಿಸಲು ಜ್ಞಾನಸತ್ರ ನಡೆಸಲಾಗುತ್ತಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಚಿಂತಕ ವಾದಿರಾಜ್ ಮಾತನಾಡಿ ಸ್ವಾತಂತ್ರ್ಯದ 75 ವರ್ಷಗಳು ಕಳೆದರೂ ಗ್ರಾಮೀಣ ಭಾಗಗಳ ಜನರು ಸೌಲಭ್ಯವಂಚಿತರಾಗಿ ಸ್ವಾತಂತ್ರ್ಯದ ಫಲ ಪಡೆಯಲು ಸಾಧ್ಯವಾಗದಿರುವುದು ಬೇಸರದ ಸಂಗತಿ



ಎಂದರು.

ವಿಶ್ರಾಂತ ಪ್ರಾಚಾರ್ಯ ಗೌತಮ ಮನೋಜೆ ಮಾತನಾಡಿದರು.

ನಾಗರಾಜ ನಾಯಕ ಅವರ ತಂದೆ ವೆಂಕಣ್ಣ ನಾಯಕ ಉಪಸ್ಥಿತರಿದ್ದರು.

ಯಕ್ಷಗಾನ ಭಾಗವತ ಅನಂದು ಅಂಕೋಲಾ ಅವರ ಗಣೇಶ ಸ್ತುತಿಯೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ ನಾಗರಾಜ ನಾಯಕ ಸ್ವಾಗತಿಸಿದರು, ಬಿಂದೇಶ ನಾಯಕ, ಜಯಪ್ರಕಾಶ ನಾಯಕ ಸಹಕರಿಸಿದರು, ರಾಜೇಶ ನಾಯಕ ಕಾರ್ಯಕ್ರಮ ನಿರ್ವಹಿಸಿದರು. ಅಜಯ ಸಾಹುಕಾರ ವಂದಿಸಿದರು.


ವಿವೇಕ ಸುಳ್ಳನವರ ರಾಜ್ಯಕ್ಕೆ ಎರಡನೇ ರ್‍ಯಾಂಕ್

ಮೂಡಲಗಿ: ಪಟ್ಟಣದ ಚೈತನ್ಯ ಆಶ್ರಮ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿ ವಿವೇಕ ಹಾಲಪ್ಪ ಸುಳ್ಳನವರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 624 ಅಂಕಪಡೆದು ರಾಜ್ಯಕ್ಕೆ ದ್ವಿತೀಯ ಸ್ಥಾನ, ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಗೆ ದ್ವಿತೀಯ ಹಾಗೂ ಮೂಡಲಗಿ ವಲಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾನೆ.

ಸಮೀಪದ ರಾಯಬಾಗ ತಾಲೂಕಿನ ಕಂಕಣವಾಡಿ ಗ್ರಾಮದ ನಿವಾಸಿಯಾಗಿರುವ ವಿವೇಕ ಅವರ ತಂದೆ ಹಾಲಪ್ಪ ಕೂಡ ಮೂಡಲಗಿ ತಾಲೂಕಿನ ಶಿವಾಪುರ ಸರ್ಕಾರಿ ಪ್ರೌಢಶಾಲೆಯಲ್ಲಿ ಕನ್ನಡ ವಿಷಯ ಶಿಕ್ಷಕರಾಗಿ 5 ವರ್ಷದಿಂದ ಸೇವೆ ಸಲ್ಲಿಸುತ್ತಿದ್ದಾರೆ. ತಾಯಿ ಶಾರದಾ ಗೃಹಿಣಿಯಾಗಿದ್ದಾರೆ.

ವರ್ಷವಿಡೀ ವಿಷಯಗಳನ್ನು ಅರ್ಥ ಮಾಡಿಕೊಂಡು ಓದುವುದು ಮುಖ್ಯ,ಸಮಯ ನಿರ್ವಹಣೆ ಅತ್ಯಗತ್ಯ. ಓದು, ಆಟ ಮತ್ತು ವಿಶ್ರಾಂತಿಗೆ ಸಮಾನ ಆದ್ಯತೆ ನೀಡಿದ ವಿವೇಕಗೆ ಡಾಕ್ಟರ್ ಆಗುವ ಕನಸು.

ಶಾಲೆಯ ಅವಧಿಯಲ್ಲಿ ಪಾಠಗಳನ್ನು ಮನನ ಮಾಡುತ್ತಿದ್ದೆ. ಮನೆಯಲ್ಲಿ 4 ಗಂಟೆ ಅಭ್ಯಾಸ ಮಾಡುತ್ತಿದ್ದೆ. ಕಳೆದ ವರ್ಷ ನಮ್ಮ ಶಾಲೆಯ ವಿದ್ಯಾರ್ಥಿನಿಯೊಬ್ಬರು ಗಳಿಸಿದ ಅಂಕಗಳಿಗಿಂತ



ಹೆಚ್ಚು ಅಂಕ ಗಳಿಸಬೇಕು ಎಂಬುದು ನನ್ನ ಗುರಿಯಾಗಿತ್ತು. ಎಲ್ಲರ ಸಹಕಾರದಿಂದ ಅದು ಈಡೇರಿದೆ. ಕ್ರಿಕೆಟ್ ನನ್ನ ಹವ್ಯಾಸವಾಗಿದ್ದು, ಭವಿಷ್ಯದಲ್ಲಿ ಎಂಬಿಬಿಎಸ್ ಮುಗಿಸಿ ವೈದ್ಯನಾಗುವ ಕನಸಿದೆ ಎಂದು ತಿಳಿಸಿದ್ದಾರೆ.

ಚೈತನ್ಯ ಆಶ್ರಮ ಆಂಗ್ಲ ಮಾಧ್ಯಮ ಶಾಲೆಯ ಶಿಕ್ಷಕರು ಮತ್ತು ಪೋಷಕರ ಬೆಂಬಲ ಉತ್ತಮ ಶಿಕ್ಷಣ ಸಂಸ್ಥೆ ಸಮರ್ಪಿತ ಶಿಕ್ಷಕರ ಮತ್ತು ಪೋಷಕರ ಪ್ರೋತ್ಸಾಹ ಸಾಧಕರಿಗೆ ಬಲ ತುಂಬುತ್ತದೆ. ಪ್ರತಿಭೆಗಳಿಗೆ ಸನ್ಮಾನ ಅಮೋಘ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಗುರುತಿಸಿ, ಮನೆಮನೆಗೆ ತೆರಳಿ ಸನ್ಮಾನಿಸುವ ಸಂಸ್ಕೃತಿ ಈ ಶಾಲೆಯಲ್ಲಿ ಮೊದಲಿನಿದ್ದಲು ನಡೆದುಕೊಂಡು ಬಂದಿದೆ.

ಸಾಧಕ ವಿದ್ಯಾರ್ಥಿ ವಿವೇಕ ಸುಳ್ಳನವರಗೆ ಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿಗಳು, ಆಡಳಿತ ಮಂಡಳಿ ಸದಸ್ಯರು ಸತ್ಕರಿಸಿ, ಅಭಿನಂದಿಸಿದರು. ವಿದ್ಯಾರ್ಥಿ ಸಾಧನೆಗೆ ಸಂಸ್ಥೆಯಎಲ್ಲರೂ ಹರ್ಷ ವ್ಯಕ್ತಪಡಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಇಂದು ವಿದ್ಯುತ್ ವ್ಯತ್ಯಯ

ಕುಮಟಾ: ಉಪವಿಭಾಗದ ಗ್ರಾಮೀಣ ಶಾಖೆಯ 11ಕೆ.ವಿ ಬಾಡಾ ಮತ್ತು 11ಕೆ.ವಿ ಮಾಸೂರ ಮಾರ್ಗದಲ್ಲಿ 11ಕೆ.ವಿ ಮಾರ್ಗದ ವಾಹಕ ಬದಲಾವಣೆ ಕಾಮಗಾರಿಯಿರುವದರಿಂದ ಏ.25ರಂದು ಬೆಳಗ್ಗೆ 10ರಿಂದ ಸಂಜೆ 5ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆಯಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರು ಹೆಸ್ಕಾಂ, ಕುಮಟಾ ಇವರು ಪ್ರಕಟಣೆಯಲ್ಲಿ ತಿಳಿಸಿದಾರೆ.

ಶೇ.100ರಷ್ಟು ಫಲಿತಾಂಶ ದಾಖಲು



ಕುಮಟಾ: ಪ್ರಸಕ್ತ ಸಾಲಿನ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ಬಾಡದ ಜನತಾ ವಿದ್ಯಾಲಯದ ವಿದ್ಯಾರ್ಥಿಗಳು ಶೇ.100ರಷ್ಟು ಫಲಿತಾಂಶ ದಾಖಲಿಸಿ ಸಾಧನೆಗೈದಿದ್ದಾರೆ.ಶಾಲೆಯ ವಿದ್ಯಾರ್ಥಿನಿ ವೇದಿಕಾ ವಿಷ್ಣು ನಾಯ್ಕ ಶೇ. 94.56ರಷ್ಟು ಅಂಕ ಪಡೆದು ಪ್ರಥಮ, ಕೌಶಿಕ್ ಗೋವಿಂದ ವೈದ್ಯ ಶೇ. 90.24ರಷ್ಟು ಅಂಕ ಪಡೆದು ದ್ವಿತೀಯ ಸ್ಥಾನ ಪಡೆದಿದ್ದಾರೆ. ಕೋಮಲಾ ಬಾಬು ನಾಯ್ಕ ಹಾಗೂ ಮನೀಷಾ ಮಹದೇವ ನಾಯ್ಕ ಅವರು ತಲಾ ಶೇ. 90.08ರಷ್ಟು ಅಂಕ ಪಡೆದು ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ. ಈ ವರ್ಷ ಪರೀಕ್ಷೆಗೆ ಕುಳಿತಿದ್ದ 51 ವಿದ್ಯಾರ್ಥಿಗಳಲ್ಲಿ 7 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ, 35 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ಹಾಗೂ 7 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಶಾಲೆಯ ಗುಣಾತ್ಮಕ ಶ್ರೇಣಿ 85.09 ಆಗಿದ್ದು, ಸಂಸ್ಥೆ ಎ ಗ್ರೇಡ್ ಪಡೆದುಕೊಂಡಿದೆ.ವಿದ್ಯಾರ್ಥಿಗಳ ಈ ಸಾಧನೆಗೆ ಶಾಲಾ ಆಡಳಿತ ಮಂಡಳಿ, ಶಾಲಾಭಿವೃದ್ಧಿ ಸಮಿತಿ, ಮುಖ್ಯಾಧ್ಯಾಪಕರು, ಶಿಕ್ಷಕರು ಅಭಿನಂದನೆ ಸಲ್ಲಿಸಿದ್ದಾರೆ.

ಶ್ರೇಯಾ ಶೇಟ ರಾಜ್ಯಕ್ಕೆ 9ನೇ ಸ್ಥಾನ



ಕುಮಟಾ: ಕೆನರಾ ಎಜ್ಯುಕೇಶನ ಸೊಸೈಟಿಯ ಕುಮಟಾ ಗಿಬ್ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಶೇ. 100ರಷ್ಟು ಸಾಧನೆ ಮಾಡಿದ್ದಾರೆ. ಪರೀಕ್ಷೆಗೆ ಕುಳಿತ 45 ವಿದ್ಯಾರ್ಥಿಗಳಲ್ಲಿ 45 ವಿದ್ಯಾರ್ಥಿಗಳು ತೇರ್ಗಡೆ ಹೊಂದಿ 100 ಶೇ. ಫಲಿತಾಂಶವಾದರೆ ಶಾಲೆಯ ಗುಣಾತ್ಮಕ ಫಲಿತಾಂಶ ಶೇ 91.08. ಗ್ರೇಡ್ ಬಂದಿದೆ. ಡಿಸ್ಟಿಂಕ್ಷನಲ್ಲಿ 19, ಪ್ರಥಮ ದರ್ಜೆಯಲ್ಲಿ 23. ದ್ವಿತೀಯ ದರ್ಜೆಯಲ್ಲಿ 03. ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ.ಎ+12, ಎ 18, ಬಿ+ 05, ಬಿ 07, ಸಿ+03, ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ ಶ್ರೇಯಾ ದಿನೇಶ ಶೇಟ 625ಕ್ಕೆ 617 ಅಂಕ 98.72% ದೊಂದಿಗೆ ರಾಜ್ಯಕ್ಕೆ 9 ನೇ ಸ್ಥಾನ ಹಾಗೂ ಶಾಲೆಗೆ ಪ್ರಥಮ ಸ್ಥಾನ ಪಡೆದಿರುತ್ತಾಳೆ, ಎಚ್.ಕೆ.ಶ್ರಾವ್ಯ 625 ಕ್ಕೆ612 ಅಂಕ 97.92% ದೊಂದಿಗೆ ದ್ವಿತೀಯ ಸ್ಥಾನ ಶ್ರಾವಣಿ ಪಾದ ಹರಿಕಂತ್ರ 625ಕ್ಕೆ 602 ಅಂಕ 96.32% ದೊಂದಿಗೆ ತೃತೀಯ ಸ್ಥಾನ ಯುಕ್ತಿ ನಾಗರಾಜ ಶಾನಭಾಗ 625ಕ್ಕೆ 601 ಅಂಕ 96.16% ದೊಂದಿಗೆ ಚತುರ್ಥ ಸ್ಥಾನ ಸುಬ್ರಮಣ್ಯ ವಿಠೋಬ ಚೋಡನ್ಕರ 625ಕ್ಕೆ 581 ಅಂಕ 92.96% ದೊಂದಿಗೆ ಪಂಚಮ ಸ್ಥಾನ ಪಡೆದಿರುತ್ತಾನೆ. ಸ್ಥಾನ ಪಡೆದ ವಿದ್ಯಾರ್ಥಿಗಳನ್ನು, ಶಾಲೆಯ ಮುಖ್ಯಾಧ್ಯಾಪಕರು ಹಾಗೂ ಎಲ್ಲಾ ಶಿಕ್ಷಕ-ಶಿಕ್ಷಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	60699	68919
ಬಿಳಿಗೋಟು	23899	39169
ಕೆಂಪುಗೋಟು	23699	40199
ಬೆಟ್ಟೆ	40461	52669
ರಾಶಿ	50696	53861
ಚಾಲಿ	44099	48611
ಬಿ.ಕಾಳುಮೆಣಸು	90199	90199

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	58179	61119
ರಾಶಿ	48921	57565
ಬೆಟ್ಟೆ	38969	52215
ಕೆಂಪುಗೋಟು	20600	38599
ಬಿಳಿಗೋಟು	16099	41399
ಚಾಲಿ	37900	49009
ಕೋಕಾ	16509	34169
ಕಾಳುಮೆಣಸು	57000	68500



ಶಿರಸಿ: ನಗರದ ಕೆ.ಎಚ್.ಬಿ ಕಾಲೋನಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಲಾಗಿದ್ದ ಬೃಹತ್ ಉಚಿತ ಆಯುರ್ವೇದಿಕ್ ಆರೋಗ್ಯ ತಪಾಸಣಾ ಶಿಬಿರವು ಅಭೂತಪೂರ್ವ ಯಶಸ್ಸು ಕಂಡಿತು. ಶಿಬಿರವನ್ನು ಶಾಸಕ ಭೀಮಣ್ಣ ಟಿ. ನಾಯ್ಕ, ಉದ್ಘಾಟಿಸಿದರು. ಸ್ಕೋಡ್‌ವೇಸ್ ಮಹಿಳಾ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷೆ ಸರಸ್ವತಿ ಎನ್.ರವಿ ಅಧ್ಯಕ್ಷತೆ ವಹಿಸಿದ್ದರು. ಗೌರವಾಧ್ಯಕ್ಷರಾಗಿ ಎಸ್. ಎನ್. ಹೆಗಡೆ ಉಪಸ್ಥಿತರಿದ್ದರು.

ಪರಿಸರ ರಕ್ಷಣೆ ನಮ್ಮೆಲರ ಹೊಣೆ

ಸಿದ್ದಾಪುರ: ಗಿಡಗಳನ್ನು ನೆಟ್ಟು ಪೋಷಿಸಬೇಕಾದದ್ದು ನಮ್ಮ ಕರ್ತವ್ಯ. ತನ್ಮೂಲಕ ಪರಿಸರದ ಉಳಿವು ಸಾಧ್ಯ. ಮಳೆ ಬೆಳೆ ಕಾಲಕಾಲಕ್ಕೆ ಆಗಲು ಪರಿಸರ ಉಳಿದರೆ ಮಾತ್ರ ಸಾಧ್ಯ. ಪರಿಸರದ ಮೇಲೆ ಮನುಷ್ಯನ ಆಕ್ರಮಣ ಹೆಚ್ಚಿನ ಆಘಾತವನ್ನು ನೀಡುತ್ತದೆ ಎಂದು ಲಯನ್ಸ್ ಸಂಸ್ಥೆಯ ಜಿಲ್ಲಾ ಗವರ್ನರ್ ಡಾ. ರವಿ ಹೆಗಡೆ ಹೂವಿನಮನೆ ಹೇಳಿದರು.

ಸಂಪಗೋಡು ನರ್ಸರಿ ಆಡಿಯಲ್ಲಿ ಅರಣ್ಯ ಇಲಾಖೆ ಮತ್ತು ಲಯನ್ಸ್ ಕ್ಲಬ್ಬಿನ ಪರಿಸರ ರಕ್ಷಣಾ ಕಾರ್ಯಕ್ರಮದಲ್ಲಿ ಅರಣ್ಯ ವೀಕ್ಷಕ ಸುರೇಶ ಲಕ್ಷ್ಣ ನಾಯ್ಕ ಅವರನ್ನು ಲಯನ್ಸ್ ಕ್ಲಬ್ ಸಿದ್ದಾಪುರದ ವತಿಯಿಂದ ಸನ್ಮಾನಿಸಿ ಅವರು ಮಾತನಾಡಿದರು.ಲಯನ್ಸ್ ಕ್ಲಬ್‌ನ ವತಿಯಿಂದ ಜೀವಾಮೃತ ಸಿದ್ದಪಡಿಸುವ ಎರಡು ಡ್ರಮ್‌ಗಳನ್ನು ಹಾಗೂ ನೀರು ಹರಿಸುವ ಪೈಪಗಳನ್ನು ನೀಡಲಾಯಿತು. ಸಹಾಯಕ ವಲಯ ಅರಣ್ಯಾಧಿಕಾರಿ ಬುಡದಯ್ಯ ಅಪ್ಪಿನಬೈಲು ಅವರು ಇಲಾಖೆಯ ಪರವಾಗಿ ಜೀವಾಮೃತ ಡ್ರಮ್ ಮತ್ತು ಪೈಪಗಳನ್ನು ಸ್ವೀಕರಿಸಿದರು. ಸಾಹಿತಿ ಜಿ.ಜಿ.ಹೆಗಡೆ ಬಾಳಗೋಡ, ಸುರೇಶ ಲಕ್ಷ್ಣ ನಾಯ್ಕ, ಲಯನ್ಸ್ ಕ್ಲಬ್ ಅಧ್ಯಕ್ಷ ಲಯನ್ ರಾಘವೇಂದ್ರ ಆರ್. ಭಟ್ಟ ಸ್ವಸ್ತಿಕ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಅರಣ್ಯ ಇಲಾಖೆಗೆ ಸಾರ್ವಜನಿಕರ, ಸಂಘ-ಸಂಸ್ಥೆಗಳ ಸಹಕಾರ ಅಗತ್ಯ, ಗಿಡಗಳನ್ನು ಬೆಳೆಸುವಲ್ಲಿ, ಪರಿಸರದ ಎಲ್ಲಾ ಅಂಶಗಳನ್ನು ರಕ್ಷಿಸುವಲ್ಲಿ ಸಾರ್ವಜನಿಕರ ಪಾತ್ರ ಬಹುಮಹತ್ವದ್ದು ಎಂದು ಹೇಳಿದರು. ಅರಣ್ಯ ಇಲಾಖೆಯ ಸಿಬ್ಬಂದಿ ಎನ್.ಬಿ.ಸುರೇಶ ಉಪಸ್ಥಿತರಿದ್ದರು. ಲಯನ್ಸ್ ಕ್ಲಬ್ ಕಾರ್ಯದರ್ಶಿ ಆಕಾಶ ಹೆಗಡೆ ಗುಂಜಗೋಡ ಸ್ವಾಗತಿಸಿದರು, ಲಯನ್ಸ್ ಕ್ಲಬ್ ಕೋಶಾಧ್ಯಕ್ಷ ಇಂದುಧರ ಪಾಟೀಲ ವಂದಿಸಿದರು.



ಶಿರಸಿ : ಹುಳಗೋಳದ ಸಿದ್ಧಿವಿನಾಯಕ ದೇವಸ್ಥಾನದ ವಾರ್ಷಿಕ ದೇವಕಾರ್ಯದ ನಿಮಿತ್ತ ಶಬರ ಸಂಸ್ಥೆ ಸೋಂದಾ ಇವರಿಂದ ಕನಕಾಂಗಿ ಕಲ್ಯಾಣ ಯಕ್ಷಗಾನ ಪ್ರದರ್ಶನ ಯಶಸ್ವಿಯಾಗಿ ನಡೆಯಿತು. ಹಿಮ್ಮೇಳದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕೇಶವ ಹೆಗಡೆ ಕೊಳಗಿ. ಮಂಜುನಾಥ ಗುಡ್ಡೆದಿಂಬ, ಪ್ರಸನ್ನ ಹೆಗಡೆ ಹೆಗ್ಗಾರ, ಕುಮಾರ್ ಶ್ರೀವತ್ಸ ಗುಡ್ಡೆ ದಿಂಬು ಭಾಗವಹಿಸಿದ್ದರು.

ರಾಷ್ಟ್ರೀಯ ಹೆದ್ದಾರಿಯಲ್ಲಿ ಉರುಳುತ್ತಿರುವ ಟ್ಯಾಂಕರ್ ಲಾರಿಗಳು
ಸಂಚಾರ ಸುರಕ್ಷತೆಯ ಚಿಂತನೆ ಅವಶ್ಯ

ನಾಗರಾಜ ಶೆಟ್ಟಿ

ದಿಗಂತ ವಿಶೇಷ

ಅಂಕೋಲಾ: ಅಪಾಯಕಾರಿ ಅಡುಗೆ ಅನಿಲ, ಎಥೆನಾಲ್ ರಾಸಾಯನಿಕ ಉತ್ಪನ್ನಗಳು ತುಂಬಿರುವ ಟ್ಯಾಂಕರ್ ಲಾರಿಗಳು ಹುಬ್ಬಳ್ಳಿ ಅಂಕೋಲಾ ನಡುವಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ಪದೇ ಪದೇ ಉರುಳಿ ಬೀಳುವ ಮೂಲಕ ಆತಂಕ ಸೃಷ್ಟಿಸಿದ್ದು ರಾಷ್ಟ್ರೀಯ ಹೆದ್ದಾರಿಯಲ್ಲಿನ ಸಂಚಾರ ಸುರಕ್ಷತೆಯ ಕುರಿತಂತೆ ಚಿಂತನೆ ನಡೆಸುವಂತಾಗಿದೆ.

ಮೇಲಿಂದಮೇಲೆರಾಷ್ಟ್ರೀಯ ಹೆದ್ದಾರಿಯಲ್ಲಿ ಉರುಳಿ ಬೀಳುವ ಭಾರೀ ಅಪಾಯಕಾರಿ ಟ್ಯಾಂಕರುಗಳು ರಕ್ಷಣಾ ವ್ಯವಸ್ಥೆಗೆ ತಲೆಬಿಸಿಯಾಗಿ ಪರಿಣಮಿಸಿದ್ದು, ಪೊಲೀಸರು,ಅಗ್ನಿಶಾಮಕ ಮೊದಲಾದ ತಂಡಗಳು ಹಗಲು ರಾತ್ರಿಯೆನ್ನದೇ ಸುರಕ್ಷತಾ ವ್ಯವಸ್ಥೆಯಲ್ಲಿ ತೊಡಗಿಕೊಳ್ಳಬೇಕಾಗಿದ್ದು

ರಾಷ್ಟ್ರೀಯ ಹೆದ್ದಾರಿ 52 ಅಂಕೋಲಾ ಹುಬ್ಬಳ್ಳಿ ರಸ್ತೆಯಲ್ಲಿ ಸಂಚರಿಸುವ ವಾಹನಗಳು ಮತ್ತು ಪ್ರಯಾಣಿಕರು ತಾವು ತಲುಪುವ ಸ್ಥಳಗಳಿಗೆ ಸರಿಯಾದ ಸಮಯಕ್ಕೆ ತಲುಪುವ ಕುರಿತಂತೆ ಅನಿಶ್ಚಿತತೆಯಿಂದ ಪ್ರಯಾಣ ಆರಂಭಿಸುವಂತಾಗಿದೆ.

ರಾಷ್ಟ್ರೀಯ ಹೆದ್ದಾರಿ 52 ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೆ ಸಂಪರ್ಕ ಸಾಧಿಸುವ ಪ್ರಮುಖ ರಾಷ್ಟ್ರೀಯ ಹೆದ್ದಾರಿಯಾಗಿದ್ದು, ರಾಜ್ಯದ ದೃಷ್ಟಿಯಿಂದ ಉತ್ತರ ಕರ್ನಾಟಕ ಭಾಗಗಳಿಂದ ಕರಾವಳಿ ಜಿಲ್ಲೆಗಳಿಗೆ ಸಂಚಾರಕ್ಕೆ ರಾಷ್ಟ್ರೀಯ ಹೆದ್ದಾರಿ 66 ಕ್ಕೆ ಇದೇ ರಾಷ್ಟ್ರೀಯ ಹೆದ್ದಾರಿ ಸಂಪರ್ಕ ಕಲ್ಪಿಸುತ್ತದೆ ಅಲ್ಲದೇ ಗೋವಾ ಮತ್ತು ಮಹಾರಾಷ್ಟ ರಾಜ್ಯಗಳಿಗೆ ಮುಖ್ಯವಾಗಿ ಬಂದರು ಪ್ರದೇಶಗಳಿಗೆ ಈ ರಸ್ತೆ ಸಂಪರ್ಕ ಕಲ್ಪಿಸುವುದರಿಂದ ಪ್ರತಿದಿನ ಸಾವಿರಾರು ವಾಹನಗಳ ಓಡಾಟವಿದ್ದು ಎಲ್.ಪಿ.ಜಿ ಗ್ಯಾಸ್,ಪೆಟ್ರೋಲಿಯಂ ಉತ್ಪನ್ನಗಳು, ಎಥೆನಾಲ್ ಸೇರಿದಂತೆ ಶೀಘ್ರವಾಗಿ ಹೊತ್ತಿ ಉರಿಯುವಂತ ಉತ್ಪನ್ನಗಳನ್ನು ಹೊತ್ತು ಸಾಗುವ ಹಲವಾರು ಬೃಹತ್ ಟ್ಯಾಂಕರುಗಳು ಪ್ರತಿದಿನ ಓಡಾಡುತ್ತವೆ.

ಹುಬ್ಬಳ್ಳಿ ಅಂಕೋಲಾ ನಡುವಿನ ರಸ್ತೆ ಕಲಘಟಗಿಯ ನಂತರ ಯಲ್ಲಾಪುರ ಅಂಕೋಲಾ ವ್ಯಾಪ್ತಿಯಲ್ಲಿ ಅವೈಜ್ಞಾನಿಕ ತಿರುವು, ಘಟ್ಟ ಪ್ರದೇಶಗಳಿಂದ ಅಪಘಾತ ವಲಯಗಳಾಗಿ ಪರಿಣಮಿಸಿದ್ದು, ಇದರ ಜೊತೆಗೆ ಕೆಲವೊಂದು ರಸ್ತೆ ಸುರಕ್ಷತಾ ನಿಯಮಗಳನ್ನು ಗಾಳಿಗೆ ತೂರಿ ವಾಹನಗಳನ್ನು ಚಲಾಯಿಸುವುದು ಅಪಾಯಕಾರಿ ಟ್ಯಾಂಕರುಗಳು ಉರುಳಿ ಬೀಳುತ್ತಿದ್ದು ಸುತ್ತ ಮುತ್ತಲಿನ ಪರಿಸರದಲ್ಲಿ ದುರಂತದ ಭೀತಿ ಸೃಷ್ಟಿಸುತ್ತಿವೆ. ಅಂಕೋಲಾ ತಾಲೂಕಿನ ಕಂಚಿನಬಾಗಿಲ ಬಳಿ ಏಪ್ರಿಲ್ 16ರಂದು ಎಥೆನಾಲ್ ತುಂಬಿ ಸಾಗಿಸುತ್ತಿದ್ದ ಟ್ಯಾಂಕರ್ ಲಾರಿ ಪಲ್ಟಿಯಾಗಿ ಭಾರೀ ಪ್ರಮಾಣದಲ್ಲಿ

ಹೊತ್ತಿ ಉರಿದು ಸುತ್ತ ಮುತ್ತಲಿನ ಅರಣ್ಯ ಪ್ರದೇಶದ ಗಿಡ ಮರಗಳನ್ನೂ ಸುಟ್ಟು ಕರುಕಲಾಗಿಸಿದ ಘಟನೆ ನಡೆದು ಒಂದು ವಾರ ಸಹ ಆಗಿಲ್ಲ ಇದೀಗ ಯಲ್ಲಾಪುರ ಕಲಘಟಗಿ ನಡುವಿನ ತಂಬೂರು ಕ್ರಾಸ್ ಬಳಿ ಗ್ಯಾಸ್ ಟ್ಯಾಂಕರ್ ಪಲ್ಟಿಯಾಗಿ ಅನಿಲ ಸೋರಿಕೆ ಆಗುವ ಮೂಲಕ ಸ್ವಲ್ಪ ಅಜಾಗುರೂಕತೆಯಾದರೂ ಭಾರೀ ಅನಾಹುತದ ಆತಂಕಕ್ಕೆ ಕಾರಣವಾಗಿ ಹಲವು ಗಂಟೆಗಳ ಕಾಲ ಬದಲಿ ರಸ್ತೆ ಬಳಕೆಯ ಅನಿವಾರ್ಯತೆ ಎದುರಾಯಿತು.ಹುಬ್ಬಳ್ಳಿ ಅಂಕೋಲಾ ನಡುವೆ ರಾಷ್ಟ್ರೀಯ ಹೆದ್ದಾರಿ 52 ರಲ್ಲಿ ದುರಂತಗಳಿಗೆ ದಾರಿ ಮಾಡಿಕೊಡುತ್ತಿರುವ ಅಪಘಾತಗಳ ತಡೆಗೆ ಸೂಕ್ತ ಕ್ರಮ ಮತ್ತು ಮಾರ್ಗಸೂಚಿಗಳ ಅಗತ್ಯತೆ ಇದೆ ಎಂಬ ಅಭಿಪ್ರಾಯಗಳು ವ್ಯಕ್ತವಾಗಿವೆ.



ನಿಯಮ ಪಾಲಿಸಿ

ರಾಷ್ಟ್ರೀಯ ಹೆದ್ದಾರಿ 66 ಅಂಕೋಲಾ ಕುಮಟಾ ನಡುವಿನ ಬರ್ಗಿ ಬಳಿ 2015 ರಲ್ಲಿ ಅನಿಲ ಟ್ಯಾಂಕರ್ ಅಪಘಾತ ಸಂಭವಿಸಿ ಅನಿಲ ಸೋರಿಕೆಯಿಂದ ಬೆಂಕಿ ಹೊತ್ತಿಕೊಂಡು ಸುತ್ತ ಮುತ್ತಲಿನ ಜನವಸತಿ ಪ್ರದೇಶದ 12 ಜನರು ಮೃತ ಪಟ್ಟ ಘಟನೆ ಜಿಲ್ಲೆಯ ಘೋರ ದುರಂತವಾಗಿದ್ದು ಅದರ ನಂತರ ಅಪಾಯಕಾರಿ ಟ್ಯಾಂಕರುಗಳ ಓಡಾಟಕ್ಕೆ ಕೆಲವು ಮಾರ್ಗಸೂಚಿಗಳನ್ನು ಸೂಚಿಸಲಾಗಿತ್ತು ಕಂಪನಿಗಳು ಕೆಲವು ದಿನ ಅದನ್ನು ಪಾಲಿಸಿದಂತೆ ಮಾಡಿದರಾದರೂ ಜನ ಘಟನೆಯನ್ನು ಮರೆಯುತ್ತಿದ್ದಂತೆ ಟ್ಯಾಂಕರ್ ಲಾರಿಗಳ ನಿಯಮಗಳ ಪಾಲನೆಯೂ ನಿಂತು ಹೋದವು.

ಇಬ್ಬರು ಚಾಲಕರ ಸಾವು

ಅನೀಲ ಲಾರಿಗಳ ಜೊತೆಗೆ ಇದೀಗ ಎಥೆನಾಲ್ ರಾಸಾಯನಿಕ ತುಂಬಿ ಓಡುವ ಲಾರಿಗಳೂ ರಾಷ್ಟ್ರೀಯ ಹೆದ್ದಾರಿಯಲ್ಲಿ ಹೆಚ್ಚಿದ್ದು ಕಳೆದ 6 ತಿಂಗಳುಗಳಲ್ಲಿ ಯಲ್ಲಾಪುರ ಅಂಕೋಲಾ ನಡುವೆ 3 ಅಪಘಾತಗಳು ಸಂಭವಿಸಿದ್ದು, ಎರಡು ಅಪಘಾತಗಳಲ್ಲಿ ಟ್ಯಾಂಕರ್ ಸಂಪೂರ್ಣ ಸುಟ್ಟು ಹೋಗಿದ್ದು ಇಬ್ಬರು ಚಾಲಕರು ಮೃತ ಪಟ್ಟಿದ್ದಾರೆ.

ಮಹನೀಯರ ಜಯಂತಿ ಆಚರಣೆ

ಮುಂಡಗೋಡ: 8ನೇ ಶತಮಾನದಲ್ಲಿ ಶಂಕರಾಚಾರ್ಯರು ಮತ್ತು 12ನೇ ಶತಮಾನದಲ್ಲಿ ಬಸವಣ್ಣನವರು ದೇಶದಲ್ಲಿ ತಮ್ಮದೆ ಆದ ಛಾಪನ್ನು ಮೂಡಿಸಿ ಹೋದವರು ಎಂದು ತಹಶೀಲ್ದಾರ್ ಶಂಕರ ಗೌಡಿ ಹೇಳಿದರು.

ಇಲ್ಲಿನ ತಹಶೀಲ್ದಾರ್ ಕಚೇರಿಯ ಸಭಾಭವನದಲ್ಲಿ ತಾಲೂಕು ಆಡಳಿತ, ತಾಪಂ ಮತ್ತು ಪಪಂ ಆಶ್ರಯದಲ್ಲಿ ಬಸವ, ಶಂಕರಾಚಾರ್ಯ ಮತ್ತು ಭಗೀರಥರ ಜಯಂತ್ಯುತ್ಸವದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಭಗೀರಥ ಮಹರ್ಷಿಗಳು ತಮ್ಮ ಪೂರ್ವಜರಿಗೆ ಮುಕ್ತಿಯನ್ನು ಕೊಡಿಸಲು ತಮ್ಮ ಸತತ ಪ್ರಯತ್ನದಿಂದ ಕೈಲಾಸದಿಂದ ಗಂಗೆಯನ್ನು ಭೂಮಿಗೆ ಬರುವಂತೆ ಮಾಡಿದರು. ಶಂಕರಾಚಾರ್ಯರು ವೇದಗಳಿಗೆ ಹೊಸ ಭಾಷೆ ಬರೆಯುವ ಮೂಲಕ ಹೊಸ ಅರ್ಥವನ್ನು ಕೊಟ್ಟರು. ಅದ್ವೈತ ಸಿದ್ಧಾಂತಕ್ಕೆ ಹೊಸ ಕಾಯಕಲ್ಪ ನೀಡಿ ಪ್ರಚಾರ ಪ್ರತಿಪಾದನೆ ಮಾಡಿದರು. 12ನೇ ಶತಮಾನವನ್ನು ಸಂಕ್ರಮಣ ಕಾಲ ಎಂದು ಕರೆಯುತ್ತಾರೆ. ಸಾಮಾಜಿಕ ಅಸಮಾನತೆ, ಆರ್ಥಿಕ, ರಾಜಕೀಯ ಅಸಮಾನತೆ, ಮೂಢನಂಬಿಕೆ ಇವುಗಳನ್ನು ಹೋಗಲಾಡಿಸಲು ಜಗಜ್ಯೋತಿ ಬಸವಣ್ಣನವರು ಜನ್ಮ ತಾಳಿ ಬಂದರು ಎಂದರು. ತಾಪಂ ಇಒ ಟಿ.ವೈ.ದಾಸನಕೊಪ್ಪ ಮಾತನಾಡಿ, ಬಸವಣ್ಣನವರು ದೇವರನ್ನು ಹುಡುಕಲಿಲ್ಲ ಕಾಯಕವೇ ಕೈಲಾಸ ಎಂಬ ಅವರ ಮಾತಿನಂತೆ ನಾವು ನಮ್ಮ ಕೆಲಸದಲ್ಲಿ ಶ್ರದ್ಧೆ, ಭಕ್ತಿಯನ್ನು ತೋರಿದರೆ ಕೈಲಾಸ ಕಂಡಂತೆ. ಶಂಕರಾಚಾರ್ಯರು ಜೀವಾತ್ಮ, ಪರಮಾತ್ಮ ಎರಡೂ ಒಂದೇ ಎಂದವರು. ಭಗೀರಥರ ತಪಸ್ಸಿಗೆ ಹಲವಾರು ಅಡೆತಡೆಗಳು ಬಂದರೂ ಛಲದಿಂದ ಗಂಗೆಯನ್ನು ಭೂಮಿಗೆ ತಂದರು ಎಂದರು.

ಸಾಹಿತಿ ಚಿದಾನಂದ ಪಾಟೀಲ, ಸುರೇಶ ಕಲ್ಲೊಳ್ಳಿ ಉಪನ್ಯಾಸ ನೀಡಿದರು. ಮಂಜುನಾಥ ಪಾಟೀಲ ಮಾತನಾಡಿ, ಮಹಾ ಪುರುಷರು ಬಂದಿದ್ದು ಮಾನವರ ಏಳಿಗೆಗಾಗಿ ಮತ್ತು ಧರ್ಮ ರಕ್ಷಣೆಗಾಗಿ ಎಂದರು.

ಅಶೋಕ ಚಲವಾದಿ,ಎಸ್.ಫಕ್ಕೀರಪ್ಪ, ವಸಂತ ಕೊಣಸಾಲಿ, ಪ್ರಸನ್ನಸಿಂಗ್ ಹಜೇರಿ ಮಾತನಾಡಿದರು.

ಇದಕ್ಕೂ ಮುನ್ನ ಪಟ್ಟಣದ ಪರಿವೀಕ್ಷಣಾ ಮಂದಿರದಿಂದ ಬಸವೇಶ್ವರ, ಶಂಕರಾಚಾರ್ಯ ಮತ್ತು ಭಗೀರಥರ ಭಾವಚಿತ್ರಗಳನ್ನು ಹೊತ್ತ ಡೊಳ್ಳಿನ ಮೆರವಣಿಗೆ ಪ್ರಮುಖ ಬೀದಿಗಳಲ್ಲಿ ಹಾದು ತಹಶೀಲ್ದಾರ ಕಚೇರಿ ತಲುಪಿತು.ಬಸವರಾಜ ಒಸಿಮಠ, ಬಸವರಾಜ ಪಾಟೀಲ, ಉಪ್ಪಾರ, ಕೃಷ್ಣಾ ಕುಳ್ಳೂರ, ಕೆ.ಎನ್.ಮಹಾರಡ್ಡಿ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು, ಸಮಾಜಗಳ ಮುಖಂಡರು ಇದ್ದರು.ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿಯರು ನಾಡಗೀತೆ ಹೇಳಿ, ಪ್ರಾರ್ಥಿಸಿದರು. ಅಶೋಕ ಸಂಕ್ರಿಕೊಪ್ಪ ನಿರೂಪಿಸಿದರು. ವಿ.ವಿ.ಮಲ್ಲನಗೌಡ್ರ ವಂದಿಸಿದರು.



ಎಸ್ಸೆಸ್ಸೆಲ್ಸಿ ಫಲಿತಾಂಶ: ಶೇ.100ರಷ್ಟು ದಾಖಲು



ಯಲ್ಲಾಪುರ: ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಯು ಎಸ್ಸೆಸ್ಸೆಲ್ಸಿಯಲ್ಲಿ ಶೇ.100ರಷ್ಟು ಫಲಿತಾಂಶ ದಾಖಲಿಸಿ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡಿದ್ದಾರೆ.

ಒಟ್ಟು 45 ವಿದ್ಯಾರ್ಥಿಗಳಲ್ಲಿ 22 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್‌ನಲ್ಲಿ ಪಾಸಾಗಿದ್ದು, ಇನ್ನುಳಿದ 22 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಪಾಸಾಗಿ ಶಾಲೆಗೆ ಕೀರ್ತಿಯನ್ನು ತಂದಿದ್ದಾರೆ. ಸಹನಾ ನಾಗರಾಜ್ ಪೂಜಾರಿ(ಶೇ.98. 40ರಷ್ಟು)ಪ್ರಥಮ, ಪ್ರಗತಿ ರಾಘು ನಾಯ್ಕ್ (ಶೇ.96.9ರಷ್ಟು) ದ್ವಿತೀಯ, ಸಾನಿಕ ಮಡಿವಾಳ (ಶೇ.95.8ರಷ್ಟು) ತೃತೀಯ ಸ್ಥಾನಗಳಿಸಿದ್ದಾರೆ. ಸಾಧನೆ ಮಾಡಿದ ಎಲ್ಲಾ ವಿದ್ಯಾರ್ಥಿಗಳಿಗೆ ಶಾಲೆಯ ಪ್ರಾಂಶುಪಾಲರಾದ ಸಂಜಯ್ ನಾಯಕ್ ಹಾಗೂ ಎಲ್ಲಾ ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದಾರೆ.

ಸತತ ಎರಡನೇ ಬಾರಿ ಶೇ.100ರಷ್ಟು ಫಲಿತಾಂಶ



ಶಿರಸಿ: ತಾಲೂಕಿನ ಜನತಾ ವಿದ್ಯಾಲಯ ಕುಳವೆ ಬರೂರು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಸತತ ಎರಡನೇ ಬಾರಿ ಶೇ.100ರಷ್ಟು ಫಲಿತಾಂಶ ಸಾಧಿಸಿ ಗಮನಾರ್ಹ ಸಾಧನೆ ಮಾಡಿದೆ.





ಪರೀಕ್ಷೆಗೆ ಕುಳಿತ ಎಲ್ಲ 27 ವಿದ್ಯಾರ್ಥಿಗಳು ಉತ್ತೀರ್ಣರಾಗಿ ಶಾಲೆಗೆ ಎ ಗ್ರೇಡ್ ಫಲಿತಾಂಶ ದೊರೆತಿದೆ. ನಿಖಿತಾ ಉಮೇಶ ನಾಯ್ಕ ಶೇ.94.72ರಷ್ಟು ಪ್ರಥಮ, ಅಂಕಿತಾ ಮಾರುತಿ ನಾಯ್ಕ ಶೇ.94.40 ರಷ್ಟು ದ್ವಿತೀಯ ಹಾಗೂ ಅದಿತಿ ಶಾಸ್ತ್ರೀ ಶೇ 91.04ರಷ್ಟು ತೃತೀಯ ಸ್ಥಾನ ಗಳಿಸಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಶಾಲಾ ಆಡಳಿತ ಮಂಡಳಿ ಪಾಲಕರು ಹಾಗೂ ಊರವರು ಹರ್ಷ ವ್ಯಕ್ತಪಡಿಸಿ ಶಾಲಾ ಸಿಬ್ಬಂದಿ ಅಭಿನಂದಿಸಿದ್ದಾರೆ.

ಮೂಲ ಸೌಕರ್ಯ ಒದಗಿಸಲು ಒತ್ತಾಯ



ಯಲ್ಲಾಪುರ : ಕಾಡಿನ ಜನರ ಸುಧಾರಣೆಗಾಗಿ ಸರ್ಕಾರ ಹಕ್ಕು ಪತ್ರ ನೀಡಿದ್ದರೂ ಸಹ, ಈವರೆಗೂ ನಮಗೆ ಯಾವುದೇ ರೀತಿಯ ಸವಲತ್ತುಗಳನ್ನು ನೀಡಲಾಗಿಲ್ಲ. 15 ವರ್ಷಗಳಿಂದಲೂ ಮೂಲಭೂತ ಸೌಕರ್ಯಗಳಿಂದ ನಾವು ವಂಚಿತರಾಗಿದ್ದೇವೆ. ಪಹಣಿ ಪತ್ರಿಕೆ ನೀಡಿ, ನಮ್ಮ ಸಿದ್ದಿ ಸಮುದಾಯದವರು ಸರ್ಕಾರದ ಸೌಲಭ್ಯಗಳನ್ನು ಪಡೆಯಲು ಸಂಬಂಧಿಸಿದ ಇಲಾಖೆ ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ರಾಜ್ಯ ಸಿದ್ದಿ ಬುಡಕಟ್ಟು ಜನಪರ ಸಂಘದ ರಾಜ್ಯಾಧ್ಯಕ್ಷ ಬೆನಿತ್ ಸಿದ್ದಿ ಹೇಳಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದಿ ಸಮುದಾಯದ ಏಳಿಗೆಗಾಗಿ ನಮ್ಮ ಸಂಘ ಕಳೆದೊಂದು ವರ್ಷದಿಂದ ನಿಸ್ವಾರ್ಥವಾಗಿ ಕಾರ್ಯ ನಿರ್ವಹಿಸುತ್ತಿದೆ. ಜಿಲ್ಲೆಯ 6 ತಾಲೂಕಿನಲ್ಲಿ ವಾಸವಾಗಿರುವ ನಮ್ಮ ಸಿದ್ದಿ ಸಮುದಾಯಕ್ಕಾಗಿ ಸರ್ಕಾರದಿಂದ ಸವಲತ್ತುಗಳನ್ನು ಪಡೆಯಲು ನಾವು ಬಹಳಷ್ಟು ಹೋರಾಟ ಮಾಡಿದ್ದೇವೆ. ಸಾಗುವಳಿ ಮಾಡಿದ ಸಂಪೂರ್ಣ ಜಾಗಕ್ಕೆ ಜಿಪಿಎಸ್ ಮಾಡದೇ, ಕೆಲವೇ ಭಾಗಕ್ಕೆ ಜಿಪಿಎಸ್ ಮಾಡಿಕೊಟ್ಟಿರುವುದು, ಬುಡಕಟ್ಟು ಜನಾಂಗ ಗ್ರಾಮೀಣ ಭಾಗದಲ್ಲಿ ಜೀವನ ಸಾಗಿಸುವುದು ಕಷ್ಟಸಾಧ್ಯವಾಗಿದೆ ಎಂದರು. ಗೌರವಾಧ್ಯಕ್ಷ ಜಾನ್ ಬಿಕ್ಕಿಕರ್ ಮಾತನಾಡಿ, ಸುಮಾರು 300ಕ್ಕೂ ಅಧಿಕ ಜನರಿಂದ ಭೂಹಕ್ಕು ಪಡೆಯಲು ಅರ್ಜಿ ಹಾಕಲಾಗಿದ್ದು, ಇವರ ಹಕ್ಕುಪತ್ರ ಹಾಗೂ ಜಿ.ಪಿ.ಎಸ್. ನಲ್ಲಿ ಇರುವ ಲೋಪದೋಷಗಳನ್ನು ಸರಿಪಡಿಸಿಕೊಡುವಂತೆ ಇವರಲ್ಲಿ ಇರುವ ದಾಖಲೆಗಳೊಂದಿಗೆ ಸರಕಾರದ ಜೊತೆ ಪತ್ರ ವ್ಯವಹಾರ ಮಾಡಿ ಲೋಪದೋಷಗಳನ್ನು ಸರಿಪಡಿಸಿಕೊಡುವ ಬಗ್ಗೆ ಭರವಸೆ ಪಡೆಯಲಾಯಿತು. ಇದರ ಬಗ್ಗೆ ವಿಳಂಬವಾಗುತ್ತಿದ್ದು, ಕೂಡಲೆ ಕ್ರಮ ಕೈಗೊಳ್ಳಬೇಕು. ಸರ್ಕಾರ ಈ ಕುರಿತು ಶೀಘ್ರ ಕ್ರಮ ಕೈಗೊಳ್ಳದಿದ್ದರೆ ಹೋರಾಟ ಅನಿವಾರ್ಯತೆ ಎಂದರು. ಕಾರ್ಯಾಧ್ಯಕ್ಷ ಲಾರೆನ್ಸ್ ಸಿದ್ದಿ, ಸದಸ್ಯರಾದ ಶಂಕರ ಸಿದ್ದಿ, ಅಗಸ್ಟೀನ್ ಸಿದ್ದಿ, ಬಸ್ತ್ಯಾಂವ ಸಿದ್ದಿ ಉಪಸ್ಥಿತರಿದ್ದರು.


ಸಹಕಾರಿ ತತ್ವದಿಂದ ಸಮಾಜದಲ್ಲಿ ಸಮಾನತೆ: ಸಂಸದ ಕಾಗೇರಿ

ಯಲ್ಲಾಪುರ: ಸಮಾಜದಲ್ಲಿ ಸಮಾನತೆ, ಸಾಮರಸ್ಯ ಬೆಳೆಯಲು ಸಹಕಾರಿ ತತ್ವ ಪ್ರಾಮುಖ್ಯತೆ ಹೊಂದಿದೆ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ತಾಲೂಕಿನ ಮಂಚಿಕೇರಿಯಲ್ಲಿ ಹಾಸಣಗಿ ಗ್ರೂಪ್ ಗ್ರಾಮಗಳ ಸೇವಾ ಸಹಕಾರಿ ಸಂಘದ ನೂತನ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿ, ಸಹಕಾರಿ ಕ್ಷೇತ್ರಕ್ಕೆ ಬಹು ದೊಡ್ಡ ಶಕ್ತಿ ಸಾಮರ್ಥ್ಯ ಇದೆ. ಆರ್.ಎನ್.ಹೆಗಡೆ ಅವರ ಸಮರ್ಪಣಾಭಾವದಿಂದ ಹಾಸಣಗಿ ಸಹಕಾರಿ ಸಂಘ ಇಷ್ಟೊಂದು ಬೆಳೆದು ನಿಂತಿದ್ದು ಸುಮಾರು 100 ಕೋಟಿ ವ್ಯವಹಾರ ಮಾಡುವದರೊಂದಿಗೆ ಶೇ 99ರಷ್ಟು ಸಾಲ ವಸೂಲಾತಿ ಮಾಡಿರುವದು ಪ್ರಾಮಾಣಿಕ ವ್ಯವಹಾರಕ್ಕೆ ನಿದರ್ಶನವಾಗಿದೆ. ಗ್ರಾಮೀಣ ಭಾಗದ ರಕ್ಷಣೆಗೆ ಸಹಕಾರಿ ಕ್ಷೇತ್ರದ ಬಹುದೊಡ್ಡ ಕೊಡುಗೆ ಇದೆ. ಸಂಸದ ನಾಗಿ ಕೇಂದ್ರ ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ದೊರಕಿಸಿ ಕೊಡುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು.ಶಾಸಕ ಶಿವರಾಮ್ ಹೆಬ್ಬಾರ್ ಮಾತನಾಡಿ, ತಾಲೂಕಿನಲ್ಲಿ ಸಹಕಾರಿ ಕ್ಷೇತ್ರ ಗಟ್ಟಿಯಾಗಿದೆ. ಸಹಕಾರಿ ಕ್ಷೇತ್ರ ಹಾಗೂ ಜಿಲ್ಲಾ ಮಧ್ಯವರ್ತಿ ಬ್ಯಾಂಕ್ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಬಹಳ ಕಾಲದಿಂದಲೂ ಅನ್ಯೋನ್ಯವಾಗಿ ಬೆಳೆದುಕೊಂಡು ಬಂದಿವೆ. ಆದರೆ ಕೇಂದ್ರ ಸರಕಾರದಿಂದ ಸುಮಾರು 40%, 50% ನೀಡುತ್ತಿದ್ದ ಸಹಾಯಧನ ಇದೀಗ 11% ಗೆ ತಲುಪಿದೆ .ರಾಜ್ಯ ಸರಕಾರಕ್ಕೆ ಸುಮಾರು 4.5 ಸಾವಿರ ಕೋಟಿ ನಷ್ಟದ ಪೆಟ್ಟು ಬಿದ್ದಿದೆ.ಇದರ ನಿಯಮಾವಳಿಗಳು ಬದಲಾಗಬೇಕು ಇಲ್ಲದಿದ್ದರೆ ರೈತಾಪಿ ವರ್ಗ ಆಘಾತಕ್ಕೊಳಗಾಗುತ್ತದೆ. ರೈತರು ಕೇವಲ ಅಡಿಕೆ ಬೆಳೆಯನ್ನು ಅವಲಂಬಿಸದೆ ಪರ್ಯಾಯ ಬೆಳೆಗಳನ್ನು ಬೆಳೆಯಬೇಕು ಎಂದರು. ಹಾಸಣಗಿ ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಆರ್. ಎನ್.ಹೆಗಡೆ ಗೋರ್ಸಗದ್ದೆ ಅಧ್ಯಕ್ಷ ತೆವಹಿಸಿ ಮಾತನಾಡಿದರು. ಸಹಕಾರಿ ಸಂಘದ ಅಧ್ಯಕ್ಷರುಗಳಾದ ಎಂ ಜಿ ಭಟ್ ಸಂಕದಗುಂಡಿ,ಹೆರಂಭ ಹೆಗಡೆ, ಜಿ.ವಿ ಹೆಗಡೆ,ಗ್ರಾಪಂ ಆಡಳಿತಧಿಕಾರಿಗಳಾದ ರಾಘವ, ಬಸವರಾಜ್ ಬೋಚಳ್ಳಿ ಉಪಸ್ಥಿತರಿದ್ದರು. ಪುಷ್ಪ ಮಾಳಕೊಪ್ಪ ಮತ್ತು ತಂಡ ನಾಡಗೀತೆ ಹಾಡಿದರು.ಉಪಾಧ್ಯಕ್ಷ ಟಿ.ವಿ.ಹೆಗಡೆ ಬೆದೆಹಕ್ಲು ಸ್ವಾಗತಿಸಿದರು. ರಶ್ಮಿ ಹೆಗಡೆ ನಿರ್ವಹಿಸಿದರು.



ಪಿ.ಎಂ.ಹೈಸ್ಕೂಲ್ ವಿದ್ಯಾರ್ಥಿಗಳ ಸಾಧನೆ



ಅಂಕೋಲಾ: ಶಿಕ್ಷಣ ಪ್ರೇಮಿ ಡಾ.ದಿನಕರ ದೇಸಾಯಿ ಅವರ ಕನಸಿನ ಶಿಕ್ಷಣ ಸಂಸ್ಥೆ ಕೆನರಾ ವೆಲ್‌ಫೇರ ಟ್ರಸ್ಟಿನ ಪಿ.ಎಂ.ಹೈಸ್ಕೂಲ್ 2025-26 ನೇಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಸಾಧನೆ ಮಾಡಿದೆ.

ಪರೀಕ್ಷೆಗೆ ಕುಳಿತಿದ್ದ 90 ವಿದ್ಯಾರ್ಥಿಗಳಲ್ಲಿ ಎಲ್ಲರೂ ಉತ್ತೀರ್ಣರಾಗಿದ್ದು, 8 ವಿದ್ಯಾರ್ಥಿಗಳು ಉನ್ನತ ಶ್ರೇಣಿ, 46 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ 16 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿ ಹಾಗೂ 20 ವಿದ್ಯಾರ್ಥಿಗಳುತೃತೀಯ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ.605 ಅಂಕಗಳನ್ನು ಪಡೆದ ನೇಸರಾ ರಾಜೇಶ ನಾಯ್ಕ ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದು, ಕನ್ನಡ ಮಾಧ್ಯಮದಲ್ಲಿ ತಾಲೂಕಿನಲ್ಲಿ ಅತ್ಯುತ್ತಮ ನಿರ್ವಹಣೆ ತೋರಿದ್ದಾಳೆ. ಶ್ರಾವ್ಯ ಕುಮಾರ ನಾಯ್ಕ 592 ಅಂಕಗಳೊಂದಿಗೆ ಶಾಲೆಗೆ ದ್ವಿತೀಯ, ನಿಹಾರ ರಾಜೇಶ ನಾಯ್ಕ 579 ಅಂಕಗಳನ್ನು ಪಡೆದು ಶಾಲೆಗೆ ತೃತೀಯರಾಗಿದ್ದಾರೆ. ವರ್ಷಿಣಿ ವಿನಾಯಕ ನಾಯ್ಕ 573 , ಅನನ್ಯ ಮಾರುತಿ ನಾಯ್ಕ 568, ಕಾವ್ಯ ದೊಡ್ಮನಿ 560, ಸಂಜನಾ ಗೌಡ 535, ನವರತ್ನ ನಾಯ್ಕ 534 ಅಂಕಗಳನ್ನು ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಕೆನರಾ ವೆಲ್‌ಫೇರ ಅಧ್ಯಕ್ಷ ಎಸ್ .ಪಿ.ಕಾಮತ,ಕಾರ್ಯದರ್ಶಿ ಕೆ.ವಿ.ಶೆಟ್ಟಿ, ಆಡಳಿತಾಧಿಕಾರಿ ರವೀಂದ್ರ ಕೇಣಿ, ಮುಖ್ಯಾಧ್ಯಾಪಕ ಚಂದ್ರಶೇಖರ ಕಡೆಮನಿ ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದಾರೆ.

ಚಂದನಾ ಶಾಲೆಗೆ ಪ್ರಥಮ

ಬನವಾಸಿ: ಇಲ್ಲಿಯ ಜಯಂತಿ ಪ್ರೌಢಶಾಲೆಯ ವಿದ್ಯಾರ್ಥಿನಿ ಚಂದನಾ ಮಯೂರ ಸೂಗಿ ಪ್ರಸಕ್ತ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದು ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾಳೆ.


ಚಂದನಾ ಸೂಗಿ ಶೇ.96.96 ರಷ್ಟು (606) ಅಂಕಗಳನ್ನು ಪಡೆಯುವ ಮೂಲಕ ಶಾಲೆಗೆ ಹೆಮ್ಮೆ ಎನಿಸಿದ್ದಾಳೆ. ಇವಳು ಕನ್ನಡದಲ್ಲಿ 119 ಅಂಕ, ಇಂಗ್ಲಿಷ್ ಭಾಷೆಯಲ್ಲಿ 96 ಅಂಕ, ಹಿಂದಿಯಲ್ಲಿ 100 ಅಂಕ, ಗಣಿತದಲ್ಲಿ 98ಅಂಕ, ವಿಜ್ಞಾನದಲ್ಲಿ 95ಅಂಕ, ಸಮಾಜ ವಿಜ್ಞಾನದಲ್ಲಿ 98ಅಂಕಗಳನ್ನು ಪಡೆದು ಪ್ರತಿಭೆ ಮೆರೆದಿದ್ದಾಳೆ.

ವಿದ್ಯಾರ್ಥಿನಿಯ ತಂದೆ ಪತ್ರಿಕಾ ವಿತರಕರಾಗಿದ್ದು



ಶೈಕ್ಷಣಿಕವಾಗಿ ಹಿಂದಿರುವ ಕುಟುಂಬದಲ್ಲಿ ಬೆಳೆದಿರುವ ಚಂದನಾ ಸೂಗಿ ಬಡತನದ ನಡುವೆಯೂ ಓದಿನಲ್ಲಿ ಏಕಾಗ್ರತೆ ಸಾಧಿಸಿ ಹೆಚ್ಚಿನ ಅಂಕ ಪಡೆದಿದ್ದಾಳೆ. ಈಕೆಯ ಸಾಧನೆಗೆ ಜಯಂತಿ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗಣೇಶ ಸಣ್ಣಲಿಂಗಣ್ಣನವರ ಹಾಗೂ ಸರ್ವ ಸದಸ್ಯರು, ಮುಖ್ಯೋಪಾಧ್ಯಾಯರು, ಶಾಲಾ ಶಿಕ್ಷಕರು ಅಭಿನಂದಿಸಿದ್ದಾರೆ.

ಸಿವಿಎಸ್‌ಕೆ ವಿದ್ಯಾರ್ಥಿಗಳ ಸಾಧನೆ



ಕುಮಟಾ: ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಕೊಂಕಣ ಎಜ್ಯುಕೇಶನ್ ಟ್ರಸ್ಟ್‌ನ ಸಿವಿಎಸ್‌ಕೆ ಪ್ರೌಢಶಾಲೆಯ ವಿದ್ಯಾರ್ಥಿ ರಾಘವ ಜಯರಾಮ ಹೆಗಡೆ 625 ಕ್ಕೆ 621 ಅಂಕದೊಂದಿಗೆ ರಾಜ್ಯಕ್ಕೆ 5ನೇ ಸ್ಥಾನ ಪಡೆದುಕೊಂಡಿದ್ದಾರೆ. ನೀರಜ ರವಿ ಆಚಾರಿ ಹಾಗೂ ಸಿಂಚನಾ ಗಣಪತಿ ಭಟ್ಟ ಇವರು ತಲಾ 616 ಅಂಕಗಳೊಂದಿಗೆ ರಾಜ್ಯಕ್ಕೆ 10ನೇ ಸ್ಥಾನ ಪಡೆದಿದ್ದಾರೆ. ಈ ಮೂಲಕ ಒಟ್ಟು ರಾಜ್ಯಮಟ್ಟದ ಟಾಪ್ 10 ಪಟ್ಟಿಯಲ್ಲಿ ಮೂವರು ಗುರುತಿಸಿಕೊಂಡು ಸಾಧನೆಯ ಯಾನ ಮುಂದುವರೆಸಿದ್ದಾರೆ.ಪರೀಕ್ಷೆಗೆ ಕುಳಿತ ಒಟ್ಟು 159 ಮಂದಿ ವಿದ್ಯಾರ್ಥಿಗಳಲ್ಲಿ ಎಲ್ಲರೂ ಪ್ರಥಮ ಶ್ರೇಣಿಯಲ್ಲಿ ಪಾಸಾಗುವುದರೊಂದಿಗೆ ಶಾಲೆಯು ಹಿಂದಿನ ಸಾಧನೆಗಳಂತೆ ಶೇ.100ರಷ್ಟು ಫಲಿತಾಂಶವನ್ನು ದಾಖಲಿಸಿದೆ. ಸಂಸ್ಥೆಯ ಗುಣಾತ್ಮಕ ಫಲಿತಾಂಶ 95.34 ಶೇ. ಆಗಿರುತ್ತದೆ.ಓರ್ವ ವಿದ್ಯಾರ್ಥಿ 99 ಶೇ. ಕ್ಕಿಂತ ಹೆಚ್ಚು ಅಂಕ ಪಡೆದರೆ, 5 ಮಂದಿ 98 ಶೇ. ಕ್ಕಿಂತ ಅಧಿಕ, 30 ಮಂದಿ 95 ಶೇ. ಕ್ಕಿಂತ ಅಧಿಕ, 76 ಮಂದಿ 90 ಶೇ. ಕ್ಕಿಂತ ಅಧಿಕ, 110 ಮಂದಿ 85 ಶೇ. ಕ್ಕಿಂತ ಅಧಿಕ, 159 ಮಂದಿ 65 ಶೇ. ಕ್ಕಿಂತ ಅಧಿಕ ಅಂಕ ಪಡೆದು ಸಾಧನೆಗೈದಿದ್ದಾರೆ. ಪ್ರಥಮ ಭಾಷೆಯಲ್ಲಿ 31, ದ್ವಿತೀಯ ಭಾಷೆಯಲ್ಲಿ 18, ತೃತೀಯ ಭಾಷೆಯಲ್ಲಿ 41, ಗಣಿತದಲ್ಲಿ 2, ಸಮಾಜ ವಿಜ್ಞಾನದಲ್ಲಿ 6 ಮಂದಿ ಪೂರ್ಣಾಂಕದ ಸಾಧನೆ ಮಾಡಿದ್ದಾರೆ. ಕೊಂಕಣ ಎಜ್ಯುಕೇಶನ್ ಟ್ರಸ್ಟ್‌ನ ಅಧ್ಯಕ್ಷರು ಹಾಗೂ ವಿಶ್ವಸ್ಥರುಗಳು, ಶೈಕ್ಷಣಿಕ ಸಲಹೆಗಾರರು, ಪ್ರಾಂಶುಪಾಲರು, ಶಿಕ್ಷಕರು,ಪಾಲಕರು ಅಭಿನಂದಿಸಿದ್ದಾರೆ.

ಸುಪ್ರಿಯಾ ವಿವಿಗೆ 9ನೇ ರ‍್ಯಾಂಕ್



ಕುಮಟಾ: ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡವು 75 ನೇ ಘಟಿಕೋತ್ಸವದ ವಿವಿ ಮಟ್ಟದಲ್ಲಿ ಕುಮಟಾದ ಕಮಲಾ ಬಾಳಿಗಾ ಶಿಕ್ಷಣ ಮಹಾವಿದ್ಯಾಲಯದ 2021-22ನೇ ಶೈಕ್ಷಣಿಕ ವರ್ಷದ ಶಿಕ್ಷಕ ವಿದ್ಯಾರ್ಥಿನಿ ಸುಪ್ರಿಯಾ ಅನಿಲ ಶೆಟ್ಟಿ ಶೇ.92.25ರಷ್ಟು ಅಂಕ ಪಡೆದು ವಿಶ್ವವಿದ್ಯಾಲಯ ಮಟ್ಟದಲ್ಲಿ 9 ನೇ ರ‍್ಯಾಂಕ್‌ನ್ನು ಪಡೆದಿದ್ದಾಳೆ.

ಶೈಕ್ಷಣಿಕ ಮನಶಾಸ್ತ್ರದ ವಿಷಯುಗಳಾದ ಬಾಲ್ಯಾವಸ್ಥೆ ಮತ್ತು ತಾರುಣಾವಸ್ಥೆ ಹಾಗೂ ಕಲಿಕೆ ಮತ್ತು ಬೋಧನಾ ಪ್ರಕ್ರಿಯೆ ಎಂಬ 2 ವಿಷಯಗಳಲ್ಲಿ ಪ್ರೊ.ಬಿ.ಸಿ. ಪಾಟೀಲ್ ಇವರ ದತ್ತಿನಿಧಿಯ 2 ಬಂಗಾರದ ಪದಕವನ್ನು ರಾಜ್ಯಪಾಲರಿಂದ ಪ್ರಶಸ್ತಿ ಪತ್ರ ಮತ್ತು ಬಂಗಾರದ ಪದಕ ಪ್ರದಾನ ಮಾಡಲಾಯಿತು.

ಇವರನ್ನು ಕೆನರಾ ಕಾಲೇಜ್ ಸೊಸೈಟಿಯ ಅಧ್ಯಕ್ಷ ರಾಮಚಂದ್ರ.ಆರ್. ಕಾಮತ್, ಕಾರ್ಯಾಧ್ಯಕ್ಷ ಹನುಮಂತ ಕೆ.ಶಾನಭಾಗ, ಕಾರ್ಯದರ್ಶಿ ಯಶವಂತ ವಿ. ಶಾನಭಾಗ, ಆಡಳಿತ ಮಂಡಳಿಯ ಸದಸ್ಯರು, ಕೌನ್ಸಿಲ್ ಸದಸ್ಯರು, ಕಾಲೇಜಿನ ಪ್ರಾಂಶುಪಾಲೆ ಡಾ. ಪ್ರೀತಿ ಪಿ. ಭಂಡಾರಕರ, ಬೋಧಕ-ಬೋಧಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಕಿರುಸುದ್ದಿ

ಎಸ್ಸೆಸ್ಸೆಲ್ಸಿ: ಶೇ.100ರಷ್ಟು ಫಲಿತಾಂಶ ದಾಖಲು

ಬಂಕಾಪೂರ: ನಾರಾಯಣಪೂರ ಸರ್ಕಾರಿ ಕರ್ನಾಟಕ ಪಬ್ಲಿಕ್ ಸ್ಕೂಲ್ 2025-26 ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.100 ರಷ್ಟು ಫಲಿತಾಂಶ ಬಂದಿದ್ದು. 96 ಎವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಉನ್ನತ ಶ್ರೇಣಿಯಲಿ, ಉದಯ ಶಿವಾನಂದ ಗಾಜೀಪೂರ ಶೇ. 96.32ರಷ್ಟು, ಚಂದನಾ ರಮೇಶ ಸಿದ್ದಪ್ಪನವರ ಶೇ.96.16ರಷ್ಟು ವಿನಯ ಶಿವಾನಂದ ಗಾಜೀಪೂರ ಶೇ. 94.08ರಷ್ಟು ಸಾಧನೆ ಮಾಡಿದ್ದು. 17 ವಿದ್ಯಾರ್ಥಿಗಳು ಡಿಸ್ಟಿನ್ ಶೆನ್ ಪಾಸಾಗಿದ್ದಾರೆ. ಪ್ರಥಮ ಶ್ರೇಣಿಯಲ್ಲಿ, 45 ವಿದ್ಯಾರ್ಥಿಗಳು ಹಾಗೂ 18 ವಿದ್ಯಾರ್ಥಿಗಳು ದ್ವಿತಿಯ ಸ್ಥಾನದಲ್ಲಿ ಪಾಸಾಗಿದ್ದಾರೆ. ಸರ್ಕಾರಿ ಕರ್ನಾಟಕ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳ ಶೈಕ್ಷಣಿಕ ಸಾದನೆಗೆ ಕಾಲೇಜು ಉಪನ್ಯಾಸಕರು ಹಾಗೂ ಮಕ್ಕಳ ಪಾಲಕರು, ಗ್ರಾಮಸ್ಥರು ಸಂತಸ ವ್ಯಕ್ತಪಡಿಸಿದ್ದಾರೆ. ಭೀಮ ಬಸವರಾಜ ಹೊಳೆಪ್ಪನವರ ಶೇ.91ರಷ್ಟು, ರೋಹಿಣಿ ಅಶೋಕ ಹೊನ್ನಣ್ಣವರ ಶೇ.91.04ರಷ್ಟು, ಜಯಲಕ್ಷ್ಮೀ ಬಂಕನಗೌಡ ಪಾಟೀಲ ಶೇ.90.88ರಷ್ಟು, ಸೋಮಶೇಖರ ಬಂಕಪ್ಪ ಕೋರಿ ಶೇ.90.88ರಷ್ಟು, ದೀಪಾ ಚನ್ನಪ್ಪ ಈಳಗೇರ ಶೇ.90.56ರಷ್ಟು, ದುರಗಪ್ಪ ಮಹೇಶ ಮಾನೋಜಿ ಶೇ.89.44ರಷ್ಟು, ಮಮತಾ ರಮೇಶ ಕುರಗೋಡಿ ಶೇ.88.48ರಷ್ಟು ಅಂಕ ಪಡೆದುಕೊಂಡಿದ್ದಾರೆ. ಮಕ್ಕಳ ಸಾಧನೆಗೆ ಶ್ರೀಕಾಂತ ದುಂಡಿಗೌಡ್ರ ಅಭಿನಂಧನೆ ಸಲ್ಲಿಸಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ರಟ್ಟೀಹಳ್ಳಿ: ಪಟ್ಟಣದ 110/33/11 ಕೆ.ವಿ. ಉಪಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣೆ ಕೆಲಸ ಕೈಗೊಳ್ಳುವುದರಿಂದ ಬೆಳಗ್ಗೆ 10ಗಂಟೆಯಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.33 ಕೆ.ವಿ ಮಾರ್ಗಗಳಾದ ಮಾಸೂರು, ಹಳ್ಳೂರು ಪಟ್ಟಣದ ಉಪಕೇಂದ್ರದಿಂದ ಹೊರಡುವ ಎಲ್ಲಾ11 ಕೆ.ವಿಮಾರ್ಗಗಳಾದ ರಟ್ಟೀಹಳ್ಳಿ ಪಟ್ಟಣ ಸೇರಿದಂತೆ ನೇಶ್ವಿ, ದೊಡ್ಡಗುಬ್ಬಿ, ಶಿರಗಂಬಿ, ಮಕರಿ, ಕಣವಿಶಿದ್ದಗೇರಿ, ಹಿರೇಮೊರಬ, ಕಡೂರು, ಮಾವಿನತೋಪ, ಹಿರೇಮಾದಾಪುರ, ಚಿಕ್ಕಯಡಚಿ, ಮಳಗಿ, ಸತ್ತಗಿಹಳ್ಳಿ, ಮಾರ್ಗಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಹೆಸ್ಕಾಂ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ನಾಳೆ ವಿದ್ಯುತ್ ವ್ಯತ್ಯಯ

ಶಿಗ್ಗಾಂವ: ಶಿಗ್ಗಾಂವ 30/11 ಕೆವಿ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಬಸವನಹಳ್ಳಿ ಮಾರ್ಗ, ಕೆಎಸ್‌ಆರ್‌ಪಿ ಮಾರ್ಗ, ಜೆಕ್ಕಿನಕಟ್ಟಿ ಐಪಿ ಮಾರ್ಗ, ಕೋರ್ಟ ಮಾರ್ಗ, ಬೋಲ್ ಗೇಟ್, ಟೆಕ್ಸಟೆಲ್ ಪಾರ್ಕ ಮಾರ್ಗದಲ್ಲಿ ಏಪ್ರಿಲ್ 26ರಂದು ರವಿವಾರ ಎನ್ ಹೆಚ್4 ರಿಂದ ಸವಣೂರು ರಸ್ತೆ (ಕಿತ್ತೂರುರಾಣಿ ಕನ್ನಮ್ಮರವರ ಪುತ್ತಳಿ) ವರೆಗೆ ನಿರ್ವಹಣಾ ಕಾಮಗಾರಿ ಇರುವುದರಿಂದ ಈ ಮಾರ್ಗದ ವ್ಯಾಪ್ತಿಗೆ ಬರುವ ಜೆಕ್ಕಿನಕಣ್ಣ, ಜೆಕ್ಕಿನಕಟ್ಟಿ ತಾಂಡಾ, ಶಿವಪುರ, ಶಿವಪುರ ತಾಂಡಾ, ಕೋಣನಕೇರಿ, ಭದ್ರಾಪುರ, ಮುಳಕೇರಿ, ಬಸವಣಕಟ್ಟಿ, ಗೌಳೇರದಡ್ಡಿ ಗ್ರಾಮ, ಎಪಿಎಂಸಿ, ರಾಜೀವನರ, ಕೆಎಸ್‌ಐಡಿ, ಕೆಎಸ್‌ಆರ್‌ಪಿ ಬೆಟಾಲಿಯನ್, ನಾಗನೂರು ಕೇರಿ ರಸ್ತೆ, ಬಸವೇಶ್ವರ ನಗರ, ಕೋರ್ಟ ವ್ಯಾಪ್ತಿಯಲ್ಲಿ ಬೆಳಗ್ಗೆ 10ರಿಂದ ಸಂಜೆ 5ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸಬೇಕು ಎಂದು ಹೆಸ್ಕಾಂ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಜಿಲ್ಲೆಗೆ ಸಚಿವ ಗುಂಡೂರಾವ್

ಹಾವೇರಿ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ದಿನೇಶ್ ಗುಂಡೂರಾವ್ ಏಪ್ರಿಲ್ 27ರಂದು ಹಾವೇರಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಮಧ್ಯಾಹ್ನ 3 ಗಂಟೆಗೆ ಕುಂದಗೋಳ ತಾಲೂಕು ಇಂಗಳಗಿಯಿಂದ ಹೊರಟು, ಮಧ್ಯಾಹ್ನ 3.50ಕ್ಕೆ ಶಿಗ್ಗಾಂವಿಗೆ ಆಗಮಿಸುವರು. ಮಧ್ಯಾಹ್ನ 4ಗಂಟೆಗೆ ಶಿಗ್ಗಾಂವ ತಾಲೂಕು ಆಸ್ಪತ್ರೆ ಆವರಣದಲ್ಲಿ 250 ಹಾಸಿಗೆಗಳ ನೂತನ ಕಟ್ಟಡ ಉದ್ಘಾಟನೆ ನೆರವೇರಿಸುವರು.ಸಂಜೆ 4.30ಕ್ಕೆ ಶಿಗ್ಗಾಂವಿಯಿಂದ ಹೊರಟು, 4.50ಕ್ಕೆ ಸವಣೂರಿಗೆ ತೆರಳಿ, ಸವಣೂರ ತಾಲೂಕು ಆಸ್ಪತ್ರೆ ಆವರಣದಲ್ಲಿ 100 ಹಾಸಿಗೆಗಳ ಸವಣೂರ ತಾಲೂಕು ಸಾರ್ವಜನಿಕ ಆಸ್ಪತ್ರೆಯ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸುವರು. ಸಂಜೆ 5.30ಕ್ಕೆ ನಿರ್ಮಾಣ ಹಂತದಲ್ಲಿರುವ ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆ ಕಟ್ಟಡದ ಪರಿವೀಕ್ಷಣೆ ಮಾಡಲಿದ್ದಾರೆ. ಸಂಜೆ 6ಗಂಟೆಗೆ ಹುಬ್ಬಳ್ಳಿಗೆ ಪ್ರಯಾಣ ಬೆಳೆಸಲಿದ್ದಾರೆ.



ರಟ್ಟೀಹಳ್ಳಿ : ಪಪಂ ಆವರಣದಲ್ಲಿ ಭಗೀರಥ ಜಯಂತಿಯನ್ನು ಆಚರಿಸಲಾಯಿತು. ಪಪಂ ಅಧ್ಯಕ್ಷ ರವೀಂದ್ರ ಮುದಿಯಪ್ಪನವರ, ಉಪಾಧ್ಯಕ್ಷ ಶಿವಕುಮಾರ ಉಪ್ಪಾರ, ಮುಖ್ಯಾಧಿಕಾರಿ ಸಂತೋಷ ಚಂದ್ರಿಕೇರ, ಸದಸ್ಯರಾದ ವೀರನಗೌಡ ಪ್ಯಾಟಿಗೌಡ್ರ, ಬಸವರಾಜ ಆಡಿನವರ, ಮಕ್ಬುಬುಲ ಸಾಬ, ರಾಜಕುಮಾರ ಹೇಂದ್ರೆ, ಪರಮೇಶ್ವರಪ್ಪ ಅಂತರವಳ್ಳಿ, ವೀರೇಶ ದ್ಯಾವಕ್ಕಳವರ, ಬಸವರಾಜ ಕವಲೆತ್ತು, ಸಂತೋಷಕುಮಾರ ಪವಾರ, ಗೋಪಾಲ ಮಡಿವಾಳರ ಇದ್ದರು.

ಕಾಮಗಾರಿಗೆ ಶಾಸಕ ಭೂಮಿಪೂಜೆ

ಹಾನಗಲ್ಲ: ರಾಜ್ಯ ಸರ್ಕಾರ ಅನುಷ್ಠಾನಕ್ಕೆ ತಂದ ಪಂಚ ಗ್ಯಾರಂಟಿ ಯೋಜನೆಗಳು ಇಂದು ರಾಜ್ಯದಲ್ಲಿ ಕೋಟ್ಯಾಂತರ ಕುಟುಂಬಗಳ ಆರ್ಥಿಕ ಸ್ಥಿತಿ ಸುಧಾರಿಸುವಲ್ಲಿ ಯಶಸ್ವಿಯಾಗಿವೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ತಾಲೂಕಿನ ಹನುಮಾಪುರ ಗ್ರಾಮದಲ್ಲಿ 10 ಲಕ್ಷ ರೂ. ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿದ ಅವರು ಹಾನಗಲ್ಲ ತಾಲೂಕುವೊಂದರಲ್ಲಿಯೇ 65 ಸಾವಿರಕ್ಕೂ ಅಧಿಕ ಕುಟುಂಬಗಳು ಗ್ಯಾರಂಟಿ ಯೋಜನೆಗಳಿಂದ ಆರ್ಥಿಕ ನೆರವು ಪಡೆಯುತ್ತಿವೆ. ಬೆಲೆ ಏರಿಕೆ ಬಿಸಿಯಿಂದ ಕಂಗೆಟ್ಟಿದ್ದ ಜನಸಾಮಾನ್ಯರ ಪಾಲಿಗೆ ಗ್ಯಾರಂಟಿ ಯೋಜನೆಗಳು ವರದಾನವಾಗಿವೆ. ಇದೀಗ ಜನರ ಕೊಂಡು ಕೊಳ್ಳುವಿಕೆಯೂ ಹೆಚ್ಚಿದೆ. ಜನರ ಆರ್ಥಿಕ ಸುಭದ್ರತೆ ಉತ್ತಮವಾಗಿದೆ ಎಂದು ತಿಳಿಸಿದ ಅವರು ಕೇಂದ್ರ ಸರಕಾರ ನಮ್ಮ ಪಾಲಿನ ಅನುದಾನ ನೀಡಿದರೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಜನಸಾಮಾನ್ಯರಿಗೆ ಅನುಕೂಲ ಕಲ್ಪಿಸುವ ಜೊತೆಗೆ ದಾಖಲೆ ಪ್ರಮಾಣದಲ್ಲಿ ಅಭಿವೃದ್ಧಿ ಕೈಗೊಳ್ಳಬಹುದಾಗಿದೆ ಎಂದು ಹೇಳಿದರು.

ಕೆಪಿಸಿಸಿ ಸದಸ್ಯ ಟಾಕನಗೌಡ ಪಾಟೀಲ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜು ಗೊರಣ್ಣನವರ, ಮುಖಂಡರಾದ ಮಾಲತೇಶ ಕುನ್ನೂರ, ಮಂಜಪ್ಪ ಶೇಷಗಿರಿ, ವಿರುಪಾಕ್ಷಪ್ಪ ಸಮ್ಮಸಗಿ, ಯಲ್ಲಪ್ಪ ಸಿರಿಗೆರೆ, ಶಿವು ತಳವಾರ, ವಿರುಪಾಕ್ಷಪ್ಪ ತಳವಾರ, ಮಹಾಂತೇಶ ಕುಳೇನೂರ ಮತ್ತಿತರರಿದ್ದರು.



ಹಾನಗಲ್ಲ: ತಾಲೂಕಿನ ಹನುಮಾಪುರ ಗ್ರಾಮದಲ್ಲಿ 10 ಲಕ್ಷ ರೂ. ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಶ್ರೀನಿವಾಸ ಮಾನೆ ಭೂಮಿಪೂಜೆ ನೆರವೇರಿಸಿದರು. ಕೆಪಿಸಿಸಿ ಸದಸ್ಯ ಟಾಕನಗೌಡ ಪಾಟೀಲ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜು ಗೊರಣ್ಣನವರ, ಮುಖಂಡರಾದ ಮಾಲತೇಶ ಕುನ್ನೂರ, ಮಂಜಪ್ಪ ಶೇಷಗಿರಿ, ವಿರುಪಾಕ್ಷಪ್ಪ ಸಮ್ಮಸಗಿ, ಯಲ್ಲಪ್ಪ ಸಿರಿಗೆರೆ ಇದ್ದರು.

ಮಾದಕ ವಸ್ತು ಮುಕ್ತ ಕರ್ನಾಟಕ | ಡಿಸಿ ಡಾ.ವಿಜಯಮಹಾಂತೇಶ ಸೂಚನೆ

ಪೊಲೀಸರೊಂದಿಗೆ ಎಲ್ಲರೂ ಕೈ ಜೋಡಿಸಿ

ಹಾವೇರಿ: ಮಾದಕ ವಸ್ತು ಮುಕ್ತ ಕರ್ನಾಟಕ ರಾಜ್ಯ ನಿರ್ಮಾಣ ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿದೆ. ಈ ಕಾರ್ಯದಲ್ಲಿ ಪೊಲೀಸ್ ಇಲಾಖೆಯೊಂದಿಗೆ ಎಲ್ಲ ಇಲಾಖೆಯ ಅಧಿಕಾರಿಗಳು ಕೈಜೋಡಿಸಬೇಕು ಎಂದು ಅಽಕಾರಿಗಳಿಗೆ ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ ದಾನಮ್ಮನವರ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಜರುಗಿದ ನಾರ್ಕೊ ಸಮನ್ವಯ ಕೇಂದ್ರ (NCORD) ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ರಾಜ್ಯವನ್ನು ಮಾದಕ ವಸ್ತು ಮುಕ್ತ ರಾಜ್ಯವನ್ನಾಗಿ ಮಾಡಲು ಗಾಂಜಾ ಮಾರಾಟ, ಸಾಗಾಟ ಮಾಡುವವರನ್ನು ಮಟ್ಟಹಾಕುವ ನಿಟ್ಟಿನಲ್ಲಿ ಪೊಲೀಸ್ ಇಲಾಖೆ ಯೋಜನೆಯನ್ನು ರೂಪಿಸಬೇಕು ಎಂದು ಸಲಹೆ ನೀಡಿದರು.

ಮಾದಕ ಪದಾರ್ಥ ಸೇವನೆ ಮಾಡುವವರನ್ನು ಗುರುತಿಸಬೇಕು, ಅನುಮಾನಾಸ್ಪದ ವ್ಯಕ್ತಿಗಳನ್ನು ನಿಯಮಿತವಾಗಿ ಪರೀಕ್ಷೆಗೆ ಒಳಪಡಿಸಿ, ಮಾದಕ ಪದಾರ್ಥ ಸೇವನೆ ಮಾಡಿದವರ ಮೇಲೆ ನಿಯಮಾನುಸಾರ ಕಾನೂನು ಕ್ರಮ ಜರುಗಿಸಬೇಕು. ಸರ್ಕಾರಿ ಆಸ್ಪತ್ರೆಗಳಿಗೆ ಪದೇ ಪದೇ ಚಿಕಿತ್ಸೆಗೆ ದಾಖಲಾಗುವ ರೋಗಿಗಳ ಮೇಲೆ ನಿಗಾವಹಿಸಬೇಕು ಹಾಗೂ ಅವರು ಮಾದಕ ವ್ಯಸನಿಗಳಾ ಎಂಬುದನ್ನು ತಿಳಿದುಕೊಳ್ಳಬೇಕು ಎಂದು ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಹಕಾರ ನೀಡಿ : ಪೊಲೀಸ್ ಇಲಾಖೆಯಿಂದ ಪ್ರತಿದಿನ ನಿಯಮಿತವಾಗಿ ಗಾಂಜಾ ಮಾರಾಟ, ಸಾಗಾಟ ಮಾಡುವವರನ್ನು ಹಾಗೂ ಮಾದಕ ಪದಾರ್ಥ ಸೇವನೆ ಮಾಡುವವರನ್ನು ಪರಿಶೀಲನೆಗೆ ಒಳಪಡಿಸಿ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ. ಈ ಕಾರ್ಯಕ್ಕೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಸಹಕಾರ ನೀಡಬೇಕು ಎಂದರು.



> **ರಾಜ್ಯ ಮಟ್ಟದಲ್ಲಿ ಹಾಗೂ ಜಿಲ್ಲಾಮಟ್ಟದಲ್ಲಿ ವಿವಿಧ ಹಂತದ ಅಧಿಕಾರಿಗಳ ನೇತೃತ್ವದಲ್ಲಿ ತಂಡ ರಚನೆ ಮಾಡಲಾಗಿದೆ. ಎಲ್ಲರೂ Drug Free Karnataka ಆ್ಯಪ್‌ನ್ನು ಡೌನ್ ಲೋಡ್ ಮಾಡಿಕೊಂಡು, ನಿರ್ಭಯವಾಗಿ ಮಾದಕ ಪದಾರ್ಥ ಮಾರಾಟ, ಸಾಗಾಟ, ಸೇವನೆ ಮಾಡುವವರ ವಿವರವನ್ನು ನಮೂದ ಮಾಡಬೇಕು.**
>
> ■ **ಲಕ್ಷ್ಮಣ ಶಿರಕೋಳ, ಹೆಚ್ಚುವರಿ ಎಸ್ಪಿ**

ಜಾಗೃತಿ ಕಾರ್ಯಕ್ರಮ: ದೇಶದ ವಿವಿಧ ರಾಜ್ಯಗಳಲ್ಲಿ ಆಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಂಡು ಮಾದಕ ವ್ಯಸನಿಗಳನ್ನು ಪತ್ತೆ ಮಾಡಲಾಗುತ್ತಿದೆ. ಈ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ಕ್ರಮ ವಹಿಸಬೇಕು. ವಿವಿಧ ಶಿಕ್ಷಣ ಇಲಾಖೆಯ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಶಾಲಾ-ಕಾಲೇಜುಗಳಲ್ಲಿ ಹಾಗೂ ಹಾಸ್ಟೆಲ್‌ಗಳಲ್ಲಿಯ ವಿದ್ಯಾರ್ಥಿಗಳಿಗೆ ನಿಯಮಿತವಾಗಿ ಜಾಗೃತಿ ಕಾರ್ಯಕ್ರಮ ಆಯೋಜಿಸಬೇಕು. ಕಾರ್ಯಕ್ರಮಗಳ ಬಗ್ಗೆ ಪ್ರತಿ ಸಭೆಗೆ ಮಾಹಿತಿ ನೀಡಬೇಕು ಎಂದು ಸೂಚಿಸಿದರು.

ಔಷಧಿ ಅಂಗಳ ಮೇಲೆ ನಿಗಾ : ನಿಷೇಧಿತ ಔಷಧಿಗಳನ್ನು ಮಾರಾಟ ಮಾಡುವ ಔಷಧಿ ಅಂಗಡಿಗಳ ಮೇಲೆ ನಿಗಾ ವಹಿಸಬೇಕು. ನಿಷೇಧಿತ ಔಷಧಿಗಳ ಮಾರಾಟಗಾರರ ಮೇಲೆ ಬೆಳಗಾವಿ ಜಿಲ್ಲೆಯಲ್ಲಿ ಕೈಗೊಂಡ ಕ್ರಮಗಳನ್ನು ಜಿಲ್ಲೆಯಲ್ಲಿ ಅನುಸರಿಸಬೇಕು ಎಂದು ಜಿಲ್ಲಾ ಔಷಧ ನಿಯಂತ್ರಕರಿಗೆ ಸೂಚನೆ ನೀಡಿದರು.

ಜಾಗೃತಿ ಮೂಡಿಸಿ: ಮಕ್ಕಳು ಸಮಾಜದ ಶಕ್ತಿಯಾಗಬೇಕು, ಈ ಹಿನ್ನಲೆಯಲ್ಲಿ ಜಿಲ್ಲೆಯ ಎಲ್ಲ ಶಾಲಾ-ಕಾಲೇಜುಗಳು, ಹಾಸ್ಟೇಲ್‌ಗಳಲ್ಲಿ ವರ್ಷದಲ್ಲಿ ಎರಡು ಬಾರಿ ಸ್ಥಳೀಯ ಪೊಲೀಸ್ ಅಽಕಾರಿಗಳ ಸಹಕಾರದೊಂದಿಗೆ ಜಾಗೃತಿ ಮೂಡಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನಿರ್ದೇಶನ ನೀಡಿದರು.

ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ಶಿರಕೋಳ ಮಾತನಾಡಿ, 2025ನೇ ಸಾಲಿನಲ್ಲಿ 10 ಪ್ರಕರಣದಲ್ಲಿ ರೂ.11,34,929 ಮೊತ್ತದ 40.206ಕೆ.ಜಿ ಹಾಗೂ 2026 ಸಾಲಿನ ಈವರೆಗೆ ಏಳು ಪ್ರಕರಣಗಳಲ್ಲಿ ರೂ.11,42,700 ಮೊತ್ತ 24.483 ಕೆ.ಜಿ ಸೇರಿ ಈವರೆಗೆ 17 ಪ್ರಕರಣಗಳಲ್ಲಿ ರೂ.22,77,620 ಮೊತ್ತದ 64 ಕೆ.ಜಿ.ಮಾದಕ ವಸ್ತು ವಶಪಡಿಸಿಕೊಳ್ಳಲಾಗಿದೆ ಹಾಗೂ 16 ಜನರು ಆರೋಪಿತರಾಗಿದ್ದಾರೆ ಎಂದು ತಿಳಿಸಿದರು. ಸಭೆಯಲ್ಲಿ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಕಾಮಗಾರಿ ವಿಳಂಬ: ಶಾಸಕ ಲಮಾಣಿ ಗರಂ

ಹಾವೇರಿ: ಟೆಂಡರ್ ಅವಧಿ ಮುಗಿದರೂ ಕೇವಲ ಶೇ.20-30ರಷ್ಟು ಕೆಲಸ ಮಾಡಿರುವುದು ಗುತ್ತಿಗೆದಾರರ ಬೇಜವಾಬ್ದಾರಿತನವನ್ನು ತೋರಿಸುತ್ತದೆ. ಕೆಲಸ ಮಾಡಲು ಸಾಧ್ಯವಿಲ್ಲದಿದ್ದರೆ ಟೆಂಡರ್‌ನಲ್ಲಿ ಏಕೆ ಭಾಗವಹಿಸುತ್ತೀರಿ? ಇದರಿಂದ ಸರ್ಕಾರಕ್ಕೆ ಮತ್ತು ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂದು ವಿಧಾನಸಭೆಯ ಉಪಸಭಾಧ್ಯಕ್ಷ ಹಾಗೂ ಶಾಸಕ ರುದ್ರಪ್ಪ ಲಮಾಣಿ ಅವರು ಗುತ್ತಿಗೆದಾರರನ್ನು ತರಾಟೆಗೆ ತೆಗೆದುಕೊಂಡರು.

ಸ್ಥಳೀಯ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದಕರ್ನಾಟಕಜಲಮಂಡಳಿ, ನಗರಾಭಿವೃದ್ಧಿ ಕೋಶ, ನಗರಸಭೆ ಹಾಗೂ ಕೆಯುಐಡಿಎಫ್‌ಸಿ, ಕೆ.ಯು.ಡಬ್ಲ್ಯೂ.ಎಸ್ ಇಲಾಖೆ ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಹಾವೇರಿ ನಗರಕ್ಕೆ ನೀರು ಸರಬರಾಜು ಮಾಡುವ ಯೋಜನೆಯ ಕಾಮಗಾರಿ ಆದೇಶ ಪಡೆದು 3 ವರ್ಷಗಳಾದರೂ ಭೌತಿಕವಾಗಿ ಪೂರ್ಣಗೊಂಡಿಲ್ಲ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಇನ್ನು ಎಷ್ಟು ವರ್ಷಗಳಲ್ಲಿ ಕೆಲಸ ಮುಗಿಸುತ್ತೀರಿ? ಕೂಡಲೇ ಹೆಚ್ಚಿನ ಕಾರ್ಮಿಕರನ್ನು ನಿಯೋಜಿಸಿ ಕೆಲಸಕ್ಕೆ ವೇಗ ನೀಡಬೇಕು ಎಂದು ಗುತ್ತಿಗೆದಾರರಿಗೆ ತಾಕೀತು ಮಾಡಿದರು.ನೀರಿನ ಜಾಲತಾಣ ವ್ಯವಸ್ಥೆಯನ್ನು ಸರಿಪಡಿಸಲು ತುರ್ತಾಗಿ ಅಂದಾಜು ಪಟ್ಟಿ ಹಾಗೂ ಡಿಪಿಆರ್ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಬೇಕು. ಈ ಪ್ರಕ್ರಿಯೆಯಲ್ಲಿ ಯಾವುದೇ ವಿಳಂಬವಾಗಬಾರದು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದ ಅವರು, ಕಾಮಗಾರಿಗಳ ವಿವರಗಳನ್ನು ಸರಿಯಾಗಿ ನೀಡದ ಮತ್ತು ಮೇಲ್ವಿಚಾರಣೆಯಲ್ಲಿ ನಿರ್ಲಕ್ಷ್ಯ ತೋರಿದ ಅಧಿಕಾರಿಗಳ ವಿರುದ್ಧ ಹರಿಹಾಯ್ದರು. ಅಧಿಕಾರಿಗಳ ಸಮರ್ಪಕ ನಿರ್ವಹಣೆ ಇಲ್ಲದೇ ಹೋದಲ್ಲಿ ಯಾವುದೇ ಯೋಜನೆಗಳು ಸಕಾಲಕ್ಕೆ ಪೂರ್ಣಗೊಳಿಸಲು ಸಾಧ್ಯವಿಲ್ಲ, ಕರ್ತವ್ಯ ಲೋಪ ಎಸಗುವವರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿದರು.

ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ, ಕೆ.ಯು.ಡಬ್ಲ್ಯೂ.ಎಸ್ ಮುಖ್ಯ ಎಂಜಿನಿಯರ್ ಸುಭಾಷ್ ಗಾಯಕ್ವಾಡ್, ತಾಂತ್ರಿಕ ಪರಿಣಿತರಾದ ಜಯರಾಮ್, ಬ್ಲೂ ವಾಟರ್ ಕನ್ಸಲ್ಟೆಂಟ್‌ನ ಪ್ರತಿನಿಧಿಗಳು, ಕಾರ್ಯನಿರ್ವಾಹಕ ಅಭಿಯಂತರರಾದ ಜಗದೀಶ್ ಹೊಸಮನಿ, ಮಧುರಾ, ನಗರಾಭಿವೃದ್ಧಿ ಇಲಾಖೆ ಹಾಗೂ ನಗರಸಭೆಯ ಸಿಬ್ಬಂದಿ ಇದ್ದರು.



> **10 ಕೋಟಿ ಅನುದಾನದ ಘೋಷಣೆ**
>
> ಹಾವೇರಿ ನಗರದ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಈಗಾಗಲೇ ಮುಖ್ಯಮಂತ್ರಿಗಳು ಹಾಗೂ ಸಚಿವರೊಂದಿಗೆ ಚರ್ಚಿಸಲಾಗಿದೆ. ನಗರದ ಕುಡಿಯುವ ನೀರಿನ ಜಾಲತಾಣ ವ್ಯವಸ್ಥೆ ಸರಿಪಡಿಸಲು ಸರ್ಕಾರದಿಂದ 10 ಕೋಟಿ ರೂ.,ಗಳ ವಿಶೇಷ ಅನುದಾನ ನೀಡಲು ಒಪ್ಪಿಗೆ ದೊರೆತಿದೆ ಎಂದು ವಿಧಾನಸಭೆ ಉಪಸಭಾಪತಿ, ಶಾಸಕ ರುದ್ರಪ್ಪ ಲಮಾಣಿ ಸಭೆಯಲ್ಲಿ ಮಾಹಿತಿ ನೀಡಿದರು.

ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ

ರಾಣೇಬೆನ್ನೂರ: ರಾಜ್ಯದಲ್ಲಿ ಬೇರೆ ಪಕ್ಷದವರ ಆಡಳಿತವಿದ್ದಾಗ ಹಾವೇರಿ ಜಿಲ್ಲೆಗೆ ಮುಖ್ಯಮಂತ್ರಿ ಸೇರಿ ಇಬ್ಬರಿಗೆ ಸಚಿವ ಸ್ಥಾನ ಕೂಡ ಕೊಟ್ಟಿದ್ದರು. ಆದರೆ, ನಮ್ಮದೇ ಕಾಂಗ್ರೆಸ್ ಸರ್ಕಾರವಿದ್ದಾಗ ಈವರೆಗೂ ಜಿಲ್ಲೆಯ ಒಬ್ಬರಿಗೂ ಮಂತ್ರಿ ಸ್ಥಾನ ನೀಡಿಲ್ಲ ಎಂದು ಬ್ಯಾಡಗಿ ಶಾಸಕ ಬಸವರಾಜ ಶಿವಣ್ಣನವರ ಬೇಸರ ವ್ಯಕ್ತಪಡಿಸಿದರು.

ತಾಲೂಕಿನ ಬೆನಕನಕೊಂಡ ಗ್ರಾಮದಲ್ಲಿ 2.50 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ನಮ್ಮ ಸರ್ಕಾರ ಆಡಳಿತಕ್ಕೆ ಬಂದಾಗ ಈ ಹಿಂದೆ ಒಂದು ಬಾರಿ ಕೆ.ಬಿ. ಕೋಳಿವಾಡರನ್ನು ನೀರಾವರಿ ಸಚಿವರನ್ನಾಗಿ ಮಾಡಿದ್ದರು. ಅದು ಕೆಲವೇ ವರ್ಷಗಳ ಕಾಲ ಮಾತ್ರ. ಅದನ್ನು ಬಿಟ್ಟರೆ ಈವರೆಗೂ ನಮ್ಮ ಸರ್ಕಾರದಲ್ಲಿ ಹಾವೇರಿ ಜಿಲ್ಲೆಗೆ ಬೇರೆಯವರನ್ನೇ ಜಿಲ್ಲಾ ಉಸ್ತುವಾರಿ ನೀಡುತ್ತ ಬರಲಾಗಿದೆ ಹೊರತು ಜಿಲ್ಲೆಯ ಶಾಸಕರನ್ನು ಮಾಡಲಿಲ್ಲ ಎಂದರು.

2023ರ ಚುನಾವಣೆಯಲ್ಲಿ ನಾವು ಗೆಲುವು ಸಾಧಿಸಿ ಅಧಿಕಾರಕ್ಕೆ ಬಂದಾಗ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಕೆಶಿ ಯವರು ಎರಡೂವರೆ ವರ್ಷದ ಬಳಿಕ ಮಂತ್ರಿ ಸ್ಥಾನ ಕೊಡುವುದಾಗಿ ಹೇಳಿದ್ದರು. ನಾವು 45 ಜನ ಹಿರಿಯ ಶಾಸಕರು ದೆಹಲಿಗೆ ತೆರಳಿ ಖರ್ಗೆ ಹಾಗೂ ಸೂರ್ಜೆವಾಲ್ ಅವರನ್ನು ಭೇಟಿ ಮಾಡಿ ಅರ್ಹತೆ ಹಾಗೂ ಸಾಮಾಜಿಕ ನ್ಯಾಯದ ಆಧಾರದ ಮೇಲೆ ಸಚಿವ ಸ್ಥಾನಕ್ಕಾಗಿ ಬೇಡಿಕೆ ಇಟ್ಟು ಬಂದಿದ್ದೇವೆ ಎಂದರು.

ಜಿಲ್ಲೆಯಲ್ಲಿ ನಾನು, ರುದ್ರಪ್ಪ ಲಮಾಣಿ, ಯು.ಬಿ. ಬಣಕಾರ ಹಾಗೂ ಶ್ರೀನಿವಾಸ ಮಾನೆ ಎರಡ್ಮೂರು ಬಾರಿ ಶಾಸಕರಾಗಿದ್ದೇವೆ. ಸಿನಿಯಾರಿಟಿ ಮೇಲೆ ಸಚಿವ ಸ್ಥಾನ ನಮಗೆ ನೀಡುವಂತೆ ಕೇಳಿದ್ದೇವೆ. ಜಿಲ್ಲೆಯವರಿಗೆ ಮಂತ್ರಿ ಸ್ಥಾನ ನೀಡಿದರೆ ಅಭಿವೃದ್ಧಿ ಕೆಲಸಗಳಿಗೆ ಅನುಕೂಲವಾಗಲಿದೆ ಎಂದರು.

ಗ್ರಾಪಂ ಮಾಜಿ ಅಧ್ಯಕ್ಷೆ ಮಂಜುಳಾ ಅಸುಂಡಿ, ಪ್ರಮುಖರಾದ ಸುರೇಶ ಬಿರಪ್ಪನವರ, ಈರಪ್ಪ ಓಲೇಕಾರ, ಬೆನಕಪ್ಪ ಮುದಿಹಾಳ, ಹಾಲನಗೌಡ ನಿಂಗನಗೌಡ್ರ, ಬಸಣ್ಣ ಸವಣೂರ, ಎಇಇ ಆಂಜನೇಯ, ರೇವಣೆಪ್ಪ ಬಿದರಿ, ರಾಜು ಕಳ್ಳಿಮನಿ, ಶಾಂತಪ್ಪ ಕಿವುಡಣ್ಣನವರ, ಎಸ್.ಟಿ. ನೆಗಳೂರ ಮತ್ತಿತರರು ಉಪಸ್ಥಿತರಿದ್ದರು.



ಕಾಮಗಾರಿ ಪರಿಶೀಲಿಸಿದ ಸಂಸದ ಬೊಮ್ಮಾಯಿ

ಹಾವೇರಿ: ಜಿಲ್ಲೆಯ ಹಾನಗಲ್ಲಿನ ನಾಲ್ಕರ ಕ್ರಾಸ್‌ನಿಂದ ಸಮ್ಮಸಗಿ ಗ್ರಾಮದವರೆಗೆ ಸಾಗರ ಮಾಲಾ ಯೋಜನೆಯ ಅಡಿಯಲ್ಲಿ ನಿರ್ಮಾಣ ಹಂತದಲ್ಲಿರುವ ಹಾವೇರಿ - ಶಿರಸಿ ರಾಷ್ಟ್ರೀಯ ಹೆದ್ದಾರಿಯ ಕಾಮಗಾರಿಯನ್ನು ಶುಕ್ರವಾರ ಮಾಜಿ ಸಿಎಂ, ಸಂಸದ ಬಸವರಾಜ ಬೊಮ್ಮಾಯಿ ಪರಿಶೀಲನೆ ನಡೆಸಿದರು.

ಅಧಿಕಾರಿಗಳ ಜೊತೆಗೆ ಕಾಮಗಾರಿ ನಡೆಯುತ್ತಿರುವ ಹನುಮನಕೊಪ್ಪ, ಬಾಳೆಹಳ್ಳಿ, ಕತ್ರಿಕೊಪ್ಪ, ಸಮ್ಮಸಗಿ ಗ್ರಾಮಗಳಿಗೆ ತೆರಳಿ ಕಾಮಗಾರಿ ಪ್ರಗತಿ ಪರಿಶೀಲಿಸಿದರು. ಈ ಸಂದರ್ಭದಲ್ಲಿ ಸಮ್ಮಸಗಿ ಗ್ರಾಮದಲ್ಲಿ ವಾಹನ ಸಂಚಾರವಾಗದಷ್ಟು ರಸ್ತೆ ಹಾಳಾಗಿದ್ದರಿಂದ ತಕ್ಷಣ ರಸ್ತೆ ಸಮತಟ್ಟಾಗಿ ಮಾಡಿ, ವಾಹನ ಸಂಚಾರಕ್ಕೆ ಅನುವು ಮಾಡಿಕೊಡಬೇಕು ಹಾಗೂ ವಾಹನ ಸಂಚಾರದಿಂದ ಹಳ್ಳಿಗಳಲ್ಲಿ ಧೂಳು ಏಳುವುದರಿಂದ ಗ್ರಾಮೀಣ ಜನರಿಗೆ ಸಮಸ್ಯೆಯಾಗುತ್ತಿದ್ದು, ಪ್ರತಿ ದಿನ ಎರಡು ಮೂರು ಬಾರಿ ರಸ್ತೆಗೆ ನೀರು ಹಾಕುವಂತೆ ಅಽಕಾರಿಗಳಿಗೆ ಸೂಚಿಸಿದರು. ತಿಂಗಳಾಂತ್ಯಕ್ಕೆ ಕಾಮಗಾರಿ ಪೂರ್ಣಗೊಳಿಸಿ ಸಂಚಾರ ಮುಕ್ತಗೊಳಿಸಲು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಅಽಕಾರಿಗಳು ಕಾಮಗಾರಿ ಪ್ರಗತಿಯಲ್ಲಿರುವ ಬಗ್ಗೆ ಮಾಹಿತಿ ನೀಡಿದರು. ಈ ಸಂಧರ್ಭದಲ್ಲಿ ಹೊನ್ನಾವರ ವಿಭಾಗದ ಪಿ.ಡಿ. ಎಂ.ಶಿವಕುಮಾರ, ಅಽಕಾರಿಗಳಾದ ವಿನಾಯಕ ಸೊಂಟಕ್ಕೆ, ಮಾಜಿ ಶಾಸಕರಾದ ಶಿವರಾಜ ಸಜ್ಜನರ, ಮುಖಂಡರಾದ ಕೃಷ್ಣ ಇಳಿಗೇರ, ರಾಘವೇಂದ್ರ ತಹಶೀಲ್ದಾರ್ ಸೇರಿದಂತೆ ಬಾಳೆಹಳ್ಳಿ, ಕಂತ್ರಿಕೊಪ್ಪ ಹಾಗೂ ಸಮ್ಮಸಗಿ ಗ್ರಾಮಸ್ಥರು ಇದ್ದರು.



ಅಂಬೇಡ್ಕರ್ ಪುತ್ಥಳಿ ನಿರ್ಮಾಣಕ್ಕೆ ಆಗ್ರಹ

ಬ್ಯಾಡಗಿ: ಪಟ್ಟಣದ ನಿಸರ್ಗ ನಗರದ ಕಿತ್ತೂರು ರಾಣಿ ಚೆನ್ನಮ್ಮ ಶಾಲೆ ಹತ್ತಿರ ಇರುವ ಡಾ.ಬಿ.ಆರ್.ಅಂಬೇಡ್ಕರ್ ಭವನದ ಎದುರು ಡಾ.ಬಿ.ಆರ್. ಅಂಬೇಡ್ಕರ್ ಅವರ ಕಂಚಿನ ಪುತ್ಥಳಿ ನಿರ್ಮಾಣ ಮಾಡುವಂತೆ ಆಗ್ರಹಿಸಿ ಭವನಕ್ಕೆ ವಿವಿಧ ಮೂಲ ಭೂತ ಸೌಕರ್ಯ ಒದಗಿಸುವಂತೆ ಆಗ್ರಹಿಸಿ ದಲಿತ ಸಮಾಜದವರು ಸಾರ್ವಜನಿಕರು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಎಂಎಫ್ ನದಾಫ್ ಅವರಿಗೆ ಮನವಿ ಸಲ್ಲಿಸಿದರು.

ಈ ವೇಳೆ ಸಮಾಜದ ಮುಖಂಡ ಹಾಗೂ ಭ್ರಷ್ಟಾಚಾರ ವಿರೋಧಿ ಜನ ಆಂದೋಲನ ನ್ಯಾಸ ರಾಜ್ಯ ಸಂಚಾಲಕ ಎಂ.ಡಿ.ಚಿಕ್ಕಣ್ಣನವರ್ ಮಾತನಾಡಿ, ಕಳೆದ 2018ರಲ್ಲಿ ನಿಸರ್ಗ ನಗರದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಭವನವನ್ನು ಸ್ಥಾಪಿಸಿದ್ದು,ಇಲ್ಲಿಯವರೆಗೂ ಅನೇಕ ಸಾರ್ವಜನಿಕ ಕಾರ್ಯಕ್ರಮಗಳು ಜರುಗುತ್ತಾ ಬಂದಿದ್ದು, ಮದುವೆ ಕಾರ್ಯಕ್ರಮಗಳಿಂದ ಬಂದಂತ ಹಣವನ್ನು ತಹಶೀಲ್ದಾರ್ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಜಂಟಿ ಖಾತೆಗೆ ಜಮಾ ಮಾಡುತ್ತಾ ಬಂದಿದ್ದು ಬ್ಯಾಂಕ್ ಖಾತೆ ತೆರೆದಾಗಿನಿಂದಲೂ ಇಲ್ಲಿಯವರೆಗೂ ಹಣವನ್ನು ಬಿಡಿಸಿಕೊಂಡಿರುವುದಿಲ್ಲ ಈಗ ಬ್ಯಾಡಗಿ ಪಟ್ಟಣದ ದಲಿತ ಸಮಾಜದವರ ಮಹಾದಾಸೆ ಯಂತೆ ಡಾ.ಬಿ.ಆರ್.ಅಂಬೇಡ್ಕರ್ ಅವರ ಕಂಚಿನ ಪುತ್ತಳಿ ಮತ್ತು ಭವನಕ್ಕೆ ಕುರ್ಚಿ ಟೇಬಲ್ ಅಡುಗೆ ಪಾತ್ರೆಗಳು ಅವಶ್ಯಕತೆ ಇದ್ದು ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶಕರು ತಮ್ಮ ಜಂಟಿ ಖಾತೆಯಲ್ಲಿರುವ ಹಣವನ್ನು ತೆಗೆದುಕೊಂಡು ಭವನದ ಮುಂದೆ ಪುತ್ಥಳಿ ಹಾಗೂ ಭವನದ ಒಳಗಡೆ ಬೇಕಾಗುವ ವಸ್ತುಗಳಿಗೆ ಕೂಡಲೇ ಕೊಡಿಸುವಂತೆ ಆಗ್ರಹಿಸಿದರು. ಸಮಾಜದವರಾದ ಶ್ರೀಕಾಂತ್ ಹುಣಸಿಮರದ, ಹಾಲಪ್ಪ ಜಾಲೇಮ್ಮನವರ. ಫಕ್ಕೀರೇಶ ಹೊನ್ನಮ್ಮನವರ, ಚೌಡಪ್ಪ ಹೊನ್ನಮ್ಮನವರ, ಚಂದ್ರಪ್ಪ ಮಾಳಗಿ, ಮೊದಿನ ಸಾಬ್ ಬಡಿಗೇರ್, ಮಾಲತೇಶ್ ಚಿಕ್ಕಣ್ಣನವರ್ ಮತ್ತಿತರರಿದ್ದರು.



ಶೇ.97.41ರಷ್ಟು ಫಲಿತಾಂಶ ದಾಖಲು

ಹಾವೇರಿ: ತಾಲೂಕಿನ 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ -1ರ ಫಲಿತಾಂಶ ಶೇ.97.41 ರಷ್ಟಾಗಿದ್ದು, ತಾಲೂಕಿನ ಇತಿಹಾಸದಲ್ಲಿ ಪ್ರಥಮ ಬಾರಿಗೆ ಜಿಲ್ಲೆಯಲ್ಲಿಯೇ ಅತಿ ಹೆಚ್ಚು ಅಂದರೆ 84 ಪ್ರೌಢ ಶಾಲೆಗಳಲ್ಲಿ 58 ಪ್ರೌಢಶಾಲೆಗಳು ನೂರರ?ಷ್ಟು ಸಾಧನೆ ಮಾಡಿರುತ್ತವೆ ಎಂದು ಬಿಇಒ ಎಂ.ಎಚ್. ಪಾಟೀಲ ತಿಳಿಸಿದ್ದಾರೆ.

ತಾಲೂಕಿನ 84 ಪ್ರೌಢಶಾಲೆಗಳಲ್ಲಿ ಸರ್ಕಾರಿ ಪ್ರೌಢಶಾಲೆಯ ಸಾಧನೆ ಶೇ.97.11 ಮತ್ತು ಅನುದಾನಿತ ಪ್ರೌಢಶಾಲೆಗಳ ಸಾಧನೆ ಶೇ.96.31 ಆಗಿರುತ್ತದೆ. ಅನುದಾನ ರಹಿತ ಪ್ರೌಢಶಾಲೆಗಳು ಶೇ.99.04ರಷ್ಟು ಫಲಿತಾಂಶದಲ್ಲಿ ಸಾಧನೆ ಮಾಡಿರುತ್ತವೆ. ಜಿಲ್ಲೆಯಲ್ಲಿ ಅತಿ ಹೆಚ್ಚು ವಿದ್ಯಾರ್ಥಿಗಳು ಅಂದರೆ 409 ಎ ಪ್ಲಸ್ ಗ್ರೇಡ್ ಪಡೆದಿರುತ್ತವೆ. ಎ 705, ಬಿ+ 745, ಬಿ 686, ಬಿ+ 635, 556 ವಿದ್ಯಾರ್ಥಿಗಳು ಸಿ ಗ್ರೇಡ್ ಪಡೆದಿದ್ದಾರೆ. ಪರೀಕ್ಷೆಗೆ ಹಾಜರಾದ 3829 ವಿದ್ಯಾರ್ಥಿಗಳ ಪೈಕಿ 3730 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. 99 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ.

ಶೇಕಡಾವಾರು ಫಲಿತಾಂಶ: 84 ಪ್ರೌಢಶಾಲೆಗಳ ಪೈಕಿ 58 ಪ್ರೌಢಶಾಲೆಗಳ ಫಲಿತಾಂಶ ಶೇ.100, 27 ಪ್ರೌಢಶಾಲೆಗಳ ಫಲಿತಾಂಶ ಶೇ.90-99, 7 ಶಾಲೆಗಳ ಫಲಿತಾಂಶ 80-89 ಹಾಗೂ ಒಂದು ಶಾಲೆಯ ಫಲಿತಾಂಶ 70-79 ಆಗಿರುತ್ತದೆ. ಗ್ರಾಮೀಣ ವಿದ್ಯಾರ್ಥಿಗಳು ಶೇಕಡ 97.45 ಹಾಗೂ ನಗರದ ಪ್ರದೇಶ ವಿಧ್ಯಾರ್ಥಿಗಳು ಶೇಕಡ 97.35 ರಷ್ಟು ಸಾಧನೆ ಮಾಡಿದ್ದಾರೆ.

ಹಾವೇರಿ ತಾಲೂಕಿನ ಐತಿಹಾಸಿಕ ಫಲಿತಾಂಶಕ್ಕೆ ಕಾರಣರಾದ ತಾಲೂಕಿನ ಎಲ್ಲ ವಿದ್ಯಾರ್ಥಿಗಳು ಪ್ರೌಢಶಾಲೆಯ ಮುಖ್ಯ ಶಿಕ್ಷಕರು ಸಹ ಶಿಕ್ಷಕರು ಹಾಗೂ ಎಸ್.ಡಿ.ಎಂ.ಸಿ. ಪದಾಧಿಕಾರಿಗಳು, ಎಲ್ಲ ಶಾಲೆಗಳ ನೋಡಲ್ ಅಧಿಕಾರಿಗಳು ಹಾಗೂ ತಾಲೂಕಿನ ಉಸ್ತುವಾರಿ ಅಽಕಾರಿಗಳ ಪ್ರತಿಫಲವಾಗಿರುತ್ತದೆ. ಇದಕ್ಕೆಲ್ಲ ಮಾರ್ಗದರ್ಶನ ಹಾಗೂ ಪ್ರೋತ್ಸಾಹ ನೀಡಿದ ಮಾನ್ಯ ಶಾಸಕರಿಗೆ ಹಾಗೂ ಜಿಲ್ಲೆಯ ಎಲ್ಲ ಹಿರಿಯ ಅಧಿಕಾರಿಗಳ ಸಹಕಾರ ಎಂದು ಶ್ಲಾಘನೆ ವ್ಯಕ್ತಪಡಿಸಿದ್ದಾರೆ.

ಎಸ್‌ಬಿಬಿಎಂಡಿ ಶಾಲೆ ವಿದ್ಯಾರ್ಥಿಗಳ ಸಾಧನೆ

ಶಿಗ್ಗಾವಿ: ಪಟ್ಟಣದ ಪ್ರತಿಷ್ಠಿತ ಎಸ್‌ಬಿಬಿಎಂಡಿ ಪ್ರಾಢಶಾಲೆ ಫಲಿತಾಂಶ ಶೇ.97.82 ರಷ್ಟಾಗಿದೆ. ಪರೀಕ್ಷೆಗೆ ಕುಳಿತ 138 ವಿದ್ಯಾರ್ಥಿಗಳಲ್ಲಿ 135 ವಿದ್ಯಾರ್ಥಿಗಳು ಪಾಸಾಗಿದ್ದು, 15 ವಿದ್ಯಾರ್ಥಿಗಳು ಉನ್ನತಶ್ರೇಣಿಯಲ್ಲಿ, 56 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ 39 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ,25 ತೃತೀಯ ಶ್ರೇಣಿಯಲ್ಲಿ ಪಾಸಾಗಿದ್ದಾರೆ. ಕು/ರಿ ಶಕುಂತಲಾ ಮುರುಗಣ್ಣವರ 595 (95.2%)ಪ್ರಥಮ ಸ್ಥಾನ,ಕು/ರಿ ನಂದಿನಿ ಹಳವೂರ 593 (94.8%) ದ್ವಿತೀಯ ಸ್ಥಾನ , ಶ್ರೇಯಾ ಗಣಪ್ಪನವರ 582 (93.12%) ತೃತೀಯ ಸ್ಥಾನ ಪಡೆದಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಸಂಸ್ಥೆಯ ಅಧ್ಯಕ್ಷರು ನಂದಕುಮಾರ ಮಾಮಲೆದೇಸಾಯಿ, ಕಾರ್ಯದರ್ಶಿ ದತ್ತಣ್ಣ ವೇರ್ಣೇಕರ ಹಾಗೂ ಸರ್ವ ಕಾರ್ಯಕಾರಿ ಮಂಡಳಿ ಸದಸ್ಯರು ಕಾಲೇಜಿನ ಪ್ರಾಚಾರ್ಯ ಆರ್. ಎಸ್. ಭಟ್, ಉಪಪ್ರಚಾರ್ಯ ಶ್ರೀ ಕೆ. ಬಿ ಚನ್ನಪ್ಪ ಹಾಗೂ ಸರ್ವ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳ ಪಾಲಕರು ಅಭಿನಂದಿಸಿದ್ದಾರೆ.





ರಟ್ಟೀಹಳ್ಳಿ : ಪಟ್ಟಣ ಪಂಚಾಯತ ಆವರಣದಲ್ಲಿ ಜಗದ್ಗುರು ಆದಿ ಶಂಕರಾಚಾರ್ಯರ ಜಯಂತಿಯನ್ನು ಆಚರಿಸಲಾಯಿತು. ಪಪಂ ಅಧ್ಯಕ್ಷ ಉಪಾಧ್ಯಕ್ಷ ಮುಖ್ಯಾಧಿಕಾರಿ, ಪಪಂ ಸದಸ್ಯರು, ಸಿಬ್ಬಂದಿ ಭಾಗವಹಿಸಿದ್ದರು.

ವರ್ತಕರ ಬೇಡಿಕೆ ಈಡೇರಿಕೆಗೆ ಒತ್ತಾಯ

ರಾಣೇಬೆನ್ನೂರ: ಇಲ್ಲಿಯ ಎಪಿಎಂಸಿ ಜಾನುವಾರು ಮಾರುಕಟ್ಟೆಯಲ್ಲಿ ನಿವೇಶನಕ್ಕಾಗಿ ಈ ಹಿಂದೆ ಶುಲ್ಕ ಕಟ್ಟಿದ ವರ್ತಕರಿಗೆ ಶುಲ್ಕ ಹಿಂತಿರುಗಿಸಬೇಕು. ಜತೆಗೆ ಹುಲಿಹಳ್ಳಿ ಬಳಿ ನಿರ್ಮಿಸಿದ ಎಪಿಎಂಸಿ ಮೇಗಾ ಮಾರುಕಟ್ಟೆಯಲ್ಲಿ ನಿವೇಶನ ಪಡೆದ ವರ್ತಕರಿಗೆ ನೋಂದಣಿ ಮಾಡಿಕೊಡಬೇಕು ಎಂದು ಒತ್ತಾಯಿಸಿ ನೆಹರು ಮಾರುಕಟ್ಟೆ ವರ್ತಕರ ಸಂಘದಿಂದ ಎಪಿಎಂಸಿ ಸಹಾಯಕ ಕಾರ್ಯದರ್ಶಿ ಪರಮೇಶ ನಾಯ್ಕ ಅವರಿಗೆ ಮನವಿ ಸಲ್ಲಿಸಲಾಯಿತು.

ವರ್ತಕ ಜಿ.ಜಿ. ಹೊಟ್ಟಿಗೌಡ್ರ ಮಾತನಾಡಿ, ಜಾನುವಾರು ಮಾರುಕಟ್ಟೆಯಲ್ಲಿ ನಿವೇಶನ ಕೊಡುವ ವಿಚಾರವಾಗಿ ಎಪಿಎಂಸಿಯವರು ಹಲವು ವರ್ಷಗಳ ಹಿಂದೆ ಶುಲ್ಕ ಕಟ್ಟಿಸಿಕೊಂಡಿದ್ದಾರೆ. ಆದರೆ, ಅಲ್ಲಿ ಯಾವ ವ್ಯಾಪಾರಸ್ಥರು ಹೋಗಿ ವ್ಯಾಪಾರ ಮಾಡಿಲ್ಲ. ಆದ್ದರಿಂದ ಎಪಿಎಂಸಿಯವರು ವರ್ತಕರಿಂದ ಕಟ್ಟಿಸಿಕೊಂಡ ಶುಲ್ಕವನ್ನು ಬಡ್ಡಿ ಸಮೇತ ವಾಪಸ್ ನೀಡಬೇಕು.

ಇದರ ಜತೆಗೆ ಹುಲಿಹಳ್ಳಿ ಬಳಿಯ ಎಪಿಎಂಸಿ ಮೇಗಾ ಮಾರುಕಟ್ಟೆಯಲ್ಲಿ ನಿವೇಶನ ಹಂಚಿಕೆ ಮಾಡಿದ ವರ್ತಕರಿಗೆ ಈವರೆಗೂ ನೋಂದಣಿ ಮಾಡಿಕೊಟ್ಟಿಲ್ಲ. ಇದರಿಂದ ವರ್ತಕರು ಶುಲ್ಕ ತುಂಬಿ ಬಹಳಷ್ಟು ದಿನವಾದರೂ ಅಲ್ಲಿ ವ್ಯಾಪಾರ ಮಾಡಲಾಗದೆ, ಕಟ್ಟಡ ನಿರ್ಮಿಸಲಾಗದೆ ತೊಂದರೆ ಅನುಭವಿಸುತ್ತಿದ್ದಾರೆ. ಆದ್ದರಿಂದ ಎಪಿಎಂಸಿ ಅಧಿಕಾರಿಗಳು ಈ ಕುರಿತು ಕೂಡಲೇ ಕ್ರಮ ಕೈಗೊಂಡು ವರ್ತಕರ ಬೇಡಿಕೆ ಈಡೇರಿಸಬೇಕು ಎಂದು ಒತ್ತಾಯಿಸಿದರು.

ಪ್ರಮುಖರಾದ ವಿ.ಎಸ್. ಪಟ್ಟಣಶೆಟ್ಟಿ, ಹಾಲೇಶಪ್ಪ ಮುದ್ದಿ, ಮಲ್ಲಿಕಾರ್ಜುನ ಚೊಣ್ಣದ, ಸೋಮನಗೌಡ ಹೊಟ್ಟಿಗೌಡ್ರ, ಬಸವರಾಜ ನರಸಗೊಂಡರ, ರಾಜು ನರಸಗೊಂಡರ, ಚೇತನ ಅಂಗಡಿ, ಹನುಮಂತಪ್ಪ ಸಾವಕಾರ, ವೆಂಕಟೇಶ ಸಾವಕಾರ ಸೇರಿದಂತೆ ಮತ್ತಿತರರು ಇದ್ದರು.



ಕಿರುಸುದ್ದಿ

ಎಸ್ಸೆಸ್ಸೆಲ್ಸಿ ಫಲಿತಾಂಶ: ಸ್ವಾತಿ ಸಾವಳಗಿ ಪ್ರಥಮ





ಸುರೇಬಾನ: ಈ ಸಾಲಿನ ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ಸಮೀಪದ ಕಿತ್ತೂರಿನ ಉನ್ನತೀಕರಿಸಿದ ಸರ್ಕಾರಿ ಪ್ರೌಢ ಶಾಲೆ ಶೇ.100ರಷ್ಟು ಅಂಕ ಪಡೆದು ಸಾಧನೆ ಮಾಡಿದೆ. ಪರೀಕ್ಷೆಗೆ ಹಾಜರಾದ ಎಲ್ಲ 32 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಸ್ವಾತಿ ಫಕೀರಪ್ಪ ಸಾವಳಗಿ 94% ಪ್ರಥಮ, ಕಾರ್ತಿಕ ಚಂದ್ರಶೇಖರ ಬಡಿಗೇರ 92% ದ್ವಿತೀಯ, ಸಾವಿತ್ರಿ ಈರಪ್ಪ ಜಾಮದಾರ 91.36% ತೃತೀಯ ಸ್ಥಾನ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ. ಶಾಲಾ ಮುಖ್ಯೋಪಾಧ್ಯಯ ಮತ್ತು ಶಿಕ್ಷಕ ವೃಂದ, ಎಸ್‌ಡಿಎಂಸಿ ಅಧ್ಯಕ್ಷ, ಸರ್ವ ಸದಸ್ಯರು ವಿದ್ಯಾರ್ಥಿಗಳ ಸಾಧನೆಗೆ ಹರ್ಷ ವ್ಯಕ್ತಪಡಿಸಿದ್ದಾರೆ.

ಕರೆಸಿದ್ಧೇಶ್ವರ ಪ್ರೌಢಶಾಲೆ ಸಾಧನೆ




ಹಾರೂಗೇರಿ: ಕರೆಸಿದ್ದೇಶ್ವರ ಪ್ರಾಥಮಿಕ ಹಾಗೂ ಪ್ರೌಢಶಾಲೆ ಶಾಲೆಯ ಹತ್ತನೇ ತರಗತಿಯ ವಿದ್ಯಾರ್ಥಿಗಳು ಈ ಬಾರಿ ಉತ್ತಮ ಅಂಕಗಳನ್ನ ಗಳಿಸಿ ಶಾಲೆಯ ಕೀರ್ತಿ ಇಮ್ಮಡಿಗೊಳಿಸಿದ್ದಾರೆ. 100ಕ್ಕೆ 100 ಫಲಿತಾಂಶ ಬಂದಿದ್ದು, ಒಟ್ಟು 45 ವಿದ್ಯಾರ್ಥಿಗಳು ಉತ್ತೀರ್ಣರಾಗಿದೆ. ನಿಸರ್ಗಾ ಬಡಿಗೇರ 97.44%,ಅಂಕಿತಾ ಪಾಟೀಲ 97.28%,ಸಭಾ ಶೇಖ್ 96.48%, ಸಾದಿಯ ಜಮಾದಾರ 96.16%, ಪ್ರೀತಿ ಗಾಣಿಗೇರ 94.40% ಅಂಕಗಳೊಂದಿಗೆ ಮೊದಲ ಐದು ಸ್ಥಾನದಲ್ಲಿದ್ದು, ಉಳಿದ ವಿದ್ಯಾರ್ಥಿಗಳು ಕೂಡ ಅತ್ಯುತ್ತಮ ಫಲಿತಾಂಶ ನೀಡಿ ಶಾಲೆಯ ಕೀರ್ತಿ ಇಮ್ಮಡಿಗೊಳಿಸಿದ್ದಾರೆ. ಇವರ ಈ ಸಾಧನೆಗೆ ಸಂಸ್ಥೆಯ ಅಧ್ಯಕ್ಷ ಭಗವಂತ ಬಂತಿ ಹಾಗೂ ನಿರ್ದೇಶಕ ಮಂಡಳಿ,ಶಿಕ್ಷಕ ,ಸಿಬ್ಬಂದಿ ವರ್ಗ ಹಾಗೂ ಮುಖ್ಯೋಪಾಧ್ಯಾಯರಾದ ಈಶ್ವರ ಬಿರಾದಾರ ಅಭಿನಂದನೆ ಸಲ್ಲಿಸಿದ್ದಾರೆ.

ಸೃಷ್ಟಿ ಖಾತೇದಾರಗೆ ಶೇ.96.16 ಅಂಕ



ಖಾನಾಪುರ: ತಾಲೂಕಿನ ಜಾಂಬೋಟಿಯ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಯ ವಿದ್ಯಾರ್ಥಿನಿ ಸೃಷ್ಟಿ ಮಂಜುನಾಥ ಖಾತೇದಾರ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.96.16 ಅಂಕ ಗಳಿಸಿದ್ದಾಳೆ. ಸಾಧಕ ವಿದ್ಯಾರ್ಥಿನಿ ಶಾಲೆಯ ಮುಖ್ಯ ಶಿಕ್ಷಕರು, ಶಿಕ್ಷಕರು ಹಾಗೂ ಪಾಲಕರು ಅಭಿನಂದಿಸಿದ್ದಾರೆ.

ಬೆಳಗಾವಿಯಲ್ಲಿ ಅಬ್ಬರಿಸಿದ ಮಳೆರಾಯ

ಬೆಳಗಾವಿ : ರಣ ಬಿಸಿಲ ಹೊಡೆತಕ್ಕೆ ಕಾದ ಕಾವಲಿಯಂತಾಗಿದ್ದ ಬೆಳಗಾವಿಯಲ್ಲಿ ಏಕಾಏಕಿ ಮಳೆ ಅಬ್ಬರಿಸಿದೆ. ಉರಿ ಬಿಸಿಲಿನಿಂದ ಕಂಗೆಟ್ಟವರಿಗೆ ಮಳೆರಾಯ ತಂಪೆರೆದಿದ್ದಾನೆ. ಬೆಳಗಾವಿ ನಗರದಲ್ಲಿ ದಿಢೀರ್ ಮಳೆ ಸುರಿಯುತ್ತಿದ್ದು, ಏಕಾಏಕಿ ಸುರಿದ ಭಾರಿ ಮಳೆಯಿಂದಾಗಿ ವಾಹನ ಸವಾರರು ಪರದಾಡುವಂತಾಗಿದೆ. ಮತ್ತೊಂದೆಡೆ ಸಿಇಟಿ ಪರೀಕ್ಷೆ ಬರೆಯಲು ಬಂದ ವಿದ್ಯಾರ್ಥಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ. ಧರಾಕಾರವಾಗಿ ಸುರುದ ಮಳೆಯಿಂದಾಗಿ ಸಿಇಟಿ ಪರೀಕ್ಷಾ ಕೊಠಡಿಯ ಹೊರಗೆ ಇಟ್ಟಿದ್ದ ವಿದ್ಯಾರ್ಥಿಗಳ ಬ್ಯಾಗ್ ಗಳು ತೊಯ್ದು ಹೋಗಿದ್ದು, ವಿದ್ಯಾರ್ಥಿಗಳು ಪರದಾಡುವಂತಾಗಿದೆ. ಎಸ್.ಜಿ.ಬಾಳೆಕುಂದ್ರಿ ಇಂಜಿನಿಯರಿಂಗ ಕಾಲೇಜಿನಲ್ಲಿ ಪರೀಕ್ಷಾ ಕೊಠಡಿಯ ಹೊರ ಭಾಗದಲ್ಲಿ ವಿದ್ಯಾರ್ಥಿಗಳು ಬ್ಯಾಗ್ ಗಳನ್ನು ಇಟ್ಟು ಪರೀಕ್ಷೆ ಬರೆಯುತ್ತಿದ್ದು, ಏಕಾಏಕಿ ಸುರಿದ ಮಳೆಗೆ ವಿದ್ಯಾರ್ಥಿಗಳ ಬ್ಯಾಗ್ ಗಳು ತೊಯ್ದು ತೊಪ್ಪೆಯಾಗಿವೆ.

ನಿಧನ ಸುದ್ದಿ

ಬಸಪ್ಪ ಸಿದ್ದಪ್ಪ ಇಟಗಿ



ಸುರೇಬಾನ: ಸಮೀಪದ ಶಿವಪೇಠ ಗ್ರಾಮದ ಹಿರಿಯ ಜೀವಿ ಬಸಪ್ಪ ಸಿದ್ದಪ್ಪ ಇಟಗಿ(87) ನಿಧನರಾದರು. ಮೃತರು ಇಬ್ಬರು ಗಂಡು ಮಕ್ಕಳು, ಮೂರು ಹೆಣ್ಣು ಮಕ್ಕಳು, ಮೊಮ್ಮಕ್ಕಳು, ಸಹೋದರ-ಸಹೋದರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದರು.



ಗೋಕಾಕ: ನಗರದ ಡಾಲರ್ಸ್ ಕಾಲೋನಿ ಪಕ್ಕದಲ್ಲಿ ನೂತನವಾಗಿ ನಿರ್ಮಿಸಲಾದ ಸ್ಪೋರ್ಟ್ಸ್ ಟರ್ಫ್‌ಮೈದಾನವನ್ನು ಯುವ ನಾಯಕ ಡಿಸಿಸಿ ಬ್ಯಾಂಕ್ ನಿರ್ದೇಶಕ ಅಮರನಾಥ ಜಾರಕಿಹೊಳಿ ಉದ್ಘಾಟಿಸಿದರು. ಅನೀಲ ತುರಾಯಿದಾರ, ಆನಂದ ಉಳ್ಳಾಗಡ್ಡಿ, ಸುಜಯ ಖಾಂದ್ರೆ, ಸೇರಿದಂತೆ ಅನೇಕರು ಇದ್ದರು.

ಶ್ರೀಗಳಿಂದ ಆಧ್ಯಾತ್ಮಿಕ ಪ್ರವಚನ ನಾಳೆಯಿಂದ

ಗೋಕಾಕ: ತಾಲೂಕಿನ ಬೆಟಗೇರಿ ಗ್ರಾಮಸ್ಥರ ಸಹಯೋಗದಲ್ಲಿ ಬಸವ ಜಯಂತಿ ಹಾಗೂ 775 ವರ್ಷ ಬಾಳಿದ ಮಹಾತಪಸ್ವಿ ಜಗದ್ಗುರು ಬೂದೀಶ್ವರ ಮಹಾಶಿವಯೋಗಿಗಳ ಶಿಲಾ ಮಂಟಪ ಲೋಕಾರ್ಪಣೆ ನಿಮಿತ್ತ ಬೆಟಗೇರಿ ಗ್ರಾಮದಲ್ಲಿ ಪ್ರಪ್ರಥಮವಾಗಿ ಏ.26ರಿಂದ ಏ.30ರವರೆಗೆ ಹೊಸಳ್ಳಿ ಮತ್ತು ಕೊಪ್ಪಳ ಶ್ರೀಗಳಿಂದ ಆಧ್ಯಾತ್ಮಿಕ ಪ್ರವಚನ ನಡೆಯಲಿದೆ. ಏ.26ರಿಂದ ಏ.29ರವರೆಗೆ ಹೊಸಳ್ಳಿಯ ಅಭಿನವ ಬೂದೀಶ್ವರ ಸ್ವಾಮಿಜಿ ಅವರಿಂದ ನಾಲ್ಕು ದಿನಗಳ ಕಾಲ ಪ್ರತಿ ದಿನ ಸಂಜೆ 7ರಿಂದ 8ರರವರೆಗೆ ವಿವಿಧ ವಿಷಗಳ ಮೇಲೆ ಗಜಾನನ ವೇದಿಕೆ ಮೇಲೆ ಪ್ರವಚನ ನಡೆಯಲಿದೆ. ಏ.30ರಂದು ಪ್ರವಚನ ಮಂಗಲ ಕಾರ್ಯಕ್ರಮ ಬೆಳಗ್ಗೆ 10ಕ್ಕೆ ಕೊಪ್ಪಳ ಗವಿಸಿದ್ದೇಶ್ವರ ಮಠದ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ಅವರಿಂದ ಸ್ಥಳೀಯ ವಿವಿಧ ಸರ್ಕಾರಿ ಪ್ರೌಢ ಶಾಲೆಯ ಆವರಣದಲ್ಲಿ ಆಧ್ಯಾತ್ಮಿಕ ಪ್ರವಚನ ಜರುಗಲಿದೆ. ಏ.26 ರಂದು ಸಂಜೆ 5ಕ್ಕೆ ಸ್ಥಳೀಯ ಅಡವಿಸಿದ್ದೇಶ್ವರ ದೇವಸ್ಥಾನದಿಂದ ಗಜಾನನ ವೇದಿಕೆ ತನಕ ಸುಮಂಗಲೆಯರಿಂದ ಆರತಿ ಮತ್ತು ಕುಂಭಮೇಳ, ಸಕಲ ವಾದ್ಯಮೇಳಗಳೊಂದಿಗೆ ಭವ್ಯ ಸ್ವಾಗತ ಜರುಗಲಿದೆ. ಏ.30ರಂದು ಬೆಳಗ್ಗೆ 8ಕ್ಕೆ ಬಳಗಾನೂರದ ಶಿವಶಾಂತವೀರ ಶರಣರಿಂದ ಶಿವಭಜನೆ ಮೂಲಕ ಗ್ರಾಮದ ವಿವಿಧಡೆ ಪಾದಯಾತ್ರೆ ನಡೆಯಲಿದೆ. ಕಲ್ಲೂರದ ಶಂಕರಯ್ಯ ಗುರುಮಠ ಅವರಿಂದ ಸಂಗೀತ, ಮಲ್ಲಿಕಾರ್ಜುನ ಕೊಡಗನೂರ ಅವರಿಂದ ತಬಲಾ ಸೇವೆ ನಡೆಯಲಿದೆ. ಸ್ಥಳೀಯ ಹಾಗೂ ಸುತ್ತಲಿನ ಹಳ್ಳಿಗಳ ಹರ, ಗುರು, ಚರಮೂರ್ತಿಗಳು, ಸಂತ, ಶರಣರು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಿದ್ದಾರೆ ಎಂದು ಕೊಪ್ಪಳ ಮತ್ತು ಹೊಸಳ್ಳಿ ಶ್ರೀಗಳ ಪ್ರವಚನ ಆಯೋಜನೆ ಸಮಿತಿ ಪ್ರಕಟನೆಯಲ್ಲಿ ತಿಳಿಸಿದೆ.



ತೆಲಸಂಗ: ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘದ ವತಿಯಿಂದ ಶುಕ್ರವಾರ ಇತ್ತೀಚೆಗೆ ಮೃತಪಟ್ಟ ಹಸುವಿನ ಮಾಲೀಕರಿಗೆ ವಿಮಾ ಪರಿಹಾರ ಧನ ವಿತರಿಸಿದರು. ಅಧ್ಯಕ್ಷೆ ಲಕ್ಷ್ಮೀ ಕಾಮನ್, ಮಾದೇವ ಬಿಳಿಕೂರಿ, ಉಪಾಧ್ಯಕ್ಷೆ ಮಾನಂದಾ ಕುಂಬಾರ, ಡಾ.ಶ್ರೀನಿವಾಸ ಜಾದವ, ಡಾ.ಸಚೀನ, ಸಂಜಯ ಪಾಯಪಗೋಳ, ಡಾ.ಬಿ.ಎಸ್.ಕಾಮನ್, ಪ್ರಕಾಶ ಮೋರೆ, ಸಂಘದ ಪದಾಧಿಕಾರಿಗಳು, ಗ್ರಾಮದ ರೈತರು ಉಪಸ್ಥಿತರಿದ್ದರು.

ಧರ್ಮಚಕ್ರ ಆರಾಧನಾ ಮಹೋತ್ಸವಕ್ಕೆ ಚಾಲನೆ



ಬೆಳಗಾವಿ: ಜೈನ ಸಮಾಜ ಶಾಂತಿ ಪ್ರಿಯ ಸಮಾಜವಾಗಿದ್ದು, ಎಲ್ಲ ಸಮಾಜದವರೊಂದಿಗೆ ಒಂದಾಗಿ ಹಾಗೂ ಎಲ್ಲರೊಂದಿಗೆ ಹೊಂದಿಕೊಂಡು ಹೋಗುವ ಸಮಾಜವಾಗಿದೆ ಎಂದು ಜಿಲ್ಲಾಧಿಕಾರಿ ಮಹಮ್ಮದ್ ರೋಷನ್ ಹೇಳಿದರು.

ಕೋಟೆ ಆವರಣದಲ್ಲಿರುವ ಐತಿಹಾಸಿಕ ಕಮಲ ಬಸದಿಯಲ್ಲಿ ಏ.24ರಿಂದ 28ರವರೆಗೆ ಐದು ದಿನಗಳ ಕಾಲ ನಡೆಯುತ್ತಿರುವ ಧರ್ಮಚಕ್ರ ಆರಾಧನಾ ಮಹೋತ್ಸವಕ್ಕೆ ದೀಪ ಬೆಳಗಿಸುವ ಮೂಲಕ ಚಾಲನೆ ನೀಡಿ ಮಾತನಾಡಿ, ಒಂದು ಧಾರ್ಮಿಕ ಕಾರ್ಯಕ್ರಮ ನಡೆಯುತ್ತಿರುವುದು ಸಂತಸದ ಸಂಗತಿಯಾಗಿದೆ. ನಗರದ ಕೋಟೆ ಆವರಣವನ್ನು ಅಭಿವೃದ್ಧಿಗೊಳಿಸಲಾಗಿದೆ. ಇದನ್ನು ಇದೇ ರೀತಿ ಕಾಪಾಡಿಕೊಂಡು ಹೋಗುವುದು ಎಲ್ಲರ ಜವಾಬ್ದಾರಿಯಾಗಿದೆ. ಇಂದಿನ ಕಾರ್ಯಕ್ರಮದಲ್ಲಿ ಅನೇಕ ಯುವಕ-ಯುವತಿಯರು ಭಾಗವಹಿಸಿದ್ದು, ಹೆಮ್ಮೆ ಸಂಗತಿ. ಇಂತಹ ಕಾರ್ಯಕ್ರಮಗಳಿಂದ ಮಕ್ಕಳಲ್ಲಿ ಸಂಸ್ಕಾರ ಬೆಳೆಯಲು ಕಾರಣವಾಗುತ್ತದೆ ಎಂದರು.

ಮಹೋತ್ಸವ ಸಮಿತಿ ವತಿಯಿಂದ ಹಾಗೂ ಜೈನ ಸಮಾಜದ ವತಿಯಿಂದ ಗೌರವಿಸಲಾಯಿತು. ಸಮಾರಂಭದಲ್ಲಿ ಮಹೋತ್ಸವ ಸಮಿತಿ ಖಜಾಂಚಿ ಹಾಗೂ ಭರತೇಶ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ವಿನೋದ ದೊಡ್ಡಣ್ಣವರ, ಅತಿಥಿಗಳನ್ನು ಸ್ವಾಗತಿಸಿ ಪರಿಚಯಿಸಿದರು.

ಇದಕ್ಕೂ ಮೊದಲು ಬೆಳಿಗ್ಗೆ ಮಾಜಿ ಶಾಸಕ ವೀರಕುಮಾರ ಪಾಟೀಲ, ಸಂಜಯ ಪಾಟೀಲ, ಖ್ಯಾತ ನ್ಯಾಯವಾದಿ ರವಿರಾಜ ಪಾಟೀಲ, ಉದ್ಯಮಿ ಭರತ ಪಾಟೀಲ ಸೇರಿದಂತೆ ಅನೇಕ ಗಣ್ಯರಿಂದ ಧ್ವಜಾರೋಹಣ ಮತ್ತು ಮಂಟಪ ಉದ್ಘಾಟನೆ ಕಾರ್ಯಕ್ರಮ ನಡೆಯಿತು. ಇಂದ್ರಜಿತ್ ದೊಡ್ಡಣ್ಣವರ ಮತ್ತು ಭರತೇಶ ಬುಡವಿ ವಿಧಿ- ವಿಧಾನ ಮಾಡಿದರು. ಪಂಡಿತ ಅಮೋಲ ಉಪಾಧ್ಯೆ ಮತ್ತು ಮಹಾವೀರ ಉಪಾಧ್ಯೆ ಪೂಜಾ ವಿಧಿಗಳನ್ನು ನಡೆಸಿಕೊಟ್ಟರು.

ಈ ವೇಳೆ ಮಹೋತ್ಸವ ಸಮಿತಿ ಕಾರ್ಯಾಧ್ಯಕ್ಷ ಸುನಿಲ ಹನಮಣ್ಣವರ, ಕಾರ್ಯದರ್ಶಿ ಹೀರಾಚಂದ ಕಲಮನಿ, ಸನ್ಮತಿ ಕಸ್ತೂರಿ, ಅಭಿನಂದನ ಜಾಬನ್ನವರ, ರಾಜೇಂದ್ರ ಜಕ್ಕನ್ನವರ , ಅಭಯ ಅವಲಕ್ಕಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಪದ್ಮರಾಜ ವೈಜನ್ನವರ ಕಾರ್ಯಕ್ರಮ ನಿರೂಪಿಸಿದರು.

ಜಿಲ್ಲೆಗೆ 3ನೇ ಸ್ಥಾನ ಹೆಮ್ಮೆಯ ವಿಷಯ: ಶಾಸಕ

ಸವದತ್ತಿ: ತಾಲೂಕಿನ ವಿದ್ಯಾರ್ಥಿಗಳು 2025 26 ನೇ ಸಾಲಿನಲ್ಲಿ ನಡೆದ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದು ನಮ್ಮ ಸವದತ್ತಿ ತಾಲೂಕನ್ನು ಮೂರನೇ ಸ್ಥಾನ ಗಳಿಸಿರುವುದು ಹೆಮ್ಮೆಯ ವಿಷಯ ಎಂದು ಶಾಸಕ ವಿಶ್ವಾಸ ವೈದ್ಯ ಹೇಳಿದರು.

ಅವರು ತಮ್ಮ ಗೃಹ ಕಾರ್ಯಾಲಯದಲ್ಲಿ ಕ್ಷೇತ್ರ ಶಿಕ್ಷಣಾಽಕಾರಿಗಳ ಕಾರ್ಯಾಲಯ ವತಿಯಿಂದ ಹಮ್ಮಿಕೊಂಡ 2025- 26 ನೇ ಸಾಲಿನ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದು ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಿ ಮಾತನಾಡಿದ ಅವರು, ಕ್ಷೇತ್ರ ಶಿಕ್ಷಣಾಽಕಾರಿಗಳಾದ ಏ.ಏ. ಖಾಜಿ ಅವರು ಪರೀಕ್ಷೆ ಮುಂಚಿತವಾಗಿ ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಕಾರ್ಯಗಾರಗಳನ್ನು ಏರ್ಪಡಿಸಿ ಮಕ್ಕಳಿಗೆ ವಿಷಯಗಳು ಮನದಟ್ಟಾಗುವಂತೆ ತರಬೇತಿಗಳನ್ನು ಏರ್ಪಡಿಸಿ ಮಕ್ಕಳು ಹೆಚ್ಚಿನ ಅಂಕ ಪಡೆಯಲು ಕಾರಣೀಕರ್ತರಾಗಿದ್ದಾರೆ. ತಾಲೂಕಿನ ಶಿಕ್ಷಕರ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯ ಶ್ಲಾಘನೀಯ. ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ಅಭಿನಂದಿಸುವೆ ಎಂದರು.

ಹೆಚ್ಚು ಅಂಕ ಪಡೆದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಕಿಟದಾಳದ ಶ್ರೇಯಾ ಅಡಿವೇಶ ಬೈಲವಾಡ, ಕುಮಾರೇಶ್ವರ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ವಿದ್ಯಾರ್ಥಿ ಅಮೋಘ ಫಕೀರಪ್ಪ ನವಲಗುಂದ ಹಾಗೂ ಹೊಸೂರು ಗ್ರಾಮದ ಎಸ್‌ಎನ್ ವಿ.ವಿ ಪ್ರೌಢ ಶಾಲೆಯ ದಿವ್ಯಾ ಮಡಿವಾಳಪ್ಪ ಹೊಂಗಲ್ ಹಾಗೂ ಶಿವಾಪುರದ ಕಿತ್ತೂರಾಣಿ ಚೆನ್ನಮ್ಮ ವಸತಿ ಶಾಲೆಯ ಕುಮಾರಿ ರೇಣುಕಾ ಪ್ರವೀಣ ನರಿ ಅವರನ್ನು ಶಾಸಕ ವಿಶ್ವಾಸ ವೈದ್ಯರವರು ಸನ್ಮಾನಿಸಿದರು.

ನಂತರ ಕ್ಷೇತ್ರ ಶಿಕ್ಷಣಾಧಿಕಾರಿ ಎ.ಎ. ಖಾಜಿ ಮತ್ತು ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಽಕಾರಿ ಆನಂದ್ ಬಡಕುಂದ್ರಿ ಅವರಿಗೆ ಶಾಸಕ ವಿಶ್ವಾಸ ವೈದ್ಯರವರು ಸನ್ಮಾನಿಸಿ ಗೌರವಿಸಿದರು.

ಈ ಸಂದರ್ಭದಲ್ಲಿ ಶಿಕ್ಷಣ ಇಲಾಖೆಯ ನಿವೃತ್ತ ಅಽಕಾರಿಗಳಾದ ಗಿರೀಶ್ ಮುನವಳ್ಳಿ ಮತ್ತು ನಿವೃತ್ತ ಶಿಕ್ಷಕರಾದ ಕಿರಣ್ ಕುರಿ, ಶಿಕ್ಷಕರಾದ ಪ್ರಶಾಂತ್ ಹಂಪಣ್ಣವರ, ಸುಧೀರ ವಾಘೇರಿ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ಸುರೇಶ್ ಬೆಟಗೇರಿ, ಕುಮಾರೇಶ್ವರ ಪ್ರೌಢಶಾಲೆಯ ಪ್ರಾಚಾರ್ಯ ನಾಗರಾಜ್ ಚಂದರಗಿ, ಶಿಕ್ಷಕರಾದ ಎಂಬಿ ಚುಂಚನೂರ ಹಾಗೂ ಎಫ್. ಜಿ. ನವಲಗುಂದ ರವರು ಉಪಸ್ಥಿತರಿದ್ದರು.



ವಿದ್ಯುತ್ ವ್ಯತ್ಯಯ ನಾಳೆ

ಸವದತಿ: ಪಟ್ಟಣದ ಶಾಖಾವ್ಯಾಪ್ತಿಯಲ್ಲಿ ಎಫ್-3,ರಾಮಾಪುರ ಸೈಟ್ ವಿದ್ಯುತ್ ಮಾರ್ಗದ ತುರ್ತು ನಿರ್ವಹಣೆ ಕಾಮಗಾರಿ ಮತ್ತು 220 ಕೆವಿ ಸ್ವೀಕರಣ ಕೇಂದ್ರ, ಸವದತ್ತಿಯಲ್ಲಿ 10ಎಂವಿಎ, 110ಕೆವಿ ಪರಿವರ್ತಕದ ಮೊದಲನೇ ತ್ರೈಮಾಸಿಕ ತುರ್ತು ನಿರ್ವಹಣೆ ಕಾಮಗಾರಿ ಕೈಗೊಳ್ಳುತ್ತಿರುವುದರಿಂದ 220 ಕಿವಿ ಸ್ವೀಕಾರಣಾ ಕೇಂದ್ರ, ಸವದತ್ತಿಯಿಂದ ಪೂರೈಕೆಯಾಗುತ್ತಿರುವ 11 ಕೆವಿ ಮಾರ್ಗದ ವಿದ್ಯುತ್ ಸರಬರಾಜಿನಲ್ಲಿ ಏ.26ರಂದು ಬೆಳಗ್ಗೆ 8ರಿಂದ ಸಂಜೆ 6ರವರೆಗೆ ಸವದತ್ತಿ ಪಟ್ಟಣದ ಜನತಾ ಕಾಲೋನಿ ಬಿಡಿಒ ಕ್ರಾಸ್, ಮಾಮನಿ ಕೆರಿ ರೋಡ್, ಎಸ್‌ಎಲ್‌ಒ ಕ್ರಾಸ್, ಪೊಲೀಸ್ ಠಾಣೆ ಕೋಟೆಯ ಅಕ್ಕ ಪಕ್ಕದಲ್ಲಿ ರಾಮಾಪುರ ಸೈಟ್ ಗೋಕಾಕ್ ಮಿಲ್ ಪದಕಿಪುರಂ ಸೌಗಂಧಿಪುರ, ಎಲ್‌ಐಸಿ ಆಫೀಸ್, ಹೊಸ ಬಸ್ ನಿಲ್ದಾಣ, ಕೆಂಚಲಾರ ಕೊಪ್ಪ ನಗರಸಭೆ, ರೇಣುಕಾ ಟಾಕೀಸ್ ಹತ್ತಿರ ಕೆಎಲ್‌ಇ ಶಾಲೆ, ಕುಂಬಾರ ಓಣಿ, ಒಡೆದ ಓಣಿ, ಬೆಟಗೇರಿ ಆಗಸಿ ತಾಲೂಕ ಸಾರ್ವಜನಿಕ ಆಸ್ಪತ್ರೆ, ಹನುಮಗಿರಿ ಓಣಿ, ಮತ್ತು ತಾಲೂಕಿನ ಅಸುಂಡಿ ಶಿಂಗಾರಗೊಪ್ಪ ಸುತಗಟ್ಟಿ ಹಿಟ್ಟಣಗಿ ಏಣಗಿ ಕುರುವಿನ ಕೊಪ್ಪ, ಗೊರವನ ಕೊಳ,ಯಡ್ರಾವಿ ಬೇಡಸೂರ, ಹಿರೇ ಉಳ್ಳಿಗೇರಿ, ಇನಾಮ ಹೊಂಗಲ, ಸಂಗ್ರೇಶಕೊಪ್ಪ ಯಡಹಳ್ಳಿ, ಕೆಂಚ ರಾಮನ ಹಾಳ ಮತ್ತು ಸಿಂಗಾರಗೊಪ್ಪ ಜಾಕ್ ವೆಲ್ ಗೆ ವಿದ್ಯುತ್ ಸಂಪೂರ್ಣವಾಗಿ ನಿಲುಗಡೆಯಾಗಲಿದೆ ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕಾರ್ಯ ಮತ್ತು ಪಾಲನೆ ಉಪವಿಭಾಗ ಹುವಿಸ ಕಂಪನಿ ಸವದತ್ತಿ ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುಡಿಯುವ ನೀರಿನ ಸಮಸ್ಯೆ; ಗ್ರಾಮಸ್ಥರಿಂದ ಪ್ರತಿಭಟನೆ

ಸಂಕೇಶ್ವರ : ಕಮತನೂರ ಗ್ರಾಮ ಬಳಿ ಇರುವ ಸಂಪಿನ ವಿದ್ಯುತ್ ಕಡಿತಗೊಳಿಸಿದ ಕಾರಣ ಅಂಕಲೆ ಗ್ರಾಮಕ್ಕೆ ಕಳೆದ 15 ದಿನಗಳಿಂದ ಕುಡಿಯುವ ನೀರಿನ ಸಮಸ್ಯೆ ಎದುರಾಗಿದೆ ಎಂದು ಅಂಕಲೆ ಗ್ರಾಮಸ್ಥರು ಗೋಟುರ-ವಿಜಯಪುರ ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ಅಂಕಲೆ- ಕಮತನೂರ ಗ್ರಾಮಕ್ಕೆ ಒಂದೇ ಸಂಪಿನಿಂದ ನೀರು ಪೂರೈಕೆ ಆಗುತ್ತದೆ ಆದರೆ ಸಂಪಿನಲ್ಲಿನ ಅಂಕಲೆ ಗ್ರಾಮಕ್ಕ ನೀರು ಪೂರೈಕೆಯ ಮೋಟಾರ್ ನ ವಿದ್ಯುತ್ ಸಂಪರ್ಕ ಕಡಿತಗೊಳಿಸಿದಕ್ಕೆ ಅಂಕಲೆ ಗ್ರಾಮಸ್ಥರು ತಮ್ಮ ಆಕ್ರೋಶ ವ್ಯಕ್ತಪಡಿಸುತ್ತಿದಂತೆ ಎರಡು ಗ್ರಾಮಸ್ಥರ ನಡುವೆ ವಾದ-ವಿವಾದ ನಡೆಯಿತು.

ಇದಕ್ಕೆ ಪ್ರತಿಯಾಗಿ ಕಮತನೂರ ಗ್ರಾಮಸ್ಥರು ಗ್ರಾಮದಲ್ಲಿ ಸಹ ನೀರನ ಸಮಸ್ಯೆ ಆಗುತ್ತಿದ್ದು, ಇಲ್ಲಿಂದ ಬೇರೆ ಗ್ರಾಮಗಳಿಗೆ ಸಂಪರ್ಕ ನೀಡದಂತೆ ಅಧಿಕಾರಿಗಳ ಮುಂದೆ ಪಟ್ಟು ಹಿಡಿದರು ಇದರಿಂದ ಕೇಲ ಹೊತ್ತು ಎರಡು ಗ್ರಾಮಸ್ಥರು ನಡುವೆ ಗೊಂದಲದ ವಾತಾವರಣ ನಿರ್ಮಾಣವಾಯಿತು. ಪ್ರತಿಭಟನಾ ಸ್ಥಳಕ್ಕೆ ಬಂದ ಹುಕ್ಕೇರಿ ತಾಲೂಕಾ ಗ್ರಾಮೀಣ ನೀರು ಸರಬರಾಜು ಅಧಿಕಾರಿ ಅರವಿಂದ ಅಣ್ಣಿಗೇರಿ ತಾವು ಇಲ್ಲಿ ಹೊಸದಾಗಿ ಕಾರ್ಯನಿರ್ವಹಿಸುತ್ತಿದ್ದು, ತಮ್ಮ ಸಮಸ್ಯೆ ಆಲಿಸಿ ಶೀಘ್ರದಲ್ಲೆ ಪರಿಹಾರ ಒದಗಿಸಲು ಪ್ರಯತ್ನಿಸುವುದಾಗಿ ಭರವಸೆ ನೀಡಿ ಅಲ್ಲಿಯವರೆಗೂ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಲಾಗುವುದು ಎನ್ನುತ್ತಿದಂತೆ ಗ್ರಾಮದಲ್ಲಿ ಕಾಟಾಚಾರಕ್ಕೆ ಜೆಜೆಎಂ ಕಾಮಗಾರಿ ಮಾಡಿರುವ ಕುರಿತು ಅಸಮಾಧಾನ ಹೊರಹಾಕಿ ನಿಮ್ಮ ಹುಸಿ ಆಶ್ವಾಸನೆ ನಮಗೆ ಬೇಕಾಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

> **ಅಂಕಲೆ ಗ್ರಾಮದಲ್ಲಿ ಕಳೆದ 15 ದಿನಗಳಿಂದ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದ್ದು, ಶಾಸಕರು ಹಾಗೂ ಚಿಕ್ಕೋಡಿ ಲೋಕಸಭೆ ಸದಸ್ಯರು ಕೂಡಲೇ ಸಮಸ್ಯೆ ಬಗೆ ಹರಿಸಬೇಕು. ಇಲ್ಲದೇ ಹೋದರೆ ಮುಂದಿನ ದಿನಗಳಲ್ಲಿ ತಕ್ಕ ಪಾಠ ಕಲಿಸಲಾಗುವುದು.**
> ■ ವಿಶ್ವನಾಥ ಪಾಟೀಲ , ಅಂಕಲಿ ಗ್ರಾಮ ಪಂಚಾಯತಿ ಸದಸ್ಯ



ಅರ್ಬನ್ ಸೊಸೈಟಿಗೆ 7.30ರೂ. ಕೋಟಿ ಲಾಭ

ಮೂಡಲಗಿ : ಪಟ್ಟಣದ ಶಿವಬೋಧರಂಗ ಅರ್ಬನ್ ಕೋ.ಆಪ್ ಕ್ರೆಡಿಟ್ ಸೊಸೈಟಿ 2026ರ ಮಾರ್ಚ್ ಅಂತ್ಯಕ್ಕೆ 7.30 ರೂ. ಕೋಟಿ ಲಾಭ ಗಳಿಸಿ ಪ್ರಗತಿಯಲ್ಲಿ ಸಾಗಿದೆ ಎಂದು ಅಧ್ಯಕ್ಷ ಪುಲಕೇಶ ಸೋನವಾಲಕರ ತಿಳಿಸಿದರು.

ಸೊಸೈಟಿ ಪ್ರಗತಿ ಕುರಿತು ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಸದ್ಯ ಸೊಸೈಟಿ ಶೇರು ಬಂಡವಾಳ: 6.89 ಸಾರ್ವಜನಿಕ ವಲಯದಿಂದ ಠೇವು ಸಂಗ್ರಹ: ರೂ. 476 ಕೋಟಿ, ವಿವಿಧ ತೆರನಾದ ಸಾಲ ವಿತರಣೆ ರೂ.267 ಕೋಟಿ. ಠೇವಣಿದಾರರ ಬದ್ರತೆಗಾಗಿ ಗುಂತಾವಣೆ: ರೂ. 159 ಕೋಟಿ, ದುಡಿಯುವ ಬಂಡವಾಳ ರೂ. 543 ಕೋಟಿ, ನಿಧಿಗಳು: ರೂ. 35 ಕೋಟಿ ಶೇರುದಾರರ ಸಂಖ್ಯೆ: 17,568 ವಾರ್ಷಿಕ ವಹಿವಾಟು 1,906 ಕೋಟಿ ಎಂದರು.

ಸೊಸೈಟಿ ಉಪಾಧ್ಯಕ್ಷ ಸುಭಾಸ ಆರ್.ಸೋನವಾಲಕರ ಮಾತನಾಡಿ, ಸೊಸೈಟಿ ಈ ವರೆಗೆ 18 ಶಾಖೆಗಳು ಹೊಂದಿದ್ದು, ಎಲ್ಲ ಶಾಖೆಗಳು ಉತ್ತಮ ಪ್ರಗತಿಯಲ್ಲಿವೆ. ಇನ್ನೂ ನರಗುಂದ, ಬಬಲೇಶ್ವರ, ಬೀಳಗಿ, ಕುಳಗೇರಿ ಕ್ರಾಸ್ ಕೆರೂರ, ಸವದತ್ತಿ, ಕೋಲಾರಗಳಲ್ಲಿ ಶಾಖೆಗಳನ್ನು ಪ್ರಾರಂಭಿಸಲಾಗುತ್ತಿದೆ

ಮೂಡಲಗಿ ಪ್ರಧಾನ ಕಛೇರಿ ಮತ್ತು ರಾಮದುರ್ಗ ಶಾಖೆ ಸ್ವಂತ ಕಟ್ಟಡ ಹೊಂದಿವೆ ಎಂದರು.



ಆಡಳಿತ ಮಂಡಳಿ ನಿರ್ದೇಶಕ ರವೀಂದ್ರ ಸೋನವಾಲಕರ, ಡಾ.ಶಂಕರ ದಂಡಪ್ಪನವರ, ಅಶೋಕ ಹೊಸೂರ, ರೇವಪ್ಪ ಕುರಬಗಟ್ಟಿ, ಶಿವಬಸು ಬೂದಿಹಾಳ, ಶಾರದಾ ಗುಲಗಾಜಂಬಗಿ, ವಿದ್ಯಾವತಿ ಸೋನವಾಲಕರ, ಮಂಜುಳಾ ಬಳಿಗಾರ, ಗಂಗವ್ವಾ ಸಣ್ಣಪ್ಪನವರ, ಹಣಮಂತ ಸಣ್ಣಕ್ಕಿ, ಲೇಕ್ಕ ಪರಿಶೋಧಕ ಭೀಮಶಿ ಜರಳಿ, ಪ್ರಧಾನ ವ್ಯವಸ್ಥಾಪಕ ವೆಂಕಪ್ಪ ಬಾಲರಡ್ಡಿ, ಪ್ರಧಾನ ಕಛೇರಿ ಮ್ಯಾನೇಜರ್ ಮಹೇಶ ಮಾಲಗಾರ, ಮಾರಾಟಾಧಿಕಾರಿ ಹಣಮಂತ ಕುಂಬಾರ ಉಪಸ್ಥಿತರಿದ್ದರು.

ಬಸವ ಭವ್ಯ ಮೆರವಣಿಗೆ ನಾಳೆ



ಬೈಲಹೊಂಗಲ: ಬೆಳಗಾವಿ ಬಸವ ಜಯಂತಿ ಮಹೋತ್ಸವ ಸಮಿತಿ ವತಿಯಿಂದ ವಿಶ್ವಗುರು ಬಸವೇಶ್ವರರ ಜಯಂತಿ ನಿಮಿತ್ತ ಬೆಳಗಾವಿ ನಗರದಲ್ಲಿ ಏ.26ರಂದು ಸಂಜೆ 4ಕ್ಕೆ ಕಿತ್ತೂರು ರಾಣಿ ಚನ್ನಮ್ಮ ವೃತ್ತದಿಂದ ಜಗಜ್ಯೋತಿ ಬಸವಣ್ಣನವರ ಭಾವಚಿತ್ರ ಬೃಹತ್ ಮೆರವಣಿಗೆ ಜರಗಲಿದೆ.

ಯುವ ಜನತೆ ಸೇರಿ ಎಲ್ಲರೂ ಮಹಾಮೆರವಣಿಗೆಯಲ್ಲಿ ಪಾಲ್ಗೊಂಡು ಬಸವ ವೈಭವಕ್ಕೆ ಮೆರಗು ತರಬೇಕೆಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಜ್ಯ ಉಪಾಧ್ಯಕ್ಷ ಗುರು ಮೆಟಗುಡ್ಡ ಮನವಿ ಮಾಡಿದರು.

ನಗರದ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಶುಕ್ರವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಜಿಲ್ಲೆಯ ಸರ್ವ ಬಸವಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಈಗಾಲೇ ಕಾರ್ಯಕ್ರಮದ ಅಂಗವಾಗಿ ಏ.19ರಂದು 8ಕ್ಕೆ ಬಸವೇಶ್ವರ (ಗೋವಾವೇಸ್) ವೃತ್ತದಿಂದ ಬೈಕ್ ರ್‍ಯಾಲಿ, ಹಲವಾರು ಪೂರ್ವಭಾವಿ ಸಭೆ ಆಯೋಜಿಸಲಾಗಿತು.

ಸಮಾಜಕ್ಕೆ ಕರ್ನಾಟಕ ಸಾಂಸ್ಕೃತಿಕ ನಾಯಕ, ಬಸವಣ್ಣನವರ ಕೊಡುಗೆ ಅಪಾರವಾಗಿದ್ದು, ಅವರು ಸಮಾಜ ಸುಧಾರಣೆಗೆ ನೀಡಿದ ತತ್ವಯುವಕರಲ್ಲಿ ಬಿಂಬಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮ ಆಯೋಜಿಲಾಗಿದ್ದು, ಜಿಲ್ಲೆಯ ಪೂಜ್ಯರು, ಸಚಿವರು, ಸಂಸದರು, ಶಾಸಕರು, ಮಾಜಿ ಶಾಸಕರು, ವಿಧಾನ ಪರಿಷತ್ ಸದಸ್ಯರು, ಉದ್ಯಮಿಗಳು, ಬಸವಾಭಿಮಾನಿಗಳು ಸೇರಿ ಸಹಸ್ರಾರು ಜನತೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ಬೃಹತ್ ಮೆರವಣಿಗೆ ಸಮಾಜ ಸುಧಾರಣೆಗೆ ಯುವ ಸಮುದಾಯಕ್ಕೆ ಒಂದು ಸಂದೇಶವಾಗಲಿದೆ. ಜಾತಿ, ಮತ, ಪಕ್ಷ ಭೇದ ಮರೆತು ಎಲ್ಲರೂ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಗುರು ಮೆಟಗುಡ್ಡ ಮನವಿ ಮಾಡಿದರು.

ಲಿಟಲ್ ಹಾರ್ಟ್ ಶಾಲೆ 100 ರಷ್ಟು ಫಲಿತಾಂಶ

ಹಾರೂಗೇರಿ: ಸ್ಥಳೀಯ ಮಲ್ಲಿಕಾರ್ಜುನ ಶಿಕ್ಷಣ ಸಂಸ್ಥೆಯ ಲಿಟಲ್ ಹಾರ್ಟ್ಸ್ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆ ಹಾಗೂ ಬಿ.ಆರ್. ಆಜೂರ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ ಹತ್ತನೇ ತರಗತಿಯ ವಿದ್ಯಾರ್ಥಿಗಳು ಈ ಬಾರಿ ಅತ್ಯುತ್ತಮ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದು ,ಸಂಸ್ಥೆ 100ಕ್ಕೆ 100 ರಷ್ಟು ಫಲಿತಾಂಶ ಪಡೆದಿದೆ.

ಅನುಷ್ಕಾ ಪಾಟೀಲ 85.12%, ಪ್ರಜ್ವಲ ಕುಳ್ಳೊಳ್ಳಿ 78.08%, ಗೌಡಪ್ಪ ಬಿರಾದಾರ 76%, ಚಿದಾನಂದ ಹಿಡಕಲ್ 73.76%, ಪ್ರಜ್ವಲ ಚಿಂಚಲಿ 70% ಪ್ರತಿಶತ ಅಂಕಗಳೊಂದಿಗೆ ಉತ್ತೀರ್ಣರಾಗಿದ್ದು , ಸಾಧನೆಗೈದ ವಿದ್ಯಾರ್ಥಿಗಳಿಗೆ ಸಂಸ್ಥೆಯ ಅಧ್ಯಕ್ಷ ಬಿ.ಆರ್.ಆಜೂರ, ಕಾರ್ಯದರ್ಶಿ ಶ್ರೀಧರ ಆಜೂರ, ಶಾಲಾ ಸುಧಾರಣಾ ಸಮಿತಿ ಸದಸ್ಯ ಬಸವರಾಜ ಶಿರಗುಪ್ಪಿ, ವಿಠ್ಠಲ ದೌಡತೆ, ಶ್ರೀಕಾಂತ ಠಕ್ಕಣ್ಣವರ, ಎಸ್.ಎಂ.ಪಾಟೀಲ ಹಾಗೂ ಪ್ರಾಚಾರ್ಯ ವಿಷ್ಣು ಡಿ., ಶಿಕ್ಷಕರಾದ ಕೀರ್ತಿಕುಮಾರ ಬಾಲೋಜಿ, ಅನಿತಾ ಪಟ್ಟಣಕೋಡಿ, ಶೃತಿ ಆಜೂರ, ಪ್ರಿಯಾಂಕಾ ಡಾಲೆ, ಪ್ರೀತಿ ಸೂರ್ಯವಂಶಿ ಮುಂತಾದವರು ಅಭಿನಂದನೆ ಸಲ್ಲಿಸಿದ್ದಾರೆ.



ಸೇಂಟ್ ಜೋಸೆಫ್ ಆಂಗ್ಲ ಮಾಧ್ಯಮ ಶಾಲೆ ಸಾಧನೆ



ಹಾರೂಗೇರಿ: ಸ್ಥಳೀಯ ಶಾರದಾ ಶಿಕ್ಷಣ ಸಂಸ್ಥೆಯ ಸೇಂಟ್ ಜೋಸೆಫ್ ಆಂಗ್ಲ ಮಾಧ್ಯಮ ಶಾಲೆ ಹತ್ತನೇ ತರಗತಿ ವಿದ್ಯಾರ್ಥಿಗಳು ಈ ಬಾರಿ ಅತ್ಯುತ್ತಮ ದರ್ಜೆಯಲ್ಲಿ ಸಾಧನೆ ಮಾಡಿದ್ದು, ಸಂಸ್ಥೆಯ ಕೀರ್ತಿ ಇಮ್ಮಡಿಗೊಳಿಸಿದ್ದಾರೆ. ಇವರ ಶೈಕ್ಷಣಿಕ ಸಾಧನೆಗೆ ಸಂಸ್ಥೆ ಅಧ್ಯಕ್ಷ ಸಿದ್ದಪ್ಪ ಹಾಡಕಾರ, ಕಾರ್ಯದರ್ಶಿ ಬಾಳೇಶ ಹಾಡಕಾರ, ಮುಖ್ಯೋಪಾಧ್ಯಾಯಿನಿ ವಿಮಲ್ ವಿಜಯನಗರ, ಶಿಕ್ಷಕ ಬಸನಗೌಡ ಪಾಟೀಲ, ರಾಜಾಸಾಬ ಕಿತ್ತೂರ, ಶನವಾಜ ಶೇಕ್, ರಾಕೇಶ ಮುಗಳಿ, ಪಿ.ಆರ್.ವ್ಯಾಪಾರಿ, ಸುನೀಲ್ ಕೊಕಟನೂರ ಮುಂತಾದವರು ಉಪಸ್ಥಿತರಿದ್ದು, ಸಾಧನೆಗೈದ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ವಿದ್ಯಾರ್ಥಿಗಳಾದ ಪ್ರಜ್ವಲ ಧವಳೇಶ್ವರ 97.76% ಪ್ರಥಮ,ಅನುಷ್ಕಾ ಜಾಧವ 96.80% ದ್ವಿತೀಯ, ಸುದೀಪ ಕುಳ್ಳೊಳ್ಳಿ 92.80% ತೃತೀಯ,ಗಿರೀಶ ಹೂಗಾರ 87.68% ಚತುರ್ಥ,ಮಲ್ಲಪ್ಪ ಸನದಿ 85.40%,ಕರೆಪ್ಪ ಯಲ್ಲಟ್ಟಿ 84.40%, ಪ್ರೀತಮ್ ಬಡಿಗೇರ 83.30%,ಅಭಿಷೇಕ ಚನಗೌಡರ 83.16%,ಕರೆಪ್ಪ ಪೂಜೇರಿ 81.37%, ಅಶೋಕ ಕಾಂಬಳೆ 80.35% ಅಂಕಗಳೊಂದಿಗೆ ಶಾಲೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ.

ರಸ್ತೆಗಳ ಅಭಿವೃದ್ಧಿಗೆ 7.88 ಕೋಟಿ ರೂ.ಅನುದಾನ: ಶಾಸಕ



ಮೂಡಲಗಿ: ಪ್ರಧಾನಮಂತ್ರಿ ಗ್ರಾಮೀಣ ಸಡಕ ಯೋಜನೆ ಅಡಿಯಲ್ಲಿ ಅರಭಾವಿ ಕ್ಷೇತ್ರದ ಮೂರು ಹೊಸ ರಸ್ತೆ ಕಾಮಗಾರಿಗಳಿಗಾಗಿ 7.88 ಕೋಟಿ ರೂ. ಅನುದಾನ ಮಂಜೂರಾಗಿದೆ ಎಂದು ಶಾಸಕ ಮತ್ತು ಬೆಮುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಹೇಳಿದರು.

ಈ ಬಗ್ಗೆ ಶುಕ್ರವಾರದಂದು ಮಾಧ್ಯಮಗಳಿಗೆ ಹೇಳಿಕೆಯನ್ನು ಬಿಡುಗಡೆ ಮಾಡಿರುವ ಅವರು, ಶೀಘ್ರದಲ್ಲಿಯೇ ರಸ್ತೆ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸುವುದಾಗಿ ಅವರು ತಿಳಿಸಿದರು.

ಅರಭಾವಿ-ಸಂಗನಕೇರಿಯಿಂದ ಫಾರ್ಮುಡ್ಡಿಯವರೆಗಿನ 2.1 ಕಿ.ಮೀ ರಸ್ತೆ ಕಾಮಗಾರಿಗೆ 1.60 ಕೋಟಿ ರೂ., ಶಿವಾಪೂರ(ಹ)ದಿಂದ ಮಹಾಲಿಂಗಪೂರವರೆಗಿನ 3.48 ಕಿ.ಮೀ. ರಸ್ತೆ ಕಾಮಗಾರಿಗೆ 3.16 ಕೋಟಿ ರೂ.ಮತ್ತು ರಾಜಾಪೂರದಿಂದ ಕಲ್ಲೊಳ್ಳಿವರೆಗಿನ 5.11 ಕಿ.ಮೀ. ರಸ್ತೆ ಕಾಮಗಾರಿಗೆ 3.12 ಕೋಟಿ ರೂ. ಅನುದಾನ ಮಂಜೂರಾಗಿದೆ . ಒಟ್ಟು 7.88 ಕೋಟಿ ರೂ. ವೆಚ್ಚದಲ್ಲಿ ರಸ್ತೆ ಸುಧಾರಣಾ ಕಾಮಗಾರಿ ಸಧ್ಯ ನಡೆಯಲಿವೆ ಎಂದರು. ರಸ್ತೆಗಳ ಸುಧಾರಣೆಗಾಗಿ ಸರ್ಕಾರದಿಂದ ಅನುದಾನ ಮಂಜೂರಾತಿ ನೀಡಲು ನನ್ನೊಂದಿಗೆ ಕೈಜೋಡಿಸಿದ ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿಯವರಿಗೆ ಅವರು ಅಭಿನಂದನೆ ಸಲ್ಲಿಸಿದ್ದಾರೆ.

ಮದ್ಯದ ಮಳಿಗೆ ಸ್ಥಳಾಂತರಕ್ಕಾಗಿ ಪ್ರತಿಭಟನೆ



ಚನ್ನಮ್ಮನ ಕಿತ್ತೂರು: ಎಂಎಸ್‌ಐಎಲ್ ಮದ್ಯದ ಮಳಿಗೆ ಕೂಡಲೇ ಸ್ಥಳಾಂತರ ಮಾಡಬೇಕೆಂದು ಶ್ರೀಗಳ ನೇತೃತ್ವದಲ್ಲಿ ನೂರಾರು ಸಂಖ್ಯೆಯಲ್ಲಿ ಸಾರ್ವಜನಿಕರು, ಮಹಿಳೆಯರು ಅಹೋರಾತ್ರಿ ಧರಣಿ ನಡೆಸಿ ನಾಲ್ಕನೆಯ ದಿನಕ್ಕೆ ಪಾದಾರ್ಪಣೆ ಮಾಡಿದೆ.

ಸಮೀಪದ ಅಂಬಡಗಟ್ಟಿ ಗ್ರಾಮದಲ್ಲಿರುವ ಈ ಮದ್ಯದ ಮಳಿಗೆ ಮುಂದೆ ಪ್ರತಿಭಟನೆ ನೇತೃತ್ವ ವಹಿಸಿರುವ ಮಡಿವಾಳೇಶ್ವರಮಠದ ವೀರೇಶ್ವರ ಸ್ವಾಮೀಜಿ ಮಾತನಾಡಿ, ಈ ಮಳಿಗೆಯಿಂದ ನೂರಾರು ಕುಟುಂಬಗಳು ಬೀದಿ ಪಾಲಾಗಿವೆ. ಸಣ್ಣ ಸಣ್ಣ ಮಕ್ಕಳು, ಯುವಕರು ಸರಾಯಿ ಕುಡಿದು ತಮ್ಮ ಭವಿಷ್ಯ ಹಾಳು ಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಯುವಪಿಳಿಗೆ ರಕ್ಷಣೆ ಮಾಡುವದು. ನಮ್ಮ ಕರ್ತವ್ಯ, ಆದ್ದರಿಂದ ಈ ಮದ್ಯದ ಮಳಿಗೆಯನ್ನು ಇಲ್ಲಿಂದ ಸ್ಥಳಾಂತರ ಮಾಡುವವರೆಗೂ ನಮ್ಮ ಧರಣಿ ಸತ್ಯಾಗ್ರಹ ನಡೆಯುತ್ತದೆ ಎಂದರು.

ಸ್ಥಳಕ್ಕೆ ಶಾಸಕ ಬಾಬಾಸಾಹೇಬ ಪಾಟೀಲ ಆಗಮಿಸಿ ಪ್ರತಿಭಟನಾ ಅಹವಾಲನ್ನು ಆಲಿಸಿ ನಂತರ ಮಾತನಾಡಿ, ಈ ಮದ್ಯದ ಮಳಿಗೆಯಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದರೆ ಕೂಡಲೇ ಮಳಿಗೆಯನ್ನು ಸ್ಥಳಾಂತರಗೊಳಿಸಲು ಅಽಕಾರಿಗಳಿಗೆ ಸೂಚಿಸಲಾಗುವದು ಎಂದರು. ಅಬಕಾರಿ ಸಿಪಿಐ ಶ್ರೀಶೈಲ ಅಕ್ಕಿ,ಎಂಎಸ್‌ಐಎಲ್ ಸಿಬ್ಬಂದಿ ಕೆಂಚಪ್ಪ ಮುಂತಾದವರು ಆಗಮಿಸಿ ಮಾಹಿತಿಯನ್ನು ಪಡೆದುಕೊಂಡರು.

ಕಿರುಸುದ್ದಿ

ಎಸ್ಸೆಸ್ಸೆಲ್ಸಿ ಫಲಿತಾಂಶ: ಅಮೃತ ಶಾಲೆಗೆ ಪ್ರಥಮ



• ಸುರೇಬಾನ: ಸ್ಥಳೀಯ ಸರ್ಕಾರಿ ಪ್ರೌಢ ಶಾಲೆಯಲ್ಲಿ 2026ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ-1ರಲ್ಲಿ ವಿದ್ಯಾರ್ಥಿನಿ ಅಮೃತ ದೊಡ್ಡಕುಂಡಿ 625ಕ್ಕೆ 598(ಶೇ.95.68%) ಅಂಕ ಪಡೆದು ಶಾಲೆಗೆ ಪ್ರಥಮ ರ್‍ಯಾಂಕ್ ಪಡೆದುಕೊಂಡಿದ್ದಾಳೆ ಪ್ರಥಮ ಪಡೆದು ಸಾಧನೆ ಗೈದಿದ್ದಾಳೆ. ವಿದ್ಯಾರ್ಥಿನಿ ದೀಪಾ ಮುಷ್ಟಿಗೇರಿ 587 (93.92%) ಅಂಕ ಪಡೆದು ಶಾಲೆಗೆ ದ್ವಿತೀಯ ಸ್ಥಾನ ಪಡೆದು ಸಾಧನೆಗೈದಿದ್ದಾಳೆ. ವಿದ್ಯಾರ್ಥಿನಿ ಪ್ರಿಯಾಂಕಾ ಕಿಂಡ್ರಿ 586 (93.76%) ಅಂಕ ಗಳಿಸಿ ತೃತೀಯ ಸ್ಥಾನ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ. ಸಾಧನೆಗೈದ ವಿದ್ಯಾರ್ಥಿಗಳಿಗೆ ಎಸ್‌ಡಿಎಂಸಿ ಅಧ್ಯಕ್ಷರು, ಸರ್ವ ಸದಸ್ಯರು, ಮುಖ್ಯೋಪಾಧ್ಯಾಯರು, ಸರ್ವ ಸಿಬ್ಬಂದಿ ವರ್ಗದವರು ಶುಭ ಹಾರೈಸಿದ್ದಾರೆ.

ಸೈಕ್ಲೋಥಾನ್ ಏ.26ರಂದು

• ರಾಯಬಾಗ: ತಾಲೂಕಿನ ಸುಕ್ಷೇತ್ರ ಬೆಕ್ಕೇರಿ ಗ್ರಾಮದ ಲಕ್ಕವ್ವದೇವಿ ಜಾತ್ರಾ ಮಹೋತ್ಸವ ಹಾಗೂ ಬೆಕ್ಕೇರಿ ಗ್ರಾಮದ ಸರ್ವ ದೇವತೆಗಳ ಜಾತ್ರಾ ಮಹೋತ್ಸವ ನಿಮಿತ್ತ ಏ.26ರಂದು ಬೆಳಗ್ಗೆ 8ಕ್ಕೆ ಮಾಜಿ ವಿಧಾನ ಪರಿಷತ್ ಸದಸ್ಯ ವಿವೇಕರಾವ್ ಪಾಟೀಲ ಅಧ್ಯಕ್ಷತೆಯಲ್ಲಿ ಆರೋಗ್ಯಕ್ಕಾಗಿ ಸವಾರಿ, ಸಂಪ್ರದಾಯಕ್ಕಾಗಿ ಸವಾರಿ ಸೈಕ್ಲೋಥಾನ್ ಆಯೋಜಿಸಲಾಗಿದೆ ಎಂದು ಸೋಶಿಯಲ್ ಕ್ಲಬ್ ಅಧ್ಯಕ್ಷ ರಾಜು ಅಳಾಜ್ ಹೇಳಿದರು.

ಬೆಟಗೇರಿ ಸರ್ಕಾರಿ ಪ್ರೌಢ ಶಾಲೆ ಸಾಧನೆ



• ಗೋಕಾಕ: ತಾಲೂಕಿನ ಬೆಟಗೇರಿ ವಿವಿಡಿ ಸರ್ಕಾರಿ ಪ್ರೌಢ ಶಾಲೆಯ ಎಸ್ಸೆಸ್ಸೆಲ್ಸಿ ಪ್ರಸಕ್ತ ವರ್ಷದ ವಾರ್ಷಿಕ ಪರೀಕ್ಷೆಯಲ್ಲಿ ಶಾಲೆಯ ವಿದ್ಯಾರ್ಥಿಗಳಾದ ರೇವತಿ ಭಾಗೋಜಿ 613(ಶೇ.98.08) ಅಂಕ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ. ಶಿವನಗೌಡ ಪಾಟೀಲ 610 ಅಂಕ(ಶೇ.97.60)ದ್ವಿತೀಯ ಸ್ಥಾನ, ತನುಜಾ ಮೆಟ್ಟಿನವರ 607 ಅಂಕ(ಶೇ.97.12)ಪಡೆದು ತೃತೀಯ ಸ್ಥಾನ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ. ಅಲ್ಲದೇ ಹಲವಾರು ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ಹಲವಾರು ವಿಷಯಗಳಲ್ಲಿ 100ಕ್ಕೆ 100 ಅಂಕ ಪಡೆದು ದಾಖಲೆ ಮಾಡಿದ್ದಾರೆ ಎಂದು ಶಾಲೆಯ ಮುಖ್ಯೋಪಾಧ್ಯಯ ರಮೇಶ ಆಳಗುಂಡಿ, ಎಸ್‌ಡಿಎಂಸಿ ಅಧ್ಯಕ್ಷ ರಾಮಣ್ಣ ನೀಲಣ್ಣವರ ಮತ್ತು ಸದಸ್ಯರು, ಶಿಕ್ಷಣ ಪ್ರೇಮಿಗಳು, ಸ್ಥಳೀಯರು ಹರ್ಷ ವ್ಯಕ್ತಪಡಿಸಿದ್ದಾರೆ.

ಕರಡಿಗುದ್ದಿ ಪ್ರೌಢಶಾಲೆ ವಿದ್ಯಾರ್ಥಿಗಳ ಉತ್ತಮ ಸಾಧನೆ



• ನೇಸರಗಿ: ಸಮೀಪದ ಕರಡಿಗುದ್ದಿ ಗ್ರಾಮದ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳು 2026ರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 39ವಿದ್ಯಾರ್ಥಿಗಳು ಹಾಜರಾಗಿದ್ದು, 34 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಒಟ್ಟಾರೆ ಶಾಲೆಯ 87% ಫಲಿತಾಂಶ ಬಂದಿದ್ದು, ನಾಗರಾಜ ಸೋ. ನಾಗನೂರ 625ಕ್ಕ 600 ಅಂಕ ಪಡೆದು ಶಾಲೆಗೆ ಪ್ರಥಮ ರ್‍ಯಾಂಕ್ ಪಡೆದುವೊಂಡಿದ್ದಾನೆ. ಸಂಜನಾ. ಫ ಫೊಡಗೇರಿ 625ಕ್ಕ 527 ದ್ವಿತೀಯ, ಮಹಾಲಕ್ಷ್ಮಿ ಕೆಂಪಣ್ಣವರ 625ಕ್ಕೆ 525 ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ. ಅಲ್ಲದೆ ಡಿ ಶ್ರೇಣಿಯಲ್ಲಿ-1, ಪ್ರಥಮ ದರ್ಜೆ-18,ದ್ವಿತೀಯ ದರ್ಜೆ-9 ಪಾಸ್-6 ಹೀಗೆ ಉತ್ತಮ ಫಲಿತಾಂಶವು ಬಂದಿದ್ದು, ಮುಖ್ಯೋಪಾಧ್ಯಾಯರು ಶಿಕ್ಷಕ ಸಿಬ್ಬಂದಿಗಳು ಊರಿನ ಪ್ರಮುಖವಾದ ಇವರ ಸಾಧನೆಗೆ ಮಾಜಿ ತಾಪಂ ಅಧ್ಯಕ್ಷ ಶಂಕರ ಗೌಡ ಪಾಟೀಲ ಹಾಗೂ ಕರಡಿಗುದ್ದಿ ಪಂಚಾಯತಿಯ ಮಾಜಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಹಾಗೂ ಆಡಳಿತ ಮಂಡಳಿಯವರು ಶಿಕ್ಷಣ ಪ್ರೇಮಿಗಳು ಆದ ಚನ್ನಬಸಪ್ಪ ರಾಚನ್ನವರ, ಗ್ರಾಮದ ಗುರು ಹಿರಿಯರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



ಅಥಣಿ: ತಾಲೂಕಿನ ಕಟಗೇರಿ ಗ್ರಾಮದ ಸರಕಾರಿ ಪ್ರೌಢ ಶಾಲೆ ವಿದ್ಯಾರ್ಥಿನಿ ಪ್ರಾರ್ಥನಾ ಬಿರಾದಾರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625 ಕ್ಕೆ 625 ಅಂಕ ಪಡೆದು ರಾಜ್ಯಕ್ಕೆ ಪ್ರಥಮ ಸ್ಥಾನ ಗಳಸಿ ತಾಲೂಕಿನ ಕೀರ್ತಿ ಹೆಚ್ಚಿಸಿದ ವಿದ್ಯಾರ್ಥಿನಿಗೆ ಮಾಜಿ ಉಪ ಮುಖ್ಯಮಂತ್ರಿ ಹಾಗೂ ಶಾಸಕ ಲಕ್ಷ್ಮಣ ಸವದಿ ಅವರು ತಮ್ಮ ನಿವಾಸದಲ್ಲಿ ಗೌರವಿಸಿ ಅಭಿನಂದಿಸಿ ಶುಭ ಹಾರೈಸಿದರು.

ಗ್ಯಾರಂಟಿ ಯೋಜನೆ ಸಮರ್ಪಕ ತಲುಪಿಸಿ

• ಹುಬ್ಬಳ್ಳಿ: ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಮಹಾನಗರ ಪಾಲಿಕೆ ಸಮಿತಿಯ ಪೂರ್ವ ವಿಧಾನಸಭಾ ಕ್ಷೇತ್ರದ 72ರ ಮಾಸಿಕ ಪ್ರಗತಿ ಪರಿಶೀಲನಾ ಸಭೆ ಮಹಾನಗರ ಪಾಲಿಕೆಯ ಆಯುಕ್ತರ ಸಭಾ ಭವನದಲ್ಲಿ ನಡೆಯಿತು. ಈ ಸಭೆಯ ಅಧ್ಯಕ್ಷತೆಯನ್ನು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಪೂರ್ವ ವಿಧಾನಸಭಾ ಕ್ಷೇತ್ರ 72ರ ಅಧ್ಯಕ್ಷ ರಶೀದ್ ಭೋಲಾಭಾಯಿ ವಹಿಸಿದ್ದರು. ಈ ಸಭೆಯನ್ನು ಉದ್ದೇಶಿಸಿ ಮಾತನಾಡಿದ ರಶೀದ್ ಭೋಲಾಬಾಯ್, ಸರ್ಕಾರದ 5 ಗ್ಯಾರಂಟಿ ಯೋಜನೆಗಳನ್ನು ಸಮರ್ಪಕವಾಗಿ ಫಲಾನುಭವಿಗಳಿಗೆ ತಲುಪಿ. ಯುವ ನಿಧಿಯ ಬಗ್ಗೆ ಕಾಲೇಜುಗಳಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲು ಅಧಿಕಾರಿಗಳಿಗೆ ತಿಳಿಸಿದರು. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯ ವಾದಿರಾಜ ಕುಲಕರ್ಣಿ ಮಾತನಾಡಿ, ರೇಷನ್ ವಿತರಣೆಯ ತೂಕದಲ್ಲಿ ಲೋಪವಾಗುತ್ತಿದ್ದು, ಇದರ ಬಗ್ಗೆ ಆಹಾರ ಇಲಾಖೆಯ ಅಧಿಕಾರಿಗಳು ಸರಿಯಾಗಿ ಕ್ರಮ ಕೈಗೊಳ್ಳಿ ಹಾಗೂ ಸರ್ಕಾರ ನಿಗದಿಪಡಿಸಿದ ದಿನಾಂಕದಲ್ಲಿ ರೇಷನ್ ವಿತರಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು. ಸಮಿತಿಯ ಸದಸ್ಯ ವೀರಣ್ಣ ಹೀರೆಹಾಳ, ಗ್ಯಾರಂಟಿ ಅನುಷ್ಠಾನ ಸಮಿತಿಯ ಪ್ರಮುಖ ಮಂಜುನಾಥ ಮಟ್ಟಿ, ನದೀಮ ಆಚಮಟ್ಟಿ ಇಮ್ರಾನ್ ಸಿದ್ದಿಕಿ, ವಿವೇಕಾನಂದ ಮರೆಯಳ್ಳವರ ಇದ್ದರು.



ಚಿಕ್ಕೋಡಿ: ತಾಲ್ಲೂಕಿನ ಕೋಥಳಿ ಹಾಗೂ ಕುಠಾಳಿ ಗ್ರಾಮದಲ್ಲಿ ಶಾಸಕ ಗಣೇಶ ಹುಕ್ಕೇರಿ ಹಾಗೂ ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಪ್ರಕಾಶ ಹುಕ್ಕೇರಿ ಪ್ರಯತ್ನದಿಂದ ಬಿಡುಗಡೆಯಾದ 20 ಲಕ್ಷ ರೂ. ಅನುದಾನದಲ್ಲಿ ವಿವಿಧ ದೇವಸ್ಥಾನಗಳ ಕಟ್ಟಡ ಕಾಮಗಾರಿಗೆ ಕೋಥಳಿ ಗ್ರಾಪಂ ಮಾಜಿ ಅಧ್ಯಕ್ಷ ಜಿತೇಂದ್ರ ಪಾಟೀಲ ಭೂಮಿಪೂಜೆ ನೆರವೇರಿಸಿದರು. ಅಜೀತ ಕಣಗಲೆ, ಜಾವೇದ ಜಮಾದಾರ, ಹುಮಾಯೂನ್ ಸನದಿ, ಕಲಗೌಡ ಬಬಗೌಡ, ರವೀಂದ್ರ ಕುಂಬಾರ, ರಾಜು ಧಾವಣೆ ಇತರರು ಇದ್ದರು.

ಡಾ.ರಾಜಕುಮಾರ್ ಜನ್ಮದಿನಾಚರಣೆ

• ಬೆಳಗಾವಿ: ಡಾ. ರಾಜಕುಮಾರ್ ಅವರ ಸರಳ, ಸಜ್ಜನಿಕೆ ಪ್ರತಿಯೊಬ್ಬರಿಗೂ ಮಾದರಿಯಾಗಿದ್ದು, ಜನರೊಂದಿಗಿನ ಸರಳ ಒಡನಾಟದಿಂದಾಗಿ ಅವರು ಇಂದಿಗೂ ಕನ್ನಡಿಗರ ಮನದಲ್ಲಿ ಮರೆಯದೇ ಉಳಿದಂತಹ ಮಹಾನ್ ಚೇತನರಾಗಿದ್ದಾರೆ ಎಂದು ಬೆಳಗಾವಿ ಮಹಾನಗರ ಪಾಲಿಕೆ ಆಯುಕ್ತ ಕಾರ್ತಿಕ್ ಎಂ ಹೇಳಿದರು.

ಜಿಲ್ಲಾಡಳಿತ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ನಗರದ ವಾರ್ತಾ ಭವನದಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ನಟ ಡಾ.ರಾಜಕುಮಾರ್ ಅವರ 97ನೇ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ರಾಜಕುಮಾರ್ ಅವರು ಉತ್ತಮ ನಟ, ಗಾಯಕರಾಗಿದ್ದರು. ಅವರ ಗೀತೆಗಳು ಇಂದಿಗೂ ಸಹ ಜನ ಮಾನಸದಲ್ಲಿ ಅಚ್ಚಳಿಯದೇ ಉಳಿದಿರುವುದು ಅವರ ಕಂಠಸಿರಿಯ ಶಕ್ತಿಯಾಗಿದೆ ಎಂದರು.

ರಾಜಕುಮಾರ್ ಅವರಂತಹ ಸರಳ ಸಜ್ಜನಿಕೆ ವ್ಯಕ್ತಿತ್ವವನ್ನು ಅಧಿಕಾರಿಗಳು ಅಳವಡಿಸಿಕೊಳ್ಳುವ ಪ್ರಯತ್ನವಾಗಬೇಕು. ಮುಂದಿನ ದಿನಮಾನಗಳಲ್ಲಿ ಡಾ. ರಾಜಕುಮಾರ್ ಅವರ ಜಯಂತಿಯನ್ನು ಇನ್ನೂ ಜ್ರುಂಭಣೆಯಿಂದ ಆಚರಿಸೋಣ ಎಂದರು.

ವಿಶೇಷ ಉಪನ್ಯಾಸ ನೀಡಿದ ಹಿರಿಯ ನಾಟಕಕಾರ-ಸಾಹಿತಿಗ ಡಿ.ಎಸ್. ಚೌಗಲೆಮಾತನಾಡಿ, ಡಾ. ರಾಜಕುಮಾರ್ ಕನ್ನಡದ ಪ್ರತಿಯೊಬ್ಬ ಜನ ಸಾಮಾನ್ಯರ ಮನಸ್ಸಿನಲ್ಲಿ ಮನೆ ಮಾಡಿದ್ದಾರೆ. ಅವರು ರಂಗಭೂಮಿಯಿಂದ ಬಂದು ಜನ ನಾಯಕನಾಗಿ ಬೆಳೆದ ಅವರು ರಂಗಭೂಮಿ ನನಗೆ ಎಲ್ಲವನ್ನು ಕೊಟ್ಟು ಕಲಿಸಿತು ಎಂಬುದನ್ನು ವಿನಮ್ರರಾಗಿ ಹೇಳುತ್ತಿದ್ದರು ಎಂದರು.



ಗುಬ್ಬಿ ವೀರಣ್ಣ ಅವರ ಗರಡಿಯಲ್ಲಿ ಬೆಳೆದ ಅವರು ರಾಜಕುಮಾರ್‌ಆಗಿ ಬೆಳೆದಿರುವುದು ರೋಚಕವಾಗಿದೆ. ಸಾಮಾಜಿಕ, ಆರ್ಥಿಕ ಹಾಗೂ ದುರ್ಬಲ ವರ್ಗದಿಂದ ಬಂದಂತಹ ಮುತ್ತುರಾಜ್ ಅವರ ಬೆಳವಣಿಗೆ ಹಿಂದೆ ಕಲೆ, ಸ್ವಂತ ಶಕ್ತಿ, ಶ್ರದ್ಧೆ, ಬದ್ಧತೆ ಹಾಗೂ ಅಸಾಧಾರಣ ಪ್ರತಿಭೆಯಿಂದಾಗಿ ಅವರು ಡಾ.ರಾಜಕುಮಾರ್ ಆಗಿ ಬೆಳೆದರು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಉಪನಿರ್ದೇಶಕರಾದ ಗುರುನಾಥ ಕಡಬೂರ ಅವರು, ಕನ್ನಡ ನಾಡು-ನುಡಿಯ ಅಸ್ಮಿತೆಯಾಗಿರುವ ಡಾ.ರಾಜಕುಮಾರ್ ಅವರು, ತಮ್ಮ ಚಲನಚಿತ್ರಗಳ ಮೂಲಕ ಸಮಾಜ ಸುಧಾರಣೆಗೆ ಅಪಾರ ಕೊಡುಗೆಯನ್ನು ನೀಡಿದ್ದಾರೆ ಎಂದು ಸ್ಮರಿಸಿದರು.

ವಾರ್ತಾ ಇಲಾಖೆಯ ಸಿಬ್ಬಂದಿ ವಿಜಕುಮಾರ ಬೆಟಗೇರಿ, ಎಂ.ಎಲ್.ಜಮಾದಾರ, ಅನಂತ ಪಪ್ಪು, ಮಾಧ್ಯಮ ಪ್ರತಿನಿಧಿಗಳು, ಡಾ.ರಾಜಕುಮಾರ್ ಅಭಿಮಾನಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು. ಸುನಿತಾ ದೇಸಾಯಿ ನಿರೂಪಿಸಿದರು. ಗೋಕಾಕಿನ ಗಂಧರ್ವ ಲಹರಿ ಮೆಲೋಡಿಸ್ ಆರ್ಕೆಸ್ಟ್ರಾ ತಂಡದ ಮುತ್ತುರಾಜ್ ಅವರು ಪ್ರಸ್ತುತಪಡಿಸಿದ ಡಾ.ರಾಜಕುಮಾರ್ ಜನಪ್ರಿಯ ಗೀತೆಗಳ ಗಾಯನವು ಸಭಿಕರನ್ನು ಭಾವಪರವಶಗೊಳಿಸಿತು.

ಶಾಂತಿ ಸ್ಥಾಪನೆಗೆ ಧಾರ್ಮಿಕ ಚಿಂತನೆ ಅಗತ್ಯ

• ಯರಗಟ್ಟಿ: ಪ್ರಸ್ತುತ ಜಗತ್ತು ಯುದ್ಧ ಭೀತಿಯಿಂದ ತಲ್ಲಣಿಸುತ್ತಿರುವ ಪ್ರಸಕ್ತ ಸಂದರ್ಭದಲ್ಲಿ ಸಮಾಜದಲ್ಲಿ ಶಾಂತಿ, ಸಮಾಧಾನ ನೆಲೆಸಲು ಆಧ್ಯಾತ್ಮಿಕ, ಧಾರ್ಮಿಕ ಚಿಂತನೆ ಅಗತ್ಯ ಎಂದು ಬೆಳಗಾವಿ ಲೋಕಸಭಾ ಸದಸ್ಯರು ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಜಗದೀಶ ಶೆಟ್ಟರ ಹೇಳಿದರು.

ಪಟ್ಟಣದ ರಾಜರಾಜೇಶ್ವರಿ ಆಶ್ರಮದಲ್ಲಿ ನಡೆದ ಜಾತ್ರಾ ಮಹೋತ್ಸವ, 17ನೇ ವರ್ಷದ ವೇದಾಂತ ಪರಿಷತ್ ಹಾಗೂ ಗಣಪತಿ ಮಹಾರಾಜರ 65ನೇ ಜಯಂತೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ನಿಜಗುಣ ಶಿವಯೋಗಿಗಳ ಕೈವಲ್ಯ ಆಧಾರಿತ 'ದುರಿತ ಕರ್ಮವನು ಒಲ್ಲದಿರು ಪುಣ್ಯವನೆ ಮಾಡು' ಎಂಬ ವಿಷಯದ ಕುರಿತು ಚಿಂತನ ನಡೆಸಿದರು.

ಇಂಚಲ ಸಾಧು ಸಂಸ್ಥಾನ ಮಠದ ಜಗದ್ಗುರು ಡಾ. ಭಾರತಿ ಶಿವಾನಂದ ಶ್ರೀಗಳು, ಕುಳ್ಳೂರ ಮಠದ ಬಸವಾನಂದ ಭಾರತಿ ಶ್ರೀಗಳು ಪಾವನ ಸಾನಿಧ್ಯ ವಹಿಸಿದರು. ಢವಳೇಶ್ವರ ಹಿರೇಮಠದ ರೇಣುಕ ಶಿವಾಚಾರ್ಯ ಶ್ರೀಗಳು, ಬೆಳವಿ ಸಿದ್ಧಾರೂಢ ಮಠದ ಮೃತ್ಯುಂಜಯ ಶ್ರೀಗಳು, ಶ್ರದ್ಧಾನಂದ ಆಶ್ರಮದ ಮಾತೋಶ್ರೀ ಮುದ್ದಮ್ಮ ತಾಯಿ ದಿವ್ಯ ಸಾನಿಧ್ಯ ವಹಿಸಿದರು.

ಆಶ್ರಯದ ಪೀಠಾಧಿಪತಿ ಗಣಪತಿ ಮಹಾರಾಜರು, ಮುಖ್ಯ ಅತಿಥಿಗಳಾಗಿ ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ವಿರೂಪಾಕ್ಷ ಮಾಮನಿ, ಕೆಎಂಎಫ್ ನಿರ್ದೇಶಕ ಅಜೀತಕುಮಾರ ದೇಸಾಯಿ, ಪಂಚನಗೌಡ ದ್ಯಾಮನಗೌಡ್ರ, ರಾಜೇಂದ್ರ ಶೆಟ್ಟಿ, ಡಾ. ರಾಜಶೇಖರ ಬಿರಾದಾರ, ಬಾಲಕಿಯರ ವಸತಿನಿಲಯ ಪಾಲಕರಾದ ಆಶಾ ಪರೀಟ, ಕುಮಾರ ಹಿರೇಮಠ, ವಿಠ್ಠಲಗೌಡ ದೇವರಡ್ಡಿ, ರಾಜೇಂದ್ರ ವಾಲಿ, ಡಾ. ವಿಶ್ವನಾಥ ತಾವಂಶಿ, ಡಾ. ಕುಮಾರ ದಾಸರ, ಮೈತ್ರಾ ಹೊಂಗಲ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಇಂದಿನಿಂದ ಕಾಲುಬಾಯಿ ಲಸಿಕಾ ಅಭಿಯಾನ

• ಖಾನಾಪುರ: ಮುಂದಿನ ಒಂದು ತಿಂಗಳ ಕಾಲ ಈ ಅಭಿಯಾನ ನಡೆಯಲಿದೆ. ತಾಲೂಕಿನ ರೈತರು ತಮ್ಮಲ್ಲಿರುವ ಎಲ್ಲ ಜಾನುವಾರುಗಳಿಗೆ ಲಸಿಕೆ ಹಾಕಿಸಿಕೊಳ್ಳುವ ಮೂಲಕ ಜಾನುವಾರು ಕಾಲುಬಾಯಿ ರೋಗದಿಂದ ಮುಕ್ತಗೊಳಿಸಬೇಕು' ಎಂದು ಮುಖ್ಯ ಪಶುವೈದ್ಯಾಧಿಕಾರಿ ಡಾ.ಮನೋಹರ ದಾದ್ಮಿ ಹೇಳಿದರು.

ಪಶು ಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವೆಗಳ ಇಲಾಖೆಯಿಂದ ಕೇಂದ್ರ ಸರ್ಕಾರದ ಸಹಯೋಗದಲ್ಲಿ ಪಟ್ಟಣದ ಪಶು ಆಸ್ಪತ್ರೆಯಲ್ಲಿ ಹಮ್ಮಿಕೊಂಡಿದ ಜಾನುವಾರುಗಳಿಗೆ ಕಾಲುಬಾಯಿ ರೋಗದ ಲಸಿಕಾ ಅಭಿಯಾನ ಉದ್ಘಾಟಿಸಿ ಮಾತನಾಡಿ, ಪಶುವೈದ್ಯಕೀಯ ಸಿಬ್ಬಂದಿ ಮತ್ತು ಪಶು ಸಖಿಯರು ರೈತರ ಮನೆಗಳಿಗೆ ಭೇಟಿ ನೀಡಿ ಲಸಿಕೆ ಹಾಕುತ್ತಾರೆ. ಅವರು ಮನೆಗೆ ಬಂದಾಗ ಅವರೊಂದಿಗೆ ಸಹಕರಿಸಿ ಇಡೀ ತಾಲೂಕು ಕಾಲುಬಾಯಿ ರೋಗ ಮುಕ್ತವಾಗುವಂತೆ ಗಮನಹರಿಸಬೇಕು ಎಂದರು.

ಪಶು ವೈದ್ಯಕೀಯ ಇಲಾಖೆ ಹಿರಿಯ ವೈದ್ಯ ಡಾ.ಉಮೇಶ ಹೊಸೂರ ಪ್ರಾಸ್ತಾವಿಕ ಮಾತನಾಡಿ, ಕಾಲುಬಾಯಿ ರೋಗ ಹೊಂದಿದ ಹೈನುಗಾರಿಕೆ ಉತ್ಪಾದನಾ ಕ್ಷಮತೆ ಕಳೆದುಕೊಳ್ಳುತ್ತವೆ. ಹೊಲದಲ್ಲಿ ಹೂಡುವ ಜಾನುವಾರುಗಳು ಅಶಕ್ತಗೊಳ್ಳುತ್ತವೆ. ಇದರಿಂದ ರೈತರಿಗೆ ನಷ್ಟವಾಗುತ್ತದೆ. ಇದನ್ನು ತಪ್ಪಿಸಲು ಪ್ರತಿವರ್ಷ 2ಸಲ ಜಾನುವಾರುಗಳಿಗೆ ಲಸಿಕೆ ಹಾಕಿಸುವುದು ಅಗತ್ಯವಾಗಿದೆ. ಕಾರ್ಯಕ್ರಮದ ಯಶಸ್ಸಿಗೆ ಗ್ರಾಮೀಣ ಭಾಗದಲ್ಲಿ ಪಶು ವೈದ್ಯ ಇಲಾಖೆ ಸಿಬ್ಬಂದಿಯೊಂದಿಗೆ ಜನಪ್ರತಿನಿಧಿಗಳು, ಸ್ಥಳೀಯ ಸಂಘ ಸಂಸ್ಥೆಗಳು, ಹಾಲು ಉತ್ಪಾದಕರ ಸಹಕಾರ ಸಂಘಗಳು ಹಾಗೂ ರೈತರು ಸಹಕರಿಸಬೇಕು. ಕಳೆದ ಬಾರಿ ಶೇ.90ರಷ್ಟು ಗುರಿ ಸಾಧಿಸಲಾಗಿದೆ. ಈ ಬಾರಿ ತಾಲೂಕಿನಲ್ಲಿ ಅಂದಾಜು 85 ಸಾವಿರ ಜಾನುವಾರುಗಳಿಗೆ ಲಸಿಕೆ ಹಾಕಬೇಕಾಗಿದೆ ಎಂದು ವಿವರಿಸಿದರು.

ಈ ವೇಳೆ ಇಲಾಖೆಯಿಂದ ಪಶುಸಖಿಯರಿಗೆ ಮಂಜೂರಾದ ಕಿಟ್, ಸಮವಸ್ತ್ರಗಳನ್ನು ವಿತರಿಸಲಾಯಿತು.

ತಾಲೂಕಿನ ಲಸಿಕಾ ತಂಡಗಳ ಮುಖ್ಯಸ್ಥ ಡಾ.ಮಹಾದೇವ, ಡಾ.ಅಯಾಜ್, ಡಾ.ಬಿ.ಸಿ.ಚವ್ಹಾಣ, ಡಾ.ಶಕುಂತಲಾ, ಎಸ್. ಎಸ್.ಬಾಗಲೆ ಸೇರಿದಂತೆ ರೈತರು ಹಾಗೂ ಪಶು ಸಂಗೋಪನೆ ಇಲಾಖೆಯ ಸಿಬ್ಬಂದಿ, ಪಶುಸಖಿಯರು ಇದ್ದರು.



ಎಸ್‌ಎಸ್‌ಎಲ್‌ಸಿ: ಶೇ.99ರಷ್ಟು ಫಲಿತಾಂಶ

• ಯಮಕನಮರಡಿ: ಸಮೀಪದ ಕೋಚರಿ ಗ್ರಾಮದ ಸುಭಾಷ ಚಂದ್ರಭೋಸ ಸರಕಾರಿ ಪ್ರೌಢಶಾಲೆಯ ಎಸ್ ಎಸ್‌ಎಲ್‌ಸಿ ಫಲಿತಾಂಶ ಶೇ 93.85 ರಷ್ಟಾಗಿದ್ದು ಶಾಲೆಗೆ ನಾಗರಾಜ



ಮಂಜುನಾಥ ಕುರುಬರ ಶೇ.99.20 ಅಂಕ ಪಡೆದು ಪ್ರಥಮ ಆಫೀಯಾ ಲಾಡಜಿ ಮುಲ್ತಾನಿ ಶೇ.96.00 ದ್ವಿತೀಯ, ರಾಧಿಕಾ ಬಿರಪ್ಪಾ ಬಂತಿ ಶೇ 95.68 ಅಂಕಗಳಿ ತ್ರತೀಯ ಸ್ಥಾನಗಳಿಸದ್ದಾರೆ.

ಈ ವಿದ್ಯಾರ್ಥಿಗಳನ್ನು ಶಾಲಾ ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷರು ಹಾಗೂ ಮುಖ್ಯೋಪಧ್ಯಾಯರಾದ ರಾಜಶೇಖರ ವಠಾರೆ ಹಾಗೂ ಶಿಕ್ಷಕ ಸಿಬ್ಬಂದಿ ಅಭಿನಂದಿಸಿದ್ದಾರೆ.

ಸುಭಾಷಚಂದ್ರ ಭೋಸ ಸರಕಾರಿ ಶಾಲೆಯ ವಿದ್ಯಾರ್ಥಿಗಳು ಕನ್ನಡ ವಿಷಯದಲ್ಲಿ ವಿಶೇಷ ಸಾಧನೆ ಗೈದಿದ್ದಾರೆ, ಕನ್ನಡ ವಿಷಯದಲ್ಲಿ ಐದು ವಿದ್ಯಾರ್ಥಿಗಳು ಶೇ100ಕ್ಕೆ 100ರಷ್ಟು ಅಂಕ ಗಳಿಸಿದ್ದರಿಂದ ಕನ್ನಡ ಭಾಷಾ ಶಿಕ್ಷಕರಾದ ಶಿವಾನಂದ ಗುಂಡಾಳಿ ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.

ಕರ್ನಾಟಕ ಪಬ್ಲಿಕ್ ಶಾಲೆ ಸಾಧನೆ

• ರಾಯಬಾಗ: ಎಸ್ಸೆಸ್ಸೆಲ್ಸಿ ಫಲಿತಾಂಶ ಪ್ರಕಟವಾಗಿದ್ದು, ಕರ್ನಾಟಕ ಪಬ್ಲಿಕ್ ಶಾಲೆಯ ಒಟ್ಟು 79 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು ಅದರಲ್ಲಿ 71 ವಿದ್ಯಾರ್ಥಿಗಳು ಉತ್ತೀರ್ಣ ರಾಗಿರುತ್ತಾರೆ. ನಿರ್ಮಲಾ ದಯಾನಂದ ಮೇತ್ರಿ 584 (93.44) ಅಂಕ ಪಡೆದು ಸಾಧನೆ ಮಾಡಿ ಶಾಲೆಗೆ ಪ್ರಥಮ ಸ್ಥಾನ ಪಡೆದಿರುತ್ತಾಳೆ. ಸುನಿಲ್ ಭುಜಪ್ಪ ನಾಯಿಕ್ವಾಡಿ 563 ಅಂಕ (90.08) ಪಡೆದು ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾರೆ., ಹಾಲಪ್ಪ ಸಿದ್ದಪ್ಪ ನಾಯಿಕ್ 549(ಶೇ.87.84)ಅಂಕ ಪಡೆದು ತೃತೀಯ ಸ್ಥಾನದಲ್ಲಿ ಸಾಧನೆ ಗೈದಿದ್ದಾರೆ. ಸಾಕ್ಷಿ ರಾಮಚಂದ್ರ ಕೊಚೇರಿ, 544 (87.04) ಅಂಕ ಪಡೆದು ಸಾಧನೆಗೈದಿದ್ದಾಳೆ. ಸಮಾಜ ವಿಜ್ಞಾನ ವಿಷಯದಲ್ಲಿ ಅಕ್ಕವ್ವ ಪ್ರಧಾನಿ ಗಡ್ಕರಿ 100ಕ್ಕೆ 100ರಷ್ಟು ಸಾಧನೆ ತೋರಿದ್ದಾಳೆ. ಒಟ್ಟಾರೆ ಶಾಲೆಯ ಫಲಿತಾಂಶ ಶೇ.90ರಷ್ಟು ದಾಖಲಾಗಿದ್ದು, ಶಾಲೆ ಎಸ್‌ಡಿಎಂಸಿ ಅಧ್ಯಕ್ಷರು, ಸದಸ್ಯರು ಹಾಗೂ ಶಾಲೆ ಉಪ ಪ್ರಾಚಾರ್ಯರು, ಗುರು ಬಳಗ, ಸರ್ವ ಸಿಬ್ಬಂದಿ ವರ್ಗದವರು ವಿದ್ಯಾರ್ಥಿಗಳಿಗೆ ಶುಭ ಕೋರಿ ಹರ್ಷ ವ್ಯಕ್ತಪಡಿಸಿರುತ್ತಾರೆ.



ಎಸ್‌ಎಸ್‌ಎಲ್‌ಸಿ: ಪ್ರಜ್ಞಾಗೆ ಸನ್ಮಾನ

• ಚನ್ನಮ್ಮನ ಕಿತ್ತೂರು: ಪ್ರಸಕ್ತ ವರ್ಷದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅಂಬಡಗಟ್ಟಿ ಗ್ರಾಮದ ಪ್ರಜ್ಞಾ ರಾಯಪ್ಪ ಕಾದ್ರೊಳ್ಳಿ 625ಕ್ಕೆ 618 (ಶೇ 98.88) ಅಂಕಗಳಿಸಿ ಉತ್ತಮ ಸಾಧನೆಗೈದಿರುವ ಹಿನ್ನಲೆಯಲ್ಲಿ ಸಮಾಜ ಸೇವಕ, ಕಾಂಗ್ರೆಸ್ ಮುಖಂಡ ಹಬೀಬ ಶಿಲೇದಾರ ಸನ್ಮಾನಿಸಿ ಸಿಹಿ ಹಂಚಿಕೊಂಡರು. ಸಮೀಪದ ಅಂಬಡಗಟ್ಟಿ ಗ್ರಾಮದ ಶಿಲೇದಾರ ಇವರ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ನಂದಗಡದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸ್ಮಾರಕ ವಸತಿ ಶಾಲೆಯಲ್ಲಿ ಕಲಿತು ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಸಾಧನೆ ಮಾಡಿದ ಈ ವಿದ್ಯಾರ್ಥಿನಿಯ ಸಾಧನೆಯು ಐತಿಹಾಸಿಕ ಚನ್ನಮ್ಮಾಜಿಯ ನಾಡಿಗೆ ನಮ್ಮ ಗ್ರಾಮಕ್ಕೆ ಕೀರ್ತಿ ತಂದಿದ್ದಾಳೆಂದು ಹಬೀಬ ಶಿಲೇದಾರ ಅಭಿಪ್ರಾಯ ವ್ಯಕ್ತಪಡಿಸಿದರು.



ನಿಖರ ಮಾಹಿತಿ ನೀಡಿ ಸಹಕರಿಸಿ



• ಸಂಕೇಶ್ವರ: ಜನ ಗಣತಿಯು ದೇಶಾದ್ಯಂತ ಆರಂಭವಾಗಿದ್ದು, ಗಣತಿದಾರರು ತಮ್ಮ ಮನೆಗೆ ಬಂದಾಗ ಸಾರ್ವಜನಿಕರು ಯಾವುದೇ ಗೊಂದಲಕ್ಕೆ ಒಳಗಾಗದೆ ನಿಖರ ಮಾಹಿತಿ ನೀಡಿ ಸಹಕರಿಸಬೇಕು ಎಂದು ಪ್ರಧಾನ ಜನಗಣತಿ ಅಧಿಕಾರಿಗಳು ಹಾಗೂ ಪುರಸಭೆಯ ಮುಖ್ಯಾಧಿಕಾರಿ ಪ್ರಕಾಶ ಮಠದ ಹೇಳಿದರು.

ಸಂಕೇಶ್ವರ ಪುರಸಭೆಯ ವ್ಯಾಪ್ತಿಯಲ್ಲಿ ಮನೆಗಣತಿ ಕಾರ್ಯದಲ್ಲಿ ಮಾತನಾಡಿ, ಗಣತಿದಾರರು ಪಟ್ಟಣದ ಪ್ರತಿ ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸುತ್ತಿದ್ದು, ಗಣತಿದಾರರು ಮನೆ ಮನೆಗೆ ಭೇಟಿ ನೀಡಿದಾಗ ಸಹಕರಿಸಿ ಎಂದರು.

ಗಣತಿ ಕಾರ್ಯದ ಮೇಲ್ವಿಚಾರಕರಾದ ಮಹೇಶ ಪೂಜಾರ ಮಾತನಾಡಿ, ಗಣತಿದಾರರು ತಮ್ಮ ಬಂದಾಗ, ಮನೆ ನಿರ್ಮಾಣದ ಸ್ಥಿತಿಗತಿ ಮತ್ತು ವಸತಿ ಸೌಕರ್ಯ ಸೇರಿದಂತೆ ಒಟ್ಟು 34 ವಿವಿಧ ಪ್ರಶ್ನೆಗಳ ಮೂಲಕ ಮಾಹಿತಿ ಸಂಗ್ರಹಿಸಲಾಗುತ್ತದೆ. ಸಂಕೇಶ್ವರ ಪುರಸಭೆಯ ವ್ಯಾಪ್ತಿಯಲ್ಲಿ 11ಜನ ಮೇಲ್ವಿಚಾರಕಾರಿ, ಗಣತಿದಾರರಾಗಿ 60 ಜನ ಕಾರ್ಯನಿರ್ವಹಿಸುತ್ತಿದ್ದು, ಈ ಗಣತಿ ಕಾರ್ಯವು ಮೇ 15 ರವರೆಗೆ ನಡೆಯಲಿದ್ದು, ತಮ್ಮ ಮನೆ ಬಾಗಿಲಿಗೆ ಬರುವ ಗಣತಿದಾರರಿಗೆ ನಿಖರವಾದ ಮಾಹಿತಿ ನೀಡುವ ಮೂಲಕ ಈ ಕಾರ್ಯಕ್ಕೆ ಸಹಕಾರ ನೀಡಿ ಎಂದರು. ಗಣತಿದಾರರಾದ ಹಸನ್ ಕಾಲೇಕಾಜಿ, ಎ.ಎಸ್.ಪರೀಟ್,ಇದ್ರೀಶನ್ ದೊಡಮನಿ, ಪೋಲಿಸ ಇಲಾಖೆಯ ಸಿಬ್ಬಂದಿ ಬಿ.ಕೆ ನಾಗನೂರೆ ಹಾಜರಿದ್ದರು.

ಶೇ.99ರಷ್ಟು ಫಲಿತಾಂಶ

• ಮೂಡಲಗಿ: ಸಮೀಪದ ಕಲ್ಲೋಳಿಯ ಬಸವೇಶ್ವರ ಶಿಕ್ಷಣ ಸಂಸ್ಥೆ ಪ್ರಸಕ್ತ ವರ್ಷದ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.99 ಫಲಿತಾಂಶ ಆಗಿದ್ದು, ಲಕ್ಷ್ಮಿ ಮುತ್ತಪ್ಪಾ ಹಳಬರ ಶೇ.90% ಭಾಗ್ಯಶ್ರೀ ಮುರಸಿದ್ದ ಅರಬಾವಿ 85% ಮಾರಿಯಾ ಅಲ್ಲಾಭಕ್ಷ ನಧಾಫ್ 82% ಅಂಕಗಳಿಸಿದ್ದಾರೆ.

ಸಂಸ್ಥಾಪಕ ಅಧ್ಯಕ್ಷ ಈರಣ್ಣ ಬೆಳಕೂಡ, ಅಧ್ಯಕ್ಷ ರಮೇಶ ಬೆಳಕೂಡ, ಕಾರ್ಯದರ್ಶಿ ಡಾ.ಭೋಜರಾಜ್ ಬೆಳಕೂಡ, ಆಡಳಿತ ಅಧಿಕಾರಿ ಪ್ರಕಾಶ ಗರಗಟ್ಟಿ, ಮುಖ್ಯ ಶಿಕ್ಷಕ ರಮೇಶ್ ಹೆಬ್ಬಾಳ್ ಅವರು ಸಾಧನೆಗೈದ ಎಲ್ಲ ವಿದ್ಯಾರ್ಥಿಗಳಿಗೆ ಅಭಿನಂದಿಸಿದರು. ಈ ಎಲ್ಲ ಪಾಸಾದ ವಿದ್ಯಾರ್ಥಿಗಳು ಒಂದು ಸಾವಿರ ರೂ. ಉಚಿತ ಗಿಫ್ಟ್ ನೀಡಲಾಗುತ್ತದೆ ಎಂದು ಚೇರ್ಮನ್ ರಮೇಶ ಬೆಳಕೂಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಲಕ್ಷ್ಮೀ ಮುತ್ತಪ್ಪಾ ಹಳಬರ (ಪ್ರಥಮ) 90% | ಭಾಗ್ಯಶ್ರೀ ಮುರಸಿದ್ದ ಅರಬಾವಿ (ದ್ವಿತೀಯ) 85% | ಮಾರಿಯಾ ಅಲ್ಲಾಭಕ್ಷ ನಧಾಫ್ (ತೃತೀಯ)82 %

ಕರ್ನಾಟಕ ಪಬ್ಲಿಕ್ ಶಾಲೆ ಸಾಧನೆ



• ರಾಯಬಾಗ: ಎಸ್ಸೆಸ್ಸೆಲ್ಸಿ ಫಲಿತಾಂಶ ಪ್ರಕಟವಾಗಿದ್ದು, ಕರ್ನಾಟಕ ಪಬ್ಲಿಕ್ ಶಾಲೆಯ ಒಟ್ಟು 79 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು ಅದರಲ್ಲಿ 71 ವಿದ್ಯಾರ್ಥಿಗಳು ಉತ್ತೀರ್ಣ ರಾಗಿರುತ್ತಾರೆ.

ನಿರ್ಮಲಾ ದಯಾನಂದ ಮೇತ್ರಿ 584 (93.44) ಅಂಕ ಪಡೆದು ಸಾಧನೆ ಮಾಡಿ ಶಾಲೆಗೆ ಪ್ರಥಮ ಸ್ಥಾನ ಪಡೆದಿರುತ್ತಾಳೆ.



ಸುನಿಲ್ ಭುಜಪ್ಪ ನಾಯಿಕ್ವಾಡಿ 563 ಅಂಕ (90.08) ಪಡೆದು ದ್ವಿತೀಯ ಸ್ಥಾನ ಪಡೆದು ಕೊಂಡಿದ್ದಾರೆ., ಹಾಲಪ್ಪ ಸಿದ್ದಪ್ಪ ನಾಯಿಕ್ 549 (ಶೇ.87.84)ಅಂಕ ಪಡೆದು ತೃತೀಯ ಸ್ಥಾನದಲ್ಲಿ ಸಾಧನೆ ಗೈದಿದ್ದಾರೆ. ಸಾಕ್ಷಿ ರಾಮಚಂದ್ರ ಕೊಚೇರಿ, 544 (87.04) ಅಂಕ ಪಡೆದು ಸಾಧನೆಗೈದಿದ್ದಾಳೆ. ಸಮಾಜ ವಿಜ್ಞಾನ ವಿಷಯದಲ್ಲಿ ಅಕ್ಕವ್ವ ಪ್ರಧಾನಿ ಗಡ್ಕರಿ 100ಕ್ಕೆ 100ರಷ್ಟು ಸಾಧನೆ ತೋರಿದ್ದಾಳೆ. ಒಟ್ಟಾರೆ ಶಾಲೆಯ ಫಲಿತಾಂಶ ಶೇ.90ರಷ್ಟು ದಾಖಲಾಗಿದ್ದು, ಶಾಲೆ ಎಸ್‌ಡಿಎಂಸಿ ಅಧ್ಯಕ್ಷರು, ಸದಸ್ಯರು ಹಾಗೂ ಶಾಲೆ ಉಪ ಪ್ರಾಚಾರ್ಯರು, ಗುರು ಬಳಗ, ಸರ್ವ ಸಿಬ್ಬಂದಿ ವರ್ಗದವರು ವಿದ್ಯಾರ್ಥಿಗಳಿಗೆ ಶುಭ ಕೋರಿ ಹರ್ಷ ವ್ಯಕ್ತಪಡಿಸಿರುತ್ತಾರೆ.

ರಸ್ತೆ ನಿರ್ಮಾಣಕ್ಕೆ ವಿರೋಧ: ತಹಶೀಲ್ದಾರ್‌ಗೆ ಮನವಿ



• ಚಿಕ್ಕೋಡಿ: ತಾಲೂಕಿನ ಹಿರೇಕೋಡಿ ಗ್ರಾಮದ ಸರ್ಕಾರಿ ಕನ್ನಡ ಪ್ರಾಥಮಿಕ ಶಾಲೆಯ ಜಾಗೆ ಅತಿಕ್ರಮಿಸಿ ರಸ್ತೆ ನಿರ್ಮಾಣ ಮಾಡುತ್ತಿರುವ ಕ್ರಮವನ್ನು ವಿರೋಧಿಸಿ ಕರ್ನಾಟಕ ರಕ್ಷಣಾ ವೇದಿಕೆ ಹಾಗೂ ಸ್ಥಳೀಯರು ಶುಕ್ರವಾರ ಪಟ್ಟಣದ ಮಿನಿ ವಿಧಾನಸೌಧದಲ್ಲಿ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಕರವೇ ಚಿಕ್ಕೋಡಿ ತಾಲ್ಲೂಕು ಅಧ್ಯಕ್ಷ ಸಂಜು ಬಡಿಗೇರ ಮಾತನಾಡಿ, ದಾನಿಗಳು ಸರ್ಕಾರಿ ಶಾಲೆ ನಿರ್ಮಾಣಕ್ಕಾಗಿ ನೀಡಿದ ಜಾಗೆಯಲ್ಲಿ ರಸ್ತೆ ನಿರ್ಮಾಣ ಮಾಡಲಾಗುತ್ತಿದೆ. ಇದನ್ನು ತಡೆಯದೇ ಹೋದರೆ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಜನಪ್ರತಿನಿಧಿಗಳ ಹಾಗೂ ಸಂಬಂಧಿಸಿದ ಅಧಿಕಾರಿಗಳ ನಡೆ ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆಯ ಚಿಕ್ಕೋಡಿ ತಾಲ್ಲೂಕು ಘಟಕದಿಂದ ಗ್ರೇಡ್-2 ತಹಶೀಲ್ದಾರ್ ಕಿರಣ ಬೆಳವಿ ಅವರಿಗೆ ಮನವಿ ನೀಡಲಾಯಿತು.

ಚಂದ್ರಕಾಂತ ಹುಕ್ಕೇರಿ, ಸುಭಾಷ ಬಾಳಿಕಾಯಿ, ರಾಜೇಂದ್ರ, ಕಾಂಬಳೆ, ರಫೀಕ ಪಠಾಣ, ರಮೇಶ ಡಂಗೇರ, ಸಾಗರ ನಿಂಗಾಗೋಳ, ಚನ್ನಪ್ಪ ಮಂಟೂರ, ಅಣ್ಣಪ್ಪ ಪೂಜಾರಿ, ಸುರೇಶ ಫರಿತೆ, ಸಾತ್ವಿಕ ಕಟ್ಟಿ, ಶಂಕರ ಚೌಗಲಾ ಇತರರು ಇದ್ದರು.

ಕಿರುಸುದ್ದಿ

ವಿದ್ಯಾರ್ಥಿಗಳ ಉತ್ತಮ ಸಾಧನೆ

ಕಮತಗಿ: ಪಟ್ಟಣದ ಹುಚ್ಚೇಶ್ವರ ವಿದ್ಯಾವರ್ಧಕ ಸಂಘ, ಹುಚ್ಚೇಶ್ವರ ಪ್ರೌಢ ಶಾಲೆಯ ಪರೀಕ್ಷಾ ಕೇಂದ್ರ 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ -1ರಲ್ಲಿ ಹುಚ್ಚೇಶ್ವರ ಪ್ರೌಢಶಾಲೆಯ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡಿದ್ದಾರೆ. ಮೈನುದ್ದೀನ ತಹಶೀಲ್ದಾರ್ ವಿದ್ಯಾರ್ಥಿಯು 625/591 ಪ್ರತಿಶತ 94.56% ಪಡೆದು ಪರೀಕ್ಷಾ ಕೇಂದ್ರಕ್ಕೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾನೆ. ಸಮೀನಾ ನಧಾಫ ವಿದ್ಯಾರ್ಥಿನಿ 625/569 ಪ್ರತಿಶತ 91.04% ಅಂಕವನ್ನು ಪಡೆದು ಕೇಂದ್ರಕ್ಕೆ ದ್ವಿತೀಯ ಸ್ಥಾನವನ್ನು ಪಡೆದುಕೊಂಡ್ಡಿದ್ದಾರೆ. ಮತ್ತು ಕುಮಾರ ಶರತ ಕಡ್ಲಿಮಟ್ಟಿ ಈ ವಿದ್ಯಾರ್ಥಿಯು 625 /562 ಪ್ರತಿಶತ 89.92% ಅಂಕವನ್ನು ಪಡೆದು ಶಾಲೆಗೆ ತೃತೀಯ ಸ್ಥಾನವನ್ನು ಪಡೆದುಕೊಂಡಿರುತ್ತಾರೆ. ಪ್ರೌಢಶಾಲೆಯ ಡಿಸ್ಟಿಂಕ್ಷನ್ 12, ಫಸ್ಟ್ ಕ್ಲಾಸ್ 94, ಸೆಕೆಂಡ್ ಕ್ಲಾಸ್ 34, ಪಾಸ್ 19, ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಸಂಸ್ಥೆಯ ಅಧ್ಯಕ್ಷರಾದ ಹುಚ್ಚೇಶ್ವರ ಶ್ರೀಗಳು, ಗೌರವಾನ್ವಿತ ಆಡಳಿತ ಮಂಡಳಿಯವರು, ಮುಖ್ಯೋಪಾಧ್ಯಯ ಎಚ್.ಎಂ.ಪಾಟೀಲ ಮತ್ತು ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದಾರೆ.

ಉತ್ತಮ ಫಲಿತಾಂಶ





ಬಾದಾಮಿ: ಪ್ರಸಕ್ತ ಸಾಲಿನ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಸಮೀಪದ ಚಿಕ್ಕಮುಚ್ಚಳಗುಡ್ಡದ ಸರಕಾರಿ ಆದರ್ಶ ವಿದ್ಯಾಲಯದ ಸಂಪ್ರೀತಾ ಗಾರವಾಡ , 618(ಶೇ 98.88)ಪ್ರಥಮ, ನಿಶ್ಚಿತಾ ಪತ್ತೆಪುರ 617(ಶೇ,98.72) ದ್ವಿತೀಯ, ಚಿನ್ಮಯಿ ಕೆರೂರ 614 (ಶೇ.98.24) ಅಂಕ ಪಡೆದು ಶಾಲೆಗೆ ತೃತೀಯ ಸ್ಥಾನ ಪಡೆದು ಕೀರ್ತಿ ತಂದಿದ್ದಾರೆ. ಶಾಲೆಯ 74 ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆದಿದ್ದರು. ಈ ಪೈಕಿ 47 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿ, 25 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ, 02 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಒಟ್ಟು 74 ವಿದ್ಯಾರ್ಥಿಗಳಲ್ಲಿ 74 ವಿದ್ಯಾರ್ಥಿಗಳು ಉತ್ತೀರ್ಣರಾಗಿ ನೂರಕ್ಕೆ ನೂರರಷ್ಟು ಫಲಿತಾಂಶ ಬಂದಿದೆ.ಈ ಎಲ್ಲ ವಿದ್ಯಾರ್ಥಿಗಳ ಸಾಧನೆಗೆ ಕ್ಷೇತ್ರ ಶಿಕ್ಷಣಾಧಿಕಾರಿ ಕೇಶವ ಪೆಟ್ಲೂರ್,ಹಾಗೂ ಶಾಲೆಯ ಪ್ರಭಾರಿ ಪ್ರಾಚಾರ್ಯ ಶಂಕರರಾವ್ ಕುಲಕರ್ಣಿ, ಎಸ್ .ಡಿ.ಎಂ.ಸಿ ಅಧ್ಯಕ್ಷ ಸರ್ವ ಸದಸ್ಯರು ,ಹಾಗೂ ಸರ್ವ ಶಿಕ್ಷಕ ವೃಂದದವರು ಹರ್ಷ ವ್ಯಕ್ತಪಡಿಸಿದ್ದಾರೆ.

ಎಸ್ಸೆಸ್ಸೆಲ್ಸಿ ಪರೀಕ್ಷೆ: 100ಕ್ಕೆ 100ರಷ್ಟು ಫಲಿತಾಂಶ






ಬೀಳಗಿ: ತಾಲೂಕಿನ ಬೂದಿಹಾಳ (ಎಸ್.ಎ.) ಗ್ರಾಮದ ಸರ್ಕಾರಿ ಪ್ರೌಢ ಶಾಲೆಯ 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 50ಕ್ಕೆ 50 ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ 100ಕ್ಕೆ 100ರಷ್ಟು ಫಲಿತಾಂಶ ಬಂದಿದೆ. ಒಟ್ಟು 50 ವಿದ್ಯಾರ್ಥಿಗಳಲ್ಲಿ 7 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿ, 28 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ, 13 ವಿದ್ಯಾರ್ಥಿಗಳು ದ್ವಿತಿಯ ಶ್ರೇಣಿ, 2 ವಿದ್ಯಾರ್ಥಿಗಳು ತೃತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿರುವರು. ವೇದಾ ಈರಣ್ಣ ಅಂಗಡಿ ಹಾಗೂ ಸುಚಿತ್ರಾ ಮಳಿಯಪ್ಪ ಯಡಹಳ್ಳಿ ಇರ್ವರೂ ಒಟ್ಟು 607 (97.12%) ಅಂಕಗಳನ್ನು ಪಡೆದು ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದು, ದರ್ಶನ ಶೀಮಂತ ಅಡಗಿಮನಿ 603 (96.48%) ಅಂಕಗಳನ್ನು ಪಡೆದು ಶಾಲೆಗೆ ದ್ವಿತಿಯ ಸ್ಥಾನ ಹಾಗೂ ಶ್ರೇಯಾ ಶಂಕ್ರೆಪ್ಪ ಮೇಟಿ 594 (95.04%) ಅಂಕಗಳನ್ನು ಪಡೆದು ಶಾಲೆಗೆ ತೃತೀಯ ಸ್ಥಾನ ಪಡೆದಿರುವರೆಂದು ಮುಖ್ಯೋಪಾಧ್ಯಾಯ ಭಾರತಿ ಜಾಧವ ತಿಳಿಸಿದ್ದಾರೆ.

ಅವಳಿ ತಾಲೂಕಿನಲ್ಲಿ ಉತ್ತಮ ಫಲಿತಾಂಶ: ಬಿಇಒ

ಜಮಖಂಡಿ: 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ಜಿಲ್ಲೆಯಲ್ಲಿ ಜಮಖಂಡಿ ಮೂರನೇ ಸ್ಥಾನದಲ್ಲಿ ಸಾಧನೆ ಮಾಡಿದೆ. ಅವಳಿ ತಾಲೂಕಿನಲ್ಲಿ ಶೇ 95.85 ಅದರಲ್ಲಿ ಜಮಖಂಡಿ ತಾಲೂಕಿನಲ್ಲಿ ಶೇ.95.45, ರಬಕವಿ ಬನಹಟ್ಟಿ ತಾಲೂಕಿನಲ್ಲಿ ಶೇ.96.39ರಷ್ಟು ಸಾಧನೆ ಮಾಡಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಅಶೋಕ ಬಸಣ್ಣವರ ತಿಳಿಸಿದ್ದಾರೆ, ಜಮಖಂಡಿ ತಾಲೂಕಿನಲ್ಲಿ 8 ವಿದ್ಯಾರ್ಥಿಗಳು, ರಬಕವಿ ಬನಹಟ್ಟಿ ತಾಲೂಕಿನಲ್ಲಿ 10 ವಿದ್ಯಾರ್ಥಿಗಳು 616 ರಿಂದ 621 ಅಂಕ ಪಡೆದಿದ್ದಾರೆ. ಜಮಖಂಡಿ ತಾಲೂಕಿನಲ್ಲಿ 33 ಶಾಲೆಗಳು ರಬಕವಿ ಬನಹಟ್ಟಿ ತಾಲೂಕಿನಲ್ಲಿ 19 ಶಲೆಗಳು ಶೇ .100 ರಷ್ಟು ಫಲಿತಾಂಶ ನೀಡಿವೆ. 253 ವಿದ್ಯಾರ್ಥಿಗಳು ಶೇ.95ರಷ್ಟು ಅಂಕ ಪಡೆದು ತಾಲೂಕಿಗೆ ಕೀರ್ತಿ ತಂದಿದ್ದಾರೆತಾಲೂಕಿನ ಹಿಪ್ಪರಗಿ ಮುರಾರ್ಜಿ ಶಾಲೆಯ ನವೀನ ಕುಂಬಾರ, ಶೇ 99.36. ರಾಮಪೂರ ಪೂರ್ಣಪ್ರಜ್ಞ ಶಾಲೆಯ ಶುಶಾಂತ ಬುರ್ಲಿ ರಜ್ಯಕ್ಕೆ 6 ಸ್ಥಾನ ಜಿಲ್ಗೆಗೆ ಪ್ರಥಮ ಸ್ಥಾನ, ತೇರದಾಳದ ಸೌಮ್ಯಾ ಹರವಿ ಶೇ 99.2, ಸಂದೀಪ ಜಾಡಗೌಡ ಶೇ 99.2 ಅಂಕ ಪಡದು ರಾಜ್ಯಕ್ಕೆ 6 ನೇ ಸ್ಥಾನ ಜಿಲ್ಗೆಗೆ ದ್ವಿತೀಯ ಸ್ಥಾನ. ಮುತ್ತಕ್ಕಾ ನ್ಯಾಮಗೌಡ ಶೇ 99.04, ಅಕ್ಷತಾ ಮಲಕಣ್ಣವರ ಶೇ 99.04. ಕೀರ್ತಿ ಸೋರಗಾವಿ ಶೇ 99.04, ರಾಜ್ಯಕ್ಕೆ 7 ನೇ ಸ್ಥಾನ ಜಿಲ್ಲೆಗೆ ತ್ರಿತೀಯ ಸ್ಥಾನ, ದಾನೇಶ್ವರಿ ಪಡ್ಡಿ ಶೇ 98.88, ಮಧುರಖಂಡಿಯ ಸಾಯಿ ಸಂಕಲ್ಪ ಶಾಲೆಯ ಮುಹಮ್ಮದ ನಾಯಿಕವಾಡಿ ಶೇ 98.88 ರಾಜ್ಯಕ್ಕೆ 8 ನೇ ಸ್ಥಾನ, ತಾಲೂಕಿಗೆ ಚತುರ್ಥ ಸ್ಥಾನ, ಪವನ ಮಡ್ಡಿ ಶೇ 98.72, ಆದಿತ್ಯ ಆಲಗೂರ, ಶೇ 98. 72, ವರ್ಷಾ ಉಪ್ಪಿನ ಶೇ 98.72, ಶ್ರೀರಂಗ ಖಟಾವಕರ ಶೇ 98.72, ಸುಪ್ರಿಯಾ ಕಾತ್ರಾಳ ಶೇ 98.72, ರಾಜ್ಯಕ್ಕೆ 9 ನೇ ಸ್ಥಾನ, ಆದರ್ಶ ಬಸಗೊಂಡನವರ ಶೇ 98.56, ಸ್ನೇಹಾ ಜಾಧವ ಶೇ 98.56, ಪ್ರಜ್ಞಾ ಪಾಟೀಲ ಶೇ 98,56, ಮಸೀರಾ ಮೋಮಿನ ಶೇ 98,56 ಅಂಕ ಪಡೆದ ಈ 18 ವಿದ್ಯಾರ್ಥಿಗಳು ತಾಲೂಕಿಗೆ ಕೀರ್ತಿ ತಂದಿದ್ದಾರೆ ಎಂದು ತಿಳಿಸಿದ್ದಾರೆ.



ಬಾದಾಮಿ: ತೆರೆದ ಬಾವಿಯಲ್ಲಿ ಮರ ಬಿದ್ದಿದ್ದನ್ನು ಸ್ವಚ್ಛಗೊಳಿಸುವ ವೇಳೆ ಕಾಲು ಜಾರಿ ವ್ಯಕ್ತಿಯೊಬ್ಬ ಮೃತಪಟ್ಟ ರೈತ ಸೋಮಲಿಂಗ ದ್ಯಾಮಣ್ಣ ಇದ್ಲಿ ಅವರ ಕುಟುಂಬಸ್ಥರಿಗೆ ಶಾಸಕ ಭೀಮಸೇನ ಚಿಮ್ಮನಕಟ್ಟಿ ಅವರು ಭೇಟಿ ನೀಡಿ ಸಾಂತ್ವನ ಹೇಳಿದರು. ಸ್ಥಳಕ್ಕೆ ತಹಶೀಲ್ದಾರ್ ಎಸ್.ಬಿ.ಬೊಮ್ಮನ್ನವರ, ಆರೋಗ್ಯಾಧಿಕಾರಿಗಳು, ಪೊಲೀಸ್ ಇಲಾಖೆ ಅಧಿಕಾರಿಗಳೊಂದಿಗೆ, ಶಾಸಕರು ಸಂತ್ರಸ್ತರಿಗೆ ಪರಿಹಾರ ಕೊಡಿಸುವುದಾಗಿ ಕುಟುಂಬಸ್ಥರಿಗೆ ಧೈರ್ಯ ತುಂಬಿದರು.

ಹಂಸನೂರ ಕೆರೆ ಹೂಳೆತ್ತುವುದಕ್ಕೆ ಚಾಲನೆ

ಗುಳೇದಗುಡ್ಡ: ಧರ್ಮಾಧಿಕಾರಿಗಳಾದ ಡಾ.ಡಿ.ವೀರೇಂದ್ರ ಹೆಗ್ಗಡೆಯವರ ನೇತ್ರತ್ವದಲ್ಲಿ ನಮ್ಮೂರು ನಮ್ಮ ಕರೆ ಯೋಜನೆಯಡಿ ಕೆರೆಗಳನ್ನು ಹೂಳೆತ್ತಿ ನೀರನ್ನು ಉಳಿಸುವ ಕೆಲಸ ಮಾಡಲಾಗುತ್ತಿದ್ದು, ಇದೇ ಯೋಜನೆಯಡಿ ಹಂಸನೂರು ಗ್ರಾಮದ ಸುಮಾರು 4 ಎಕರೆ ವಿಸ್ತೀರ್ಣದ ಕೆರೆಯನ್ನು ಧರ್ಮಸ್ಥಳ ಯೋಜನೆಯಿಂದ ಹೂಳೆತ್ತಿ ತಂತಿ ಬೇಲಿ ಅಳವಡಿಸಲಾಗುವುದು ಎಂದು ಜಿಲ್ಲಾ ನಿರ್ದೇಶಕ ಚನ್ನಕೇಶವ ಹೇಳಿದರು.

ತಾಲೂಕಿನ ಹಂಸನೂರು ಗ್ರಾಮದಲ್ಲಿ ಕ್ಷೇತ್ರ ಧರ್ಮಸ್ಥಳ ಯೋಜನೆಯ ನಮ್ಮೂರು ನಮ್ಮ ಕೆರೆ ಯೋಜನೆಯಡಿ ಕೆರೆ ಹೂಳೆತ್ತುವ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿ, ನೀರು ಜೀವ ಜಲ ಇದರ ಸಂರಕ್ಷಣೆ ನಮ್ಮೆಲ್ಲರ ಹೊಣೆ ಇದರಿಂದ ಪಶು ಪಕ್ಷಿ ಪ್ರಾಣಿ ಸಂಕುಲಗಳಿಗೆ ನೀರು ಅಗತ್ಯವಾಗಿದೆ ಇದರ ಸದುಪಯೋಗ ಆಗಬೇಕು ಆದ್ದರಿಂದ ಕೆರೆಗಳ ಹೂಳೆತ್ತವ ಕಾರ್ಯ ಮಾಡಲಾಗುತ್ತಿದ್ದು, ಈ ಯೋಜನೆಯಿಂದ ರಾಜ್ಯದಲ್ಲಿ 1000 ಕ್ಕೂ ಮಿಕ್ಕಿ ಕೆರೆಗಳ ಹೂಳೆತ್ತಲಾಗಿದೆ ಎಂದರು.

ಕೆರೆ ಸಮಿತಿ ಅಧ್ಯಕ್ಷ ವಸಂತ ಕುಲಕರ್ಣಿ, ಬಾದಾಮಿ ತಾಲೂಕಿನ ಯೋಜನಾಧಿಕಾರಿ ನಾಗರಾಜ ಹದ್ಲಿ, ಕೊಪ್ಪಳ ಪ್ರಾದೇಶಿಕ ಕಚೇರಿಯ ಕೆರೆ ಎಂಜಿನಿಯರ್ ಸತೀಶ ಒಕ್ಕೂಟದ ಪದಾಧಿಕಾರಿಗಳು ಸಂಘಗಳ ಸದಸ್ಯರು, ತಾಲೂಕಿನ ಕೃಷಿ ಮೇಲ್ವಿಚಾರಕ ಮಹೇಶ ಪಾಟೀಲ, ವಲಯದ ಮೇಲ್ವಿಚಾರಕ ರವಿ ಕೆ, ವಾಸಣ್ಣ ಕುಲಕರ್ಣಿ, ಬಸವರಾಜ ಕುಂಬಾರ, ಅಡಿವೆಪ್ಪಾ ಕುಂಬಾರ, ದ್ಯಾಮಣ್ಣ ಕರಡಿಗುಡ್ಡ, ಗುರುಬಸು ಕಲಗತಿ, ನಾಗರತ್ನಾ ಜಮಖಂಡಿ ಹಾಗೂ ಗ್ರಾಮಸ್ಥರು ಇದ್ದರು.



ಗುಳೇದಗುಡ್ಡ: ತಾಲೂಕಿನ ಹಂಸನೂರು ಗ್ರಾಮದಲ್ಲಿ ಕ್ಷೇತ್ರ ಧರ್ಮಸ್ಥಳ ಯೋಜನೆಯ ನಮ್ಮೂರು ನಮ್ಮ ಕೆರೆ ಯೋಜನೆಯಡಿ ಕೆರೆ ಹೂಳೆತ್ತುವ ಕಾಮಗಾರಿಗೆ ಜಿಲ್ಲಾ ನಿರ್ದೇಶಕ ಚನ್ನಕೇಶವ ಭೂಮಿಪೂಜೆ ನೆರವೇರಿಸಿದರು.

ನಾರೀಶಕ್ತಿ ವಂದನಾ ಕಾಯ್ದೆ ಜಾರಿಗೆಗೆ ಕಾಂಗ್ರೆಸ್‌ನಿಂದ ವಿರೋಧ

ಮೀಸಲಾತಿ ವಿಧೇಯಕಕ್ಕೆ ವಿರೋಧ ಸಲ್ಲ

ಬಾಗಲಕೋಟೆ: ಕ್ಷೇತ್ರ ಪುನರ್ ವಿಗಂಡಣೆ, ಮಹಿಳಾ ಮೀಸಲಾತಿ ಜಾರಿಗೊಳಿಸುವ ಉದ್ದೇಶಿಸಿ ನಾರೀಶಕ್ತಿ ವಂದನಾ ಕಾಯ್ದೆ ಜಾರಿಗೊಳಿಸಲು ಪ್ರಧಾನ ಮಂತ್ರಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಮುಂದಾದ ಸಂದರ್ಭದಲ್ಲಿ ಕಾಂಗ್ರೆಸ್ ಹಾಗೂ ವಿರೋಧ ಪಕ್ಷಗಳು ಇದಕ್ಕೆ ವಿರೋಧ ವ್ಯಕ್ತಪಡಿಸುವ ಮೂಲಕ ಮಹಿಳೆಯರಿಗೆ ರಾಜಕೀಯ ಶಕ್ತಿ ನೀಡಲು ಮನಸ್ಸು ತೋರಿಸಲಿಲ್ಲ ಎಂದು ಸಂಸದ ಪಿ.ಸಿ.ಗದ್ದಿಗೌಡರ ಹೇಳಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶ ವ್ಯಾಪಿ ಮಹಿಳಾ ಮೀಸಲಾತಿ ವಿದೇಯಕಕ್ಕೆ ವಿರೋಧ ಮಾಡುವುದು ತರವಲ್ಲ, ಮಹಿಳೆಯರಿಗೆ ರಾಜಕೀಯ ಪ್ರಾತಿನಿಧ್ಯ ನೀಡಬೇಕು ಎನ್ನುವ ಆಶಯ ದಶಕಗಳಿಂದ ಬಂದಿದೆ. ನೂರೆಂಟು ತಕರಾರು, ತರ್ಕದ ಬಳಿಕ ವಿಧೇಯಕ ಸಿದ್ದಗೊಳಿಸಲಾಗಿತ್ತು. ಕ್ಷೇತ್ರ ಪುನರ್ ವಿಗಂಡನೆ ಜೊತೆಗೆ ಇದನ್ನು ಜಾರಿಗೊಳಿಸಲು ಉದ್ದೇಶಿಸಲಾಗಿತ್ತು. ಆದರೇ ವಿರೋಧ ಪಕ್ಷಗಳು ಜನರ ಮುಂದೆ ತಪ್ಪಾಗಿ ಅರ್ಥೈಸಲು ಮುಂದಾಗಿವೆ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಮಾತನಾಡಿ, ಪ್ರಧಾನ ಮಂತ್ರಿ ನರೇಂದ್ರ ಮೋದಿ ದೇಶ ಕಂಡ ಶ್ರೇಷ್ಠ ಪ್ರಧಾನಿಗಳಲ್ಲಿ ಒಬ್ಬರು. ಇಂತಹವರ ಬಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಗಾಂಧಿ ಕುಟುಂಬ ಮೆಚ್ಚಿಸಲು ಭಯೋತ್ಪಾದಕ ಅಂತ ಕರೆದಿರುವುದು ಸಮಂಜಸವಲ್ಲ. ಕೂಡಲೇ ದೇಶದ ಜನರ ಕ್ಷಮೆಯಾಚನೆ ಮಾಡಬೇಕು ಎಂದು ಆಗ್ರಹಿಸಿದ ಅವರು, ರಾಜಕೀಯವಾಗಿ ಮಹಿಳೆಯರಿಗೆ ಮೀಸಲಾತಿ ನೀಡಲು ಬಿಜೆಪಿ ಉತ್ಸುಕವಾಗಿದೆ. ಆದರಲ್ಲೂ ವಿಧಾನಸಭೆ, ಲೋಕಸಭಾ ಕ್ಷೇತ್ರದಲ್ಲಿ ಮಹಿಳೆಯರಿಗೆ ಅವಕಾಶಗಳು ದೊರೆಯಲಿವೆ. ಆದರೇ ಕಾಂಗ್ರೆಸ್ ಇದನ್ನು ಸಹಿಸಿಕೊಳ್ಳುತ್ತಿಲ್ಲ ಎಂದು ತಿಳಿಸಿದರು.

ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷ ಶಾಂಭವಿ ಮಾತನಾಡಿ, ಮಹಿಳೆಯರು ಇಂದು ಎಲ್ಲ ರಂಗದಲ್ಲಿ ಮುಂದೆ ಇದ್ದಾರೆ. ರಾಜಕೀಯವಾ ಶಕ್ತಿ ತುಂಬುವ ಕೆಲಸ ಆಗಬೇಕಿದೆ. ಹೀಗಾಗಿ ಕೇಂದ್ರ ಸರ್ಕಾರ ಮಹಿಳಾ ಮೀಸಲಾತಿ ಜಾರಿಗೊಳಿಸಲು ಮುಂದಾಗಿದೆ. ಆದರೇ ಕಾಂಗ್ರೆಸ್ ಈ ಕಾಯ್ದೆಗೆ ಬೆಂಬಲ ನೀಡಲಿಲ್ಲ. ತನ್ಮೂಲಕ ಮಹಿಳಾ ವಿರೋಧಿ ಅಂತ ಖಾತ್ರಿ ಪಡಿಸಿದೆ ಎಂದು ಹೇಳಿದರು.

ಡಾ.ವಿಜಯಲಕ್ಷ್ಮೀ ತುಂಗಳ, ಸುಜಾತಾ ಶಿಂಧೆ, ಸತ್ಯನಾರಾಯಣ ಹೇಮಾದ್ರಿ, ಶಿವು ಸುರಪುರ ಇದ್ದರು.



ವೈಯಕ್ತಿಕ ವಿಚಾರ

ಯತ್ನಾಳ ಹೊಸ ಪಕ್ಷ ಸ್ಥಾಪನೆ ಕುರಿತು ಸಂಸದ ಪಿ.ಸಿ.ಗದ್ದಿಗೌಡರ ಮಾತನಾಡಿ, ಕರ್ನಾಟಕದ ಬಗ್ಗೆ ಬಿಜೆಪಿ ಹೈಕಮಾಂಡ್ ತಮ್ಮದೆಯಾದ ವಿಚಾರ ಹೊಂದಿದ್ದಾರೆ. ಎಲ್ಲವನ್ನು ಗಮನಿಸುತ್ತಿದ್ದಾರೆ. ಪಂಚ ರಾಜ್ಯಗಳ ಚುನಾವಣೆ ಬಳಿಕ ರಾಜ್ಯದಲ್ಲಿ ಬಿಜೆಪಿ ವ್ಯವಸ್ಥೆ ಹೇಗೆ ಇರಬೇಕು ಅಂತ ಚಿಂತನೆ ಮಾಡಲಿದೆ. ಸರಿ ಮಾಡುವುದು ಹಾಗೂ ವಿವಿಧ ಬೆಳವಣಿಗೆ ಬಗ್ಗೆ ಚರ್ಚೆಯಾಗಲಿದೆ. ಆದರೇ ಶಾಸಕ ಬಸನಗೌಡ ಪಾಟೀಲ ಯತ್ನಾಳ ನಮ್ಮ ಪಕ್ಷದಲ್ಲಿ ಇಲ್ಲ. ಹೊಸ ಪಕ್ಷ ಸ್ಥಾಪನೆ ಅವರ ವೈಯಕ್ತಿ ವಿಚಾರ. ತಮ್ಮ ವಿವೇಚನೆಗೆ ಬಿಟ್ಟ ವಿಚಾರ ಎಂದರು. ಹಿಂದುತ್ವದ ಆಧಾರ ಮೇಲೆ ಪಕ್ಷ ಸ್ಥಾಪಿಸಲು ಹೊರಟ್ಟಿದ್ದಾರೆ ಎನ್ನುವ ಪ್ರಶ್ನೆಗೆ ಉತ್ತರಿಸಿದ ಗದ್ದಿಗೌಡರ, ನಾನು ಕೂಡಾ ಹಿಂದುನೇ. ಎಲ್ಲರು ಹಿಂದು ಇದ್ದೇವೆ. ಯಾವ ರೀತಿ ಪಕ್ಷ ಸ್ಥಾಪಿಸುತ್ತಾರೆ ಅವರ ವೈಯಕ್ತಿಕ ವಿಚಾರ ಎಂದು ಹೇಳಿದರು.

ವಿದ್ಯಾರ್ಥಿಗಳು ಸಮಯ ಪಾಲಿಸಲಿ

ಬಾದಾಮಿ: ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವತಿಯಿಂದ ನಗರದ ಹೇಮರಡ್ಡಿ ಕಲ್ಯಾಣ ಭವನದಲ್ಲಿ ನಡೆದ 2025-26ನೇ ಸಾಲಿನ ಬಿ.ಎ, ಬಿಕಾಂ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಮತ್ತು ಸಾಂಸ್ಕೃತಿಕ, ಕ್ರೀಡಾ, ಎನ್‌ಎಸ್‌ಎಸ್, ಸ್ಕೌಟ್ಸ್ ಮತ್ತು ಗೈಡ್ಸ್, ರೆಡ್ ರಿಬ್ಬನ್ ಕ್ಲಬ್ ಚಟುವಟಿಕೆಗಳ ಸಮಾರೋಪ ನಡೆಯಿತು.

ಬಾದಾಮಿಯ ಎಸ್‌ಎಸ್‌ಬಿಎಂ ಪದವಿ ಕಾಲೇಜಿನ ಪ್ರಾಧ್ಯಾಪಕ ಪ್ರೊ.ಶಿವಕುಮಾರ ಅಂಗಡಿ ಮಾತನಾಡಿ, ನಾವೆಲ್ಲರೂ ಸಮಯದ ಕೂಸುಗಳು. ವಿದ್ಯಾರ್ಥಿಗಳು ಸಮಯದ ಜೊತೆಗೆ ಓಡುವುದನ್ನು ಕಲಿಯಬೇಕು. ಅಂದಾಗಲೇ ಯಶಸ್ಸು ದೊರೆಯುವುದು. ಕಾಲೇಜಿನಲ್ಲಿ ನಡೆಯುವ ಚಟುವಟಿಕೆಗಳು ನಮಗೆ ಕಾಲನ ಜೊತೆಗೆ ಓಡುವುದಕ್ಕೆ ಕಲಿಸುತ್ತವೆ ಎಂದರು. ಸೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಘಟಕದ ಸಂಘಟಕ ಪ್ರಮೋದ ಚೌಗಲೆ ಮಾತನಾಡಿ, ಶಿಸ್ತು, ದೇಶಾಭಿಮಾನ ಮತ್ತು ಸಾಮಾಜಿಕ ಸೇವೆಗಾಗಿ ಸೌಟ್ಸ್ ಮತ್ತು ಗೈಡ್ ಚಟುವಟಿಕೆಯಲ್ಲಿ ವಿದ್ಯಾರ್ಥಿಗಳು ಹೆಚ್ಚಾಗಿ ತೊಡಗಿಸಿಕೊಳ್ಳಬೇಕು. ಪದವಿ ಅಧ್ಯಯನದೊಂದಿಗೆ ಸಾಮಾಜಿಕ ಜವಾಬ್ದಾರಿ ಹೆಚ್ಚಿಸಿಕೊಳ್ಳಬೇಕು ಎಂದರು.

ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯ ಎಸ್.ಎಂ.ಹಿರೇಮಠ ಮಾತನಾಡಿ, ವಿದ್ಯಾರ್ಥಿಗಳು ಮೊಬೈಲ್‌ನಿಂದ ದೂರವಿದ್ದು ಡಿಜಿಟಲ್ ಉಪವಾಸ ಮಾಡಿದರೆ ಮಾತ್ರ ಅಧ್ಯಯನದಲ್ಲಿ ಯಶಸ್ಸು ಸಾಧಿಸಲು ಸಾಧ್ಯ ಎಂದು ಹೇಳಿದರು.

ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯ ಎಂ.ಐ.ಬಾರಾವಲಿ ಮಾತನಾಡಿದರು. ಪ್ರಾಂಶುಪಾಲ ಪ್ರೊ.ಶಿವಾನಂದ ರಾಯನಗೌಡರ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿದ್ಯಾರ್ಥಿಗಳು ಪದವಿ ಪೂರ್ಣಗೊಳಿಸಿದ ನಂತರ ಸ್ನಾತಕೋತ್ತರ ಪದವಿ ಜೊತೆಗೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸಬೇಕು. ಇದರಿಂದ ಉತ್ತಮ ಭವಿಷ್ಯ ರೂಪಿಸಿಕೊಳ್ಳಬಹುದು ಎಂದು ತಿಳಿಸಿದರು. ಪ್ರಾಧ್ಯಾಪಕ ಎಂ.ಎನ್.ಸಿದ್ದಲಿಂಗಪ್ಪನವರ, ಪ್ರೊ.ಕೆ.ಆರ್.ಪಾಟೀಲ, ಪ್ರೊ.ಚಂದ್ರಶೇಖರ ಹೆಗಡೆ, ಪ್ರೊ.ಗೋವರ್ಧನ ಪಿ.ಬಿ., ಡಾ.ವಿ.ಬಿ.ಸಣ್ಣಸಕ್ಕರಗೌಡರ, ಡಾ.ಐ.ಎನ್. ಹಾಳಿ, ಬಿ.ಎಂ.ಕಲ್ಲೂರ, ಡಾ.ಸೀಮಾ ಜಿ.ಕೆ., ಹನಮಂತ ಅಪ್ಪಣ್ಣನವರ, ಬಸವರಾಜ ತೋಟದ, ಬಸವರಾಜ ವಡ್ಡರ, ಡಾ.ಸತೀಶ ಶಿವಪ್ಪಯ್ಯನಮಠ, ಶಿಲ್ಪಾ ಕೆ.ಎಚ್.ಪೂಜಾ ಶ್ರೀಯಾನ್, ಆದಿತ್ಯ ಮಣ್ಣೂರ, ಒಡೆಯರ್, ಆನಂದ ಅಪ್ಪೋಜಿ, ಮುತ್ತಣ್ಣ ರೊಟ್ಟಿ, ಅಶ್ವಿನಿ ಪಾರಸೆ ಸೇರಿದಂತೆ ಸಿಬ್ಬಂದಿ ಉಪಸ್ಥಿತರಿದ್ದರು.



ಪ್ರತಿಯೊಬ್ಬ ವ್ಯಕ್ತಿಗೆ ಅನುಭವ ಮುಖ್ಯ

ಮಹಾಲಿಂಗಪುರ: ಹುಟ್ಟಿದಾಗ ಪ್ರತಿಯೊಬ್ಬರೂ ಸಣ್ಣವರೇ ಇರುತ್ತಾರೆ. ಅನುಭವ, ಪರಿಸರ ಜ್ಞಾನದಿಂದ ದೊಡ್ಡವರಾಗುತ್ತಾರೆ ಎಂದು ಸ್ಥಳೀಯ ಸಿದ್ಧಾರೂಢ ಮಠದ ಸಹಜಾನಂದ ಸ್ವಾಮಿಗಳು ಹೇಳಿದರು.

ಸ್ಥಳೀಯ ಜವಳಿ ಬಜಾರದಲ್ಲಿ ಶುಕ್ರವಾರ ಜರುಗಿದ ಯಲ್ಲಮ್ಮ ದೇವಿ ದೇವಸ್ಥಾನದ ಕಳಸಾರೋಹಣ, ಮಲ್ಲಮ್ಮ ದೇವಿ ದೇವಸ್ಥಾನದ ಮೂರ್ತಿ ಪ್ರತಿಷ್ಠಾಪನೆ ಹಾಗೂ ಧರ್ಮ ಸಭೆಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು ಒಂದಾನೊಂದು ಕಾಲದಲ್ಲಿ ಈ ಜವಳಿ ಬಜಾರ ವೈಭವದ ಓಣಿಯಾಗಿತ್ತು. ಇಲ್ಲಿಂದ ದಾವಣಗೆರೆಗೆ ಸೀರೆ ಒಯ್ದು ಅಲ್ಲಿಂದ ನೂಲು ತಂದು ಮತ್ತೆ ಸೀರೆ ತಯಾರಿಸುತ್ತಿದ್ದರು. ಪಟ್ಟಣದ ಪ್ರಮುಖ ವ್ಯಾಪಾರ ಕೇಂದ್ರವಾಗಿ ಹೃದಯ ಭಾಗವಾಗಿತ್ತು ಈ ಪ್ರದೇಶದಲ್ಲಿ ಅರ್ಧ ಶತಮಾನಗಳ ಹಿಂದೆ ನಿರ್ಮಿಸಲಾದ ಎಲ್ಲಮ್ಮನ ಗುಡಿ ಕಳಸಾರೋಹಣ ನೆರವೇರಿಸಿದ್ದು ಸಾರ್ಥಕ ಕ್ಷಣ ಇದು ಪ್ರತಿಯೊಬ್ಬರಿಗೂ ದೇವರ ಸಾನಿಧ್ಯ ಒದಗಿಸುವ ಕೆಲಸ ಎಂದರು.

ಚಿಮ್ಮಡ ವಿರಕ್ತ ಮಠದ ಪ್ರಭುಸ್ವಾಮಿಗಳು ಮಾತನಾಡಿ, ಭಕ್ತರು ಅತ್ಯಂತ ಕಠಿಣ ಪರಿಶ್ರಮ ಮತ್ತು ಛಲದಿಂದ ಇಂಥ ದೇವಸ್ಥಾನ ನಿರ್ಮಾಣ ಮಾಡಿರುವುದು ಶ್ಲಾಘನೀಯ ಎಂದರು.

ರನ್ನ ಬೆಳಗಲಿಯ ಸಿದ್ಧರಾಮ ಸ್ವಾಮಿಗಳು ಮಾತನಾಡಿದರು. ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ಮಾತನಾಡಿ, ಸರ್ಕಾರದಿಂದ ದೇವಸ್ಥಾನಕ್ಕೆ 5 ಲಕ್ಷ ರೂ. ಅನುದಾನ ಒದಗಿಸುವ ಭರವಸೆ ನೀಡಿದರು. ಬಿಜೆಪಿ ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ವಿದ್ಯಾಧರ ಸವದಿ ಮತ್ತು ಜಿಪಂ ಮಾಜಿ ಅಧ್ಯಕ್ಷ ಮಹಾಂತೇಶ ಹಿಟ್ಟಿನಮಠ ಮಾತನಾಡಿ, ಶಾಸಕ ಸಿದ್ದು ಸವದಿಯವರ ಅನುದಾನದಿಂದ 5 ಲಕ್ಷ ರೂ. ದೇಣಿಗೆ ನೀಡುವ ಭರವಸೆ ನೀಡಿದರು.

ಮರೆಗುದ್ದಿ ಅಡವಿ ಸಿದ್ದೇಶ್ವರ ಮಠದ ಡಾ.ನಿರುಪಾಧೀಶ್ವರ ಸ್ವಾಮಿಗಳ ನೇತೃತ್ವದಲ್ಲಿ ಕಳಸಾರೋಹಣ ಮತ್ತು ಮೂರ್ತಿ ಪ್ರತಿಷ್ಠಾಪನೆ ಜರುಗಿತು.

ಡಾ.ಬಸವರಾಜ ದುಂಡಪ್ಪ ಸೋರಗಾಂವಿ ಮಾತನಾಡಿದರು. ಎರಡು ದಿನಗಳ ಕಾಲ ಕುಂಭಮೇಳ, ಮೂರ್ತಿ ಮತ್ತು ಕಳಸ ಮೆರವಣಿಗೆ, ಲಕ್ಷ ದೀಪೋತ್ಸವ ಹೋಮಹವನ, ಉಡಿತುಂಬುವ ಕಾರ್ಯಕ್ರಮ, ಮಹಾಪ್ರಸಾದ ಮುಂತಾದ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ಶಂಕರಗೌಡ ಪಾಟೀಲ, ಅಲ್ಲಪ್ಪ ಗುಂಜಿಗಾಂವಿ ಇದ್ದರು. ವಿಜಯಲಕ್ಷ್ಮಿ ಕುಳ್ಳೊಳ್ಳಿ ಸ್ವಾಗತಿಸಿದರು. ನಾರನಗೌಡ ಉತ್ತಂಗಿ ನಿರೂಪಿಸಿದರು.



ಸಮಾಜಘಾತುಕ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಒತ್ತಾಯ

ಮುಧೋಳ: ದೇಶದ ಸಾಮಾಜಿಕ ವ್ಯವಸ್ಥೆ ಹಾಳು ಮಾಡುತ್ತಿರುವ ವಿಕೃತ ಜಿಹಾದಿ ಮನಸ್ಥಿತಿಯು ದೇಶದ ಆಂತರಿಕ ಭದ್ರತೆ ಮತ್ತು ಸಾಮರಸ್ಯಕ್ಕೆ ಬಹುದೊಡ್ಡ ಅಪಾಯಕಾರಿಯಾಗಿದೆ. ದೇಶಾದ್ಯಂತ ವರದಿಯಾದ ವಿವಿಧ ಪ್ರಕರಣಗಳಲ್ಲಿ ಪುರುಷರ ಜೊತೆಗೆ ಮಹಿಳೆಯರು ಜಿಹಾದಿ ಚಟುವಟಿಕೆಗಳಲ್ಲಿ ಭಾಗಿಯಾಗಿರುವುದು ಕಂಡುಬಂದಿದೆ ಎಂದು ವಿಶ್ವ ಹಿಂದು ಪರಿಷದ್ ಜಿಲ್ಲಾ ಉಪಾಧ್ಯಕ್ಷ ಗುರುಪಾದ ಕುಳಲಿ ಹೇಳಿದರು.

ನಗರದ ತಹಶೀಲ್ದಾರ್ ಕಾರ್ಯಾಲಯದಲ್ಲಿ ಹಿಂದು ಪರಿಷದ್, ಭಜರಂಗ ದಳ ಮಾತೃಶಕ್ತಿ, ದುರ್ಗಾವಾಹಿನಿ ಮುಧೋಳ ವತಿಯಿಂದ ದೇಶದಲ್ಲಿ ಕಾಡುತ್ತಿರುವ ಸಮಾಜ ವಿದ್ರೋಹಿ ಚಟುವಟಿಕೆಗಳು ಮತ್ತು ದೇಶದಲ್ಲಿ ಮಾರಕವಾಗುತ್ತಿರುವ ಲವ್ ಜಿಹಾದ, ಮತಾಂತರ, ಗೋ ಹತ್ಯೆ ಅಂತಹ ಗಂಭೀರ ಸಮಸ್ಯೆಗಳ ಬಗ್ಗೆ ತಹಶೀಲ್ದಾರರ್ ಮೂಲಕ ಮನವಿ ಸಲ್ಲಿಸಿದರು.

ಮಾತೃಶಕ್ತಿ ವಿಭಾಗ ಸಂಯೋಜಕಿ ವೀಣಾ ಮಠದ ಮಾತನಾಡಿ, ಹಿಂದೂ ಹೆಣ್ಣು ಮಕ್ಕಳನ್ನು ಜಿಹಾದಿ ಮುಸಲ್ಮಾನರು ಅಸಭ್ಯವಾಗಿ ವರ್ತಿಸಿ ಅವರಿಗೆ ಗೊತ್ತಿಲ್ಲದೆ ಅವರ ಭಾವಚಿತ್ರ ಮತ್ತು ವಿಡಿಯೋಗಳನ್ನ ತೆಗೆದು ಬಲವಂತವಾಗಿ ಹೆದರಿಸಿ ಅವರನ್ನ ಮದುವೆಯಾಗಲು ಮತ್ತು ಮತಾಂತರಿಸುವ ಪ್ರಯತ್ನ ನಡೆಯುತ್ತಿದೆ. ಇದಕ್ಕೆ ತಾಜಾ ಉದಾಹರಣೆ ಹುಬ್ಬಳ್ಳಿಯ ಮಸಲ್ ಫ್ಯಾಕ್ಟರಿ ಅನ್ನುವ ಜಿಮ್ ಮುಖಾಂತರ ಹಿಂದೂಹೆಣ್ಣು ಮಕ್ಕಳನ್ನ ಗುರಿಯಾಗಿಸಿ ಲವ್ ಜಿಹಾದ ನಡೆಸುವ ಅನೇಕ ಪ್ರಕರಣಗಳು ಬೆಳಕಿಗೆ ಬಂದಿವೆ ಎಂದು ಹೇಳಿದರು.

ವಿಹಿಂ.ಪ ಜಿಲ್ಲಾ ಕಾರ್ಯದರ್ಶಿ ಬಸವರಾಜ ಮಹಾಲಿಂಗೇಶ್ವರಮಠ ಮಾತನಾಡಿ, ರಾಷ್ಟ್ರ ವಿರೋಧಿ ಮತ್ತು ಅಪರಾಧ ಮನೋಭಾವದ ಜಿಹಾದಿ ಮನಸ್ಥಿತಿವುಳ್ಳವರನ್ನ ಗುರುತಿಸಿ ಅವರ ವಿರುದ್ಧ ತ್ವರಿತ ಮತ್ತು ಕಠಿಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಪ್ರಮುಖರಾದ ಮಲ್ಲಿಕಾರ್ಜುನ ಕಾಬಿ, ಗಣೇಶ ರಾಠೋಡ ಮಾತನಾಡಿದರು. ಮಾತೃಶಕ್ತಿ ಜಿಲ್ಲಾ ಸಂಯೋಜಕಿ ದಾನಮ್ಮ ಚನ್ನಯ್ಯಗೋಳ, ಸುರೇಶ ಭಸ್ಮೆ, ಮಾನಿಂಗ ಬಂಡಿ, ದಶರಥ ರಜಪೂತ, ಮಹೇಶ ಪಾಟೀಲ ಸಂಗಮೇಶ ಹೂಗಾರ, ಸದಾ ಭಾಗಿ, ಆನಂದ ನಿಂಬಾಳಕರ, ಆಕಾಶ ಘೋರ್ಪಡೆ, ಆಶಾ ಶೆಟ್ಟಿ, ಮಾದು ಕಡಕೋಳಮಠ, ಸವಿತಾ ವಜ್ರಮಟ್ಟಿ ಭಾಗವಹಿಸಿದ್ದರು.



ಕವಿತಾ ಪೂಜಾರಗೆ 97.28% ಫಲಿತಾಂಶ

ಲೋಕಾಪುರ: ಪಟ್ಟಣದ ಸಮೀಪದ ಚಿಕ್ಕೂರ ಗ್ರಾಮದ ಕವಿತಾ ಪೂಜಾರ ಇವಳಿಗೆ ಸಮಯಕ್ಕೆ ಸರಿಯಾಗಿ ಬಸ್ ವ್ಯವಸ್ಥೆ ಇಲ್ಲಾ, ಪ್ರತಿದಿವಸ 4 ಕಿ.ಲೋ ನಡೆಗೆ ಮಾಡಿ ತಂದೆ ಬೇರೆಕಡೆ, ತಾಯಿ ಮಾತು ಬಾರದವಳು, ಆದರೆ ಕವಿತಾ ಎದೆಗುಂದದೆ ಲೋಕಾಪುರ ಪಟ್ಟಣದ ಆರ್‌ಬಿಜಿ ಪ್ರೌಢ ಶಾಲೆಗೆ ಪ್ರಥಮದಲ್ಲೇ ಪಾಸಾಗಬೇಕು ಎಂಬ ಛಲದಿಂದ ಪ್ರತಿದಿವಸ ಶಾಲೆ ತಪ್ಪಿಸದೇ ಶಿಕ್ಷಕರು ಹೇಳಿಕೊಟ್ಟ ಪಾಠದಿಂದಲೇ ಇಷ್ಟುಂದು ಸಾಧನೆ ಮಾಡಿದ್ದಾಳೆ ಎಂದರೇ ಯಾರು ನಂಬುವುದಿಲ್ಲಾ. ಆದರೆ ಕವಿತಾ ಸತತ ಪ್ರಯತ್ನ ಅವಳನ್ನು ಕೈಬಿಡಲಿಲ್ಲಾ ಸಾಧಿಸಿ ಶಾಲೆಗೆ ಮತ್ತು ತಮ್ಮ ಮನೆಯ ಬಡತನದಲ್ಲೇ 625/608 ಅಂಕಗಳನ್ನು ಪಡೆದು ಮಾವನ ಮನೆಯಲ್ಲಿದ್ದು ಪೋಷಕರ ಕಷ್ಟ ಅರಿತು ಅಧ್ಯಯನ ಮಾಡಿದ್ದಾಳೆ. ಶಾಲೆಯ ವತಿಯಿಂದ ಕವಿತಾ ಪೂಜಾರ ಅವಳಿಗೆ ಮುಖ್ಯೋಪಾಧ್ಯಾಯ ಎಸ್.ಎಫ್.ನಾಯ್ಕ, ಮಂಜುನಾಥ ಪಾಟೀಲ, ಎಚ್.ವಿ.ಕೇರಿ, ಎ.ಬಿ.ಕಳ್ಳೆನ್ನವರ, ಎಚ್.ಆರ್.ದಾಸನಗೌಡರ, ಮಲ್ಲನ್ನವರ ಹಾಗೂ ಕವಿತಾ ಪೂಜಾರ ಕುಟುಂಬದವರು ಇದ್ದರು. ಕವಿತಾ ಪೂಜಾರ ಸಾಧನೆಗೆ ಲೋಕೇಶ್ವರ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಹಾಗೂ ಶಿಕ್ಷಕರು ಅಭಿನಂದನೆ ಸಲ್ಲಿಸಿದ್ದಾರೆ.



ಸಾಯಿ ಸಂಕಲ್ಪ ಶಾಲೆಗೆ ಉತ್ತಮ ಫಲಿತಾಂಶ







ಜಮಖಂಡಿ: ತಾಲೂಕಿನ ಮಧುರಖಂಡಿ ಗ್ರಾಮದ ಸಾಯಿ ಸಂಕಲ್ಪ ಕನ್ನಡ, ಆಂಗ್ಲ ಮಾಧ್ಯಮ ಫ್ರೌಢಶಾಲೆ ಶಾಲೆಯ ವಿದ್ಯಾರ್ಥಿಗಳು 2025-26ನೇ ಸಾಲಿನ ಎಸೆಸೆಲ್ಸಿ ಪರೀಕ್ಷೆಯಲ್ಲಿ ಶೇ 100 ರಷ್ಟು ಫಲಿತಾಂಶ ನೀಡಿದ್ದಾರೆ. ಆಂಗ್ಲ ಮಾಧ್ಯಮದ ವಿದ್ಯಾರ್ಥಿಗಳಾದ ಫರಾನ ನಾಯ್ಕವಾಡಿ 625 ಕ್ಕೆ 618 (98.80%) ಅಂಕ ಪಡೆದು ಶಾಲೆಗೆ ಪ್ರಥಮ ಸ್ಥಾನ, ಧನುಷ್ ನಾಯ್ಕ 615 (98.40%) ದ್ವಿತೀಯ, ಭಕ್ತಿ ಸಾರಡಾ 614 (98.02%) ತೃತೀಯ ಸ್ಥಾನ ಪಡೆದುಕೊಂಡಿದ್ದಾಳೆ. ಡಿಸ್ಟಿಂಕ್ಷನ್ 37 ವಿದ್ಯಾರ್ಥಿಗಳು, ಪ್ರಥಮ ಶ್ರೇಣಿಯಲ್ಲಿ ಒಟ್ಟು 28 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಾದ ಸಮರ್ಥ ಆಸಂಗಿ 587 (93.92%), ಪ್ರಥಮ ಸ್ಥಾನ, ರಂಜಿತಾ ಸರಪಳಿ 577 (92.32%) ದ್ವಿತೀಯ,, ಶ್ರೀಶೈಲ ಹನಗಂಡಿ 561 (89.76) ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ.ಡಿಸ್ಟಿಂಕ್ಷನ್ 10 ವಿದ್ಯಾರ್ಥಿಗಳು,ಪ್ರಥಮ ಶ್ರೇಣಿಯಲ್ಲಿ ಒಟ್ಟು 41 ವಿದ್ಯಾರ್ಥಿಗಳು ಪಾಸಾಗಿದ್ದಾರೆ. 76 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿ, 16 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ,ದ್ವಿತೀಯ ಭಾ? (ಕನ್ನಡ) 22 ,ಸಂಸ್ಕೃತ ವಿ?ಯದಲ್ಲಿ 17, ಕನ್ನಡ ವಿ?ಯದಲ್ಲಿ 12, ತೃತೀಯ ಭಾ? (ಹಿಂದಿ) 12, ಸಮಾಜವಿಜ್ಞಾನ ವಿ?ಯದಲ್ಲಿ 05, ಆಂಗ್ಲ ಮಾಧ್ಯಮದಲ್ಲಿ ವಿದ್ಯಾರ್ಥಿಗಳು ನೂರಕ್ಕೆ ನೂರು ಅಂಕ ಪಡೆದುಕೊಂಡಿದ್ದಾರೆ. ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಸಂಸ್ಥೆಯ ಕಾರ್ಯದರ್ಶಿ ಎಮ್.ಎಮ್ ಮೂಡಲಗಿ, ಮುಖ್ಯಗುರು ಬಿ.ಎಸ್. ಮಲಾಬದಿ ಹಾಗೂ ರಾಧಾ ಜಿ. ಮೊರಗಾಂವಕರ ಮತ್ತು ಶಿಕ್ಷಕ ಸಿಬ್ಬಂದಿ ಅಭಿನಂದಿಸಿದ್ದಾರೆ.

ಈ ಶಾಲೆಯಲ್ಲಿ ಹತ್ತು ಪತ್ರಿಕೆಗಳು ತೆಗೆದುಕೊಳ್ಳುತ್ತಾರೆ ಆದರ ಜೊತೆಗೆ ಈ ಹಿಂದೆ ಜಾಹಿರತು ಸಹ ನೀಡಿದ್ದಾರೆ

ಪತ್ರಕರ್ತನ ಮಗಳು ಸಾಧನಾಗೆ 612 ಅಂಕ

ರಬಕವಿ-ಬನಹಟ್ಟಿ: ತಾಲೂಕು ಪತ್ರಕರ್ತರ ಸಂಘದ ನಿಕಟಪೂರ್ವ ಅಧ್ಯಕ್ಷ, ಕಸಾಪ ಮಾಜಿ ಅಧ್ಯಕ್ಷ ಕಿರಣ ಆಳಗಿಯವರ ಮಗಳು ಸಾಧನಾ ಕಿರಣ ಆಳಗಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 612 ಅಂಕ ಪಡೆದು ಸಾಧನೆ ಮಾಡಿದ್ದಾಳೆ.

ವಿದ್ಯಾರ್ಥಿ ಸಾಧನಾ ತಂದೆ ಕಿರಣ ಕಳೆದ 25 ವರ್ಷಗಳಿಂದ ಪತ್ರಿಕೋದ್ಯಮದಲ್ಲಿ ವಿಶೇಷ ಸಾಧನೆ ಮಾಡುವ ಮೂಲಕ ಗಮನ ಸೆಳೆದಿದ್ದಾರೆ. ಬನಹಟ್ಟಿಯ ಎಸ್‌ಆರ್‌ಎ ಪ್ರೌಢಶಾಲೆಯಲ್ಲಿ ವ್ಯಾಸಾಂಗ ಮಾಡುತ್ತಿರುವ ಈತಳಿಗೆ ತಂದೆ-ತಾಯಿ ಜೊತೆಗೆ ಶಾಲಾ ಮುಖ್ಯಾಧ್ಯಾಪಕ ಉಕ್ಕಲಿ ಗುರುಗಳ ಪ್ರೇರಣೆಯಿಂದ ಈ ಸಾಧನೆಗೆ ಕಾರಣವೆನ್ನುತ್ತಾಳೆ.

ಕನ್ನಡ-125, ಸಾಮಾನ್ಯ ವಿಜ್ಞಾನ-100, ಗಣಿತ-99, ಇಂಗೀಷ್-98, ಹಿಂದಿ-98, ವಿಜ್ಞಾನ-92 ಅಂಕ ಪಡೆದಿದ್ದಾಳೆ. ಯಾವದೇ ಟ್ಯೂಷನ್ ಇಲ್ಲದೆ ಕೇವಲ ಶಾಲೆಯಲ್ಲಿನ ಕಲಿಕಾ ವ್ಯವಸ್ಥೆ ಹಾಗೂ ಮನೆಯಲ್ಲಿ ಮಾ ಡುವ ಪಾಠದೊಂದಿಗೆ ಸಾಂದರ್ಭಿಕ ತಂದೆ-ತಾಯಿ ಸಹಕಾರದಿಂದ ಇಷ್ಟೊಂದು ಅಂಕ ಪಡೆಯಲು ಸಾಧ್ಯವಾಯಿತೆಂದು ವಿದ್ಯಾರ್ಥಿ ಸಾಧನಾ ತಿಳಿಸಿದರು.

ಇವರ ಸಾಧನೆಗೆ ರಬಕವಿ-ಬನಹಟ್ಟಿ ಪತ್ರಕರ್ತರ ಸಂಘ, ಸೋಮವಾರ ಪೇಟೆ ಸಮಸ್ತ ದೈವ ಮಂಡಳಿ, ಕನ್ನಡ ಸಾಹಿತ್ಯ ಪರಿಷತ್ತು ಸೇರಿದಂತೆ ಅನೇಕ ಸಂಘ-ಸಂಸ್ಥೆಗಳಿಂದ ಪ್ರಶಂಸೆ ವ್ಯಕ್ತವಾಗಿದೆ.



ಪ್ರಶಸ್ತಿ ಪ್ರದಾನ ಸಮಾರಂಭ ನಾಳೆ

ಬಾದಾಮಿ: ಹೊಳೆ ಆಲೂರಿನ ಎಸ್.ಎಸ್.ಆಡಿನ ಜನಸೇವಾ ಸಂಸ್ಥೆಯ ವತಿಯಿಂದ ಬಸವ ಜಯಂತಿ ನಿಮಿತ್ತ ಬಸವ ಕಾವ್ಯ ಸಮ್ಮೇಳನ ಹಾಗೂ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಏ.26ರಂದು ಭಾನುವಾರ ಬೆಳಗ್ಗೆ 10.30 ಗಂಟೆಗೆ ನಗರದ ಎಸ್.ಬಿ.ಎಂ.ಕಾಲೇಜಿನ ಸ್ಪರ್ಧಾ ಶಕ್ತಿ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕಾರ್ಯಕ್ರಮದ ಸಂಚಾಲಕ ಎಸ್.ಎಸ್.ಆಡಿನ ತಿಳಿಸಿದರು.

ಶುಕ್ರವಾರ ನಗರದ ಕಾನಿಪ ಭವನದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ನವಗ್ರಹ ಹಿರೇಮಠದ ಶಿವಾಚಾರ್ಯ ಸ್ವಾಮಿಗಳು ದಿವ್ಯ ಸಾನ್ನಿಧ್ಯ ವಹಿಸುವರು. ಪಿಕಾರ್ಡ ಬ್ಯಾಂಕ್ ಅಧ್ಯಕ್ಷ ಮಹಾಂತೇಶ ಮಮದಾಪೂರ ಕಾರ್ಯಕ್ರಮ ವನ್ನು ಉದ್ಘಾಟಿಸುವರು.

ಶರಣಮ್ಮ ಗದ್ದಿಗಿಮಠ ಸಮ್ಮೇಳನದ ಅಧ್ಯಕ್ಷತೆ ವಹಿಸುವರು. ಶಾರದಾ ಮೇಟಿ, ಬಸವರಾಜ ಕಡೆಮನಿ ಪ್ರಶಸ್ತಿ ಪ್ರದಾನ ಮಾಡುವರು. ಶೋಭಾ ಆಡಿನ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಶೇಖರಗೌಡ ಪಾಟೀಲ, ಡಾ.ಎ.ಎ.ತೋಪಲಕಟ್ಟಿ, ವಿಜಯಕುಮಾರ ನಾಯಕ, ನಿಂಗಪ್ಪ ನೀಲಗುಂದ, ಭೀಮರಡ್ಡೆಪ್ಪ ರಡ್ಡೇರ, ಬಸವರಾಜ ತಳವಾರ ಆಗಮಿಸುವರು. ಪ್ರೊ.ಎಸ್.ಎಸ್. ಮೂಲಿಮನಿ ಉಪನ್ಯಾಸ ನೀಡುವರು. ಒಂಬತ್ತು ಜನ ದಂಪತಿಗಳಿಗೆ ಕಾಯಕಜೀವಿ ಆದರ್ಶ ದಂಪತಿ ಪ್ರಶಸ್ತಿ, 28 ಜನ ವಿವಿದ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರಿಗೆ ಬಸವರತ್ನ ಪ್ರಶಸ್ತಿ, ಏಳು ಜನ ಮಹಿಳೆಯರಿಗೆ ಬಸವ ಮಹಿಳಾ ರತ್ನ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಕವಿಗೋಷ್ಠಿ, ರಕ್ತರಾತ್ರಿ ರೂಪಕ ಪ್ರದರ್ಶನಗೊಳ್ಳಲಿದೆ ಎಂದು ತಿಳಿಸಿದರು. ಡಾ.ಎಸ್.ಎಸ್.ತಿಪ್ಪಶೆಟ್ಟಿ ಉಪಸ್ಥಿತರಿದ್ದರು.



ಕಿರುಸುದ್ದಿ

ಜು.11ರಂದು ಅದಾಲತ್

◆ **ವಿಜಯಪುರ:** ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದ ಮೇರೆಗೆ, ಎಲ್ಲ ಕಕ್ಷಿದಾರರ ಹಿತದೃಷ್ಟಿಯಿಂದ ರಾಷ್ಟ್ರೀಯ ಲೋಕ ಅದಾಲತ್ ಕಾರ್ಯಕ್ರಮ ಜು. 11ರಂದು ಆಯೋಜಿಸಲಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಹರೀಶ ಎ. ಹೇಳಿದರು. ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ವಿಡಿಯೋ ಕಾನ್ಫರೆನ್ಸ್ ಸಭಾಂಗಣದಲ್ಲಿ ಗುರುವಾರ ಹಮ್ಮಿಕೊಂಡ ಎಲ್‌ಎಸಿ ಮತ್ತು ಎಲ್‌ಎಸಿಇಪಿ ಭೂಸ್ವಾಧೀನ ಪ್ರಕರಣಗಳಿಗೆ ಸಂಬಂಧಿಸಿದಂತೆ ನಡೆದ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು. ವಿಜಯಪುರ ಜಿಲ್ಲೆ ಮತ್ತು ಅದರ ಅಧೀನದಲ್ಲಿ ಬರುವ ಎಲ್ಲ ತಾಲೂಕು ಕೇಂದ್ರಗಳ ನ್ಯಾಯಾಲಯಗಳಲ್ಲಿ ಜು.11ರಂದು ಆಯೋಜಿಸಲಾಗಿದೆ. ರಾಜಿ ಸಂಧಾನಕ್ಕೆ ಒಳಪಡಬಹುದಾದ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳು ಮತ್ತು ವ್ಯಾಜ್ಯ ಪೂರ್ವ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥಪಡಿಸಿಕೊಳ್ಳಲು ಪಕ್ಷಗಾರರಿಗೆ ಅವಕಾಶವಿದೆ ಎಂದರು. 1ನೇ ಹೆಚ್ಚು ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಎಚ್.ಎ.ಮೋಹನ್, 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಖಾದರಸಾಬ ಹುಸ್ಸೇನಸಾಬ ಬೆನಕಟ್ಟಿ, ಜಿಲ್ಲಾಧಿಕಾರಿಗಳು, ಕೆಬಿಜೆಎನ್‌ಎಲ್ ಅಧಿಕಾರಿಗಳು, ಯುಕೆಪಿ ಆಲಮಟ್ಟಿ ಅಧಿಕಾರಿಗಳು, ಎಸ್ ಎಲ್‌ಎಒ ಇಂಡಿ ಅಧಿಕಾರಿಗಳು, ಕ್ಷಮೆಂಟ ವಕೀಲರುಗಳು ಸಿಬ್ಬಂದಿಗೆ ಹೆಚ್ಚಿನ ಸಂಖ್ಯೆಯಲ್ಲಿ ಎಲ್‌ಎಸಿ ಮತ್ತು ಎಲ್ ಎಸಿಇಪಿ ಭೂಸ್ವಾಧೀನ ಪ್ರಕರಣಗಳಿಗೆ ಇತ್ಯರ್ಥಪಡಿಸಲು ಸಹಕರಿಸಲು ನ್ಯಾಯಾಧೀಶರು ಮನವಿ ಮಾಡಿದರು.

ಭಾಗ್ಯಶ್ರೀ ದಿಂಡವಾರಗೆ ಶೇ.96.80 ಅಂಕ

◆ **ಬಸವನಬಾಗೇವಾಡಿ:** ತಾಲೂಕಿನ ದಿಂಡವಾರ ಗ್ರಾಮದ ಡಿಎಸ್‌ಎಸ್ ಮುಖಂಡ ರಾಜು ದಿಂಡವಾರ ಅವರ ಸುಪುತ್ರಿ ಕಾರಜೋಳದ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಯ ವಿದ್ಯಾರ್ಥಿನಿ ಭಾಗ್ಯಶ್ರೀ ರಾಜು ದಿಂಡವಾರ ಅವಳು 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 625ಕ್ಕೆ 605 ಅಂಕಗಳನ್ನು ಪಡೆದು ಶೇ.96.80ರಷ್ಟು ಸಾಧನೆ ಮಾಡಿದ್ದಾಳೆ. ವಿದ್ಯಾರ್ಥಿನಿಯ ಸಾಧನೆಗೆ ಗ್ರಾಮಸ್ಥರು ದೇವರಹಿಪ್ಪರಗಿ ಕ್ಷೇತ್ರದ ಶಾಸಕ ಭೀಮನಗೌಡ(ರಾಜುಗೌಡ) ಪಾಟೀಲ ಅವರು ಮೆಚ್ಚುಗೆ ವ್ಯಕ್ತಪಡಿಸಿ ಅಭಿನಂದನೆ ಸಲ್ಲಿಸಿದ್ದಾರೆ.



ಚೈತ್ರಾ ನಾವಿ ಸಾಧನೆ

◆ **ಬಸವನಬಾಗೇವಾಡಿ:** ತಾಲೂಕಿನ ಮನಗೂಳಿ ಪಟ್ಟಣದ ರಾಮಪ್ಪ ನಾವಿ ಅವರ ಸುಪುತ್ರಿ ಕಲಬುರಗಿ ಜಿಲ್ಲೆಯ ಆಳಂದ ತಾಲೂಕಿನ ಹಿತ್ತಲಶಿರೂರ ಸರಕಾರಿ ಪ್ರೌಢ ಶಾಲೆಯ ವಿದ್ಯಾರ್ಥಿನಿ ಚೈತ್ರಾ ರಾಮಪ್ಪ ನಾವಿ ಇವಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625 ಅಂಕಗಳಿಗೆ 597 ಅಂಕ ಪಡೆದು ಶೇ. 95.52ರಷ್ಟು ಫಲಿತಾಂಶ ತಂದು ಉತ್ತಮ ಸಾಧನೆ ಮಾಡಿದ್ದಾಳೆ. ವಿದ್ಯಾರ್ಥಿಗೆ ತಂಗಡಗಿ ಹಡಪದ ಅಪ್ಪಣ್ಣ ಮಹಾಸಂಸ್ಥಾನ ಮಠದ ಸ್ವಾಮೀಜಿ ಅನ್ನದಾನ ಭಾರತಿ ಅಪ್ಪಣ್ಣ ಸ್ವಾಮೀಜಿ ಸೇರಿ ಹಡಪದ ಸಮಾಜದ ಮುಖಂಡರು ಅಭಿನಂದನೆ ಸಲ್ಲಿದ್ದಾರೆ.



ಹಡಪದ ಅಪ್ಪಣ್ಣ ಪ್ರೌಢಶಾಲೆಗೆ ಉತ್ತಮ ಫಲಿತಾಂಶ



◆ **ಇಂಡಿ:** ನಗರದ ಹಡಪದ ಅಪ್ಪಣ್ಣ ಪ್ರೌಢಶಾಲೆಯ ಎಸ್ಸೆಸ್ಸೆಲ್ಸಿ ಫಲಿತಾಂಶ ಶೇ 100ಕ್ಕೆ ನೂರಷ್ಟು ಫಲಿತಾಂಶ ಬಂದಿದೆ. ಇದರಲ್ಲಿ ಗಜಾನನ ಕಾಳಿ ಶೇ 98, ಬಸವರಾಜ ಪೂಜಾರಿ ಶೇ 97, ಕಾರ್ತಿಕ ಶಿರಶ್ಯಾಡ ಶೇ 95, ಆದಿತಿ ಚೌಧರಿ ಶೇ 93, ಭಾಗಮ್ಮ ವಳಸಂಗ ಶೇ 93, ನೇತ್ರಾ ನಾವಿ ಶೇ 93 ಅಂಕ ಪಡೆದಿದ್ದಾರೆ. ಒಟ್ಟು 61 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು 61 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಸಂಸ್ಥೆಯ ಅಧ್ಯಕ್ಷ ಸಂತೋಷ ಗವಳಿ, ಉಪಾಧ್ಯಕ್ಷ ಶಿವಾನಂದ ನಾವಿ, ಎಲ್ಲ ನಿರ್ದೇಶಕ ಮಂಡಳಿ, ಕಾರ್ಯದರ್ಶಿ ಸಿದರಾಯ ಅಪ್ಪಾಗಿರಿ ಆಡಳಿತಾಧಿಕಾರಿ ಪಂಡಿತ ಬಿರಾದಾರ, ಮುಖ್ಯೋಪಾಧ್ಯಾಪಕ ಈರಣ್ಣ ರೂಗಿ, ಮುಖ್ಯ ಗುರುಮಾತೆ ಜಯಶ್ರೀಗೌಡ, ಭವಾನಿಗೌಡ ಶಿಕ್ಷಕರು ವಿದ್ಯಾರ್ಥಿಗಳನ್ನು ಅಭಿನಂದಿಸಿದ್ದಾರೆ.



ಕೊಲ್ಹಾರ: ಪಟ್ಟಣದ ತಹಶೀಲ್ದಾರ ಕಾರ್ಯಾಲಯದಲ್ಲಿ ಭಗೀರಥ ಮಹರ್ಷಿ ಜಯಂತಿ ಆಚರಿಸಲಾಯಿತು. ತಹಶೀಲ್ದಾರ್ ಸಂತೋಷ ಮ್ಯಾಗೇರಿ ಸಮಾಜದ ಅಧ್ಯಕ್ಷ ಸಂಗಮೇಶ ಬೆಳ್ಳುಬ್ಬಿ, ಉಪಾಧ್ಯಕ್ಷ ಮಹೇಶ ಹರನಾಳ ಮಾತನಾಡಿದರು. ಸಂಗಮೇಶ ಲೇಂಕಪ್ಪಗೋಳ, ಬಸಪ್ಪ ಲೇಂಕಪ್ಪಗೋಳ, ಮಲ್ಲಿಕಾರ್ಜುನ ಉಪ್ಪಾರ, ಈರಪ್ಪ ಉಪ್ಪಾರ , ಹಣಮಂತ ಉಪ್ಪಾರ, ಯಲಪ್ಪಾ ಉಪ್ಪಾರ, ಶ್ರೀಕಾಂತ ಲೇಂಕಪ್ಪಗೋಳ, ಕಲ್ಲು ಬಾಲಗೊಂಡ, ಶಿರಸ್ತೇದಾರ್ ಕೃಷ್ಣ ಎಂ. ಗುಡೂರ ಇದ್ದರು.

ಮೇ 10ರಂದು ಹೇಮರಡ್ಡಿ ಮಲ್ಲಮ್ಮ ಜಯಂತಿ

◆ **ವಿಜಯಪುರ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಶ್ರಯದಲ್ಲಿ ಮೇ 10ರಂದು ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಜಯಂತಿ ಕಾರ್ಯಕ್ರಮವನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ. ಅಪರ ಜಿಲ್ಲಾಧಿಕಾರಿ ಡಾ.ಔದ್ರಾಮ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಜರುಗಿದ ಪೂರ್ವಸಿದ್ಧತಾ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು. ಮೇ 10ರಂದು ಬೆಳಗ್ಗೆ 10 ಗಂಟೆಗೆ ನಗರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಜಯಂತಿ ಕಾರ್ಯಕ್ರಮ ಹಮ್ಮಿಕೊಳ್ಳಲು ನಿರ್ಧರಿಸಲಾಯಿತು. ಮಹನೀಯರ ಜಯಂತಿ ಕಾರ್ಯಕ್ರಮವನ್ನು ಶಿಷ್ಟಾಚಾರದಂತೆ ಆಹ್ವಾನ ಪತ್ರಿಕೆ, ವಿವಿಧ ಗಣ್ಯರಿಗೆ ಆಹ್ವಾನ, ವೇದಿಕೆ ಅಲಂಕಾರ, ವಿವಿಧ ಕಲಾ ತಂಡಗಳೊಂದಿಗೆ ಭಾವಚಿತ್ರ ಮೆರವಣಿಗೆಗೆ, ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಸ್ವಚ್ಛತೆ, ಕಾರ್ಯಕ್ರಮದಲ್ಲಿ ಭಾಗವಹಿಸಿದವರಿಗೆ ಕುಡಿಯುವ ನೀರಿಗೆ ವ್ಯವಸ್ಥೆ ಸೇರಿದಂತೆ ಎಲ್ಲ ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಭೋವಿ, ಸುರೇಶ ದೇಸಾಯಿ (ಕಲಕೇರಿ), ಎಚ್.ಆರ್.ಮಾಚಪ್ಪ, ಡಾ.ಕರಿಗೌಡರ, ಎಸ್.ಎಲ್.ಜೀರಗಾಳೆ, ಸೋಮಶೇಖರ, ಡಾ.ಕಂಠೀರವ, ಅಡಿವೆಪ್ಪ ಸಾಲಗಲ್, ರಾಜಶೇಖರ ಯಡಹಳ್ಳಿ, ಮಹೇಶ ಕ್ಯಾತಣ್ಣವರ, ಸಂತೋಷ ಶಾಹಪೂರ, ಸೋಮನಗೌಡ ಕಲ್ಲೂರ ಇದ್ದರು.



ಮುದ್ದೇಬಿಹಾಳ: ಸ್ಥಳೀಯ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ಶಾಸಕ ಸಿ.ಎಸ್.ನಾಡಗೌಡರ ಅವರ ಅಧ್ಯಕ್ಷತೆಯಲ್ಲಿ ತಾಲೂಕಿನ ಕುಡಿಯುವ ನೀರಿನ ಸಮಸ್ಯೆಗಳ ಬಗ್ಗೆ ಅಧಿಕಾರಿಗಳ ಜೊತೆ ಸಭೆ ನಡೆಯಿತು. ಯಾವುದೇ ಗ್ರಾಮಗಳಲ್ಲಿ ಕುಡಿಯುವ ನೀರಿಗೆ ತೊಂದರೆಯಾಗದಂತೆ ಕ್ರಮ ವಹಿಸುವಂತೆ, ಜನಜಾನುವಾರುಗಳ ಸುರಕ್ಷತೆ ಕಾಯುವಂತೆ ಶಾಸಕರು ಎಲ್ಲ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ತಾಲೂಕು ದಂಡಾಧಿಕಾರಿ ಕೀರ್ತಿ ಚಾಲಕ್, ಗ್ರಾಮೀಣ ಕುಡಿಯುವ ನೀರಿನ ಇಲಾಖೆಯ ರಾಜಶೇಖರ ಹಿರೇಗೌಡರ, ತಾಲೂಕು ಪಂಚಾಯತ್ ಅಧಿಕಾರಿಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು.

ಚಿನ್ನಾಭರಣ ಕಳ್ಳತನ, 28 ಆರೋಪಿಗಳ ಬಂಧನ | ಎಸ್ಪಿ ನಿಂಬರಗಿ ಹೇಳಿಕೆ

1.60 ಕೋಟಿ ಮೌಲ್ಯದ ವಸ್ತು ಜಪ್ತಿ

◆ **ವಿಜಯಪುರ:** ನಗರ ವ್ಯಾಪ್ತಿಯಲ್ಲಿ ನಡೆದ ವಿವಿಧ ಕಳ್ಳತನ ಪ್ರಕರಣಗಳಿಗೆ ಸಂಬಂಧಿಸಿದಂತೆ ಕಳೆದ ಎರಡು ವರ್ಷಗಳ ಅವಧಿಯಲ್ಲಿ ಹಲವು ಪ್ರಕರಣಗಳನ್ನು ಭೇದಿಸಿದ ಪ್ರಕರಣಗಳಿಗೆ ಸಂಬಂಧಿಸಿದಂತೆ 28 ಆರೋಪಿಗಳನ್ನು ಬಂಧಿಸಿ 1,60,32,000 ರೂ. ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದು ಎಸ್ಪಿ ಲಕ್ಷ್ಮಣ ನಿಂಬರಗಿ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ವರ್ಷ 17 ಪ್ರಕರಣಗಳಿಗೆ ಸಂಬಂಧಿಸಿದಂತೆ 28 ಆರೋಪಿಗಳನ್ನು ಹಾಗೂ ಪ್ರಸಕ್ತ ವರ್ಷ 13 ಪ್ರಕರಣಗಳಿಗೆ ಸಂಬಂಧಿಸಿದಂತೆ 15 ಜನ ಆರೋಪಿಗಳನ್ನು ಬಂಧಿಸಿ ಒಟ್ಟು 1.60 ಕೋಟಿಗೂ ಹೆಚ್ಚು ಸೊತ್ತುಗಳನ್ನು ಜಪ್ತು ಮಾಡಿಕೊಳ್ಳಲಾಗಿದೆ,

ಗಾಂಧಿಚೌಕ್ ಪೊಲೀಸ್ ಠಾಣೆಯಲ್ಲಿ 2026 ನೇ ಸಾಲಿನಲ್ಲಿ ಏಳು ಪ್ರಕರಣಗಳನ್ನು ಭೇದಿಸಿ 6 ಜನ ಆರೋಪಿಗಳನ್ನು ಬಂಧಿಸಲಾಗಿದ್ದು, 27.25 ಲಕ್ಷ ರೂ. ಮೌಲ್ಯದ ವಸ್ತುಗಳನ್ನು ಜಪ್ತು ಮಾಡಿಕೊಳ್ಳಲಾಗಿದೆ ಎಂದರು.

ಗೋಳಗುಮ್ಮಟ ಪೊಲೀಸ್ ಠಾಣೆಯಲ್ಲಿ ಕಳೆದ ಸಾಲಿನಲ್ಲಿ 6 ಪ್ರಕರಣಗಳಿಗೆ ಸಂಬಂಧಿಸಿದಂತೆ 6 ಜನ ಆರೋಪಿಗಳನ್ನು ಹಾಗೂ ಪ್ರಸಕ್ತ ವರ್ಷದಲ್ಲಿ 1 ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದ್ದು, ಒಟ್ಟಾರೆಯಾಗಿ 33.02 ಲಕ್ಷ ರೂ. ಜಪ್ತು ಮಾಡಿಕೊಳ್ಳಲಾಗಿದೆ ಎಂದರು.



ಎಪಿಎಂಸಿ ಯಾರ್ಡ್ ಪೊಲೀಸ್ ಠಾಣೆಯಲ್ಲಿ ಪ್ರಸಕ್ತ ವರ್ಷದಲ್ಲಿ 2 ಪ್ರಕರಣಗಳಿಗೆ ಸಂಬಂಧಿಸಿದಂತೆ ಮೂವರು ಆರೋಪಿಗಳನ್ನು ಬಂಧಿಸಲಾಗಿದ್ದು, 19.20 ಲಕ್ಷ ರೂ.ಗಳನ್ನು ಜಪ್ತು ಮಾಡಿಕೊಳ್ಳಲಾಗಿದೆ. ಆದರ್ಶ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 2025 ನೇ ಸಾಲಿನಲ್ಲಿ 10 ಪ್ರಕರಣಗಳಲ್ಲಿ 21 ಆರೋಪಿಗಳನ್ನು ಬಂಧಿಸಲಾಗಿದೆ. ಬಂಧಿತ ಆರೋಪಿಗಳಿಂದ 74.55 ಲಕ್ಷ ರೂ. ವಸ್ತುಗಳನ್ನು ಜಪ್ತು ಮಾಡಿಕೊಳ್ಳಲಾಗಿದೆ, ಜಲನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 2025 ರಲ್ಲಿ ಒಂದು ಪ್ರಕರಣಕ್ಕೆ ಸಂಬಂಧಿಸಿದಂತೆ ಓರ್ವ ಆರೋಪಿಯನ್ನು ಬಂಧಿಸಲಾಗಿದೆ, ಆರೋಪಿಯಿಂದ 6.30 ಲಕ್ಷ ರೂ. ಮೌಲ್ಯದ ವಸ್ತುಗಳನ್ನು ಜಪ್ತು ಮಾಡಿಕೊಳ್ಳಲಾಗಿದೆ ಎಂದರು

ಕೊಲೆ ಆರೋಪಿಗಳ ಬಂಧನ: ಅಲಿಯಾಬಾದ್ ಕೈಗಾರಿಕಾ ಪ್ರದೇಶದ ಬಳಿ ಕಾರಿಗೆ ಟಿಪ್ಪರ್ ಹಾಯಿಸಿ ನಂತರ ಗುಂಡಿನ ದಾಳಿ ನಡೆಸಿ ಕೊಲೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಆರು ಜನ ಆರೋಪಿಗಳನ್ನು ಬಂಧಿಸಲಾಗಿದೆ. ಕಳೆದ ಏ.14 ರಂದು ಅಲಿಯಾಬಾದ್ ಕೈಗಾರಿಕಾ ಪ್ರದೇಶದಲ್ಲಿ



ಕೊಲೆಗೀಡಾದ ರಾಜು ಬಾಫು ಖರೆ (42) ಅವರ ಕಾರಿಗೆ ಟಿಪ್ಪರ್ ಮೂಲಕ ಡಿಕ್ಕಿ ಹೊಡೆಯಿಸಿ ಪಿಸ್ತೂಲ್ ಮೂಲಕ ಗುಂಡಿನ ದಾಳಿ ನಡೆಸಲಾಗಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅಲಿಯಾಬಾದ್ ಸಮೀಪದ ಪಾಂಗ್ರೂನ್ ದೊಡ್ಡಿಯ ಅಬುಶ್ಯಾ ಸೋಪಾನ್ ಕೊಡ್ಲೆಕರ, ಅಬಶ್ಯಾ ಬಾಳು ಮಾನೆ, ವಾಗೀಶ ಶಂಕರ ಮೋಳ, ಜಾಲಿಂದರ್ ಉರ್ಫ್ ಪೋಪಟ್ ಮಲ್ಲಾರಿ, ಖಂಡೂಬಾ ಉರ್ಫ್ ಅಜೀತ್ ತಾಂಬೆ, ಮರುಗು ಉರ್ಫ್ ಹಕ್ಕೆ ಎಂದು ಗುರುತಿಸಲಾಗಿದೆ ಎಂದರು.

ಆರೋಪಿಗಳಿಂದ 2 ಕಂಟ್ರಿ ಪಿಸ್ತೂಲ್, 7 ಮೊಬೈಲ್ ಕೃತ್ಯಕ್ಕೆ ಬಳಸಿದ 2 ಮೋಟಾರ್ ಸೈಕಲ್‌ಗಳು, ಕೃತ್ಯಕ್ಕೆ ಬಳಸಿದ ಟಿಪ್ಪರ್ ವಾಹನವನ್ನು ಜಪ್ತು ಮಾಡಿಕೊಳ್ಳಲಾಗಿದೆ. ಸಂಶಯಾಸ್ಪದ ಆರೋಪಿಗಳು ಬಬಲೇಶ್ವರ ತಾಲೂಕಿನ ಖಿಲಾರಹಟ್ಟಿ, ಇಂಡಿ ತಾಲೂಕಿನ ಕ್ಯಾತನಕೇರಿಯಲ್ಲಿರುವುದನ್ನು ಪತ್ತೆ ಹಚ್ಚಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದರು.

ಎಎಸ್‌ಪಿ ರಾಮನಗೌಡ ಹಟ್ಟಿ, ಪ್ರೊಬೇಷನರಿ ಐಪಿಎಸ್ ಅಧಿಕಾರಿ ಇಷಿತಾ ಗುಪ್ತಾ ಸೇರಿ ಇತರೆ ಪೊಲೀಸ್ ಅಧಿಕಾರಿಗಳು ಇದ್ದರು.

ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಸನ್ಮಾನ

◆ **ವಿಜಯಪುರ:** ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿರುವ ವಿದ್ಯಾರ್ಥಿಗಳು ದೊಡ್ಡಗುರಿಯೊಂದಿಗೆಪಿಯುಸಿಪರೀಕ್ಷೆಗಳಲ್ಲಿ ಅತ್ಯುತ್ತಮ ಸಾಧನೆ ಮಾಡಬೇಕು ಎಂದು ವಿಧಾನ ಪರಿಷತ್ ಸದಸ್ಯ ಸುನೀಲಗೌಡ ಪಾಟೀಲ ಹೇಳಿದರು.

ನಗರದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ವಿಜಯಪುರ ಗ್ರಾಮೀಣ ವಲಯಕ್ಕೆ ಪ್ರಥಮ ಮತ್ತು ರಾಜ್ಯಕ್ಕೆ 7ನೇ ಸ್ಥಾನ ಪಡೆದ ಮೂರು ವಿದ್ಯಾರ್ಥಿಗಳನ್ನು ಸನ್ಮಾನಿಸಿ ಅವರು ಮಾತನಾಡಿದರು.

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಸಾಧನೆಯ ಮೂಲಕ ಜಿಲ್ಲೆಗೆ ಕೀರ್ತಿ ತಂದಿದ್ದೀರಿ. ಮುಂಬರುವ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಇನ್ನೂ ಹೆಚ್ಚಿನ ಸಾಧನೆ ಮಾಡಬೇಕು. ಈ ಮೂಲಕ ಉತ್ತರೋತ್ತರವಾಗಿ ಸಾಧನೆಯ ಶಿಖರ ತಲುಪಬೇಕು ಎಂದರು.

625ಕ್ಕೆ ತಲಾ 619 ಅಂಕ ಗಳಿಸಿ ರಾಜ್ಯಕ್ಕೆ 7ನೇ ಮತ್ತು ವಿಜಯಪುರ ಗ್ರಾಮೀಣ ವಲಯಕ್ಕೆ ಪ್ರಥಮ ಸ್ಥಾನ ಪಡೆದಿರುವ ವಿದ್ಯಾರ್ಥಿಗಳಾದ ಹೊನ್ನುಟಗಿ ಸರ್ಕಾರಿ ಪ್ರೌಢಶಾಲೆಯ ಅರ್ಪಿತ ನಾಟೀಕಾರ, ಹೊಳೆ ಹಂಗರಗಿ ಕಲ್ಮೇಶ್ವರ ಪ್ರೌಢಶಾಲೆಯ ರಮೇಶ ತೇಲಿ ಹಾಗೂ ಇಟ್ಟಂಗಿಹಾಳ ಎಕ್ಸಲೆಂಟ್ ಆಂಗ್ಲ ಮಾಧ್ಯಮ ಶಾಲೆಯ ಚೈತ್ರಾ ಬಿರಾದಾರ ಅವರನ್ನು ಸುನೀಲಗೌಡ ಪಾಟೀಲ ಅವರು ಸನ್ಮಾನಿಸಿ ಗೌರವಿಸಿದರು.

ವಿಜಯಪುರ ಗ್ರಾಮೀಣ ಬಿಇಒ ಬಸವರಾಜ ತಳವಾರ, ಶಿಕ್ಷಣ ಸಂಯೋಜಕ ವಸಂತ ಚವ್ಹಾಣ, ಎಸ್.ಎಂ.ಕಾಗವಾಡ, ವಿದ್ಯಾರ್ಥಿಗಳು, ಪೋಷಕರು ಇದ್ದರು.



ಭಾಗ್ಯಲಕ್ಷ್ಮೀ ಹಿರೇಮಠ ದ್ವಿತೀಯ

◆ **ಝಳಕಿ:** ಇಂಡಿ ತಾಲೂಕಿನ ಝಳಕಿ ಗ್ರಾಮದ ಶಿಕ್ಷಕರಾದ ಸತೀಶ ಹಿರೇಮಠ ಅವರು ಸುಪುತ್ರಿ 2025-26ನೇ ಸಾಲಿನ ಎಸ್ ಎಸ್‌ಎಲ್‌ಸಿ ಪರೀಕ್ಷೆಯಲ್ಲಿ (615) 98.4% ಚಡಚಣ ವಲಯಕ್ಕೆ ದ್ವಿತೀಯ ಸ್ಥಾನ ಪಡೆದು ಸಂಭ್ರಮಿಸಿದರು.



ಬಸವಜ್ಯೋತಿ ಪಾದಯಾತ್ರೆಗೆ ಸ್ವಾಗತ

◆ **ವಿಜಯಪುರ:** ವಿಶ್ವಗುರು ಬಸವಣ್ಣ ಜಯಂತಿಯ ಸಂದರ್ಭ, ಬಸವನಬಾಗೇವಾಡಿಯಿಂದ ವಿಜಯಪುರದ ಬಸವೇಶ್ವರವೃತ್ತದವರೆಗೆಹಮ್ಮಿಕೊಳ್ಳಲಾಗಿದ್ದ ಭವ್ಯ ಬಸವಜ್ಯೋತಿ ಪಾದಯಾತ್ರೆಯನ್ನು ನಗರದ ಬಸವ ಸಮಿತಿ ಹಾಗೂ ಸಿದ್ದೇಶ್ವರ ಬ್ಯಾಂಕ್ ಅಧ್ಯಕ್ಷ ರವೀಂದ್ರ ಬಿಜ್ಜರಗಿ ಮತ್ತು ಗಣ್ಯರು ಅಭೂತಪೂರ್ವವಾಗಿ ಸ್ವಾಗತಿಸಿದರು.

ಬೆಂಗಳೂರಿನಲ್ಲಿ ನೆಲೆಸಿರುವ ವಿಜಯಪುರ ಜಿಲ್ಲೆಯ ಹಂದಿಗನೂರ ಗ್ರಾಮದ ಬಿ.ಬಿ. ಪಾಟೀಲ ಅವರ ನೇತೃತ್ವದಲ್ಲಿ ಹಾಗೂ ವಿಜಯಪುರ ಸೈಕ್ಲಿಂಗ್ ಗ್ರೂಪ್ ಆಶ್ರಯದಲ್ಲಿ ಈ ಪಾದಯಾತ್ರೆಯನ್ನು ಆಯೋಜಿಸಲಾಗಿತ್ತು. ನಿನ್ನೆ ರಾತ್ರಿ ಬಸವನಬಾಗೇವಾಡಿಯಿಂದ ಆರಂಭಗೊಂಡ ಈ ಪಾದಯಾತ್ರೆಯು ಮಸಬಿನಾಳ, ಉಕ್ಕಲಿ ಹಾಗೂ ಉಕುಮನಾಳ ಮಾರ್ಗವಾಗಿ ಇಂದು ನಸುಕಿನ ಜಾವ ಶಿವಗಿರಿಗೆ ತಲುಪಿತು. ಈ ಸಂದರ್ಭದಲ್ಲಿ ಶಿವಗಿರಿ ಕ್ಷೇತ್ರದಲ್ಲಿ ಪಾದಯಾತ್ರಿಕರಿಗೆ ಸ್ವಾಗತ ಕೋರಿ, ವಿಶೇಷ ಪೂಜೆ ಸಲ್ಲಿಸಲಾಯಿತು.

ಪಾದಯಾತ್ರೆಯ ಸಾಗಿದ ಮಾರ್ಗದುದ್ದಕ್ಕೂ ಗ್ರಾಮಸ್ಥರು ಭಕ್ತಿಯಿಂದ ಪಾದಯಾತ್ರಿಕರಿಗೆ ಪುಷ್ಪಗುಚ್ಛ ನೀಡಿ, ಬಸವಣ್ಣನವರ ಘೋಷಣೆಗಳನ್ನು ಕೂಗುತ್ತಾ ಅತ್ಯಂತ ಸಂಭ್ರಮದಿಂದ ಬರಮಾಡಿಕೊಂಡರು.

ಬೆಂಗಳೂರಿನ ಜಗದೀಶ ದಮನಿಯಾ, ಸಂದೀಪ ಡಿಯೋ, ಉಮಾಶಂಕರ ಮೆಳ್ಳಿಗೆರೆ, ಬಿ. ಎಸ್. ಸಜ್ಜನ, ಕೃಪಾಕರ, ಹುಬ್ಬಳ್ಳಿಯ ರೂಪಾ ಕಳ್ಳಿಗುಡ್ಡ ಹಾಗೂ ಡಾ. ಶಿಲ್ಪಾ ಚರಂತಿಮಠ ಪಾಲ್ಗೊಂಡಿದ್ದರು.

ವಿಜಯಪುರ ಸೈಕ್ಲಿಂಗ್ ಗ್ರೂಪ್ ಅಧ್ಯಕ್ಷ ಡಾ. ಮಹಾಂತೇಶ ಬಿರಾದಾರ, ಉಪಾಧ್ಯಕ್ಷ ಶಿವನಗೌಡ ಪಾಟೀಲ, ಸದಸ್ಯರಾದ ಡಾ. ರಾಜು ಯಲಗೊಂಡ, ಡಾ. ಮಹಾಂತೇಶ ಹೊಸಮನಿ, ಡಾ.ಉದಯಕುಮಾರ ಜಾಧವ, ಸಚಿನ್ ಪಾಟೀಲ, ಡಾ. ಪ್ರವೀಣ ಚೌರ, ಡಾ. ಚೌಕಿಮಠ ಶಿವಕುಮಾರ, ಅಮೋಘ ಬಸನಾಳ, ಧ್ರುವ ಮಠ, ಸೋಮು ಮಠ, ಸಂದೀಪ ಮಡಗೊಂಡ, ಸತ್ಯ ವಿಜಯನ್, ಶಿವಾನಂದ ಯರನಾಳ, ಸಂಕೇತ ಬಗಲಿ, ಉಮೇಶ ಮೇಟಗಾರ, ನದೀಶ ಹುಂಡೇಕರ, ಶ್ರೀನಿವಾಸ, ವಿನಯ ಪಾಟೀಲ ಇದ್ದರು.



ಮೇ 10ರಂದು ಭಗವಾನ್ ಬುದ್ಧ ಅರ್ಥಪೂರ್ಣ ಜಯಂತಿ ಆಚರಣೆಗೆ ನಿರ್ಧಾರ

◆ **ವಿಜಯಪುರ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ಮೇ 1ರಂದು ಭಗವಾನ್ ಬುದ್ಧ ಜಯಂತಿ ಕಾರ್ಯಕ್ರಮವನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಭಗವಾನ್ ಬುದ್ಧ ಅವರ ಜಯಂತಿ ಕಾರ್ಯಕ್ರಮದ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು.

ಜಗತ್ತಿಗೆಜ್ಞಾನದಬೆಳಕಾಗಿಶಾಂತಿ, ಸಮಾನತೆಯ ದಾರಿ ತೋರಿದಂತಹ ಹಾಗೂ ಜಗತ್ತಿಗೆ ಶಾಂತಿ ಬೋಧಿಸಿದ ಬುದ್ಧನ ಆದರ್ಶ- ವಿಚಾರಗಳ ಬಗ್ಗೆ ಬೆಳಕು ಚೆಲ್ಲುವ ನಿಟ್ಟಿನಲ್ಲಿ ಭಗವಾನ್ ಬುದ್ಧ ಅವರ ಜಯಂತಿ ಕಾರ್ಯಕ್ರಮವನ್ನು ಮೇ 1ರಂದು



ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗುತ್ತಿದೆ ಎಂದು ಅಪರ ಜಿಲ್ಲಾಧಿಕಾರಿಗಳಾದ ಡಾ.ಔದ್ರಾಮ ಹೇಳಿದರು.

ಭಗವಾನ ಬುದ್ಧ ಜಯಂತಿ ಕಾರ್ಯಕ್ರಮವನ್ನು ಅತ್ಯಂತ ಅರ್ಥಪೂರ್ಣವಾಗಿ ಹಮ್ಮಿಕೊಳ್ಳಲು ಸಂಬಂಧಿಸಿದ ಅಧಿಕಾರಿಗಳು ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಬೇಕು. ಓರ್ವ ನುರಿತ ಉಪನ್ಯಾಸಕರನ್ನು ಆಹ್ವಾನಿಸಿ, ಉಪನ್ಯಾಸ ಕಾರ್ಯಕ್ರಮ ಏರ್ಪಡಿಸುವುದು, ಶಿಷ್ಟಾಚಾರದಂತೆ ಆಹ್ವಾನ ಪತ್ರಿಕೆ, ವಿವಿಧ ಗಣ್ಯರಿಗೆ ಆಹ್ವಾನ, ವೇದಿಕೆ ಅಲಂಕಾರ, ವಿವಿಧ ಕಲಾ ತಂಡಗಳೊಂದಿಗೆ ಭಾವಚಿತ್ರ ಮೆರವಣಿಗೆಗೆ, ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಸ್ವಚ್ಛತೆ, ಕಾರ್ಯಕ್ರಮದಲ್ಲಿ ಭಾಗವಹಿಸಿದವರಿಗೆ ಕುಡಿಯುವ ನೀರಿನ ವ್ಯವಸ್ಥೆ ಸೇರಿದಂತೆ ಎಲ್ಲ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಸೂಚಿಸಲಾಯಿತು.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಭೋವಿ, ಅಡಿವೆಪ್ಪ ಸಾಲಗಲ್, ರಾಜಶೇಖರ ಯಡಹಳ್ಳಿ, ಮಹೇಶ ಕ್ಯಾತಣ್ಣವರ, ಸಂತೋಷ ಶಾಹಪೂರ, ಸೋಮನಗೌಡ ಕಲ್ಲೂರ, ರಾಜು ತೊರವಿ ಇದ್ದರು.

ಮಲ್ಲಿಕಾರ್ಜುನ ದೇವಾಲಯ ಲೋಕಾರ್ಪಣೆ

◆ **ವಿಜಯಪುರ:** ಮಲ್ಲಿಗೆ ಹೂವಿನಿಂದ ಶಿವನನ್ನು ಪೂಜಿಸುವುದರಿಂದ ಮಲ್ಲಿಕಾರ್ಜುನ ಎಂದು ಹೆಸರು ಬಂದಿದೆ ಎಂದು ಸಿದ್ದಸಿರಿ ಬ್ಯಾಂಕ್ ಅಧ್ಯಕ್ಷ ರಾಮನಗೌಡ ಪಾಟೀಲ ಯತ್ನಾಳ ಹೇಳಿದರು.

ನಗರದ ಇಟ್ಟಂಗಿಹಾಳ ರಸ್ತೆಯ ವೇದ ಅಕಾಡೆಮಿ ಹಾಗೂ ಎಕ್ಸಲಂಟ್ ಆಂಗ್ಲ ಮಾಧ್ಯಮ ಶಾಲೆಯ ಹತ್ತಿರದ ಐಶ್ವರ್ಯ ನಗರದಲ್ಲಿ ಸ್ಥಾಪಿತ ಮಲ್ಲಿಕಾರ್ಜುನ ದೇವಾಲಯವನ್ನು ಲೋಕಾರ್ಪಣೆ ಮಾಡಿ ಅವರು ಮಾತನಾಡಿದರು.

ಇಂತಹ ಮಹಾ ಪ್ರಭಾವಶಾಲಿ ದೈವದ ದೇವಾಲಯವನ್ನು ಲೋಕಾರ್ಪಣೆಗೊಳಿಸುತ್ತಿರುವುದು ನಮ್ಮೆಲ್ಲರಿಗೂ ಅತ್ಯಂತ ಸಂತಸದ ಸುದಿನವಾಗಿದೆ. ಈ ದೇವಸ್ಥಾನದ ಅಭಿವೃದ್ಧಿಗೆ ನಾನು ಸದಾ ಸಿದ್ಧ, ದೇವಾಲಯದ ಆವರಣದಲ್ಲಿ ಜಿಮ್ ಸಲಕರಣೆಗಳ ವ್ಯವಸ್ಥೆ ಹಾಗೂ ಶುದ್ಧಕುಡಿಯುವ ನೀರಿನ ಘಟಕ ಮಾಡಲಾಗುವುದು ಎಂದರು.

ಚನ್ನಯ್ಯ ಸ್ವಾಮಿಗಳು ಸಾನ್ನಿಧ್ಯ ವಹಿಸಿದ್ದರು. ಡಾ. ಶಿವಾನಂದ ಕೆಲೂರ ಮಾತನಾಡಿ, ಮಲ್ಲಿಕಾರ್ಜುನನ ಮೇಲೆ ಅಚಲವಾದ ನಂಬಿಕೆ, ಭಕ್ತಿಯಿದ್ದರೆ ನಮ್ಮ ಜೀವನದ ಕಷ್ಟಗಳು ಕರಗಿ ಬದುಕು ಸುಂದರವಾಗುವುದು. ಮಲ್ಲಿಗೆಯಂತಹ ಮನಸ್ಸನ್ನು ಮಲ್ಲಿಕಾರ್ಜುನನಿಗೆ ಅರ್ಪಿಸಿದರೆ ಜೀವನ



ಪಾವನವಾಗುವುದು ಎಂದರು. ಪದಾಧಿಕಾರಿಗಳಾದ ಶಿವಲೀಲಾ ಕೆಲೂರ, ಪಾಲಿಕೆ ಸದಸ್ಯರಾದ ಪ್ರೇಮಾನಂದ ಬಿರಾದಾರ, ಶಿವರುದ್ರ ಬಾಗಲಕೋಟ, ಮಹಾನಗರ ಪಾಲಿಕೆ ಮಾಜಿ ಸದಸ್ಯ ಉಮೇಶ ವಂದಾಲ, ಲೋಹಗಾಂವ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ರಾಜುಗೌಡ ಬಿರಾದರ, ಬಸನಗೌಡ ಪಾಟೀಲ, ಶಿವಾನಂದ ಭುಯ್ಯಾರ, ಅಪ್ಪಾಸಾಬಗೌಡ ಬಾಗಾಯತ, ಬಸಯ್ಯ ನಂದಯ್ಯಾಗೋಳ, ಹರಿನಾಥ ತಿವಾರಿ ಇದ್ದರು. ಡಾ.ಎಮ್.ಆರ್. ಮಠ ಸ್ವಾಗತಿಸಿದರು. ಸುಧಾಕರ ಅಲ್ಲವಗೋಳ ನಿರೂಪಿಸಿದರು. ಆನಂದ ಹೊನವಾಡ ಪ್ರಾರ್ಥನಾಗೀತೆ ಹಾಡಿದರು.

ಮೇ 4ಕ್ಕೆ ದ್ಯಾಮವ್ವ ದೇವಿ ಜಾತ್ರಾ ಮಹೋತ್ಸವ

◆ **ಕೊಲ್ಹಾರ:** ಪಟ್ಟಣದ ಆರಾಧ್ಯ ದೇವತೆ ದ್ಯಾಮವ್ವ ದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ಮೇ 4ರಂದು ಸೋಮವಾರದಿಂದ ವಿವಿಧ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ದೇವಸ್ಥಾನ ಕಮಿಟಿಯ ಅಧ್ಯಕ್ಷ ಎಂ.ಎಸ್.ಬೆಳ್ಳುಬ್ಬಿ ಹಾಗೂ ಈರಯ್ಯ ಮಠಪತಿ ಹೇಳಿದರು.

ಪಟ್ಟಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಪ್ರತಿ ವರ್ಷದಂತೆ ಈ ವರ್ಷವೂ ಏ.7ರಿಂದ ದೇವಿಯ ವಾರಗಳನ್ನೂ (ಮಂಗಳವಾರ) ಹಿಡಿದಿದ್ದು ಮೇ 5 ಕೊನೆಯವಾರ ದೇವಿಯ ಜಾತ್ರಾ (ಉಡಿತುಂಬುವ) ಮಹೋತ್ಸವದ ಅಂಗವಾಗಿ ಮೂರು ದಿನಗಳ ಕಾಲ ಹಮ್ಮಿಕೊಂಡ ಕೃಷಿ ಮೇಳಕ್ಕೆ ಮೇ 4ರಂದು ಬೆಳಗ್ಗೆ 10 ಗಂಟೆಗೆ ಚಾಲನೆ ನೀಡಲಾಗುವದು. ಮದ್ಯಾಹ್ನ 3 ಗಂಟೆಗೆ ಅರವಟಗಿ ಬಸವೇಶ್ವರ ದೇವಸ್ಥಾನ ದಿಂದ ಹಂದರ ತಪ್ಪಲು ಮೆರವಣಿಗೆ



ದೇವಸ್ಥಾನಕ್ಕೆ ಆಗಮಿಸಿ ಹಂದರ ತಪ್ಪಲ ಹಾಕುವದು ಹಾಗೂ ದೇವಸ್ಥಾನಕ್ಕೆ ಕಳಸಾರೋಹನ ಮಾಡುವುದು.

ಮಂಗಳವಾರ ಮೇ 5ರಂದು ಬೆಳಗ್ಗೆ 5 ಗಂಟೆಗೆ ಹೋಮ-ಹವನ ಆಯೋಜಿಸಿದ್ದು, ಈ ಪೂಜೆಯಲ್ಲಿ ನವದಂಪತಿಗಳು ಭಾಗವಹಿಸಬಹುವುದು. ಮೇ 6ರಂದು ಬೆಳಗ್ಗೆ 9 ಗಂಟೆಗೆ ಮುತ್ತೈದೆಯರಿಗೆ ಉಡಿತುಂಬುವ ಹಾಗೂ ಆಧುನಿಕ ಸಮಾಜದಲ್ಲಿ ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಮಹಿಳೆಯ ಪಾತ್ರ ವಿಚಾರಗೋಷ್ಠಿ ಮದ್ಯಾಹ್ನ 12 ಗಂಟೆಗೆ ರೈತರಿಗೆ ಕೃಷಿ ತಜ್ಞರಿಂದ ಹಾಗೂ ಕೃಷಿ ಕ್ಷೇತ್ರದಲ್ಲಿ ಸಾಧನೆಗೈದ ರೈತರಿಂದ ಕೃಷಿ ಸಂವಾದ ಕಾರ್ಯಕ್ರಮ ಇರುತ್ತದೆ.

ಮೇ 7ರಂದು ಸಂಜೆ ಗಂಟೆಗೆ ಹಂದರ ತಪ್ಪಲ ಇಳಿಯುವುದುರೊಂದಿಗೆ ಜಾತ್ರಾ ಮಹೋತ್ಸವ ಮುಕ್ತಾಯಗೊಳ್ಳಲಿದೆ ಎಂದು ದ್ಯಾಮವ್ವ ದೇವಿ ಸೇವಾ ಸಮಿತಿಯವರು ತಿಳಿಸಿದ್ದಾರೆ.

ಬಸಪ್ಪ ಬಾಟಿ, ಸಂಗಪ್ಪ ಪತಂಗಿ, ನಾಮದೇವ ಪವಾರ, ಚನ್ನಯ್ಯ ಗಣಕುಮಾರ, ಮಲ್ಲಪ್ಪ ಗಣಿ, ಸಂಗಪ್ಪ ತುಂಬರಮಟ್ಟಿ, ರಾಜು ತುಂಬರಮಟ್ಟಿ ಹಾಜರಿದ್ದರು.

ರಾಜ್ಯಮಟ್ಟದ ವಿಚರ ಸಂಕಿರಣ ನಾಳೆ

◆ **ವಿಜಯಪುರ:** ಅಹಿಂದ ಸಮುದಾಯಗಳ ಏಳಿಗೆ ಹಾಗೂ ಸಂವಿಧಾನದ ಆಶಯಗಳ ರಕ್ಷಣೆಗಾಗಿ ಏ.26ರಂದು ಹುಬ್ಬಳ್ಳಿಯಲ್ಲಿ ಅಹಿಂದ-25 ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಆಯೋಜಿಸಲಾಗಿದೆ ಎಂದು ಮಾಜಿ ಶಾಸಕ ರಾಜು ಆಲಗೂರ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10 ಗಂಟೆಗೆ ಹುಬ್ಬಳ್ಳಿಯ ರಾಯಲ್ ರಿಟೀಜ್ ಹೋಟೆಲ್‌ನಲ್ಲಿ ಅಹಿಂದ ರಾಜ್ಯಮಟ್ಟದ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿದ್ದು, ಕಳೆದ 25 ವರ್ಷಗಳ ಹಿಂದೆ ರಾಜ್ಯದಲ್ಲಿ ಪ್ರಾರಂಭವಾದ ಅಹಿಂದ ಚಳವಳಿ ಸಮುದಾಯಗಳಿಗೆ ನೀಡಿದ ಶಕ್ತಿ ಮತ್ತು ಸಾಧನೆಯ ಅವಲೋಕನಕ್ಕಾಗಿ ಈ ಸಂಕಿರಣ ಹಮ್ಮಿಕೊಳ್ಳಲಾಗಿದೆ. ಹಿರಿಯ ನಾಯಕರ ಸ್ಮರಣೆ ನಿಮಿತ್ತ ದೇವರಾಜ್ ಅರಸು, ವೀರಪ್ಪ ಮೊಯ್ಲಿ, ಬಂಗಾರಪ್ಪ ಮತ್ತು ಸಿದ್ಧರಾಮಯ್ಯನವರಂತಹ ನಾಯಕರು ಅಹಿಂದ ವರ್ಗದ ಪ್ರಾತಿನಿಧ್ಯಕ್ಕಾಗಿ ನೀಡಿದ ಕೊಡುಗೆ ಸ್ಮರಿಸಲಾಗುವುದು ಎಂದರು. ಕೆಪಿಸಿಸಿ ಸದಸ್ಯ ಹಮೀದ್ ಮುಶ್ರೀಫ್, ಎಸ್.ಎಮ್. ಪಾಟೀಲ ಗಣಿಹಾರ, ಸಿ.ವಿ.ಕೊಡಬಾಗಿ, ಸೋಮನಾಥ ಕಳ್ಳಿಮನಿ, ವಸಂತ ಹೊನಮೊಡೆ ಇದ್ದರು.



ಬಯಲಾಟ ನಮ್ಮ ಸಂಸ್ಕೃತಿಯ ಪ್ರತೀಕ: ಮೇತ್ರಿ

◆ **ಝಳಕಿ:** ಬಯಲಾಟಗಳು ಮುಂತಾದ ಕಲಾ ಪ್ರಕಾರಗಳು ನಮ್ಮ ಸಂಸ್ಕೃತಿ, ಪರಂಪರೆ ದೇವತೆಗಳ ಶಕ್ತಿಯನ್ನು ಜನರಿಗೆ ತಿಳಿಪಡಿಸುವ ಸಂಸ್ಕೃತಿಯ ಪ್ರತೀಕ ಎಂದು ವಿಜಯಪುರ ಜಿಲ್ಲಾ ಬಯಲಾಟ ಕಲಾವಿದರ ಸಂಘ ಅಧ್ಯಕ್ಷ ಎಸ್.ಎಲ್.ಮೇತ್ರಿ ಹೇಳಿದರು.

ಸ್ಥಳೀಯ ಪ್ರವಾಸ ಮಂದಿರ ಆವರಣದಲ್ಲಿ ನಡೆದ ನೂತನವಾಗಿ ಬಯಲಾಟ ಕಲಾವಿದರ ಪದಾಧಿಕಾರಿಗಳ ಆಯ್ಕೆಯಾದ ಹಿನ್ನೆಲೆಯಲ್ಲಿ ಮಾತನಾಡಿ, ಹಿಂದಿನ ಕಾಲದಲ್ಲಿ ಜಾನಪದ ಬಯಲಾಟಗಳು ಜಾತ್ರೆ ಉತ್ಸವಗಳಲ್ಲಿ ಪ್ರತಿ ಗ್ರಾಮೀಣ ಪ್ರದೇಶಗಳಲ್ಲಿ ಜರಗತ್ತಿದ್ದವು ಗ್ರಾಮೀಣ ಭಾಗದ ಕಲಾವಿದರಿಗೆ ಪ್ರೋತ್ಸಾಹ ಮನರಂಜನೆ ದೊರೆಯುತ್ತಿತ್ತು ಆದರೆ ಇತ್ತೀಚೆಗೆ ಮೋಬೈಲ್ ಮತ್ತು ಟಿವಿ ಹಾವಳಿಂದ ಜೀವಂತ ಕಲೆಯಾದ ಬಯಲಾಟ ನಾಟಕಗಳು



ಅಪರೂಪವಾಗುತ್ತಿವೆ. ಗ್ರಾಮೀಣ ಭಾಗದ ಹಿರಿಯ ಕಲಾವಿದರು ಅಮೂಲ್ಯ ಕಲೆ ನಶಿಸಿ ಹೋಗದಂತೆ ಮುಂದಿನ ಜನಾಂಗಕ್ಕೆ ತರಬೇತಿ ನೀಡುವ ಮೂಲಕ ಬಯಲಾಟ ಕಲೆ ಜೀವಂತವಾಗಿ ಇಡಬೇಕು ಎಂದರು.

ಬಯಲಾಟ ಕಲಾವಿದರ ಉಪಾಧ್ಯಕ್ಷ ಶಿವಣ್ಣಗೌಡ ಬಿರಾದಾರ ಮಾತನಾಡಿ, ಪ್ರತಿಯೊಬ್ಬರಲ್ಲಿರುವ ಅವಗುಣಗಳನ್ನು ದೂರ ಮಾಡುವಂತಾಗಲೂ ಹಾಗೂ ಒಳ್ಳೆಯ ಮಾರ್ಗ ದಲ್ಲಿ ನಡೆವಂತಾಗಲೂ ಬಯಲಾಟಗಳು ದಾರಿ ತೋರುತ್ತವೆ ನಮ್ಮ ಭಾಗದಲ್ಲಿ ಸಂತರು ಮಹಾ ಶರಣರ ಕಥೆಗಳನ್ನು ಬಯಲಾಟ ನಾಟಕದ ಮೂಲಕ ಜನರಿಗೆ ತಿಳಿ ಹೇಳುವುದು ಯುವಕರು ಬಯಲಾಟಗಳು ಹಾಗೂ ನಾಟಕಗಳನ್ನು ನೋಡಿ ಸಂಸ್ಕೃತಿ ಸಂಸ್ಕಾರವಂತಯಾಗಬೇಕು ಎಂದು ಹೇಳಿದರು.

ಬಯಲಾಟ ಕಲಾವಿದರ ಪ್ರಧಾನ ಕಾರ್ಯದರ್ಶಿರಾದ ಕಾಸುಗೌಡ ಪಾಟೀಲ, ಅಂಬಣ್ಣ ಹರಿಜನ, ಶ್ರೀಶೈಲ ವಿಜಯಪುರ, ಮಲ್ಲಣ್ಣ ಯರನಾಳ, ಕಾಂತು ಚವ್ಹಾಣ, ಹುಚಪ್ಪ ನಾಗರಾಳ, ಹಳೇಪ್ಪ ಬೋರಗಿ, ನಾಗಲಿಂಗ ಬಡಗೇರ, ಸುಲೋಚನಾ ಕಟ್ಟಿಮನಿ, ಅನೇಕರು ಉಪಸ್ಥಿತರಿದ್ದರು.

ಕಿರುಸುದ್ದಿ

ಬಾಲಕಿಯರ ಸರ್ಕಾರಿ ಪ್ರೌಢ ಶಾಲೆಯ ಸಾಧನೆ



ಕುಷ್ಟಗಿ: ಇಲ್ಲಿನ ಬಾಲಕಿಯರ ಸರ್ಕಾರಿ ಪದವಿ ಪೂರ್ವ (ಪ್ರೌಢ ಶಾಲೆ)ಯ ವಿದ್ಯಾರ್ಥಿನಿಯರು ಎಸ್ಸೆಸ್ಸೆಲ್ಸಿ ಪಲಿಂತಾಶದಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ಶಾಲೆಯಲ್ಲಿ ವಿದ್ಯಾರ್ಥಿನಿಯರು ಒಟ್ಟಾರೆ 208ರಲ್ಲಿ 191 ವಿದ್ಯಾರ್ಥಿನಿಯರು ಉತ್ತೀರ್ಣರಾಗಿದ್ದಾರೆ. ಶೇ.91.82ರಷ್ಟು ಫಲಿತಾಂಶ ಮೂಲಕ ವಿದ್ಯಾರ್ಥಿಗಳು ಪಡೆದುಕೊಂಡಿದ್ದಾರೆ. ವಿದ್ಯಾರ್ಥಿನಿ ಶರಣಮ್ಮ ದೊಡ್ಡಬಸಪ್ಪ ಜರಗಡ್ಡಿ 590 ಶೇ.94.40 ವಿಜಯಲಕ್ಷ್ಮಿ ಗವಿಸಿದ್ದಪ್ಪ ಎಳಗಂಟಿ 573 ಶೇ.91.60, ಭೂಮಿಕಾ ಬಸವರಾಜ ಅಗಸಿಮುಂದಿನ 564 ಶೇ.90.24ರಷ್ಟು ಪಲಿತಾಂಶ ಪಡೆಯಲಾಗಿದೆ ಎಂದು ಶಾಲೆಯ ಉಪ ಪಾಚಾರ್ಯರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಾ.ಮೌನೇಶ್ವರಿಗೆ ಪಿಎಚ್‌ಡಿ

ರಾಯಚೂರು: ಸಿಂಧನೂರು ತಾಲೂಕಿನ ಬೆಳಗುರ್ಕಿ ಗ್ರಾಮದ ಡಾ.ಮೌನೇಶ್ವರಿ ಜಿ ಅವರು 'ರಿನಿವಲ್ ಎನರ್ಜಿ ರಿಸೋರ್ಸಸ್ ಫಾರ್ ಸಸ್ಟೇನಬಲ್ ಡೆವಲಪ್ಮೆಂಟ್ ಎ ಕೇಸ್ ಸ್ಟಡಿ ಆಫ್ ಸೆಲೆಕ್ಟೆಡ್ ಡಿಸ್ಟ್ರಿಕ್ಟ್' ಎಂಬ ವಿಷಯದ ಮೇಲೆ ಸಂಶೋಧನಾ ಪ್ರಬಂಧವನ್ನು ಯಶಸ್ವಿಯಾಗಿ ಮಂಡಿಸಿ ಡಾಕ್ಟರೇಟ್ ಪದವಿ ಪಡೆದಿದ್ದಾರೆ.



ಈ ಸಂಶೋಧನೆಯನ್ನು ಕರ್ನಾಟಕ ವಿಶ್ವವಿದ್ಯಾಲಯ, ಹಿರಿಯ ಪ್ರಾಧ್ಯಾಪಕ ಎಚ್.ಎಚ್.ಭಾರದಿ ಅವರ ಮಾರ್ಗದರ್ಶನದಲ್ಲಿ ಪೂರ್ಣಗೊಳಿಸಲಾಗಿದೆ. 75ನೇ ಘಟಿಕೋತ್ಸವದಲ್ಲಿ ಅವರಿಗೆ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಯಿತು. ಡಾ.ಮೌನೇಶ್ವರಿ ಜಿ. ಅವರು ರೈತ ಕುಟುಂಬದ ಹಿನ್ನೆಲೆಯಿಂದ ಬಂದವರಾಗಿದ್ದು, ತಂದೆ ಶ್ರೀರಾಜಯೋಗಿ ಯಾರಿಸ್ವಾಮಿ ಜಿ ಹಾಗೂ ತಾಯಿ ಹುಲಗಮ್ಮ ಅವರ ಪುತ್ರಿಯಾಗಿದ್ದಾರೆ. ತಮ್ಮ ಪರಿಶ್ರಮ ಹಾಗೂ ಅಧ್ಯಯನಾಸಕ್ತಿಯಿಂದ ಉನ್ನತ ಶಿಕ್ಷಣದಲ್ಲಿ ಮಹತ್ವದ ಸಾಧನೆ ಮಾಡಿದ್ದಾರೆ. ಇವರ ಸಾಧನೆಗೆ ಕುಟುಂಬದವರು, ಬಂಧುಗಳು, ಸ್ನೇಹಿತರು ಹಾಗೂ ಗ್ರಾಮದ ಗಣ್ಯರು ಹರ್ಷವ್ಯಕ್ತಪಡಿದ್ದಾರೆ.

ಶಾಲೆಗೆ ನಯನಾ ಪ್ರಥಮ

ಕುಕನೂರು: ತಾಲೂಕಿನ ಮಂಗಳೂರು ಗ್ರಾಮದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ ವಿದ್ಯಾರ್ಥಿನಿ ಕು.ನಯನಾ ವೀರಣ್ಣ ಉಮಚಗಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 600 ಅಂಕಗಳನ್ನು ಪಡೆದು ಪ್ರತಿಶತ 96% ಪಡೆದು ಶಾಲೆಗೆ ಪ್ರಥಮ ಸ್ಥಾನ ಪಡೆದಿರುತ್ತಾಳೆ.



ಈ ವಿದ್ಯಾರ್ಥಿನಿಯ ಸಾಧನೆಗೆ ಮತ್ತು ಮಾರ್ಗದರ್ಶನ ಮಾಡಿದ ಮುಖ್ಯ ಶಿಕ್ಷಕರಿಗೆ, ಸಹ ಶಿಕ್ಷಕರಿಗೆ, ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸರ್ವ ಸದಸ್ಯರು, ಊರಿನ ಗುರು ಹಿರಿಯರು, ಶಿಕ್ಷಣ ಪ್ರೇಮಿಗಳು ಹರ್ಷ ವ್ಯಕ್ತಪಡಿಸಿದ್ದಾರೆ.

ಎಸೆಸೆಲ್ಸಿ ಟಾಪರ್ಸ್‌ಗಳಿಗೆ ಜಿಲ್ಲಾಧಿಕಾರಿಯಿಂದ ಸನ್ಮಾನ

ಕಲಬುರಗಿ: ಗುರುವಾರ ಪ್ರಕಟಗೊಂಡ ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ಜಿಲ್ಲೆಗೆ ಹೆಚ್ಚಿನ ಅಂಕ ಪಡೆದ 6 ವಿದ್ಯಾರ್ಥಿಗಳನ್ನು ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಅವರು ಶುಕ್ರವಾರ ತಮ್ಮ ಕಚೇರಿಯಲ್ಲಿ ಸನ್ಮಾನಿಸಿ ಮಕ್ಕಳಿಗೆ ಪ್ರೋತ್ಸಾಹಿಸಿದರು. 625ರ ಪೈಕಿ 623 ಅಂಕ ಪಡೆದು ಶೇ.99.68 ಪ್ರತಿಶತದೊಂದಿಗೆ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿರುವ ಕಲಬುರಗಿ ದಕ್ಷಿಣ ವಲಯದ ಸಾವಳಗಿಯ ಅಜೀಮ್ ಪ್ರೇಮ್ ಜಿ ಶಾಲೆಯ ವಿದ್ಯಾರ್ಥಿ ಗಣೇಶ, ತಲಾ 622 ಅಂಕ ಪಡೆದು ಎರಡನೇ ಸ್ಥಾನ ಹಂಚಿಕೊಂಡಿರುವ ಕಲಬುರಗಿಯ ಶರಣಬಸವೇಶ್ವರ ವಸತಿ ಶಾಲೆಯ ವಿದ್ಯಾರ್ಥಿನಿಯರಾದ ಮಾಧವಿ, ಮೇಘನಾ ಮತ್ತು 620 ಅಂಕ ಪಡೆದು ತೃತೀಯ ಸ್ಥಾನ ಪಡೆದಿರುವ ಕಲಬುರಗಿಯ ಜಗತ್ ಪ್ರದೇಶದ ಎಸ್ಸಿ-ಎಸ್ಟಿ ಪ್ರತಿಭಾನಿತ್ವ ಶಾಲೆಯ ಭಾಗ್ಯಶ್ರೀ, ಎಸ್.ಆರ್.ಎನ್.ಮೆಹತಾ ಶಾಲೆಯ ಓಂಕಾರ ಹಸು ಹಾಗೂ ಜೇವರ್ಗಿ ತಾಲೂಕಿನ ಆದರ್ಶ ವಿದ್ಯಾಲಯದ ವಿದ್ಯಾರ್ಥಿನಿ ನಿಸರ್ಗಾ ಅವರನ್ನು ಡಿಸಿ ಅವರು ವಿಶೇಷವಾಗಿ ಸತ್ಕರಿಸಿ ಮೆಚ್ಚುಗೆಯ ಮಾತುಗಳನ್ನಾಡಿದರು. ಡಿಡಿಪಿಐ ಶಂಕ್ರಮ ಢವಳಗಿ ಸೇರಿದಂತೆ ವಿದ್ಯಾರ್ಥಿಗಳು ಪಾಲಕರು ಇದ್ದರು.



ಕಲಬುರಗಿ: ಜಿಲ್ಲೆಯ ಆಳಂದ ತಾಲೂಕಿನ ಮಾದನ ಹಿಪ್ಪರಗಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ಸುಜಾತಾ ಗೊಲ್ಲರ ಪ್ರಸಕ್ತ 2025-26ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 529 ಅಂಕಗಳು (84.64%) ಗಳಿಸಿ ಫಸ್ಟ್ ಕ್ಲಾಸ್‌ನಲ್ಲಿ ಉತ್ತೀರ್ಣಳಾದ ಹಿನ್ನೆಲೆ, ಗ್ರಾಮಸ್ಥರು ಸಿಹಿ ತಿನ್ನಿಸಿ ಸನ್ಮಾನಿಸಿದರು. ಪೋಷಕರಾದ ಭೀಮಾಶಂಕರ ಗೊಲ್ಲರ, ಸರುಬಾಯಿ ಗೊಲ್ಲರ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

ದೇವಸ್ಥಾನದ ಸಭಾಭವನ ಉದ್ಘಾಟನೆ

ಮಸ್ಕಿ: ಕುರುಹಿನಶೆಟ್ಟಿ ಸಮಾಜದ ವತಿಯಿಂದ ಶ್ರೀನೀಲಕಂಠೇಶ್ವರ ದೇವಸ್ಥಾನದ 52ನೇ ವಾರ್ಷಿಕೋತ್ಸವ ಹಾಗೂ ನೀಲಕಂಠ ಸಭಾ ಭವನ ಉದ್ಘಾಟನ ಸಮಾರಂಭ ಶುಕ್ರವಾರ ಅರ್ಥಪೂರ್ಣವಾಗಿ ಜರುಗಿತು.

ಪಟ್ಟಣದ ಮುದಗಲ್ ಕ್ರಾಸ್ ಹತ್ತಿರ ಇರುವ ನೀಲಕಂಠೇಶ್ವರ ದೇವಸ್ಥಾನದಲ್ಲಿ ದೇವರಿಗೆ ವಿವಿಧ ಪೂಜಾ ಕೈಂಕರ್ಯಗಳು ನಡೆದವು. ನಂತರ ಸಂತೇ ಬಜಾರಿನ ಕಾಳಿಕಾ ದೇವಸ್ಥಾನದಿಂದ ನೀಲಕಂಠೇಶ್ವರ ದೇವರ ಭಾವಚಿತ್ರ ಮೆರವಣಿಗೆಯು ಸುಮಂಗಲಿಯರಿಂದ ಕಳಶ ಕನ್ನಡಿಯೊಂದಿಗೆ, ಭಾಜಟ ಭಜಂತ್ರಿಯೊಂದಿಗೆ, ಪಟ್ಟಣದ ಪ್ರಮುಖ ಬೀದಿಗಳ ಮುಖಾಂತರ ಸಾಗಿ ನೀಲಕಂಠೇಶ್ವರ ದೇವಸ್ಥಾನ ತಲುಪಿತು.

ನಂತರ ಸಾಯಂಕಾಲ ನೀಲಕಂಠ ಸಭಾಭವನವನ್ನು ಗಚ್ಚಿನಮಠದ ವರರುದ್ರಮುನಿ ಮಹಾಸ್ವಾಮಿಗಳು ಉದ್ಘಾಟಿಸಿದರು.

ಕುರುಹಿನಶೆಟ್ಟಿ ಸಮಾಜದ ವತಿಯಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಈ ಸಂದರ್ಭದಲ್ಲಿ ಕುರುಹಿನ ಶೆಟ್ಟಿ ಸಮಾಜದ ಅಧ್ಯಕ್ಷರಾದ ಈಶಪ್ಪ ಗಂಗಾವತಿ, ಅಮರೇಶ್ ಜೋತಾನ, ವಿರೂಪಾಕ್ಷಪ್ಪ ಪರಕಾಳಿ, ಬಸವರಾಜಪ್ಪ ಕಲ್ಲೂರ್, ಪಂಪಣ್ಣ ಮಾನ್ವಿ, ಬಸವರಾಜ್ ಕಲ್ಲೂರ್, ರಾಚಪ್ಪ ಜೋತಾನ್, ವೀರೇಶ್ ಜಾಲಿಹಾಳ, ಶಿವಕುಮಾರ್ ಬಾಗೋಡಿ ಸೇರಿದಂತೆ ಸಮಾಜದ ಪ್ರಮುಖ ಮುಖಂಡರು, ಮಹಿಳೆಯರು, ಮಕ್ಕಳು ಇದ್ದರು.



ಮಸ್ಕಿ: ಕುರುಹಿನಶೆಟ್ಟಿ ಸಮಾಜದ ವತಿಯಿಂದ ಶ್ರೀನೀಲಕಂಠೇಶ್ವರ ದೇವಸ್ಥಾನದ 52ನೇ ವಾರ್ಷಿಕೋತ್ಸವ ಹಾಗೂ ನೀಲಕಂಠ ಸಭಾ ಭವನ ಉದ್ಘಾಟನ ಸಮಾರಂಭ ಶುಕ್ರವಾರ ಅರ್ಥಪೂರ್ಣವಾಗಿ ಜರುಗಿತು.

ಹುಲಿಗೆಮ್ಮ ದೇವಿ ಜಾತ್ರೆ | ನಿರಂತರ ವಿದ್ಯುತ್ ಸರಬರಾಜಿಗೆ ಕ್ರಮವಹಿಸಿ

ವಿದ್ಯುತ್ ಅಲಂಕಾರ, ಬೆಳಕಿನ ವ್ಯವಸ್ಥೆ ಮಾಡಿ

ಕೊಪ್ಪಳ: ಶ್ರೀಹುಲಿಗೆಮ್ಮ ದೇವಿ ಜಾತ್ರಾ ಅವಧಿಯಲ್ಲಿ ನಿರಂತರ ವಿದ್ಯುತ್ ಸರಬರಾಜು ಆಗಬೇಕು ಹಾಗೂ ಗುಡಿ-ಗೋಪುರಗಳಿಗೆ ವಿದ್ಯುತ್ ಅಲಂಕಾರ ಮತ್ತು ಬೆಳಕಿನ ವ್ಯವಸ್ಥೆ ಮಾಡುವಂತೆ ಕೊಪ್ಪಳ ಜಿಲ್ಲಾಧಿಕಾರಿಗಳಾದ ಡಾ. ಸುರೇಶ ಬಿ. ಇಟ್ನಾಳ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.



ಜಿಲ್ಲೆಯ ಸುಪ್ರಸಿದ್ಧ ಧಾರ್ಮಿಕ ಕ್ಷೇತ್ರವಾದ ಹುಲಿಗಿ ಗ್ರಾಮದ ಶ್ರೀಹುಲಿಗೆಮ್ಮ ದೇವಿ ದೇವಸ್ಥಾನದ 2026ರ ವಾರ್ಷಿಕ ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಯಾವುದೇ ರೀತಿಯ ವಿದ್ಯುತ್ ಸಮಸ್ಯೆಯಾಗದಂತೆ ನೋಡಿಕೊಳ್ಳಬೇಕು. ಈ ಹಿನ್ನೆಲೆಯಲ್ಲಿ ಜಾತ್ರಾ ಅವಧಿಯಲ್ಲಿ ಹೆಚ್ಚುವರಿ ವಿದ್ಯುತ್ ಸರಬರಾಜು ಮಾಡಲು ಅನುಕೂಲವಾಗುವಂತೆ ಹೆಚ್ಚುವರಿಯಾಗಿ ಒಂದು ವಿದ್ಯುತ್ ಪರಿವರ್ತಕವನ್ನು ಅಳವಡಿಸಿಕೊಂಡು ಒಟ್ಟಾರೆಯಾಗಿ 100 ಕಿ.ವ್ಯಾ ಹೆಚ್ಚುವರಿ ವಿದ್ಯುತ್ ಸರಬರಾಜು ಮಾಡಿಕೊಂಡು, ಜೆಸ್ಕಾಂ ಇಲಾಖೆಯ ಹೆಚ್ಚಿನ ಸಿಬ್ಬಂದಿಗಳನ್ನು ಜಾತ್ರಾ ಕಾಲದಲ್ಲಿ ನಿಯೋಜನೆ ಮಾಡಬೇಕು.

ನೀರಿನ ಸರಬರಾಜಿಗೆ ಹಾಗೂ ಬೆಳಕಿನ ವ್ಯವಸ್ಥೆಗೆ ಅಡಚಣೆಯಾಗದಂತೆ ನಿರಂತರ ವಿದ್ಯುತ್ ಸರಬರಾಜು ಮಾಡಲು ಮತ್ತು ರಾತ್ರಿ ಸಮಯದಲ್ಲಿ ಯಾವುದೇ ಕಾರಣಕ್ಕೂ ವಿದ್ಯುತ್ ಸ್ಥಗಿತಗೊಳಿಸದಂತೆ ತೀವ್ರ ನಿಗಾವಹಿಸಬೇಕು. ಈ ಜಾತ್ರೆ ವೇಳೆಯಲ್ಲಿ ಮುಖ್ಯವಾಗಿ ಮೂರು ಸ್ಥಳಗಳಲ್ಲಿ ವಾಹನ ನಿಲುಗಡೆ ಪ್ರದೇಶವನ್ನು ಮಾಡಲಾಗುತ್ತಿದ್ದು, ಯಾವುದೇ ವಿದ್ಯುತ್ ಅವಘಡಗಳು ಜರುಗದಂತೆ ಮುಂಜಾಗ್ರತಾ ಕ್ರಮ ವಹಿಸುವಂತೆ ಜೆಸ್ಕಾಂ ಮುನಿರಾಬಾದ್ ಡ್ಯಾಮ್ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೊಪ್ಪಳ ಜೆಸ್ಕಾಂ ಕಾರ್ಯಪಾಲಕ ಅಭಿಯಂತರರು ಹಾಗೂ ಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದಕಾರ್ಯದರ್ಶಿಗಳಿಗೆಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ದೇವಸ್ಥಾನದ ಗುಡಿ-ಗೋಪುರಗಳಿಗೆ ಬೆಳಕಿನ ವ್ಯವಸ್ಥೆ ಮಾಡಿ: ಪ್ರತಿ ವರ್ಷದಂತೆ ಈ ವರ್ಷವೂ ದೇವಸ್ಥಾನದ 3 ಗುಡಿ-ಗೋಪುರಗಳು, 3 ಕಮಾನುಗಳು ಮತ್ತು ಸುತ್ತ ಮುತ್ತಲಿನ ಕಟ್ಟಡಗಳಿಗೆ ವಿದ್ಯುತ್ ಅಲಂಕಾರ ಮಾಡಲು ಹಾಗೂ ಜಾತ್ರಾ ಜನಸಂದಣಿ ಪ್ರದೇಶದಲ್ಲಿ ಹೊಳೆದಂಡೆ ಹತ್ತಿರ, ನದಿತೀರದ ಎರಡೂ ಕಡೆ ಬಯಲು ಪ್ರದೇಶದಲ್ಲಿ, ರೈಲ್ವೆ ಹಳಿ ಪಕ್ಕದಲ್ಲಿ, ಟ್ಯಾಂಕ್ ಏರಿಯಾ ಪ್ರದೇಶ, ಶೌಚಾಲಯಗಳ ಹತ್ತಿರ ವಾಹನ ನಿಲುಗಡೆ ಸ್ಥಳಗಳು ಹಾಗೂ ಇನ್ನಿತರೆ ಕಡೆಗಳಲ್ಲಿ ಬೆಳಕಿನ ವ್ಯವಸ್ಥೆಗಾಗಿ ಲೈಟ್‌ಗಳನ್ನು ಅಳವಡಿಸುವುದು ಮತ್ತು ಮೂರು ಕಡೆಗಳಲ್ಲಿ ಬಂಬುಗಳಲ್ಲಿ ವಾಚ್ ಟವರ್ ನಿರ್ಮಿಸಿ ದೇವಸ್ಥಾನದ ವತಿಯಿಂದ ಬೆಳಕಿನ ವ್ಯವಸ್ಥೆ ಮಾಡಲು ಇತ್ತೀಚೆಗೆ ನಡೆದ ಸಭೆಯಲ್ಲಿ ನಿರ್ಣಯಿಸಲಾಗಿದ್ದು, ಈ ಬಗ್ಗೆ ಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಸೂಚಿಸಿದ್ದಾರೆ.

ಪ್ರಾಮಾಣಿಕ ಕೆಲಸ ನಿರ್ವಹಿಸಿ: ಜಿಲ್ಲಾಧಿಕಾರಿ

ಕುಷ್ಟಗಿ: ತಾಲೂಕು ವ್ಯಾಪ್ತಿಯ ನಾನಾ ಗ್ರಾಮಗಳಲ್ಲಿ ಕಾಣಿಸಿಕೊಳ್ಳುವ ಕುಡಿಯುವ ನೀರಿನ ಸಮಸ್ಯೆಗೆ ತ್ವರಿತವಾಗಿ ಸ್ಥಳೀಯ ಮಟ್ಟದ ಅಧಿಕಾರಿಗಳು ಸ್ಪಂದಿಸುವ ಕೆಲಸ ಮಾಡಬೇಕು ಎಂದು ಜಿಲ್ಲಾಧಿಕಾರಿ ಸುರೇಶ್ ಇಟ್ನಾಳ್ ಖಡಕ್ ಎಚ್ಚರಿಕೆ ನೀಡಿದರು.

ಪಟ್ಟಣದ ಕೊಪ್ಪಳ ರಸ್ತೆಯಲ್ಲಿರುವ ಸರ್ಕ್ಯೂಟ್ ಹೌಸ್‌ನಲ್ಲಿ ನಡೆದ ಶಾಸಕರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಪಾಲ್ಗೊಂಡು ಶುಕ್ರವಾರ ಮಾತನಾಡಿದರು.

ತಾಲೂಕಿನಲ್ಲಿ ಕುಡಿವ ನೀರಿನ ಸಮಸ್ಯಾತ್ಮಕ ಗ್ರಾಮಗಳಲ್ಲಿ ಈಗಾಗಲೇ ಕುಡಿವ ನೀರಿನ ತೊಂದರೆ ಉಲ್ಬಣಿಸಿದ್ದು, ಹಳ್ಳಿಯಲ್ಲಿ ಜನರಿಗೆ ಕುಡಿವ ನೀರಿನ ಸೌಲಭ್ಯ ಒದಗಿಸಬೇಕು. ಸಾರ್ವಜನಿಕರಿಂದ ದೂರುಬಾರದಂತೆ ಅಧಿಕಾರಿಗಳು ನಿಗಾವಹಿಸಿ ಕೆಲಸ ಮಾಡಬೇಕಿದೆ ಎಂದರು. ಶಾಸಕ ಹಾಗೂ ವಿಧಾನಸಭೆಯ ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಪಾಟೀಲ್ ಮಾತನಾಡಿ, ಮತ ಕ್ಷೇತ್ರದಲ್ಲಿ ಪಂಚಾಯತ್ ವ್ಯಾಪ್ತಿಯ ಗ್ರಾಮೀಣ ಭಾಗದಲ್ಲಿ ಜನರಿಗೆ ಜಾನುವಾರಗಳಿಗೆ ನೀರಿನ ಸಮಸ್ಯೆ ತಲೆದೂರಿದ್ದು ತತ್ಕ್ಷಣವೇ ಅಧಿಕಾರಿಗಳು ಸ್ಪಂದಿಸಿ ಜನರಿಗೆ ಕುಡಿಯುವ ನೀರು ಕಲ್ಪಿಸಬೇಕು ಎಂದರು. ಮಧ್ಯೆ ಪ್ರವೇಶಿಸಿ ಮಾತನಾಡಿದ ತಾಪಂ ಇಒ ಪಂಪಾಪತಿ ಹಿರೇಮಠ, ಯಾವುದೇ ಗ್ರಾಮದಲ್ಲಿ ಬೋರ್ ವೆಲ್ ದುರಸ್ತಿಗೆ ಕಾದಿದ್ದು ಅವಗಳನ್ನು ಸರಿಪಡಿಸಿ ಕ್ರಮ ವಹಿಸಿದೆ.ಕೆಲವಡೆ ಜೆಜೆಎಂ ಕಾಮಗಾರಿಯಿಂದ ಹಳ್ಳಿಗಳಲ್ಲಿ ನೀರಿನ ತೊಂದರೆ ಕಾಣತೊಡಗಿದೆ.ತ್ವರಿತವಾಗಿ ಜನತೆಗೆ ನೀರು ಒದಗಿಸಲು ಸೂಚಿಸಿದೆ ಎಂದು ತಿಳಿಸಿದರು. ಜಿಪಂ ಎಂಜಿನಿಯರ್ ದೀಪಾ ಮಾತನಾಡಿ, ಹುನಗುಂದದಿಂದ ಕುಷ್ಟಗಿಗೆ ಬರುವ ಕುಡಿಯುವ ನೀರಿನ ಪೈಪ್‌ಲೈನ್ ದುರಸ್ತಿಗೆ ಕಾದಿದ್ದು, ಕೂಡಲೇ ಸರಿಪಡಿಸಬೇಕು. ತಾಲೂಕಿಗೆ ನಿರಂತರ ನೀರು ಪೂರೈಕೆಯಿಂದ ಹೊಸ ಕಾಮಗಾರಿಗೆ ಅನುದಾನ ಅಭಾವದಿಂದ ಕಾಮಗಾರಿ ನಡೆಸಿಲ್ಲ, ಹೀಗಾಗಿ ಮಧ್ಯೆ ಪ್ರವೇಶಿದ ಜಿಲ್ಲಾಧಿಕಾರಿಗಳು ಪುರಸಭೆ ವತಿಯಿಂದ ಅನುದಾನ ಬಳಿಸಿಕೊಂಡು ಕಾಮಗಾರಿ ಪೂರ್ಣಗೊಳಿಸಿ ಕುಡಿವ ನೀರಿಗೆ ಹೆಚ್ಚಿನ ಆಸಕ್ತಿವಹಿಸಿ ಕೆಲಸ ಮಾಡಬೇಕು ಎಂದರು. ನಂತರ ವಿವಿಧ ವಿಷಯಗಳ ಕುರಿತು ಚರ್ಚೆ ನಡೆಸಿದರು. ತಹಶೀಲ್ದಾರ್ ಅಶೋಕ್ ಶಿಗ್ಗಾವಿ, ಪುರಸಭೆ ಮುಖ್ಯಾಧಿಕಾರಿ ವೆಂಕಪ್ಪ ಬೀಳಗಿ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ತುಗ್ಗಲೆಪ್ಪ ದೇಸಾಯಿ, ಪರಿಶಿಷ್ಟ ಪಂಗಡ ಇಲಾಖೆ ಅಧಿಕಾರಿ ವೀರಪ್ಪ, ತಾಲೂಕು ಮಟ್ಟದ ಅಧಿಕಾರಿಗಳು, ಗ್ರಾಪಂ ಪಿಡಿಒಗಳಿದ್ದರು.



ಮಹಿಳಾ ಮೀಸಲಾತಿ ಬಿಲ್ ವಿಫಲತೆಗೆ ಬಿಜೆಪಿ ಸರ್ಕಾರವೇ ನೇರ ಕಾರಣ: ಬಾದರ್ಲಿ

ಸಿಂಧನೂರು: ಮಹಿಳಾ ಮೀಸಲಾತಿ ಕಾನೂನು ಮತ್ತು ಕ್ಷೇತ್ರ ಪುನರ್ ವಿಂಗಡಣೆ ವಿಚಾರಕ್ಕೆ ಸಂಬಂಧಿಸಿದಂತೆ ಕೇಂದ್ರದ ಎನ್‌ಡಿಎ ಸರ್ಕಾರ ಕೇವಲ ರಾಜಕೀಯ ಲಾಭಕ್ಕಾಗಿ ಈ ವಿಷಯವನ್ನು ಬಳಸಿಕೊಳ್ಳುತ್ತಿದೆ ಹಾಗೂ ಮಹಿಳಾ ಮೀಸಲಾತಿ ಬಿಲ್ ವಿಫಲತೆಗೆ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರವೇ ನೇರ ಕಾರಣ ಎಂದು ಶಾಸಕ ಹಂಪನಗೌಡ ಬಾದರ್ಲಿ ಹೇಳಿದರು.

ಅವರು ನಗರದ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ದೇಶದಲ್ಲಿ ಮಹಿಳೆಯರು ರಾಜಕೀಯದಲ್ಲಿ ಮುಂದೆ ಬರಬೇಕು ಎನ್ನುವ ಉದ್ದೇಶದಿಂದ ಮಹಿಳಾ ಮೀಸಲಾತಿ 33% ಬಿಲ್ 2023 ಮಂಡಿಸಿ ರಾಷ್ಟ್ರಪತಿಗಳ ಅಂಕಿತವು ಕೂಡ ಮಾಡಲಾಗಿತ್ತು. ಮಹಿಳಾ ಮೀಸಲಾತಿ ಬಿಲ್ ಜೊತೆಗೆ ರಾಜಕೀಯ ದುರುದ್ದೇಶದಿಂದ ಇನ್ನೂ 2 ಬಿಲ್ಲುಗಳನ್ನು ಒಗ್ಗೂಡಿಸಿಕೊಂಡು ಮಂಡಿಸಲು ಹೊರಟಿದ್ದರು. ಇದನ್ನು ಕಾಂಗ್ರೆಸ್ ಪಕ್ಷಸೇರಿದಂತೆಎಲ್ಲ ಪಕ್ಷಗಳು ಚರ್ಚೆ ಮಾಡಿ ಬಿಜೆಪಿ ಸರ್ಕಾರ ವಿರುದ್ಧ ವಿರೋಧ ಮಾಡಿದ್ದರಿಂದ ಬಿಲ್ ವಿಫಲತೆಗೆ ಕಾರಣವಾಗಿದೆ. ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಒಂದೊಂದು ಬಿಲ್ ಮಂಡನೆ ಮಾಡಿದ್ದರೆ ಮಹಿಳಾ ಮೀಸಲಾತಿ ಬಿಲ್ ಯಶಸ್ವಿಯಾಗಿ ಅನುಮೋದನೆ ಪಡೆಯಬಹುದಾಗಿತ್ತು.ಆದರೆ ಈ ವಿಷಯದಲ್ಲಿ ಬಿಜೆಪಿ ಸರ್ಕಾರ ಬಿಟ್ಟು, ಉಳಿದ ಎಲ್ಲ ಪಕ್ಷಗಳು ಮಹಿಳಾ ಮೀಸಲಾತಿಗೆ ವಿರೋಧ ಮಾಡುತ್ತಿವೆ ಎಂದು ಸುಳ್ಳು ವಾತಾವರಣ ಸೃಷ್ಟಿ ಮಾಡುವ ಕೆಲಸ ಜೆಡಿಎಸ್ ಜೊತೆಗೂಡಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಬಿಜೆಪಿ ಸರ್ಕಾರ,ಕಾಂಗ್ರೆಸ್ ಪಕ್ಷದ ವಿರುದ್ಧ ಗೂಬೇ ಕೂರಿಸುವ ಕೆಲಸ ಮಾಡುತ್ತಿದ್ದಾರೆ ಇದು ಖಂಡನೀಯ ಎಂದರು.

ಖಾಜಿ ಮಲ್ಲಿಕ್, ಲಿಂಗಪ್ಪ ದಡೇಸೂಗೂರು, ಅನೀಲಕುಮಾರ ವೈ., ಮಂಜುಳಾ ಪ್ರಭುರಾಜ ಸೇರಿದಂತೆ ಇನ್ನಿತರರು ಇದ್ದರು.

ಕನ್ನಡ ಉಳಿಸಿ, ಬೆಳೆಸಲು ಎಲ್ಲರೂ ಶ್ರಮಿಸಿ


ರಾಯಚೂರು: ವರನಟ ಡಾ.ರಾಜ್ ಕುಮಾರ ಕರ್ನಾಟಕ ಮಾತ್ರವಲ್ಲದೇ ಇಡೀ ದೇಶದ ಹೆಮ್ಮೆಯಾಗಿದ್ದರು. ಅವರ ನಿಷ್ಠೆ, ಪ್ರಾಮಾಣಿಕತೆ, ಸರಳತೆಯನ್ನು ನಮ್ಮ ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ರಾಯಚೂರು ತಹಶೀಲ್ದಾರ್ ಸುರೇಶ ವರ್ಮಾ ಹೇಳಿದರು.

ಶುಕ್ರವಾರ ನಗರದ ಕನ್ನಡ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ವರನಟ ಡಾ.ರಾಜಕುಮಾರ್ ಅವರ 97ನೇ ಜನ್ಮ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕನ್ನಡ ಅಭಿಮಾನವನ್ನು ತೋರಿದ್ದಾರೆ. ಅವರಂತೆ ನಾವೆಲ್ಲರೂ ನಾಡು-ನುಡಿಯ ಬಗ್ಗೆ ಅಭಿಮಾನವನ್ನು ಹೊಂದಬೇಕು. ಅವರ ಜೀವನದ ಸಾಮಾಜಿಕ ಕಾಳಜಿಯನ್ನು ಅರಿಯಬೇಕು. ಅಲ್ಲದೆ ಅವರ ಮಗನಾದ ಡಾ.ಪುನೀತರಾಜಕುಮಾರ ಸಹ ನಟನೆ ಸೇರಿದಂತೆ ಅನೇಕ ಸಾಮಾಜಿಕ ಕಾರ್ಯಗಳನ್ನು ಮಾಡಿದ್ದಾರೆ. ರಾಯಚೂರಿನಲ್ಲಿ ಕನ್ನಡವನ್ನು ಬೆಳೆಸಲು, ಉಳಿಸಿ, ಬೆಳೆಸಲು ಎಲ್ಲರೂ ಶ್ರಮಿಸಬೇಕು ಎಂದರು.

ಕ.ಕಾ.ಪ.ಸಂ ಜಿಲ್ಲಾಧ್ಯಕ್ಷ ಆರ್.ಗುರುನಾಥ ಮಾತನಾಡಿ, ಬಹುತೇಕ ಕಲಾವಿದರು ಡಾ.ರಾಜಕುಮಾರ ಅವರ ಹೆಸರು ಹೇಳಲೇಬೇಕು. ಅವರ ಆದರ್ಶಗಳನ್ನು ನಾವು, ನೀವು ಎಲ್ಲರೂ ಪಾಲಿಸಬೇಕು ಎಂದು ಹೇಳಿದರು.

ಉಪನ್ಯಾಸವನ್ನು ಡಾ.ದಂಡಪ್ಪ ಬಿರಾದಾರ ನೀಡಿದರು. ಅಭಿಮಾನಿಗಳಿಂದ ಡಾ.ರಾಜಕುಮಾರ ಗೀತೆಗಳ ಸಂಗೀತ ಗಾಯನದಲ್ಲಿ ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು, ನಾವಾಡುವ ನುಡಿಯೇ ಕನ್ನಡ ನುಡಿ, ಕೆಕೆಆರ್‌ಸಿಟಿ ನೌಕರ ಗುರು ದೇವರಮನಿ ಆರಕೇರಾ (ಜೂನಿಯರ್ ರಾಜ್‌ಕುಮಾರ್) ಆ ದೇವರ ಹಾಡು ಸೇರಿದಂತೆ ಇತರೆ ಹಾಡುಗಳನ್ನು ಹಾಡಿದರು. ಪ್ರತಾಪ ರೆಡ್ಡಿ, ಮೈತ್ರಿಕರ, ಮಲ್ಲಿಕಾರ್ಜುನ ಹಾಗೂ ಚಂದ್ರಕಾಂತ್ ಮಸಾನಿ ಅವರಿಂದ ರಾಜ್‌ಕುಮಾರ್ ಇತರೆ ಗೀತೆಗಳನ್ನು ಹಾಡಲಾಯಿತು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಜಿ.ಸುರೇಶ, ವೆಂಕಟೇಶ್ವರ ಕಾಲೇಜಿನ ಪ್ರಾಂಶುಪಾಲ ನರಸಿಂಹ ಸಾಗರ, ಕಸಾಪ ಕಾರ್ಯದರ್ಶಿ ರೇವತಿ ರಾವ್, ಅ.ಕ.ರಾಜ್ ಅಭಿಮಾನಿಗಳ ಸಂಘದ ಅಧ್ಯಕ್ಷ ಬಸವರಾಜ, ಮಹಿಳಾ ಘಟಕದ ಅಧ್ಯಕ್ಷೆ ನಿರ್ಮಲ ಬೆಣ್ಣೆ ಸೇರಿದಂತೆ ಇತರರಿದ್ದರು. ಪ್ರತಿಭಾ ಗೋನಾಳ ನಿರೂಪಿಸಿದರು.



ಹೊಸಳ್ಳಿ ಚನ್ನಮ್ಮ ವಸತಿ ಶಾಲೆಯ ಉತ್ತಮ ಫಲಿತಾಂಶ

ಯಲಬುರ್ಗಾ: ತಾಲೂಕಿನ ಹೊಸಳ್ಳಿ ಗ್ರಾಮದ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆ ಹೊಸಳ್ಳಿ ಎಸ್ಸೆಸ್ಸೆಲ್ಸಿ ವಾರ್ಷಿಕ ಫಲಿತಾಂಶ ಶೇ.100ರಷ್ಟಾಗಿದೆ.

ಪರೀಕ್ಷೆಗೆ ಹಾಜರಾದ 50 ವಿದ್ಯಾರ್ಥಿನಿಯರಲ್ಲಿ 36 ವಿದ್ಯಾರ್ಥಿನಿಯರು ಡಿಸ್ಟಿಂಕ್ಷನ್ 14, ವಿದ್ಯಾರ್ಥಿನಿಯರು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗುವ ಮೂಲಕ ಶಾಲೆಗೆ ಉತ್ತಮ ಫಲಿತಾಂಶ ತಂದುಕೊಟ್ಟಿದ್ದಾರೆ.

ಶುಭಪ್ರಿಯಾ ಯಲ್ಲಪ್ಪ ಲಮಾಣಿ ಪ್ರಥಮ ರ್‍ಯಾಂಕ್ 620 ಅಂಕಗಳು, ಅನುಷಾ ಹನಮಪ್ಪ ಭಜಂತ್ರಿ ದ್ವಿತಿಯ ರ್‍ಯಾಂಕ್ 605 ಅಂಕಗಳು, ವಾಣಿ ಶಿವನಗೌಡ ಬಿರಾದಾರ ತೃತಿಯ ರ್‍ಯಾಂಕ್ 603 ಅಂಕ ಗಳಿಸಿ ಶಾಲೆಗೆ ಕೀರ್ತಿ ತಂದಿದ್ದಾರೆ.

ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿನಿಯರಲ್ಲಿ 24 ವಿದ್ಯಾರ್ಥಿನಿಯರು ಕನ್ನಡ ವಿಷಯದಲ್ಲಿ 125 ಅಂಕಗಳಿಗೆ 125 ಅಂಕಗಳನ್ನು ಗಳಿಸಿದ್ದಾರೆ. ಹಿಂದಿ ವಿಷಯದಲ್ಲಿ 20 ವಿದ್ಯಾರ್ಥಿನಿಯರು 100ಕ್ಕೆ 100 ಅಂಕಗಳನ್ನು ಗಳಿಸಿದ್ದಾರೆ. ಸಮಾಜ ವಿಜ್ಞಾನದಲ್ಲಿ 01 ವಿದ್ಯಾರ್ಥಿನಿ 100ಕ್ಕೆ 100 ಅಂಕಗಳನ್ನು ಗಳಿಸಿ ಶಾಲೆಗೆ ಕೀರ್ತಿ ತಂದಿದ್ದಾರೆ ಎಂದು ಪ್ರಾಂಶುಪಾಲರು ಹಾಗೂ ಶಾಲಾ ಸಿಬ್ಬಂದಿ ಹರ್ಷ ವ್ಯಕ್ತಪಡಿಸಿದ್ದಾರೆ.

ಮಂಜುನಾಥ ಪ್ರೌಢಶಾಲೆಗೆ 93ರಷ್ಟು ಫಲಿತಾಂಶ: ಪಟ್ಟಣದ ಶ್ರೀಮಂಜುನಾಥ ಪ್ರೌಢಶಾಲೆಗೆ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ಪ್ರತಿಶತ 93ರಷ್ಟು ಫಲಿತಾಂಶ ಪ್ರಕಟವಾಗಿದ್ದು ಶ್ರೀಮಂಜುನಾಥ ಪ್ರೌಢಶಾಲೆ ಯಲಬುರ್ಗಾಕ್ಕೆ ಪ್ರತಿಶತ 93ರಷ್ಟು ಫಲಿತಾಂಶ ಬಂದಿದೆ. ಒಟ್ಟು 13 ವಿದ್ಯಾರ್ಥಿಗಳಲ್ಲಿ 12 ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ.

ಕು.ಹನಮೇಶ್ ಅಬ್ಬಿಗೇರಿ ಪ್ರತಿಶತ 77 ಅಂಕಗಳನ್ನು ಪಡೆದು ಶಾಲೆಗೆ ಪ್ರಥಮ ಸ್ಥಾನ,ಕು. ಪ್ರಜ್ವಲ್ ಬಸವರಾಜ್ ಕಮ್ಮಾರ್ ಪ್ರತಿಶತ 74 ರಷ್ಟು ಅಂಕಗಳನ್ನು ಪಡೆದು ಶಾಲೆಗೆ ದ್ವಿತೀಯ ಸ್ಥಾನ ಪಡೆದಿರುತ್ತಾರೆ. ವಿದ್ಯಾರ್ಥಿಗಳ ಸಾಧನೆಗೆ ಮತ್ತು ಮಾರ್ಗದರ್ಶನ ಮಾಡಿದ ಶಿಕ್ಷಕರಿಗೆಸಂಸ್ಥೆಯ ಅಧ್ಯಕ್ಷರಾದ ಶೇಖರಗೌಡ್ರು ಉಳ್ಳಾಗಡ್ಡಿ ಹಾಗೂ ಕಾರ್ಯದರ್ಶಿಯಾದ ಶರಣಪ್ಪ ಗಾಂಜಿ ಹಾಗೂ ಮುಖ್ಯೋಪಾಧ್ಯಾಯರು ಸಂತಸ ವ್ಯಕ್ತಪಡಿಸಿದ್ದಾರೆ.

ಸಮ ಸಮಾಜ ನಿರ್ಮಾಣಕ್ಕೆ ಶ್ರಮಿಸಿದ್ದ ಬಸವಣ್ಣ: ಶಂಕ್ರಪ್ಪ

ಯಲಬುರ್ಗಾ: ಜಗಜ್ಯೋತಿ ಬಸವಣ್ಣರು 12ನೇ ಶತಮಾನದಲ್ಲಿ ಜಾತಿ ಬೇಧ, ಅಸಮಾನತೆ ಮತ್ತು ಅಂಧಶ್ರದ್ಧೆಗಳ ವಿರುದ್ಧ ಹೋರಾಡಿ ಸಮಾನತೆಯ ಸಮಾಜ ನಿರ್ಮಾಣಕ್ಕೆ ಹಗಲಿರುಳು ಶ್ರಮಿಸಿದ ಬಸವಣ್ಣನವರು ಮಹಾನ್ ನಾಯಕರಾಗಿದ್ದಾರೆ ಎಂದು ನಿವೃತ್ತ ಡಿಡಿಪಿಐ ಶಂಕ್ರಪ್ಪ ಗಾಂಜಿ ಹೇಳಿದರು.

ಪಟ್ಟಣದ ಶ್ರೀಮೊಗ್ಗಿಬಸವೇಶ್ವರ ಜಾತ್ರಾ ಮಹೋತ್ಸವ ಪ್ರಯುಕ್ತ ಬುಧವಾರ ರಾತ್ರಿ ನಡೆದ ಸಮಾನತೆಹರಿಕಾರ ಬಸವಣ್ಣನವರ ವಿಚಾರಸಂಕೀರ್ಣ ಹಾಗೂ ಬೆಂಗಳೂರಿನ ಡಾ.ರಾಜ್ ಮೆಲೋಡಿಸ್‌ನ ಜ್ಯೂನಿಯರ ರಾಜಕುಮಾರ (ಅಜಿತಕುಮಾರ) ಅವರಿಂದ ರಸಮಂಜರಿ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಮಾತನಾಡಿದ ಅವರು ಸಮಾಜ ಸುಧಾರಕ ಬಸವಣ್ಣವರ ಆದರ್ಶಗಳು ಇಂದಿಗೂ ಪ್ರಸ್ತುತವಾಗಿವೆ ಎಂದರು.

ಜಿಲ್ಲಾ ಆರ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಶೇಖರಗೌಡ ಉಳ್ಳಾಗಡ್ಡಿ, ನ್ಯಾಯವಾದಿ ಬಿ.ಎಂ. ಶಿರೂರ ಹಾಗೂ ಅಪರ ಸರ್ಕಾರಿ ವಕೀಲ ಮಲ್ಲನಗೌಡ ಪಾಟೀಲ ಮಾತನಾಡಿ, ಕಾಯಕವೇ ಕೈಲಾಸ, ನುಡಿದರೆ ಮುತ್ತಿನ ಹಾರದಂತಿರಬೇಕು ಎಂಬಂತಹ ಆಳವಾದ ವಿಚಾರಗಳು ಸಮಾಜಕ್ಕೆ ದಾರಿದೀಪವಾಗಿವೆ ಹೀಗಾಗಿ ಪ್ರತಿಯೊಬ್ಬರು ಬಸವಣ್ಣನವರ ತತ್ವಗಳನ್ನು ಪಾಲಿಸಿದರೆ ಸಾರ್ಥಕ ಬದುಕನ್ನು ಕಟ್ಟಿಕೊಳ್ಳಬಹುದು ಎಂದು ಹೇಳಿದರು.



ಜ್ಯೂನಿಯರ ರಾಜಕುಮಾರ (ಅಜಿತಕುಮಾರ) ಅವರು ಡಾ.ರಾಜಕುಮಾರ ಅವರ ಅಭಿನಯ ಮಾಡುವ ಮೂಲಕ ಅನೇಕ ಸುಮಧುರ ಹಾಡುಗಳನ್ನು ಹಾಡುತ್ತಾ ನೆರೆದ ಅಪಾರ ಜನರನ್ನು ಆಕರ್ಷಿಸಿದರು. ಪ್ರೇಕ್ಷಕರು ಶಿಳ್ಳೆ,ಕೇಕೆ ಹಾಕಿ ಕುಣಿದು ಕುಪ್ಪಳಿಸಿದರು. ಜ್ಯೂನಿಯರ್ ಶಿವರಾಜಕುಮರ, ಜೂನಿಯರ್ ಪುನೀತ ರಾಜಕುಮಾರ, ಜ್ಯೂನಿಯರ್ ಎಸ್.ಪಿ.ಬಾಲಸುಬ್ರಣ್ಯಯಂ ಹೀಗೆ ಅನೇಕ ಕಲಾವಿದರು ರಸಮಂಜರಿ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಅತಿಥಿಗಳಾಗಿ ಜಾತ್ರಾ ಸಮಿತಿ ಅಧ್ಯಕ್ಷ ಮಂಜುನಾಥ ಅಧಿಕಾರಿ, ಡಾ.ಶಿವನಗೌಡ ದಾನರಡ್ಡಿ, ಸುಧೀರ ಕೊರ್ಲಹಳ್ಳಿ, ಮಲ್ಲೇಶಗೌಡ ಮಾಲಿಪಾಟೀಲ, ಹಂಪಯ್ಯಸ್ವಾಮಿ ಹಿರೇಮಠ,ಉಮೇಶ ಓಜನಹಳ್ಳಿ, ಶರಣಪ್ಪ ಗಾಂಜಿ, ರೇವಣೆಪ್ಪ ಹಿರೇಕುರಬರ, ಮಲ್ಲು ಜಕ್ಕಲಿ, ಹನುಮಂತ ಭಜೇಂತ್ರಿ, ಅಶೋಕ ಮಾಲಿಪಾಟೀಲ, ಸುರೇಶಗೌಡ ಶಿವನಗೌಡ್ರ, ಶರಣಪ್ಪ ಅರಕೇರಿ, ಶಿಕ್ಷಕ ಬಸವರಾಜ ಕೊಂಡಗುರಿ ಮತ್ತಿತರರಿದ್ದರು.

ಹೂಲಗೇರಿಯಲ್ಲಿ ಪುಸ್ತಕ ಜೋಳಿಗೆ ಕಾರ್ಯಕ್ರಮಕ್ಕೆ ಚಾಲನೆ

ಹನುಮಸಾಗರ: ಸಮೀಪದ ಹೂಲಗೇರಿ ಗ್ರಾಮದಲ್ಲಿ ಕಲಿಕೆ ಟಾಟಾ ಟ್ರಸ್ಟ್, ಗ್ರಾ.ಪಂ. ಗ್ರಂಥಾಲಯ ಹಾಗೂ ಶಾಲಾ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಪುಸ್ತಕ ಜೋಳಿಗೆ ಕಾರ್ಯಕ್ರಮವನ್ನು ಹೂಲಗೇರಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಆನಂದ ಯಲಿಗಾರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಪುಸ್ತಕ ಜೋಳಿಗೆ ವಿಶಿಷ್ಠ ಕಾರ್ಯಕ್ರಮವು ಮಕ್ಕಳಲ್ಲಿ ಓದುವ ಹವ್ಯಾಸವನ್ನು ಬೆಳೆಸಲು ಹಾಗೂ ಸಮುದಾಯದ ಸಹಭಾಗಿತ್ವವನ್ನು ಹೆಚ್ಚಿಸಲು ಮನೆಮನೆಗೆ ಭೇಟಿ ನೀಡಿ ಸಮುದಾಯದವರಿಂದ ಪುಸ್ತಕಗಳನ್ನು ಸಂಗ್ರಹಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ ಎಂದರು.

ಗ್ರಾಮ ಪಂಚಾಯಿತಿ ಗ್ರಂಥಾಲಯ ಮೇಲ್ವಿಚಾರಕ ಚಂದಪ್ಪ ಗುಡಿಮನಿ, ಕಲಿಕೆ ಟಾಟಾ ಟ್ರಸ್ಟ್ ಸಂಯೋಜಕ ಬಸವರಾಜ ಹೊಸಮನಿ, ಟ್ರಸ್ಟ್ ಪ್ರೇರಕಿ ಚಾಂದ್‌ಬಿ ಗುಡಿಮನಿ ಮತ್ತಿತರರು ಜೋಳಿಗೆ ಹಿಡಿದು, ಮಕ್ಕಳೊಂದಿಗೆ ಗ್ರಾಮದ ಬೀದಿಗಳಲ್ಲಿ, ಮನೆಮನೆಗಳಿಗೆ ಭೇಟಿ ನೀಡಿ ಸಮುದಾಯದವರೊಂದಿಗೆ ಪುಸ್ತಕಗಳನ್ನು ಪಡೆದುಕೊಂಡು ಪುಸ್ತಕ ಜೋಳಿಗೆಗೆ ಹಾಕಿಸಿದರು.



ಕವಿಯಿತ್ರಿ ಅನುರಾಧಾ ಸನ್ನಿ 50 ಪುಸ್ತಕಗಳನ್ನು ಜೋಳಿಗೆಗೆ ಹಾಕುವ ಮೂಲಕ ಪ್ರೋತ್ಸಾಹಿಸಿದರು.

ಗ್ರಂಥಾಲಯ ಮೇಲ್ವಿಚಾರಕ ಚಂದಪ್ಪ ಗುಡಿಮನಿ ಮಾತನಾಡಿ, ಗ್ರಾಮದ ಪಾಲಕರು, ಯುವಕರು, ಹಿರಿಯರು ಈ ಪುಸ್ತಕ ಜೋಳಿಗೆ ಕಾರ್ಯಕ್ರಮಕ್ಕೆ ಉತ್ತಮ ಬೆಂಬಲ ನೀಡಿ ತಮ್ಮ ಮನೆಯಲ್ಲಿರುವ ಉಪಯುಕ್ತ ಪುಸ್ತಕಗಳನ್ನು ಜೋಳಿಗೆಗೆ ನೀಡಿದರು. ಇದರಿಂದ ಶಾಲೆ, ಅರಿವು ಕೇಂದ್ರ ಮತ್ತು ಸಮುದಾಯದ ನಡುವೆ ಉತ್ತಮ ಸಂಬಂಧ ಬೆಳೆದಂತಾಯಿತು ಎಂದರು.

ಪಿಡಿಒ ಆನಂದ ಯಲಿಗಾರ, ಟಾಟಾ ಟ್ರಸ್ಟ್‌ನ ಬಸವರಾಜ ಹೊಸಮನಿ,ಹಿರಿಯ ಶಿಕ್ಷಕಿ ಮಹಾದೇವಮ್ಮ ಮೆಣಸಿನಕಾಯಿ, ಪೊಲೀಸ್ ಪೇದೆ ರಾಚೋಟೆಪ್ಪ ಕಮ್ಮಾರ, ಕವಿಯಿತ್ರಿ ಅನುರಾಧಾ ಸನ್ನಿ, ನಿವೃತ್ತ ಶಿಕ್ಷಕ, ಸಾಹಿತಿ ವೀರೇಶ ಜಾಲಾಪೂರ, ಈರಪ್ಪ ಜಾಲಾಪೂರ ಇದ್ದರು.

ಡಾ.ರಾಜ್‌ಕುಮಾರ ಕನ್ನಡದ ಅಸ್ಮಿತೆಯ ಪ್ರತೀಕ

ಕಲಬುರಗಿ: ಕನ್ನಡ ಚಿತ್ರರಂಗದ ಧ್ರುವತಾರೆ ಡಾ.ರಾಜ್‌ಕುಮಾರ್ ಕೇವಲ ನಟರಾಗಿರದೆ,ಕನ್ನಡ ನೆಲದ ಸಂಸ್ಕೃತಿ ಮತ್ತು ಅಸ್ಮಿತೆಯ ಪ್ರತೀಕವಾಗಿದ್ದಾರೆ ಎಂದು ಶಾಸಕ ಅಲ್ಲಮಪ್ರಭು ಪಾಟೀಲ್ ಹೇಳಿದರು.

ಶುಕ್ರವಾರ ನಗರದ ಕನ್ನಡ ಭವನ ಆವರಣದ ಸುವರ್ಣ ಸಭಾ ಭವನದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಜಿಲ್ಲಾಡಳಿತ, ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಡಾ.ರಾಜ್ ಕುಮಾರ್ ಅಭಿಮಾನಿಗಳ ಸಂಘದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ ಡಾ. ರಾಜಕುಮಾರ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು ಗಾಜನೂರಿನ ಸಣ್ಣ ಹಳ್ಳಿಯಿಂದ ಬಂದು ಜಗದಗಲಕ್ಕೆ ಬೆಳಗಿದ ಅಣ್ಣಾವ್ರ ಸಾಧನೆ ಇಂದಿನ ಪೀಳಿಗೆಗೆ ಮಾದರಿ ಎಂದರು.

ಭಾಷಾ ರಕ್ಷಣೆಗಾಗಿ ನಡೆದ ಗೋಕಾಕ್ ಚಳವಳಿಯ ಮುಂಚೂಣಿ ನಾಯಕರಾಗಿ ಕನ್ನಡದ ಕಿಚ್ಚನ್ನು ಮನೆಮನಗಳಲ್ಲಿ ಹಚ್ಚಿದವರು. ರಾಜ್



ಅಜರಾಮರ ಹಾಗೂ 'ಬಂಗಾರದ ಮನುಷ್ಯ' ನಂತಹ ಚಿತ್ರಗಳ ಮೂಲಕ ಜನಮನ ಗೆದ್ದ ಅವರು ನಾಡು ನುಡಿಗೆ ನೀಡಿದ ಕೊಡುಗೆ ಅನನ್ಯ. ವೀರಪ್ಪನ್ ಅಪಹರಣದಂತಹ ಕಠಿಣ ಕಾಲದಲ್ಲೂ ಅವರು ತೋರಿದ ಧೈರ್ಯ ಅಪ್ರತಿಮ ಎಂದು ತಿಳಿಸಿದರು.

ಡಿಸಿ ಬಿ.ಫೌಜಿಯಾ ತರುನ್ನುಮ್ ಮಾತನಾಡಿ, ಕನ್ನಡ ಚಿತ್ರರಂಗದ ಧ್ರುವತಾರೆ ಡಾ.ರಾಜಕುಮಾರ ಕೇವಲ ನಟರಲ್ಲ, ಅವರು ಕರ್ನಾಟಕದ ಅಸ್ಮಿತೆ. ರಾಜಕುಮಾರ ಅವರ ಭಾಷಾ ಪ್ರೇಮ, ಗೋಕಾಕ್ ಚಳವಳಿಯ ನೇತೃತ್ವ ಹಾಗೂ ಅವರು ಸಮಾಜಕ್ಕೆ ನೀಡಿದ ಕೊಡುಗೆ ಅಪಾರ. ಚಾಮರಾಜನಗರದಲ್ಲಿ ನಾನು ಸೇವೆ ಸಲ್ಲಿಸುವಾಗ ಅವರ ಕುಟುಂಬ ಮಾಡುತ್ತಿದ್ದ ಗುಪ್ತ ದಾನ ಹಾಗೂ ಶಾಲಾ-ಕಾಲೇಜುಗಳಿಗೆ ನೀಡುತ್ತಿದ್ದ ನೆರವನ್ನು ಹತ್ತಿರದಿಂದ ಕಂಡಿದ್ದೇನೆ. ವೀರಪ್ಪನ್ ಅಪಹರಣ ಹಾಗೂ ಅವರ ನಿಧನದ ಸಂದರ್ಭದಲ್ಲಿ ಜನ ತೋರಿದ ಅಭಿಮಾನ ಅವರ ವ್ಯಕ್ತಿತ್ವಕ್ಕೆ ಸಾಕ್ಷಿ ಎಂದರು. ಗುಲಬರ್ಗಾ ಜಿಲ್ಲಾ ಡಾ.ರಾಜಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ರಾಘವೇಂದ್ರ ಕುಲಕರ್ಣಿ ಅವರು ಮಾತನಾಡಿದರು. ಸುಖಿ ಮೇಲೋಡಿಸ್ ತಂಡದ ಗಾಯಕರಾದ ಆನಂದ ಪಾಟೀಲ, ಕವಿತಾ ಹಿರೇಮಠ, ಅನ್ನಪೂರ್ಣ ಚವ್ಹಾಣ, ಸಾಗರ ಡಿ.ವಾಗ್ಮರೆ, ರವೀಂದ್ರ ಕುಲಕರ್ಣಿ, ಸಿದ್ರಾಮ ಹಂಚಿನಾಳ ಅವರು ರಾ.ರಾಜ್ ಕುಮಾರ್ ಅಭಿನಯದ ವಿವಿಧ ಚಲನಚಿತ್ರ ಗೀತೆಗಳ ಹಾಡುವ ಮೂಲಕ ಸಭಿಕರನ್ನು ರಂಜಿಸಿದರು.

ಸಿಇಒ ಭಂವರ್ ಸಿಂಗ್ ಮೀನಾ, ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಎಡಿಸಿ ರಾಯಪ್ಪ ಹುಣಸಗಿ, ಕಸಾಪ ಅಧ್ಯಕ್ಷ ವಿಜಯಕುಮಾರ ತೇಗಲತಿಪ್ಪಿ, ಹಿರಿಯ ಸಾಹಿತಿ ಭೀಮಣ್ಣ ಬೋನಾಳ, ಪತ್ರಕರ್ತ ಭವಾನಿ ಸಿಂಗ್ ಸೇರಿದಂತೆ ಕಸಾಪ ಪದಾಧಿಕಾರಿಗಳು, ಸಾಹಿತಿಗಳು, ಡಾ.ರಾಜ್ ಅಭಿಮಾನಿಗಳ ಸಂಘದ ಪದಾಧಿಕಾರಿಗಳು, ಸಾರ್ವಜನಿಕರು ಭಾಗಿಯಾಗಿದ್ದರು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಪನಿರ್ದೇಶಕ ಜಡಿಯಪ್ಪ ಗೆದ್ಲಗಟ್ಟಿ ಸ್ವಾಗತಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಶಿವರಾಜ ಅಂಡಗಿ ನಿರೂಪಿಸಿ ವಂದಿಸಿದರು.

ಕಿರುಸುದ್ದಿ

ಮಹಿಳಾ ಬಿಲ್ ಸೋಲಿಗೆ ಕಾಂಗ್ರೆಸ್ ಕಾರಣ: ಆರೋಪ



ಯಾದಗಿರಿ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ತರಲು ಉದ್ದೇಶಿಸಿದ್ದ ಮಹಿಳಾ ಮೀಸಲಾತಿಗೆ ಸೋಲಾಗುವಂತೆ ನೋಡಿಕೊಂಡ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳ ನಡೆ ಖಂಡನಾರ್ಹ ಎಂದು ಜೆಡಿಎಸ್ ಗುರಮಠಕಲ್ ಕ್ಷೇತ್ರದ ಮಹಾ ಪ್ರಧಾನ ಕಾರ್ಯದರ್ಶಿ ಡಿ.ತಾಯಪ್ಪ ಬದ್ದೆಪಲ್ಲಿ ಆರೋಪಿಸಿದ್ದಾರೆ. ಈ ಕುರಿತು ಹೇಳಿಕೆ ನೀಡಿರುವ ಅವರು, ದೇಶದ ಮಹಿಳೆಯರಿಗೆ ರಾಜಕೀಯವಾಗಿ ಮೀಸಲು ಒದಗಿಸಲು ಜಾರಿ ಮಾಡಲು ಉದ್ದೇಶದಿಂದ ಮಂಡಿಸಲಾಗಿದ್ದ ಬಿಲ್ ಉದ್ದೇಶಪೂರ್ವಕವಾಗಿ ಸೋಲಿಸಿದ್ದು ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳು. ಇದರಿಂದಾಗಿ ಮಹಿಳೆಯರ ಬಗ್ಗೆ ಅವರಿಗಿರುವ ನಿಜಬಣ್ಣ ಈಗ ಬಯಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮಾಜಿ ಪ್ರಧಾನಿ ದೇವೇಗೌಡರು ಸಹ ಇದನ್ನು ತರಲು ಮುಂದಾಗಿದ್ದಾಗ ಆಗಲು ಇದೇ ಕುತಂತ್ರ ಬುದ್ಧಿ ಉಪಯೋಗಿಸಿದ್ದರು. ಅವರಿಗೆ ಮಹಿಳೆಯರು ರಾಜಕೀಯವಾಗಿ ಮುಂದೇ ಬರುವ ಉದ್ದೇಶವಿಲ್ಲ ಎಂದು ಆನಪುರ ಜರಿದರು ದೇಶದಲ್ಲಿ ಗಂಡು ಮತ್ತು ಹೆಣ್ಣು ಸಮ ಸಂಖ್ಯೆಯಲ್ಲಿ ಇದ್ದೇವೆ. ಆದರೇ ರಾಜಕೀಯವಾಗಿ ಶೇ.33ರಷ್ಟು ಮೀಸಲು ಎಂದೋ ಸಿಗಬೇಕಿತ್ತು. ಆದರೆ ಕಾಂಗ್ರೆಸ್ ಪಕ್ಷದ ಕೆಟ್ಟ ಮನಸ್ಥಿತಿಯಿಂದಾಗಿ ಮತ್ತು ಅದಕ್ಕೆ ಬೆಂಬಲಿಸುವ ಕೆಲವು ಪಕ್ಷಗಳಿಂದ ಇದಕ್ಕೆ ಹಿನ್ನಡೆಯಾಗುತ್ತಿದೆ. ಕಾರಣ ಮುಂದಿನ ದಿನಗಳಲ್ಲಿ ಇದಕ್ಕೇ ಜನರು ತಕ್ಕಪಾಠ ಕಲಿಸಲಿದ್ದಾರೆ ಎಂದು ಅವರು ಹೇಳಿಕೆಯಲ್ಲಿ ಎಚ್ಚರಿಕೆ ನೀಡಿದ್ದಾರೆ.

ಸಿಲಿಂಡರ್ ಸ್ಫೋಟ: ಹೋಟೆಲ್ ಭಸ್ಮ



ಸಿರುಗುಪ್ಪ: ಆಕಸ್ಮಿಕ ಬೆಂಕಿ ತಗುಲಿ ಸಿಲಿಂಡರ್ ಸ್ಫೋಟಗೊಂಡು ಹೋಟೆಲ್ ವೊಂದು ಸುಟ್ಟು ಕರಕಲಾದ ಘಟನೆ ಬುಧವಾರ ಮಧ್ಯರಾತ್ರಿ ತಾಲೂಕಿನ ತೆಕ್ಕಲಕೋಟೆ ಪಟ್ಟಣದ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ನಡೆದಿದೆ. ಈರಣ್ಣ ಎನ್ನುವವರಿಗೆ ಸೇರಿದ ತಿರುಮಲ ಹೋಟೆಲ್ ಎಂದು ಗುರುತಿಸಲಾಗಿದೆ. ಹೋಟೆಲ್ ಹಿಂದುಗಡೆ ಈರಣ್ಣ ಅವರ ಕುಟುಂಬದ ಸದಸ್ಯರು ರಾತ್ರಿ ಮಲಗಿದ್ದರು. ಈ ಘಟನೆಯಲ್ಲಿ ಒಬ್ಬರು ಗಾಯಗೊಂಡಿದ್ದು, ಇನ್ನೊಬ್ಬ ಬಾಲಕ ಶ್ರೀನಿವಾಸ (10) ಎನ್ನುವವರಿಗೆ ತೀವ್ರ ಸುಟ್ಟ ಗಾಯಗಳಾಗಿವೆ. ಕೂಡಲೇ ಬಾಲಕನನ್ನು ಹೆಚ್ಚಿನ ಚಿಕಿತ್ಸೆಗಾಗಿ ಬಳ್ಳಾರಿ ಬಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಹೋಟೆಲ್ ಪಕ್ಕದಲ್ಲಿದ್ದ ಹುಸೇನ್ ಎನ್ನುವರ ಪಂಚರ್ ಅಂಗಡಿಗೂ ಬೆಂಕಿ ಆವರಿಸಿದ್ದು, ವಾಹನಗಳ ಟೈರ್‌ಗಳು ಸೇರಿ ಇತರೆ ಪರಿಕರಗಳು ಸುಟ್ಟು ಕರಕಲಾಗಿವೆ. ಸ್ಥಳಕ್ಕೆ ತಹಸಿಲ್ದಾರ್ ಗೌಸಿಯ ಬೇಗಂ ಭೇಟಿ ನೀಡಿ ಪರಿಶೀಲನೆ ನಡೆಸಿ ಬೆಂಕಿ ಅವಘಡದ ಬಗ್ಗೆ ಕುಟುಂಬದ ಸದಸ್ಯರಿಂದ ಮಾಹಿತಿಯನ್ನು ಪಡೆದುಕೊಂಡರು. ಕಂದಾಯ ಇಲಾಖೆ ಅಧಿಕಾರಿಗಳು ಇದ್ದರು. ಘಟನೆಯಲ್ಲಿ ಗಾಯಗೊಂಡ ಬಾಲಕನನ್ನು ಬಿಜೆಪಿ ಯುವ ಘಟಕದ ಜಿಲ್ಲಾಧ್ಯಕ್ಷ ಎಂ.ಎಸ್.ಸಿದ್ದಪ್ಪ ಅವರು ಕೂಡಲೇ ಬಳ್ಳಾರಿಯ ಬಿಮ್ಸ್ ಆಸ್ಪತ್ರೆಗೆ ದಾಖಲಿಸಿ ಮಾನವೀಯತೆ ಮೆರೆದರು.

ನಿಧನ ಸುದ್ದಿ

ಮೆಹರೂನ್‌ಬಿ ನಿಧನ



ಹಗರಿಬೊಮ್ಮನಹಳ್ಳಿ: 10ಸಾವಿರಕ್ಕೂ ಹೆಚ್ಚು ಗರ್ಭಿಣಿಯರಿಗೆ ಯಾವುದೇ ಫಲಾಪೇಕ್ಷೆ ಇಲ್ಲದೆ ಹೆರಿಗೆ ಮಾಡಿಸುವ ಮೂಲಕ ಎಲ್ಲರ ಪಾಲಿನ ಅಮ್ಮ ಎಂದೇ ಎನಿಸಿದ ಆರೋಗ್ಯ ಇಲಾಖೆಯ ಹಿರಿಯ ಜೀವ ಮೆಹರೂನ್‌ಬಿ(88) ಶುಕ್ರವಾರ ನಿಧನರಾಗಿದ್ದಾರೆ. 30 ವರ್ಷಗಳಿಂದಲೂ ಆರೋಗ್ಯ ಇಲಾಖೆಯಲ್ಲಿ ಅವಿರತವಾಗಿ ಸೇವೆ ಸಲ್ಲಿಸಿದ ಮೆಹರೂನ್‌ಬಿ ಸರಿಯಾಗಿ ಜುಮ್ಮ ದಿನವೇ ಕೊನೆಯ ಪ್ರಾರ್ಥನೆ ಸಲ್ಲಿಸಿ 2 ಗಂಟೆಗೆ ವಿಧಿವಶವಾಗಿದ್ದಾರೆ. ಪತ್ರಕರ್ತ ಅಬ್ದುಲ್ ಗಫಾರ್ ಖಾನ್ ತಮ್ಮ ತಾಯಿಯನ್ನು ಉಳಿಸಿಕೊಳ್ಳಲು ಕಳೆದ ಕೆಲ ತಿಂಗಳಿಂದ ನಡೆಸಿದ ಯತ್ನ ಫಲಕಾರಿಯಾಗದೆ ಇಬ್ಬರು ಮಕ್ಕಳು ಮತ್ತು ಮೊಮ್ಮಕ್ಕಳನ್ನು ತೊರೆದಿದ್ದಾರೆ. ಮಾಜಿ ಉಪ ಮುಖ್ಯಮಂತ್ರಿ ದಿ.ಎಂ.ಪಿ.ಪ್ರಕಾಶ್ ಪತ್ನಿ ರುದ್ರಾಂಭ ಒಳಗೊಂಡಂತೆ ಹೂವಿನಹಡಗಲಿ, ಹಗರಿಬೊಮ್ಮನಹಳ್ಳಿ, ಬಳ್ಳಾರಿ ಸೇರಿ ನಾನಾ ಕಡೆಗಳಲ್ಲಿ ಒಟ್ಟು 10 ಸಾವಿರಕ್ಕೂ ಹೆಚ್ಚು ಹೆರಿಗೆ ಮಾಡಿಸಿದ ದಾಖಲೆಯ ಹಿರಿಮೆ ಮೆಹರೂನ್ ಬಿ ಅಮ್ಮನವರ ಪಾಲಿಗಿದೆ.



ಗಾದಿಗನೂರು: ಹೊಸಪೇಟೆ ತಾಲೂಕು ಗಾದಿಗನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (ಮನರೇಗಾ) ಯೋಜನೆಯಲ್ಲಿ ಅಕ್ರಮದ ಆರೋಪ ಕಂಡು ಬಂದಿದೆ ಎಂದು ಊರಿನ ಯುವ ಸಮಿತಿ ಗಾದಿಗನೂರು ಸಂಘದವರು ವಿಜಯನಗರ ಜಿಲ್ಲಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗೆ ದೂರು ನೀಡಿದ್ದಾರೆ.

ಸಂಘದ ಅಭಿವೃದ್ಧಿಗೆ ಶ್ರಮಿಸಿ: ದೀಪಕ್ ಕೆ.

ಹೂವಿನಹಡಗಲಿ: ತಾಲೂಕಿನ ಅಡವಿಮಲ್ಲನಕೇರಿ ಗ್ರಾಮದಲ್ಲಿ ಪಶು ಆಸ್ಪತ್ರೆ ಮುಂಭಾಗದಲ್ಲಿ ನವಸಿರಿ ಸಹಕಾರ ಸಂಘದ ಉದ್ಘಾಟನೆ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ವ್ಯವಸ್ಥಾಪಕ ಸಿಎಸ್‌ಆರ್ ದೀಪಕ್ ಕೆ.ಉದ್ಘಾಟಿಸಿದರು.

ನಂತರ ಮಾತನಾಡಿ, ಸಂಘದ ಅಭಿವೃದ್ಧಿಗೆ ಶ್ರಮಿಸಬೇಕು ಎಲ್ಲ ನಿರ್ದೇಶಕರು ಒಗ್ಗಟಿನಿಂದ ತಮ್ಮ ಕಾರ್ಯವನ್ನು ನಿರ್ವಹಿಸಬೇಕು. ಗ್ರಾಮದಲ್ಲಿರುವ ನಿರ್ಗತಿಕರಿಗೆ, ಬಡವರಿಗೆ ಹೆಚ್ಚಿನ ಮಟ್ಟದಲ್ಲಿ ತಮ್ಮ ಸಮಯವನ್ನು ನೀಡಬೇಕು ಎಂದರು.

ಅಭಿನವ ಚನ್ನಬಸವ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿ, ಗ್ರಾಮದಲ್ಲಿ ನೂತನವಾಗಿ ಕಟ್ಟಿರುವ ನಿಮ್ಮ ಸಂಘದ ಯಶಸ್ಸು ನಿರಂತರವಾಗಿ ಸಾಗಲಿ ಪ್ರತಿಯೊಬ್ಬರಿಗೂ ಒಳ್ಳೆಯದನ್ನು ಬಯಸಿ ಒಳ್ಳೆಯದನ್ನು ಮಾಡಿರಿ ಎಂದು ಆಶೀರ್ವಚನ ನೀಡಿದರು.

ನವಸಿರಿ ಸಹಕಾರಿ ಸಂಘದ ಅಧ್ಯಕ್ಷೆ ಎಸ್ ಸುನಿತ, ಸಿಇಓ ನೀಡ್ಸ್ ಸಂಸ್ಥೆ ಎಚ್‌ಎಫ್ ಅಕ್ಕಿ ರಾಣೆಬೆನ್ನೂರು, ಸಿಎಸ್‌ಆರ್ ವ್ಯವಸ್ಥಾಪಕ ಅಜಿತ್, ವಿಎಸ್‌ಎಸ್‌ಎನ್ ಸದಸ್ಯ ಯುಪಿ ಮಂಜುನಾಥ, ಹಿರಿಯ ಮುಖಂಡರಾದ ಎಚ್. ಷಣ್ಮುಖಪ್ಪ, ಎಚ್.ದೇವೇಂದ್ರಪ್ಪ, ನವ ಸಿರಿ ಸಹಕಾರ ಸಂಘದ ಸಿಇಓ ಎಂ.ಕರಿಬಸಪ್ಪ, ಸಿಬ್ಬಂದಿ, ಸುಜಲಾನ್ ಫೌಂಡೇಶನ್ ಪುಣೆ, ನವಸಿರಿ ಸಹಕಾರ ಸಂಘದ ಸರ್ವ ಪದಾಧಿಕಾರಿಗಳು, ಮಹಿಳೆಯರು, ಯುವಕರು, ಗ್ರಾಮದ ಸರ್ವ ಸದಸ್ಯರು ಉಪಸ್ಥಿತರಿದ್ದರು. ಎಚ್.ಗಂಗಪ್ಪ ನಿರ್ವಹಿಸಿದರು.



ಹೂವಿನಹಡಗಲಿ: ತಾಲೂಕಿನ ಅಡವಿಮಲ್ಲನಕೇರಿ ಗ್ರಾಮದಲ್ಲಿ ಪಶು ಆಸ್ಪತ್ರೆ ಮುಂಭಾಗದಲ್ಲಿ ನವಸಿರಿ ಸಹಕಾರ ಸಂಘದ ಉದ್ಘಾಟನೆ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ವ್ಯವಸ್ಥಾಪಕ ಸಿಎಸ್‌ಆರ್ ದೀಪಕ್ ಕೆ.ಉದ್ಘಾಟಿಸಿದರು.

ಡಾ.ರಾಜ್‌ಕುಮಾರ್ ಜನ್ಮದಿನಾಚರಣೆ | ಜಿಲ್ಲಾಡಳಿತದಿಂದ ಗೌರವ ನಮನ

ಡಾ.ರಾಜ್‌ಕುಮಾರ್ ಕೊಡುಗೆ ಅಪಾರ

ಬಳ್ಳಾರಿ: ಕನ್ನಡ ಚಿತ್ರರಂಗದ ಧ್ರುವತಾರೆ, ಕರ್ನಾಟಕ ರತ್ನ ಡಾ.ರಾಜ್‌ಕುಮಾರ್ ಅವರ 97ನೇ ಜನ್ಮದಿನದ ನಿಮಿತ್ತ ಶುಕ್ರವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಶ್ರಯದಲ್ಲಿ ನಗರದ ಡಾ.ರಾಜ್ ಕುಮಾರ್ ಉದ್ಯಾನವನದಲ್ಲಿನ ಡಾ.ರಾಜ್ ಕುಮಾರ್ ಅವರ ಪುತ್ಥಳಿಗೆ ಮಾಲಾರ್ಪಣೆ ಹಾಗೂ ಪುಷ್ಪನಮನ ಸಲ್ಲಿಸುವ ಮೂಲಕ ಜಿಲ್ಲಾಡಳಿತ ಮತ್ತು ವಿವಿಧ ಜನಪ್ರತಿನಿಧಿಗಳು, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ನಮನ ಸಮರ್ಪಿಸಿದರು.

ಈ ವೇಳೆ ಡಾ.ಬಾಬು ಜಗಜೀವನ್‌ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಮುಂಡರಗಿ ನಾಗರಾಜ ಅವರು ಮಾತನಾಡಿ, ಡಾ.ರಾಜ್‌ಕುಮಾರ್ ಅವರು ಅಪ್ಪಟ ಕನ್ನಡಪ್ರೇಮಿಯಾಗಿದ್ದರು. ಅವರ ಸಾಧನೆ ಹಾಗೂ ಕನ್ನಡ ನಾಡು-ನುಡಿಗೆ ಅವರು ನೀಡಿದ ಕೊಡುಗೆ ಅಪಾರ. ಕರ್ನಾಟಕ ಏಕೀಕರಣ ಮತ್ತು ಕನ್ನಡ ಭಾಷೆಯ ಉಳಿವಿಗಾಗಿ ನಡೆದ ಗೋಕಾಕ್ ಚಳುವಳಿಯಲ್ಲಿ ಡಾ.ರಾಜ್ ಅವರ ಪಾತ್ರ ಅವಿಸ್ಮರಣೀಯ. ಅವರ ನಾಯಕತ್ವದಲ್ಲಿ ನಡೆದ ಈ ಹೋರಾಟ ಕನ್ನಡ ಭಾಷೆಯ ಇತಿಹಾಸದಲ್ಲಿ ಮೈಲಿಗಲ್ಲಾಗಿದೆ ಎಂದು ಹೇಳಿದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ ಚಿದಾನಂದಪ್ಪ ಮಾತನಾಡಿ, ಕನ್ನಡ ಚಿತ್ರರಂಗದ ಧ್ರುವತಾರೆ ಡಾ. ರಾಜಕುಮಾರ್ ಅವರು ಕೇವಲ ಒಬ್ಬ ನಟರಾಗಿರಲಿಲ್ಲ, ಅವರು ಇಡೀ ಕರ್ನಾಟಕದ ಮನೆಮನಬೆಳಗಿದ ಸಂಸ್ಕೃತಿಯ ಪ್ರತೀಕವಾಗಿದ್ದರು. ಅಣ್ಣಾವ್ರಿಗೂ ಬಳ್ಳಾರಿಗೂ ಅವಿನಾಭಾವ ಸಂಬಂಧ ಹೊಂದಿದ್ದರು ಎಂದು ಹೇಳಿದರು.

ಸಾಮಾನ್ಯವಾಗಿ ಯಾವುದೇ ರಂಗದಲ್ಲಿ ಯಶಸ್ಸು ಸಿಕ್ಕ ತಕ್ಷಣ ಜನರು ರಾಜಕೀಯಕ್ಕೆ ಬರಲು ಬಯಸುತ್ತಾರೆ. ಆದರೆ ಅಣ್ಣಾವ್ರು ತಮಗೆ ಮುಖ್ಯಮಂತ್ರಿಯಾಗುವ ಅತಿ ದೊಡ್ಡ ಅವಕಾಶಗಳಿದ್ದರೂ, ನಾನು ಇಡೀ ಕನ್ನಡ ನಾಡಿನ ಮಗನಾಗಿ ಇರಲು ಬಯಸುತ್ತೇನೆ ಎಂದು ರಾಜಕೀಯವನ್ನು ನಯವಾಗಿ ತಿರಸ್ಕರಿಸಿದ್ದರು ಎಂದು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಮಹಮ್ಮದ್ ಎನ್. ಝುಬೇರ್ ಅವರು ಮಾತನಾಡಿ, ಡಾ.ರಾಜ್ ಕುಮಾರ್ ಅವರು ಕೇವಲ ನಟರಲ್ಲ, ಅವರು ಕನ್ನಡ ಸಂಸ್ಕೃತಿಯ ರಾಯಭಾರಿ. ಅವರ 'ಬಂಗಾರದ ಮನುಷ್ಯ', 'ಗುರಿ' ನಂತಹ ಚಿತ್ರಗಳು ಇಂದಿಗೂ ಸಮಾಜಕ್ಕೆ ಮಾದರಿಯಾಗಿವೆ ಎಂದು ಸ್ಮರಿಸಿದರು.

ಡಾ. ರಾಜ್ ಹಾಡುಗಳ ಸಾಹಿತ್ಯದಲ್ಲಿರುವ ಜೀವನ ಮೌಲ್ಯಗಳು ಆಳವಾಗಿ ಬೇರೂರಿವೆ. 'ಆಡಿಸಿ ನೋಡು ಬೀಳಿಸಿ ನೋಡು...' ನಂತಹ ಹಾಡುಗಳು ಇಂದಿಗೂ ಜೀವನಕ್ಕೆ ಸ್ಫೂರ್ತಿಯಾಗಿವೆ. ಡಾ.ರಾಜ್‌ಕುಮಾರ್ ಅವರಿಗೆ ಅವರೇ ಸಾಟಿ. ಅವರ ಕೊಡುಗೆ ನಾಡು, ನುಡಿ ಮತ್ತು ಕಲೆಗೆ ಅನನ್ಯವಾದುದು. ಅವರ ಜನ್ಮದಿನವನ್ನು ಆಚರಿಸುವುದು ನಮಗೆಲ್ಲರಿಗೂ ಹೆಮ್ಮೆಯ ವಿಷಯ ಎಂದು ತಿಳಿಸಿದರು.

ಸಹಾಯಕ ಆಯುಕ್ತ ರಾಜೇಶ್ ಚ್.ಡಿ., ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವಾರ್ತಾ ಸಹಾಯಕ ವಿ.ಸಿ ಗುರುರಾಜ್, ಪ್ರದಸ ನವೀನ್ ಕುಮಾರ್ ಸೇರಿದಂತೆ ವಿವಿಧ ಕನ್ನಡ ಪರ ಸಂಘಟನೆಗಳ ಪದಾಧಿಕಾರಿಗಳು, ಡಾ.ರಾಜ್ ಕುಮಾರ್ ಅಭಿಮಾನಿಗಳು, ಇತರರಿದ್ದರು.



ಮಜ್ಜಿಗೆ ಮಾರಿ ಸ್ವಾವಲಂಬಿ ಬದುಕು ಕಟ್ಟಿಕೊಂಡ ಯುವಕ

ಅರವಿಂದ್ ಬಸಾಪುರ್



ಕೊಟ್ಟೂರು: ತಾಲೂಕಿನ ಹರಾಳು ಗ್ರಾಮದ ಶ್ಯಾನುಭೋಗರ ಚನ್ನಪ್ಪ ಎಂಬ ಯುವಕನೋರ್ವ ಸ್ವಾವಲಂಬಿ ಬದುಕನ್ನು ಕಟ್ಟಿಕೊಂಡು ತಾನು ಸಾಕುವ ಆಕಳಿಂದಲೇ ಬರುವ ಎಲ್ಲ ಹಾಲನ್ನೂ ಹೆಪ್ಪು ಹಾಕಿ, ಬೆಳಿಗ್ಗೆ ಎದ್ದ ಕೂಡಲೇ ದಿನನಿತ್ಯದ ಕೆಲಸಗಳನ್ನು ಮುಗಿಸಿ, ಮಸಾಲ ಮಜ್ಜಿಗೆ ಮಾಡಿಕೊಂಡು, ಉಳಿದ ಮೊಸರನ್ನು ಲಸ್ಸಿಯಾಗಿಸಿ, ಇಪ್ಪತ್ತು ಲೀಟರಿನ ನಾಲ್ಕು ಕ್ಯಾನ್‌ಗಳನ್ನು ತನ್ನ ಬೈಕ್‌ಗೆ ನೇತು ಹಾಕಿಕೊಂಡು, ಮಜ್ಜಿಗೆಮ್ಮೋ ಎಂದು ಕೂಗುತ್ತಾ ಹೊರಟು ಬಿಡುತ್ತಾನೆ. ಈಗಿನ ವಿಪರೀತ ಬಿಸಿಲಿಗೆ ಜನರು ಬೇಸತ್ತು ತಂಪಾದ, ಪಾನಿಯಗಳಿಗೆ ಮೊರೆ ಹೋಗಿ ಈತ ಬರುವ ದಾರಿಯನ್ನೇ ಕಾಯ್ದು ಕೂರುವಷ್ಟು ಗಮನ ಸೆಳೆದಿದ್ದಾನೆ. ಕೊಟ್ಟೂರಿನ ಕೃಷಿ ಮಾರುಕಟ್ಟೆ, ಸಂತೆ, ಬಜಾರು, ಬಸ್ ಸ್ಟಾಂಡ್, ಉಜ್ಜಿನಿ ರಸ್ತೆ, ಇವುಗಳೇ ಅತೀ ಹೆಚ್ಚು ವ್ಯಾಪಾರವಾಗುವ ಸ್ಥಳಗಳು. ಆಟೋಚಾಲಕರು, ಹಮಾಲರು, ಕೃಷಿಕರು, ಬೀದಿಬದಿ ವ್ಯಾಪಾರಿಗಳು ಹಾಗೂ ಕಾರ್ಮಿಕರು ಈತನ ಗ್ರಾಹಕರು. ಈತನ ಇನ್ನೊಂದು ವಿಶೇಷವೇನೆಂದರೆ ಗ್ರಾಹಕರು ಮಜ್ಜಿಗೆ, ಲಸ್ಸಿ ಕುಡಿಯುವ ಪ್ಲಾಸ್ಟಿಕ್ ಲೋಟವನ್ನು ಎಲ್ಲೆಂದರಲ್ಲಿ ಬಿಸಾಡದೇ, ಅಲ್ಲಿ ಬೈಕ್‌ಗೆ ನೇತು ಹಾಕಿದ ಖಾಲಿ ಚೀಲದಲ್ಲಿ ತುಂಬಿಡುತ್ತಾನೆ. ಸಂಜೆ ಹೋಗುವಾಗ ರಸ್ತೆ ಬದಿಯಲ್ಲಿ ಸುಟ್ಟು ಹಾಕಿ, ಮನೆಗೆ ಹಿಂದಿರುಗುತ್ತಾನೆ. ಈ ರೀತಿ ಪರಿಸರಕ್ಕೆ ಹಾನಿಯಾಗುವ ಪ್ಲಾಸ್ಟಿಕ್ ಲೋಟಗಳನ್ನು ಎಲ್ಲೆಂದರಲ್ಲಿ ಬಿಸಾಡದೇ ತಾನೇ ಅವುಗಳನ್ನೆಲ್ಲ ಆಯ್ದು ಕೊನೆಗೆ ಸುಟ್ಟುಹಾಕಿ ಹೋಗುವ ಈತನ ಪರಿಸರ ಕಾಳಜಿ ಮೆಚ್ಚುವಂತದ್ದಾಗಿದೆ.

ಇಂದಿನ ದಿನಮಾನಗಳಲ್ಲಿ ಉದ್ಯೋಗ ಸಿಗದೆ ಅಲೆದಾಡುವ ಎಷ್ಟೋ ಯುವಕರಿಗೆ ಈ ಯುವಕ ಮಾದರಿಯಾಗಿದ್ದಾನೆ ಏನೆಂದರೂ ದಿನಕ್ಕೆ ಒಂದು ಸಾವಿರ ಕಡಿಮೆಯಿಲ್ಲದಂತೆ ವ್ಯಾಪಾರವಾಗುತ್ತದೆ, ನನ್ನ ಬದುಕಿಗೆ ಇಷ್ಟು ಸಾಕೆಂದು ಮುಗುಳ್ನಗುತ್ತಲೇ ಮಜ್ಜಿಗೆ ಲೋಟ ತುಂಬಿಸಿ ಕೊಡುತ್ತಾನೆ. ಈತನ ಕಾರ್ಯಕ್ಕೆ ಎಲ್ಲರಿಂದಲೂ ಮೆಚ್ಚುಗೆ ವ್ಯಕ್ತವಾಗುತ್ತಿದೆ.

ಅಧಿಕಾರಿಗಳ ಮೇಲೆ ಹಲ್ಲೆ: ಪ್ರಕರಣ ದಾಖಲು



ಬಳ್ಳಾರಿ: ನಗರದ ವಿದ್ಯಾನಗರ ವೃತ್ತದಿಂದ ಕೊಳಗಲ್ ರಸ್ತೆವರೆಗೆ ರಸ್ತೆ ಅಗಲೀಕರಣ ಕಾಮಗಾರಿ ನಡೆಯುತ್ತಿದ್ದು, ಇದೇ ನೆಪದಲ್ಲಿ ಯಾವುದೇ ಅನುಮತಿ ಇಲ್ಲದೆ ಅಕ್ರಮವಾಗಿ ಮರಗಳನ್ನು ಕಡಿಯುತ್ತಿದ್ದ ಗುತ್ತಿಗೆದಾರರ ಕೃತ್ಯವನ್ನು ಅರಣ್ಯ ಇಲಾಖೆ ಅಧಿಕಾರಿಗಳು ಅಡ್ಡಿಪಡಿಸಿದ ವೇಳೆ, ಕರ್ತವ್ಯನಿರತ ಅಧಿಕಾರಿಯ ಮೊಬೈಲ್ ಹಾನಿಗೊಳಿಸಿದ ಆರೋಪದ ಮೇಲೆ ಗುತ್ತಿಗೆದಾರರ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಬಳ್ಳಾರಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಬಸವರಾಜ ಕೆ.ಎನ್. ತಿಳಿಸಿದ್ದಾರೆ.

ಕಳೆದ ಏ.23 ರಂದು ರಾತ್ರಿ 10:30ರ ಸುಮಾರಿಗೆ ಚೈನಾಜ್ 1.10 ಕಿ.ಮೀ ನಿಂದ 1.60 ಕಿ.ಮೀ ವರೆಗೆ ರಸ್ತೆ ಬದಿಯ ಮರಗಳನ್ನು ಅಕ್ರಮವಾಗಿ ಕಟಾವು ಮಾಡಲಾಗುತ್ತಿದೆ ಎನ್ನುವ ಖಚಿತ ಮಾಹಿತಿ ಮೇರೆಗೆ ಬಳ್ಳಾರಿ ಶಹರ ಶಾಖೆಯ ಉಪ ವಲಯ ಅರಣ್ಯಾಧಿಕಾರಿ ಸುನೀಲಕುಮಾರ ಆರ್. ಚೌವ್ಹಾಣ ಮತ್ತು ಸಿಬ್ಬಂದಿ ಸ್ಥಳಕ್ಕೆ ಧಾವಿಸಿ, ಅನುಮತಿ ಪತ್ರ ಕೇಳಿದಾಗ, ಕಾಮಗಾರಿ ತುರ್ತಾಗಿ ಆಗಬೇಕಿದೆ ಎಂಬ ಹಾರಿಕೆ ಉತ್ತರದೊಂದಿಗೆ ಮರ ಕಟಾವು ಮುಂದುವರಿಸಲಾಯಿತು. ಇದನ್ನು ತಡೆಯಲು ಮುಂದಾದಾಗ ಗುತ್ತಿಗೆದಾರರ ಸಹಚರರಾದ ತಿಲ್ಲು ಮತ್ತು ರವಿ ಮೋಕಾ ಎಂಬುವವರು ವಾಗ್ವಾದಕ್ಕಿಳಿದು, ಕೃತ್ಯವನ್ನು ಚಿತ್ರೀಕರಿಸುತ್ತಿದ್ದ ಅಧಿಕಾರಿಯ ಮೊಬೈಲ್ ಕಿತ್ತುಕೊಂಡು ನೆಲಕ್ಕೆ ಎಸೆದು ಹಾನಿಗೊಳಿಸಿದ್ದಾರೆ. ನಂತರ ಸ್ಥಳೀಯ ಪೊಲೀಸರ ನೆರವಿನೊಂದಿಗೆ ಮರ ಕಟಾವು ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಯಿತು.

ಸ್ಥಳ ಪರಿಶೀಲನೆ ಮಾಡಿದಾಗ ಒಟ್ಟು 25 ಮರಗಳನ್ನು (21 ತಪಸಿ, 02 ಬೇವು, 02 ಅರಳಿ) ಅಕ್ರಮವಾಗಿ ಕಟಾವು ಮಾಡಿರುವುದು ಪತ್ತೆಯಾಗಿದೆ. ಸುಮಾರು 5 ಟನ್ ಸೌದೆಯನ್ನು ಅರಣ್ಯ ಇಲಾಖೆ ವಶಪಡಿಸಿಕೊಂಡಿದೆ. ನ್ಯಾಯಾಲಯದ ಅನುಮತಿ ಪಡೆದು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ-2023ರಂತೆ ಶ್ರೀನಿವಾಸ್ (ಶ್ರೀನಿವಾಸ್ ಇನ್ಫ್ರಾ ಪ್ರಾಜೆಕ್ಟ್ ಪ್ರೈ.ಲಿ) ಮತ್ತು ಇತರ ನಾಲ್ವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಮತ್ತು ಕರ್ತವ್ಯಕ್ಕೆ ಅಡ್ಡಿ ಮತ್ತು ಸಾಕ್ಷ್ಯ ನಾಶಪಡಿಸಿದ ಹಿನ್ನೆಲೆಯಲ್ಲಿ ಕೌಲ್ ಬಜಾರ್ ಪೊಲೀಸ್ ಠಾಣೆಯಲ್ಲಿ ಪ್ರತ್ಯೇಕ ದೂರು ನೀಡಲಾಗಿದೆ ಎಂದು ತಿಳಿಸಿದ್ದಾರೆ. ಈ ರಸ್ತೆ ಕಾಮಗಾರಿಗಾಗಿ ಒಟ್ಟು 233 ಮರಗಳ ಕಟಾವಿಗೆ ಲೋಕೋಪಯೋಗಿ ಇಲಾಖೆ ಅನುಮತಿ ಕೋರಿತ್ತು. ಆದರೆ, ಪರಿಸರ ಸಂರಕ್ಷಣೆ ದೃಷ್ಟಿಯಿಂದ 139 ಮರಗಳನ್ನು ಉಳಿಸಿಕೊಂಡು ಫುಟ್‌ಪಾತ್ ವಿನ್ಯಾಸ ಬದಲಿಸುವಂತೆ ಅರಣ್ಯ ಇಲಾಖೆಯು ಮಾ.23ರಂದೇ ಪತ್ರ ಬರೆದಿತ್ತು. ಇದಕ್ಕೆ ಯಾವುದೇ ಪ್ರತಿಕ್ರಿಯೆ ನೀಡದ ಗುತ್ತಿಗೆದಾರರು, ಏಕಾಏಕಿ ತಡರಾತ್ರಿ ಈ ದುಷ್ಕೃತ್ಯ ಎಸಗಿದ್ದಾರೆ ಎನ್ನಲಾಗಿದೆ.

ಚಿತ್ರರಂಗದ ಧ್ರುವತಾರೆ ಡಾ.ರಾಜ್ ಕುಮಾರ್: ಬಾಲಕೃಷ್ಣ



ವಿಜಯನಗರ: ಅತ್ಯಂತ ಸಾಮಾನ್ಯ ಬಡ ಕುಟುಂಬದಲ್ಲಿ ಜನಿಸಿದ ಡಾ.ರಾಜ್‌ಕುಮಾರ್ ಅವರು ರಂಗಕಲೆ ಮತ್ತು ಚಿತ್ರರಂಗದಲ್ಲಿ ಮಾಡಿದ ಸಾಧನೆ ಇಂದಿನ ಪೀಳಿಗೆಗೆ ಮಾದರಿ. ಅವರು ಕೇವಲ ಕಲಾವಿದರಾಗಿ ಮಾತ್ರವಲ್ಲದೇ, ಒಬ್ಬ ಉತ್ತಮ ಗುಣವುಳ್ಳ ವ್ಯಕ್ತಿಯಾಗಿ ಸವೆಸಿದ ಜೀವನ ಎಲ್ಲರಿಗೂ ಆದರ್ಶಪ್ರಾಯವಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣ ಬಣ್ಣಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ಕರ್ನಾಟಕ ರತ್ನ ಡಾ. ರಾಜ್ ಕುಮಾರ್ ಅವರ 97ನೇ ಜಯಂತಿ ಕಾರ್ಯಕ್ರಮದಲ್ಲಿ ರಾಜ್ ಕುಮಾರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಅವರು ಮಾತನಾಡಿದರು.

ಡಾ.ರಾಜ್ ಕುಮಾರ್ ಅವರಿಗೆ ದೇಶದ ಅತ್ಯುನ್ನತ ಗೌರವ ಪ್ರಶಸ್ತಿ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ, ಪದ್ಮಭೂಷಣ, ಸೇರಿ ದೇಶ ಮತ್ತು ವಿದೇಶಗಳಿಂದ ಹಲವಾರು ಪ್ರತಿಷ್ಠಿತ ಗೌರವಗಳಿಗೆ ಭಾಜನರಾಗಿದ್ದಾರೆ. ಕನ್ನಡ ಭಾಷೆ, ನಾಡು ಮತ್ತು ನುಡಿಗಾಗಿ ಡಾ. ರಾಜ್‌ಕುಮಾರ್ ಅವರು ನೀಡಿದ ಕೊಡುಗೆ ಅನನ್ಯವಾದುದು. ತಮ್ಮ ಜೀವನವನ್ನೇ ಕಲೆಗಾಗಿ ಮುಡಿಪಾಗಿಟ್ಟ ಅವರು, ಪ್ರತಿಯೊಬ್ಬ ಕನ್ನಡಿಗನ ಹೃದಯದಲ್ಲಿ ಅಜರಾಮರವಾಗಿದ್ದಾರೆ. ಡಾ. ರಾಜ್ ಕುಮಾರ್ ಅವರ ಜೀವನದ ಉದಾತ್ತ ಆದರ್ಶ ಪ್ರತಿಯೊಬ್ಬರ ಜೀವನದಲ್ಲೂ ಅಳವಡಿಸಿಕೊಳ್ಳೋಣ ಎಂದು ತಿಳಿಸಿದರು.

ಈ ವೇಳೆ ವಾರ್ತಾಧಿಕಾರಿ ಬಿ.ಧನಂಜಯಪ್ಪ, ಕೃಷಿ ಇಲಾಖೆ ಜಂಟಿ ನಿರ್ದೇಶಕ ಮಂಜುನಾಥ್ , ಸೇರಿ ವಿವಿಧ ಇಲಾಖೆಗಳ ಅಧಿಕಾರಿಗಳು, ಡಾ. ರಾಜಕುಮಾರ್ ಅಭಿಮಾನಿಗಳು ಇದ್ದರು.

ಡಾ.ಅಂಬೇಡ್ಕರ್ ಸರ್ಕಾರಿ ವಸತಿ ನಿಲಯದ ವಿದ್ಯಾರ್ಥಿಗಳ ಸಾಧನೆ



ಹೂವಿನಹಡಗಲಿ: ತಾಲೂಕಿನ ಅಡವಿಮಲ್ಲನಕೇರಿ ಗ್ರಾಮದ ಎಂಎಂಪಿ ಸರ್ಕಾರಿ ಪ್ರೌಢಶಾಲೆಯ 2026ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ ಫಲಿತಾಂಶ ಪ್ರಕಟಣೆಯಲ್ಲಿ ಸಂಧ್ಯಾಬಾಯಿ ವಿದ್ಯಾರ್ಥಿನಿ 593 ಅಂಕಗಳನ್ನು ಪಡೆದುಕೊಂಡು ಶಾಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ. ಇದು ಸಂತಸದ ಕ್ಷಣವಾದರೆ ಇನ್ನೊಂದು ಕಡೆ ಗ್ರಾಮದ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯದ ಎಸ್ಸೆಸ್ಸೆಲ್ಸಿ ಪರೀಕ್ಷಾ ಫಲಿತಾಂಶದಲ್ಲಿ 23 ವಿದ್ಯಾರ್ಥಿಗಳಲ್ಲಿ 15 ವಿದ್ಯಾರ್ಥಿಗಳು ಅತ್ಯುತ್ತಮ ಫಲಿತಾಂಶವನ್ನು ತೆಗೆದುಕೊಂಡಿದ್ದಾರೆ.

ಪ್ರೀತಂ ಕೆ.587, ತೌಸಿಫ್ 567, ದುರ್ಗೇಶ್ 561, ಸಂಜಯ್ 552, ಮನೋಹರ 534, ಶಿವಮೂರ್ತಿ 508 ಅಂಕಗಳನ್ನು ಪಡೆದಿದ್ದಾರೆ. ಈ ವಿದ್ಯಾರ್ಥಿಗಳು ಉತ್ತಮ ಫಲಿತಾಂಶ ತೆಗೆದುಕೊಂಡು ಗ್ರಾಮದ ಕೀರ್ತಿಪತಾಕೆಯನ್ನು ಎತ್ತಿ ಹಿಡಿದಿದ್ದಾರೆ. ಉಳಿದ 8 ವಿದ್ಯಾರ್ಥಿಗಳಲ್ಲಿ ಆರು ವಿದ್ಯಾರ್ಥಿಗಳು ಉತ್ತೀರ್ಣರಾದರೆ ಇಬ್ಬರು ವಿದ್ಯಾರ್ಥಿಗಳು ಅನುತ್ತೀರ್ಣರಾಗಿರುತ್ತಾರೆ. ಎಂಎಂಪಿ ಸರ್ಕಾರಿ ಪ್ರೌಢಶಾಲೆಯ ಒಟ್ಟು ಫಲಿತಾಂಶ 34 ಮಕ್ಕಳಲ್ಲಿ 32 ವಿದ್ಯಾರ್ಥಿಗಳು ಉತ್ತೀರ್ಣಗೊಂಡಿರುತ್ತಾರೆ. ಶಾಲೆಯ ಫಲಿತಾಂಶ 94.11% ಆಗಿದೆ.

ನಶಿಸುತ್ತಿರುವ ಮನುಷ್ಯ ಸಂಬಂಧ: ಶ್ರೀಗಳು



ಕುರುಗೋಡು: ಪ್ರಸ್ತುತ ನಗರಿಕರಣದಿಂದ ಸಾಮಾಜಿಕ ವ್ಯವಸ್ಥೆ ಹದಗೆಡುತ್ತಿರುವ ಹೊತ್ತಿನಲ್ಲಿ ಮಠ, ಮಾನ್ಯಗಳು ಧಾರ್ಮಿಕ ಸಭೆ, ಸಮಾರಂಭ, ಸೌಹಾರ್ದ ಸಭೆ, ಭಾವೈಕ್ಯ ಸಮ್ಮೇಳನ ನಡೆಸಿ ಜನರಲ್ಲಿ ಸಾಮರಸ್ಯದ ಬೀಜ ಬಿತ್ತಿ ಜಾಗೃತಿ ಮೂಡಿಸುತ್ತಿವೆ ಎಂದು ಬುಕ್ಕಸಾಗರ ಕರಿ ಸಿದ್ದೇಶ್ವರ ಸ್ವಾಮೀಜಿ ಹೇಳಿದರು.

ಅವರು ಸಮೀಪ ಸೂಗೂರು ಗ್ರಾಮದಲ್ಲಿ ಶ್ರೀಚನ್ನವೀರ ಶರಣರ ಮಠದ 20ನೇ ವಾರ್ಷಿಕೋತ್ಸ ಅಂಗವಾಗಿ ಮಹಿಳೆಯರು 108 ಉಡಿ ತುಂಬವ ಕಾರ್ಯಕ್ರಮದಲ್ಲಿ ಚಾಲನೆ ನೀಡಿ ಮಾತನಾಡಿ, ಮನುಷ್ಯ ಸಂಬಂಧ ಗೌಣ: ನಗರ, ಪಟ್ಟಣ ಬೆಳೆದಂತೆ ಸಂಸ್ಕೃತಿ, ಸಂಪ್ರದಾಯವೂ ಬದಲಾಗುತ್ತಿದೆ. ಕುಟುಂಬಗಳು ಹೊಡೆದು ಹೋಗುತ್ತಿವೆ. ಮನುಷ್ಯ ಸಂಬಂಧಗಳು ನಶಿಸುತ್ತಿವೆ. ದಾನ ಮಾಡುವುದು ಕಡಿಮೆಯಾಗುತ್ತಿದೆ. ದೇವರು, ಹಿರಿಯರ ಬಗ್ಗೆ ಗೌರವ ತೋರುವುದು ಕಡಿಮೆಯಾಗುತ್ತಿರುವ ರಾಜ್ಯದಲ್ಲಿ ಹತ್ತಾರು ಮಠಗಳು ಧಾರ್ಮಿಕ ಕಾರ್ಯಕ್ರಮ ಸಂಘಟಿಸಿ ಮೂಡಿಸುತ್ತಿರುವುದು ಸಾಮರಸ್ಯ ಹೆಮ್ಮೆಯೆನಿಸಿದೆ ಎಂದು ಅಭಯ ನೀಡಿದರು.

ನಂತರ ಹೆಬ್ಬಾಳ ಮಠದ ನಾಗಭೂಷಣ ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿ, ಆಧ್ಯಾತ್ಮ ಗುರುಗಳ ಒಡನಾಟದಿಂದ ಯೋಗ, ಧ್ಯಾನ, ತ್ಯಾಗ, ದಾನ, ಧರ್ಮದಂತಹ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಸಾಧ್ಯವಿದೆ. ಎಂದು ಪ್ರತಿಪಾದಿಸಿದರು. ಅಂದು ಬೆಳಿಗ್ಗೆ ಶ್ರೀಚನ್ನವೀರ ಶರಣರ ವಿಶೇಷ ಪೂಜೆ ಭಕ್ತರನ್ನು ಹರಕೆ ಅಲಂಕಾರ ಜರುಗಿತು.

ದೇವಸ್ಥಾನದ ಮಠದ ಅಧ್ಯಕ್ಷ ಬಾಗೋಡಿ ಸಿದ್ದಲಿಂಗನಗೌಡ, ಕೃಷಿ ಪತ್ತಿನ ಸಹಕರ ಸಂಘದ ಅಧ್ಯಕ್ಷ ಬಸವಣ್ಣಯ್ಯ ಸ್ವಾಮಿ. ಎಸ್. ಎಂ.ಶಿವಪ್ರಕಾಶ್.ಶಿವಯ್ಯ ಸ್ವಾಮಿ. ಬಿ.ಎಂ.ಪರುರಾಮ, ನಾಗರಾಜ ಶಟ್ಟಿ, ಮೃತ್ಯುಂಜಯ, ಮಡಿವಾಳ ಹನುಮಂತಪ್ಪ, ಸಿದ್ದಕಂಠಯ್ಯ ಸ್ವಾಮಿ, ದೊಡ್ಡ ಬಸವಗೌಡ, ವಿವಿಧ ಮಠಾಧೀಶರು, ಸುತ್ತಮುತ್ತಲಿನ ಮಣ್ಣೂರು, ಎಮ್ಮಿಗನೂರು ಎಚ್.ವೀರಾಪುರ, ಬಳಾಪುರ, ಹಾವಿನಹಾಳ್, ದೊಡ್ಡರಾಜಕ್ಯಾಂಪು, ನಗರ, ಗುತ್ತಿಗನೂರು ಮತ್ತಿತರರಿದ್ದರು.

ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ 97.22% ಫಲಿತಾಂಶ






ಸುರಪುರ: ನಗರದ ಹೊರವಲಯದಲ್ಲಿರುವ ಗುಡಿಹಾಳ (ಜೆ) ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದು ಶಾಲೆಗೆ ಶೇ 97.22% ಫಲಿತಾಂಶ ಬಂದಿದೆ.

ಶಾಲೆಯ ವಿದ್ಯಾರ್ಥಿನಿ ಅನನ್ಯ (601/96.16%) ಅಂಕಗಳನ್ನು ಪಡೆದುಕೊಂಡು ಶಾಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ.

ಬಸನಗೌಡ (595/95.2%) ಅಂಕಗಳನ್ನು ಪಡೆದು ಶಾಲೆಗೆ ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾನೆ. ಭಾಗ್ಯ (593/94.88%) ಅಂಕಗಳನ್ನು ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ ಜೊತೆಗೆ ನಂದಿನಿ (581/92.96%) ಅಂಕಗಳನ್ನು ಪಡೆದು ಶಾಲೆಗೆ 4ನೇ ಸ್ಥಾನ ಪಡೆದುಕೊಂಡಿದ್ದಾರೆ. ಶಾಲೆಯ ಒಟ್ಟು 35 ವಿದ್ಯಾರ್ಥಿಗಳ ಪೈಕಿ 6 ಜನ ಬಾಲಕರು ಹಾಗೂ 10 ಜನ ಬಾಲಕಿಯರು ಡಿಸ್ಟಿಂಕ್ಷನ್ ನಲ್ಲಿ ಪಾಸಾಗಿದ್ದಾರೆ. ಪ್ರಥಮ ಶ್ರೇಣಿಯಲ್ಲಿ 12 ಜನ ಬಾಲಕರು ಹಾಗೂ 4 ಜನ ಬಾಲಕಿಯರು ಉತ್ತೀರ್ಣರಾದರೆ ಉಳಿದ ಇಬ್ಬರು ಬಾಲಕ, ಬಾಲಕಿಯರು ದ್ವಿತೀಯ ಸ್ಥಾನದಲ್ಲಿ ಉತ್ತೀರ್ಣರಾಗಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಶ್ರಮಿಸಿದ ಶಾಲೆಯ ಎಲ್ಲ ವಿಷಯವಾರು ಶಿಕ್ಷಕರಿಗೆ ಹಾಗೂ ಸಿಬ್ಬಂದಿ ವರ್ಗಕ್ಕೆ ಶಾಲೆಯ ಪ್ರಾಂಶುಪಾಲರಾದ ಜಯಶ್ರೀ ಗಣಾಚಾರಿ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ನಾಳೆ ಸಂಡೂರು ಸಂಕಲ್ಪ ಸಮರ್ಪಣಾ ಸಮಾವೇಶ

ಬಳ್ಳಾರಿ: ಸಂಡೂರು ತಾಲೂಕು ಆಡಳಿತ, ತಾಪಂ, ಕಾರ್ಮಿಕ ಇಲಾಖೆ ಹಾಗೂ ವಿವಿಧ ಇಲಾಖೆ ಆಶ್ರಯದಲ್ಲಿ ಏ.26ರಂದು ಬೆ.10ಕ್ಕೆ ಸಂಡೂರು ತಾಲೂಕಿನ ತಾಳೂರು ಗ್ರಾಮದ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಸಂಡೂರು ಸಂಕಲ್ಪ ಸಮರ್ಪಣಾ ಸಮಾವೇಶ-2 ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜಡ್.ಜಮೀರ್ ಅಹ್ಮದ್ ಖಾನ್ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ಕಾರ್ಮಿಕ ಸಚಿವ ಸಂತೋಷ್ ಎಸ್. ಲಾಡ್ ಅವರು ಘನ ಉಪಸ್ಥಿತಿ, ಸಂಡೂರು ವಿಧಾನಸಭೆ ಕ್ಷೇತ್ರದ ಶಾಸಕಿ ಈ.ಅನ್ನಪೂರ್ಣ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಬಳ್ಳಾರಿ ಲೋಕಸಭೆ ಕ್ಷೇತ್ರದ ಸಂಸದ ಈ.ತುಕಾರಾಮ್, ರಾಜ್ಯಸಭೆ ಸಂಸದ ಡಾ.ಸೈಯದ್ ನಾಸೀರ್ ಹುಸೇನ್, ವಿಧಾನಪರಿಷತ್ ಶಾಸಕರಾದ ಚಂದ್ರಶೇಖರ ಬಿ.ಪಾಟೀಲ್, ಶಶೀಲ್ ಜಿ.ನಮೋಶಿ, ವೈ.ಎಂ.ಸತೀಶ್, ಕರ್ನಾಟಕ ರಾಜ್ಯ ಖನಿಜ ನಿಗಮ ನಿಯಮಿತದ ಉಪಾಧ್ಯಕ್ಷ ಎಚ್.ಲಕ್ಷ್ಮಣ, ವಿಜಯನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಷಯ ಲಾಡ್, ಸಂಡೂರು ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ನೂರುದ್ದೀನ್ ಎಸ್. ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಕಾರ್ಮಿಕ ಇಲಾಖೆಯ ಕಾರ್ಯದರ್ಶಿ ಸಲ್ಮಾ ಕೆ.ಫಹೀಮ್, ಕಾರ್ಮಿಕ ಇಲಾಖೆಯ ಆಯುಕ್ತ ಡಾ.ಎಚ್. ಎನ್.ಗೋಪಾಲಕೃಷ್ಣ, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಜಂಟಿ ಕಾರ್ಯದರ್ಶಿ ಹಾಗೂ ಜಂಟಿ ಕಾರ್ಮಿಕ ಆಯುಕ್ತ ಡಾ.ಎಸ್.ಬಿ.ರವಿಕುಮಾರ್, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರವಿ ಡಿ.ಚನ್ನಣ್ಣನವರ್, ಕಲಬುರಗಿ ಪ್ರಾದೇಶಿಕ ಉಪ ಕಾರ್ಮಿಕ ಆಯುಕ್ತ ಡಾ.ವೆಂಕಟೇಶ್ ಅ.ಶಿಂಧಿಹಟ್ಟಿ, ದಾವಣಗೆರೆಯ ಬಳ್ಳಾರಿ ವಿಭಾಗದ ಸಹಾಯಕ ಕಾರ್ಮಿಕ ಆಯುಕ್ತ ಡಾ.ಅವಿನಾಶ್ ನಾಯಕ್, ಸಂಡೂರು ತಹಶೀಲ್ದಾರ ಅನಿಲ್ ಕುಮಾರ್.ಜಿ, ಸಂಡೂರು ತಾಪಂ ಇಓ ಮಡಗಿನ ಬಸಪ್ಪ ಸೇರಿದಂತೆ ವಿವಿಧ ಗಣ್ಯರು ಭಾಗವಹಿಸಲಿದ್ದಾರೆ ಎಂದು ಬಳ್ಳಾರಿ ಉಪವಿಭಾಗದ ಕಾರ್ಮಿಕ ಅಧಿಕಾರಿ ಎಸ್.ಜಿ.ಖೈನೂರು ಅವರು ತಿಳಿಸಿದ್ದಾರೆ.